ಡಿ. ವಿ. ಗುಂಡಪ್ಪ

31



ಜ್ಞಾಪಕಚಿತ್ರಶಾಲೆ – ೭

ಹೃದಯ ಸಂಪನ್ನರು

ಮುಖಪುಟ

ಜ್ಞಾಪಕಚಿತ್ರಶಾಲೆ

ಡಾ. ಡಿ.ವಿ. ಗುಂಡಪ್ಪ

Published by the **Gokhale Institute of Public Affairs** on the occasion of its Platinum Jubilee with the financial assistance from **The Director, Kannada and Culture Department, Government of Karnataka** and **The Mythic Society, Bengaluru.**

e-Book
031v1.0.0
Date: October 10, 2018
ISBN: 9788193777961
Created by: Sriranga Digital Software Technologies Private Limited
srirangadigital.com

ಅರಿಕೆ

ಇದೊಂದು ಸಂಕೀರ್ಣ ಸಂಪುಟ. ಇದರಲ್ಲಿಯ ವಿಷಯಗಳಲ್ಲಿ ಪರಸ್ಪರ ಸಂಬಂಧ ಸಮೀಪದ್ದಲ್ಲ. ಆದರೆ ಎಲ್ಲ ವಿಷಯವ್ಯಕ್ತಿಗಳೂ ಗೌರವವುಳ್ಳವರು. ನಮ್ಮ ದೇಶದ ಚರಿತ್ರೆಯಲ್ಲಿ ಒಂದು ಯುಗದ ಜನ ಹೇಗೆ ಬದುಕಿದರು. ಯಾವ ಉದ್ದೇಶಗಳನ್ನು ನಂಬಿದ್ದರು-ಎಂಬುದನ್ನು ತೋರಿಸುವುದು ಈ ನನ್ನ ಪ್ರಯತ್ನ. ಭಗವದ್ಗೀತೆಯಲ್ಲಿ ಈಶ್ವರವಚನ ಪ್ರಸಿದ್ಧವಾಗಿದೆಯಲ್ಲವೆ?

> ಯದ್ಯದಾಚರತಿ ಶ್ರೇಷ್ಠಃ
>
> ತತ್ತದೇವ ಇತರೋ ಜನಃ ॥

ಸಮಾಜದ ಗಣ್ಯ ಪುರುಷರನ್ನು ನೋಡಿ ಅವರಂತೆ ಇತರರೂ ಅಷ್ಟಿಷ್ಟು-ಇದ್ದಾರು ಎಂದು ನಾವು ತಿಳಿಯುತ್ತೇವೆ. ಹೀಗೆ ಪ್ರಮುಖ ಜನರಿಂದ ಸಮಾಜದ ಸ್ಥಿತಿಗಳನ್ನು ಊಹೆಮಾಡಲಾಗುತ್ತದೆ. ಇದು ದೇಶದ ಚರಿತ್ರೆಯ ಅಧ್ಯಯನದಲ್ಲಿ ಒಂದು ಪ್ರಮಾಣವಾದ ಪದ್ಧತಿ. ಮಹಾಜನರು ಜ್ಞಾಪಕ ಚಿತ್ರಶಾಲೆಯ ಹಿಂದಿನ ಸಂಪುಟಗಳ ವಿಷಯದಲ್ಲಿ ತೋರಿದ ಆದರವನ್ನು ಈ ಸಂಪುಟಕ್ಕೂ ತೋರಿಯಾರೆಂದು ನಾನು ನಂಬಿಕೊಂಡಿದ್ದೇನೆ.

ಈ ಪುಸ್ತಕಕ್ಕೆ 'ಹೃದಯ ಸಂಪನ್ನರು' ಎಂದು ಹೆಸರು ಕೊಟ್ಟಿದೆ. 'ಸಹೃದಯರು' ಎಂದರೂ ಅದೇ ಅರ್ಥ. ಆದರೆ 'ಸಹೃದಯರು' ಎಂಬ ಪದವನ್ನು ಪಾರಿಭಾಷಿಕವಾಗಿ ಕಾವ್ಯಮೀಮಾಂಸಕರು ಉಪಯೋಗಿಸುತ್ತಾರೆ. ಇಲ್ಲಿ ಪ್ರಸಕ್ತವಾಗಿರುವ ಮಹನೀಯರು ಎಲ್ಲರೂ ಕಾವ್ಯ ಓದಿದವರಲ್ಲ. ಹೃದಯವಾದರೋ ಅಂಥವರಿಗೂ ಇರುತ್ತದೆ. ಮುಖ್ಯವಾಗಿ ಸಹಾನುಭೂತಿ ದೊಡ್ಡದು. ಅನುಭೂತಿ ಇದ್ದರಲ್ಲವೆ ಸಹ-ಅನುಭೂತಿ? ಮಾನವ ಸುಖದುಃಖಗಳನ್ನೂ ಕಷ್ಟಕಾರ್ಪಣ್ಯಗಳನ್ನೂ ಅನುಭವಿಸುವ ಅಂಗ ಹೃದಯ. ಅದೇ ಔದಾರ್ಯದ ಜನ್ಮಸ್ಥಾನ. ಈ ಔದಾರ್ಯ ಯಾರಲ್ಲಿ ಹೆಚ್ಚಾಗಿ ಉಂಟೋ ಅವರು ಹೃದಯ ಸಂಪನ್ನರು. ಸಹೃದಯ ಎಂಬುದರಲ್ಲಿ ಅಡಗಿರುವ ತತ್ತ್ವವನ್ನು ಹೃದಯಸಂಪನ್ನ ಎಂಬ ಮಾತು ವಿಶದಪಡಿಸುತ್ತದೆ.

ಈ ಇಪ್ಪತ್ತು ಪ್ರಕರಣಗಳಲ್ಲಿ ಬಹು ಭಾಗ ಮೊದಲು 'ಸುಧಾ' ವಾರ ಪತ್ರಿಕೆಯಲ್ಲಿ ಪ್ರಕಟವಾದವು. ಹಾಗೆ ಅವು ಮಹಾಜನರನ್ನು ಸಂತೋಷಗೊಳಿಸಿದವು. ಅವುಗಳ ಪುನರ್ಮುದ್ರಣ ಸಂದರ್ಭದಲ್ಲಿ 'ಸುಧಾ' ಪತ್ರಿಕೆಯ ಸಂಪಾದಕರ ಔದಾರ್ಯವನ್ನು ಕೃತಜ್ಞತೆಯಿಂದ ಸ್ಮರಿಸಿ ಅವರನ್ನು ವಂದಿಸುತ್ತೇನೆ.

ಪ್ರೋ ॥ ಹಿರಿಯಣ್ಣನವರನ್ನು ಕುರಿತ ಪ್ರಬಂಧವನ್ನು ದಯವಿಟ್ಟು ಪ್ರಕಟಿಸಿದ 'ಪ್ರಜಾವಾಣಿ' ಪತ್ರಿಕೆಯ ಸಂಪಾದಕರಿಗೆ ನನ್ನ ಕೃತಜ್ಞತೆ ಸಲ್ಲುತ್ತದೆ.

ಈ ಸಂಪುಟದ ರಚನೆಯ ವಿಷಯದಲ್ಲಿ, ನನ್ನ ಮಿಕ್ಕ ಗ್ರಂಥಗಳ ರಚನೆಯಲ್ಲಿ ಸಹಾಯಮಾಡಿದಂತೆಯೇ ಚಿ ॥ ಎಸ್. ಆರ್. ರಾಮಸ್ವಾಮಿ ಸಹಾಯಕನಾಗಿದ್ದಾನೆ. ಆತನು ನನಗೆ ಅತ್ಯಂತ ಪ್ರೀತಿಪಾತ್ರನು. ನನ್ನ ಚಿರಂಜೀವಿಗಳ ವಿಷಯದಲ್ಲಿ ಬೇಡಿದಂತೆಯೇ ಈತನ ವಿಷಯದಲ್ಲಿಯೂ ಭಗವತ್ಸ್ಮರಣೆ ಮಾಡಿ ಈ ಚಿರಂಜೀವಿಗೆ ಶುಭವನ್ನು ಕೋರುತ್ತೇನೆ.

ಶ್ರೀ ಕೆ. ಚಿದಂಬರಂ ಅವರ ಮತ್ತು ಅವರ ಮುದ್ರಣಕರ್ತರಾದ ಶ್ರೀ ಜಿ. ಎಚ್. ರಾಮರಾಯರ ಉಪಕಾರವನ್ನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಇಂತು ಸರ್ವಂ ಶಿವಂ.

–ಡಿ.ವಿ.ಜಿ.

೧

ಹಿರಿಯಣ್ಣನವರ ಪರಿಶುದ್ಧ ಪಾಂಡಿತ್ಯ

ಪ್ರೊಫೆಸರ್ ಎಂ. ಹಿರಿಯಣ್ಣನವರ ಪರಿಚಯದ ಯೋಗ ನನಗೆ ದೊರೆಯುವುದಕ್ಕೆ ಹಿಂದೆಯೇ ಅವರ ಹಿರಿಮೆ ಎಂಥಾದ್ದೆಂಬುದನ್ನು ನಾನು ಕೇಳಿ ಅವರನ್ನು ಮೆಚ್ಚಿಕೊಂಡಿದ್ದೆ. ನನ್ನ ಅನೇಕ ಮಂದಿ ಗುರುಗಳಲ್ಲೊಬ್ಬರು ಸಾಮಾನ್ಯ ಸ್ಕೂಲ್ ಮೇಷ್ಟರು. ಇವರು ಹಿರಿಯಣ್ಣನವರು ಮೈಸೂರು ಟ್ರೈನಿಂಗ್ ಕಾಲೇಜಿನ ಅಧ್ಯಕ್ಷರಾಗಿದ್ದಾಗ ಅಲ್ಲಿ ವಿದ್ಯಾರ್ಥಿವರ್ಗದಲ್ಲಿದ್ದವರು. ಈ ಮೇಷ್ಟರು ಸಂಸ್ಕೃತ ಬಲ್ಲವರು. ನಾನು ಅವರಲ್ಲಿ ಸಂಸ್ಕೃತ ವ್ಯಾಕಾರಣಕ್ಕಾಗಿ ಹೋಗಿಬರುತ್ತಿದ್ದೆ. ಅವರು ತಮಗೆ ಮುಖ್ಯಸ್ಥರಾಗಿದ್ದ ಹಿರಿಯಣ್ಣನವರ ಪಾಂಡಿತ್ಯವನ್ನು, ಅವರ ಪ್ರಾಮಾಣಿಕತೆಯನ್ನು, ಅವರ ಕಾರ್ಯಪರಿಷ್ಕಾರವನ್ನು ಪದೇಪದೇ ಕೊಂಡಾಡುತ್ತಿದ್ದರು. ಅದನ್ನು ಕೇಳಿದ ನನಗೆ ಅಂಥ ಮಹಾನುಭಾವರ ದರ್ಶನ ಮಾಡಿ ಅವರ ಅನುಗ್ರಹ ಸಂಪಾದಿಸಬೇಕಲ್ಲ ಎಂಬ ಕುತೂಹಲ ಮೂಡಿತ್ತು.

೧೯೧೩-೧೪ರ ಸುಮಾರಿನಲ್ಲಿ ನನಗೆ ಆ ಯೋಗ ಲಭ್ಯವಾಯಿತು.

‘ವೇದಾಂತಿಯ ಶಿಕ್ಷಣ’

ಆ ವರ್ಷ ಬೆಂಗಳೂರಿನ ಶಂಕರಮಠದಲ್ಲಿ ಶಂಕರಜಯಂತಿಯ ಕಾಲದಲ್ಲಿ ಹಿರಿಯಣ್ಣನವರ ಉಪನ್ಯಾಸ ಏರ್ಪಾಟಾಗಿತ್ತು. ಆಗ ಬಂದಿದ್ದ ಜನ ಸಂಖ್ಯೆಯಲ್ಲಿ ದೊಡ್ಡದಲ್ಲ; ನೂರರ ಒಳಗೇ ಇತ್ತು. ಆದರೆ ಅದರ ಯೋಗ್ಯತೆ ದೊಡ್ಡದು. ಕೆ.ಎ. ಕೃಷ್ಣಸ್ವಾಮಿ ಅಯ್ಯರ್ ಅವರು, [1] ಬೆಳವಾಡಿ ದಾಸಪ್ಪನವರು, ರಾಮಸ್ವಾಮಯ್ಯನವರು, ವಿ. ಸುಬ್ರಹ್ಮಣ್ಯ ಅಯ್ಯರ್ ಅವರು, ಕರ್ಪೂರ ಶ್ರೀನಿವಾಸರಾಯರು, [2] ಕೆ. ಕೃಷ್ಣಯ್ಯಂಗಾರ್ಯರು ಮೊದಲಾದ ವಿದ್ವತ್ಪ್ರಮುಖರು ಅಲ್ಲಿದ್ದರು. ಉಪನ್ಯಾಸಗಳನ್ನು ಕೇಳಿ ಅವರೆಲ್ಲ ತುಂಬ ಸಂತೋಷಪಟ್ಟು ಮುಕ್ತಕಂಠರಾಗಿ ಪ್ರಶಂಸೆಮಾಡಿದರು. ನಾನು ಆಗ ಅಲ್ಲಿದ್ದೆ, ಉಪನ್ಯಾಸದ ವಿಷಯ “ದಿ ಟ್ರೈನಿಂಗ್ ಆಫ್ ಎ ವೇದಾಂತಿನ್” (ವೇಂದಾಂತಿಯ ಶಿಕ್ಷಣ). ನನಗೆ ಆ ಉಪನ್ಯಾಸದ ರೀತಿಯೂ ವಿಷಯವೂ ಸೊಗಸೆನಿಸಿತು. ಅದನ್ನು ದಯಮಾಡಿ

ಕೊಟ್ಟರೆ ನಾನು ಆಗ ನಡೆಸುತ್ತಿದ್ದ "ದಿ ಕರ್ಣಾಟಕ" ಎಂಬ ಇಂಗ್ಲಿಷಿನ ವಾರಾರ್ಧ ಪತ್ರಿಕೆಯಲ್ಲಿ ಪ್ರಕಟಪಡಿಸುವ ಉದ್ದೇಶವನ್ನು ಹಿರಿಯಣ್ಣನವರಲ್ಲಿ ಬಿನ್ನಯಿಸಿದೆ. ಆ ಮಹನೀಯರು ಅದಕ್ಕೊಪ್ಪಿ ಉಪನ್ಯಾಸದ ಲಿಖಿತ ಪ್ರತಿಯನ್ನು ನನ್ನ ಕೈಯಲ್ಲಿಟ್ಟರು. ಅಂದಿನಿಂದ ಬೆಳೆಯಿತು ನನಗೆ ಅವರಲ್ಲಿ ಹೋಗಿ ಬರುವ ರೂಢಿ.

ಟೀಚರ್ಸ್ ಟ್ರೈನಿಂಗ್ ಕಾಲೇಜಿನ ಅಧ್ಯಕ್ಷರಾಗುವುದಕ್ಕೆ ಹಿಂದೆ ಹಿರಿಯಣ್ಣನವರು ಹೈಸ್ಕೂಲು ಮೇಷ್ಟರಾಗಿದ್ದರಂತೆ. ಆಗ ಗಣಿತ, ಭೂಗೋಳಶಾಸ್ತ್ರ ಮೊದಲಾದ ವಿಷಯಗಳನ್ನು ಪಾಠ ಹೇಳುತ್ತಿದ್ದರಂತೆ. ಟ್ರೈನಿಂಗ್ ಕಾಲೇಜಿಗೆ ಬಂದ ಮೇಲೆ ಅಲ್ಲಿಯ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಕನ್ನಡದಲ್ಲಿ ಗ್ರಂಥಗಳನ್ನು ಬರೆದರು. ಅವುಗಳಲ್ಲಿ ಒಂದು 'ಸ್ಮೃತಿ ಶಕ್ತಿ' ಎಂಬುದು. ಇನ್ನೊಂದು 'ಭೋಧನ ಕ್ರಮ.' ನಾನು ಇಲ್ಲಿ ಕೊಟ್ಟಿರುವ ಹೆಸರುಗಳು ನನ್ನ ಜ್ಞಾಪಕದಲ್ಲಿರುವುವು; ಆದದ್ದರಿಂದ ಹೆಚ್ಚುಕಡಮೆ ಇದ್ದರೂ ಇರಬಹುದು. ಪುಸ್ತಕಗಳನ್ನು ನಾನು ನೋಡಿ ಓದಿದ್ದೇನೆ. ಈ ಪುಸ್ತಕಗಳು ಮೊದಲು ಬಹುಶಃ ಬಾಪು ಸುಬ್ಬರಾಯರು ಪ್ರಕಟಿಸುತ್ತಿದ್ದ "ಕರ್ಣಾಟಕ ಗ್ರಂಥಮಾಲೆ" ಯಲ್ಲಿ ಬಂದವೆಂದು ನನ್ನ ಜ್ಞಾಪಕ. ಆಮೇಲೆ ಅವು ಬೇರೆಯಾಗಿ ಪುಸ್ತಕರೂಪವಾಗಿ ಬಂದವು. ಪ್ರಕೃತವಾಚಕ ಮಹಾಶಯರಲ್ಲಿ ಯಾರಾದರೂ ಆ ಪುಸ್ತಕಗಳನ್ನಿರಿಸಿಕೊಂಡಿದ್ದರೆ ಅವುಗಳನ್ನು ನನಗೆ ಕೊಟ್ಟಲ್ಲಿ ಅಥವಾ ಆ ಸಂಗತಿಯನ್ನಾದರೂ ತಿಳಿಸಿದಲ್ಲಿ ನಾನು ತುಂಬ ಕೃತಜ್ಞನಾಗಿರುವವನು.

ಜೀವನದ ಮೈಲಿಗಲ್ಲುಗಳು

೭ ಮೇ ೧೮೭೧	ಜನನ (ಮೈಸೂರು ನಂಜುಡಯ್ಯನವರ ದ್ವಿತೀಯ ಕುಮಾರರು).
-	ಮೈಸೂರಿನ ವಿದ್ವಾನ್ ಪೆರಿಯಸ್ವಾಮಿ ತಿರುಮಲಾಚಾರ್ಯರಲ್ಲಿ ಸಂಸ್ಕೃತಾಧ್ಯಯನ
-	ಮದರಾಸು ಕ್ರಿಶ್ಚಿಯನ್ ಕಾಲೇಜಿನಿಂದ ಬಿ.ಎ., ಎಂ.ಎ.
೧೮೯೧	ಲೈಬ್ರೇರಿಯನ್, ಮೈಸೂರಿನ ಓರಿಯೆಂಟಲ್ ಲೈಬ್ರರಿ.
೧೮೯೫	ಎಲ್.ಟಿ. ಪದವಿ.
೧೮೯೬-೧೯೦೭	ಮೈಸೂರಿನ ನಾರ್ಮಲ್ ಸ್ಕೂಲಿನ (ಉತ್ತರೋತ್ತರ ‘ಟ್ರೈನಿಂಗ್ ಕಾಲೇಜ್’) ಅಸಿಸ್ಟೆಂಟ್ ಮಾಸ್ಟರ್.
೧೯೦೭-೧೨	ನಾರ್ಮಲ್ ಸ್ಕೂಲಿನ ಹೆಡ್‌ಮಾಸ್ಟರ್.
೧೯೧೧-೧೯	ಈಶ-ಕೇನ-ಕಠೋಪನಿಷತ್ತುಗಳ ಮತ್ತು ಬೃಹದಾರಣ್ಯಕ ಭಾಗದ ಮೇಲಣ ಶಾಂಕರಭಾಷ್ಯದ ಆಂಗ್ಲಾನುವಾದ.
೧೯೧೨	ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕ.
೧೯೦೪	ಅಸಿಸ್ಟೆಂಟ್ ಪ್ರೊಫೆಸರ್.
೧೯೧೮-೨೭	ಪ್ರೊಫೆಸರ್.
೧೯೨೧	ಕ್ಯುರೇಟರ್, ಮೈಸೂರಿನ ಓರಿಯಂಟಲ್ ಲೈಬ್ರರಿ.
೧೯೨೫	ಸುರೇಶ್ವರಾಚಾರ್ಯರ ‘ನೈಷ್ಕರ್ಮ್ಯಸಿದ್ಧಿ’ ಯ ಸಂಪಾದನೆ.
೧೯೨೯	ಸದಾನಂದರ ‘ವೇದಾಂತಸಾರ’ ದ ಸಂಪಾದನೆ, ಆಂಗ್ಲಾನುವಾದ, ಟಿಪ್ಪಣಿ ಸಹಿತ.
೧೯೩೨	‘ಔಟ್‌ಲೈನ್ಸ್ ಆಫ್ ಇಂಡಿಯನ್ ಫಿಲಾಸಫಿ.’
೧೯೩೩	‘ಇಷ್ಟಸಿದ್ಧಿ’ ಯ ಸಂಪಾದನೆ.

೧೯೩೫	ಪ್ರಾಚ್ಯ ಸಮ್ಮೇಳನದ ಮೈಸೂರು ಅಧಿವೇಶನದಲ್ಲಿ ಭಾರತೀಯ ತತ್ತ್ವಶಾಸ್ತ್ರ ವಿಭಾಗದ ಅಧ್ಯಕ್ಷ.
೧೯೩೯	ತತ್ತ್ವಶಾಸ್ತ್ರ ಸಮ್ಮೇಳನದ ಹೈದರಾಬಾದ್ ಅಧಿವೇಶನದ ಅಧ್ಯಕ್ಷರಾಗಿ ಆಯ್ಕೆ (ಅನಾರೊಗ್ಯಕಾರಣದಿಂದ ಹಿರಿಯಣ್ಣನವರು ನಿರಾಕರಿಸಿದರು).
೧೯೪೦	ಮದರಾಸು ವಿಶ್ವವಿದ್ಯಾನಿಲಯದಲ್ಲಿ ಮಿಲ್ಲರ್ ಸ್ಮಾರಕ ಉಪನ್ಯಾಸಗಳು.
–	‘ಇಂಡಿಯನ್ ಫಿಲಾಸಫಿ ಆಫ್ ವ್ಯಾಲ್ಯೂಸ್’ (ಅಪ್ರಕಟಿತ).

೧೯ ಸೆಪ್ಟೆಂಬರ್ ೧೯೫೦ ನಿಧನ.

ಎಚ್.ವಿ. ನಂಜುಡಯ್ಯನವರ ಗುಣಗ್ರಹಣ

ಟ್ರೈನಿಂಗ್ ಕಾಲೇಜನ್ನು ಬಿಟ್ಟ ಮೇಲೆ ಹಿರಿಯಣ್ಣನವರು ಮಹಾರಾಜ ಕಾಲೇಜಿನಲ್ಲಿ ಸಂಸ್ಕೃತದ ಅಧ್ಯಾಪಕರಾಗಿ ನಿಯಮಿತರಾದರು. ಅದು ಮೈಸೂರು ವಿಶ್ವವಿದ್ಯಾನಿಲಯವು ಪ್ರಾರಂಭವಾದಾಗ, ಮೊದಲನೆಯ ವೈಸ್‌ಚಾನ್ಸಲರಾದ ಎಚ್.ವಿ. ನಂಜುಡಯ್ಯನವರು [1] ಮಾಡಿದ ಯಶಸ್ಕರವಾದ ಕಾರ್ಯಗಳಲ್ಲಿ ಇದು ಒಂದು ದೊಡ್ಡದು. ವಿಶ್ವವಿದ್ಯಾನಿಲಯದ ನಾನಾ ಇಲಾಖೆಗಳಿಗೆ ಮುಖ್ಯಸ್ಥರಾದ ಪಂಡಿತರು ಆಯಾ ಶಾಸ್ತ್ರಗಳಲ್ಲಿ ಪರಿಣತರಾದವರಾಗಿರಬೇಕು, ಉತ್ತಮೋತ್ತಮರಾದವರಾಗಿರಬೇಕು–ಎಂದು ದೃಢಸಂಕಲ್ಪ ಮಾಡಿ ಆ ಕಾಲಕ್ಕೆ ಸರ್ವೋತ್ಕೃಷ್ಟರೆಂದು ತೋರಿದ ವಿದ್ವಾಂಸರನ್ನೇ ಆರಿಸಿತಂದರು. ಸರ್ವಪಲ್ಲಿ ರಾಧಾಕೃಷ್ಣನ್, ಎನ್. ಎಸ್. ಸುಬ್ಬರಾವ್, ಸಿ.ಆರ್. ರೆಡ್ಡಿ. ಕೆ.ಟಿ.ಷಾ, ರಾಧಾಕುಮುದ ಮುಖರ್ಜಿ, ಆರ್. ಶಾಮಶಾಸ್ತ್ರಿ-ಇವರೆಲ್ಲ ಆ ಪ್ರಥಮ ಪಂಕ್ತಿಗೆ ಸೇರಿದವರು. ಆ ದಿಗ್ಗಜಗಳ ಪಂಕ್ತಿಯಲ್ಲಿದ್ದವರು ಪ್ರೋಫೆಸರ್ ಹಿರಿಯಣ್ಣನವರು.

ಹಿರಿಯಣ್ಣನವರು ಬಹುಭಾಷಿಯಲ್ಲ; ಮುಂದೆ ನುಗ್ಗಿ ಬರುವವರಲ್ಲ. ತಮ್ಮ ಹಕ್ಕುಗಳನ್ನು ಹೇಳಿಕೊಳ್ಳುವವರಲ್ಲ. ಇಂಥವರ ಗುಣವನ್ನು ಕಂಡುಕೊಂಡು ಗೌರವಿಸಿದ್ದು ನಂಜುಡಯ್ಯನವರ ದೊಡ್ಡತನ.

ಸಂಸ್ಕೃತಾಧ್ಯಯನ

ಹಿರಿಯಣ್ಣನವರು ಪುರಾತನ ಸಂಪ್ರದಾಯ ಕ್ರಮದಲ್ಲಿ ಸಂಸ್ಕೃತ ಕಲಿತವರು. ಅವರ ತಂದೆಗಳು ನಂಜುಂಡಯ್ಯನವರು ಮೈಸೂರಿನ ಶಿವರಾಮಪೇಟೆಯಲ್ಲಿ ವಾಸವಾಗಿದ್ದವರಂತೆ. ಅವರ ಮಕ್ಕಳು ಮೂವರೂ-ಹಿರಿಯಣ್ಣನವರು, ಎಂ.ಎನ್. ಕೃಷ್ಣರಾಯರು. [2] ಎನ್. ಸೀತಾರಾಮಯ್ಯನವರು-ಪ್ರಖ್ಯಾತರಾಗಿದ್ದ ಪೆರಿಯಸ್ವಾಮಿ ತಿರುಮಲಾಚಾರ್ಯರೆಂಬ ವಿದ್ವಾಂಸರ ಶಿಷ್ಯರು; ಸದ್ವಿದ್ಯಾ ಶಾಲೆಯಲ್ಲಿ ವಿದ್ಯಾರ್ಥಿಗಳಾಗಿದ್ದವರು. ಅಲ್ಲಿ ಪ್ರಾಚೀನ ಸಂಪ್ರದಾಯದಂತೆ ಅಮರ, ಶಬ್ದ, ಧಾತುಪಾಠಗಳನ್ನು ಕಂಠಪಾಠ ಮಾಡಿ ಅಲ್ಲಿ ಉತ್ತೀರ್ಣರಾದ ಬಳಿಕ ಇಂಗ್ಲಿಷ್ ಓದಿಗೆ ಬಂದವರು. ಹಿರಿಯಣ್ಣನವರ ಪಾಂಡಿತ್ಯದಲ್ಲಿ ಈ ಪೀಠಿಕಾ ದಾರ್ಢ್ಯದ ಬಲ ಎದ್ದು ಕಾಣುತ್ತಿತ್ತು. ಅವರು ಪದಗಳ ರೂಪ ನಿಷ್ಪತ್ತಿಯನ್ನು ವಿವರಿಸುವಾಗ ಅವರ ಪಾಂಡಿತ್ಯ ಎಷ್ಟು ಆಮೂಲಾಗ್ರವಾದದ್ದು, ಪ್ರಾಮಾಣಿಕವಾದದ್ದು–ಎಂಬುದು ಚೆನ್ನಾಗಿ ಕಾಣಬರುತ್ತಿತ್ತು.

ಹಿರಿಯಣ್ಣನವರ ಸನ್ನಿಧಿಯಲ್ಲಿ ಪುಸ್ತಕ ಹಿಡಿದು ಪಾಠ ಕಲಿಯುವ ಯೋಗ ನನಗೆ ದೊರೆತದ್ದಲ್ಲ. ಆದರೆ ನನ್ನ ಅನುಭವದ ಒಂದು ಸಂಗತಿ ಅವರ ಭೋಧನ ಶ್ರದ್ಧೆ ಎಂಥಾದ್ದೆಂಬುದನ್ನು ದಿಗ್ದರ್ಶನ ಮಾಡಿಸೀತು.

ಬೋಧನ ಶ್ರದ್ಧೆ

ನಾನು ಒಂದು ಸಾರಿ ಮೈಸೂರಿಗೆ ಹೋಗಿದ್ದೆ–ನನ್ನ ತಮ್ಮನ ಮನೆಯಲ್ಲಿ ನಡೆದ ಒಂದು ಮದುವೆಗಾಗಿ. ಮದುವೆಯ ದಿನ ವಿದ್ವನ್ಮಿತ್ರರು ಬಹುಮಂದಿ ಬಂದಿದ್ದರು. ಆದರೆ ಹಿರಿಯಣ್ಣನವರು ಬಂದಿರಲಿಲ್ಲ. ಮಾರನೆಯ ದಿನ ಮಧ್ಯಾಹ್ನಾನಂತರ ಸುಮಾರು ಎರಡು ಘಂಟೆಗೆ ದಯಮಾಡಿ ಬಂದರು.

ನಾನು: "ನಿನ್ನೆ ತಮ್ಮನ್ನು ನಿರೀಕ್ಷಿಸಿಕೊಂಡಿದ್ದೆ. ಆ ಸಂತೋಷ ಈ ಹೊತ್ತು ದೊರೆಯಿತು."

ಹಿ: "ನಿನ್ನೆ ಬಂದಿರಬಹುದಾಗಿತ್ತು. ಆದರೆ ನಿಮ್ಮೊಡನೆ ಮಾತನಾಡಲಿಕ್ಕೆ ಸಮಯ ಸಿಕ್ಕುತ್ತಿತ್ತೆಂದೆನಿಸಲಿಲ್ಲ. ಬಹುಮಂದಿ ಅತಿಥಿಗಳು ಬಂದಿದ್ದಾರು; ಈ ಹೊತ್ತಾದರೆ ನೀವು ಸ್ವಲ್ಪ ಪುರಸತ್ತಾಗಿರಬಹುದು–ಎಂದುಕೊಂಡು ಬಂದೆ."

ನಾನು: (ಆ ಮಾತು ಈ ಮಾತು ಆದ ಬಳಿಕ) "ನಮ್ಮ ಜನದಲ್ಲಿ ವಿವಾಹ ಕರ್ಮದ ಅಂಗವಾಗಿ ಕಡೆಯಲ್ಲಿ 'ನೀಲಲೋಹಿತ ಪೂಜೆ' ಎಂಬ ಕರ್ಮ ನಡೆಯುತ್ತದೆ. ಅದರ ತಾತ್ಪರ್ಯವೇನಿದ್ದೀತು?... ಶಾಕುಂತಲದ ಭರತವಾಕ್ಯದಲ್ಲಿ 'ಕ್ಷಪಯತು ನೀಲಲೋಹಿತಃ' ಎಂದಿರುವುದಕ್ಕೂ ಈ ವಿವಾಹಾಂಗವಾದ ಕರೀಮಣಿ ತಾಳಿಯ ಬಿಚ್ಚೋಲೆ, ಒಳಗೆ ಅರಿಶಿನದ ಗೌರಿ–ಇದರ ಪೂಜೆಗೂ ಏನಾದರೂ ಸಂಬಂಧವಿದ್ದೀತೋ?"

ಆಮೇಲೆ ಮಾತು ಬೆಳೆಯಿತು. ಹಿರಿಯಣ್ಣನವರು ಹೊರಟರು. ನಾನೂ ಅವರೊಡನೆ ನಡೆದು ಲಕ್ಷ್ಮೀಪುರದಲ್ಲಿ ಅವರ ಮನೆ ತಲುಪಿದೆವು. ಅಲ್ಲಿ ಅವರು ತಾವು ಶಾಕುಂತಲ ಪಾಠ ಹೇಳುತ್ತಿದ್ದಾಗ "ನೀಲಲೋಹಿತ" ಪದದ ವಿವರಣೆಗಾಗಿ ಬರೆದಿಟ್ಟುಕೊಂಡಿದ್ದ ಟಿಪ್ಪಣಿಗಳನ್ನು ನನಗೆ ಕೊಟ್ಟರು. ಎರಡು ಮೂರು ಸ್ಟೂಡೆಂಟ್ಸ್ ನೋಟ್‌ಬುಕ್ಕುಗಳು; ಅದರಲ್ಲಿ ಮುದ್ದಾದ ಬರಹ, ಚೊಕ್ಕಟವಾಗಿ ಬರೆದಿದ್ದದ್ದು. ಅದನ್ನು ನೋಡುವುದೇ ಕಣ್ಣಿಗೆ ಒಂದು ಸಂತೋಷ. "ನೀಲಲೋಹಿತ" ಪದಕ್ಕೆ ನಾನಾ ವ್ಯಾಖ್ಯಾನಕಾರರುಗಳು ಕೊಟ್ಟಿದ್ದ ವಿವರಣೆಗಳನ್ನೂ ಸಂವಾದಿ ವಾಕ್ಯಗಳನ್ನೂ ಬರೆದಿಟ್ಟಿದ್ದರು.

ಧೋರಣೆಯಿಲ್ಲ

ಕಡೆಯಲ್ಲಿ ನಾನು "ಸಿದ್ಧಾಂತವೇನಿರಬಹುದೋ?" ಎಂದು ಕೇಳಿದೆ. ಅವರು "ನನಗೆ ದೊರೆತ ಸಾಮಾಗ್ರಿಯನ್ನು ಇಲ್ಲಿಟ್ಟಿದ್ದೇನೆ. 'ಇಷ್ಟೇ ಅದರ ಅರ್ಥ' ಎಂದು ಹೇಳುವುದು ನನಗೆ ಕಷ್ಟ" ಎಂದರು. ನಾನು ರುದ್ರಾಧ್ಯಾಯದ ಕೆಲವು ಪಂಕ್ತಿಗಳನ್ನು ಉದಾಹರಿಸಿದೆ.

ನಮೋ ಅಸ್ತು ನೀಲಗ್ರೀವಾಯ ।
ದ್ರಾಪೇ ಅಂಧಸಸ್ಪತೇ ದರಿದ್ರನ್ನೀಲಲೋಹಿತ ।

ಹಿ: "ಈ ಪ್ರಯೋಗಕ್ಕೆ ವೇದವೇ ಮೂಲವಿರಬಹುದು."

ನಾನು: "ಈ ವಾಕ್ಯವನ್ನು

ನೀಲಗ್ರೀವಾಶ್ಶಿತಿಕಂಠಾಶ್ಶರ್ವಾ
ಅಧಃ ಕ್ಷಮಾಚರಾಃ ।
ನೀಲಗ್ರೀವಾಶ್ಶಿತಿಕಂಠಾ ದಿವಗ್ಂ
ರುದ್ರಾ ಉಪಶ್ರಿತಾಃ ।

ಮೊದಲಾದ ವಾಕ್ಯಗಳೊಡನೆ ಸಮನ್ವಯಮಾಡಿಕೊಳ್ಳಬೇಕೆಂದು ನನಗನಿಸುತ್ತದೆ. ಜಗತ್ತಿನಲ್ಲಿ ಎಲ್ಲಿ ನೋಡಿದರೂ ರಹಸ್ಯ; ಅಮೂಲಾಗ್ರವಾಗಿ ವಿವರಿಸಲಾಗದ ಸಂಗತಿಗಳು ಮತ್ತು ಎಲ್ಲಿ ನೋಡಿದರೂ ಭಯ ಕಾರಣಗಳು. 'ನೀಲ' ಎಂಬುದು ರಹಸ್ಯಸೂಚಕ. 'ಲೋಹಿತ' ಎಂಬುದು ರೌದ್ರಸೂಚಕ, ಹೀಗೆಂದು ನನ್ನ ಮನಸ್ಸು ಹೋಗುತ್ತದೆ."

ಹಿ: "ಅದು ಸರಿಯೆ; ಯೋಚನೆ ಮಾಡಬೇಕಾದದ್ದೇ"

ಈ ಸಂಗತಿಯನ್ನು ಇಲ್ಲಿ ಹೇಳಿರುವುದರ ಉದ್ದೇಶ ಹಿರಿಯಣ್ಣನವರಿಗಿದ್ದ ಪಾಠ ಶ್ರದ್ಧೆಯನ್ನು ತೋರಿಸುವುದು. ಪಾಠದ ಪ್ರತಿಯೊಂದು ಅಂಶಕ್ಕೂ, ಪ್ರತಿಯೊಂದು ವಾಕ್ಯಕ್ಕೂ, ಪ್ರತಿಯೊಂದು ಮಾತಿಗೂ ಅವಧಾನ ಕೊಟ್ಟು ವ್ಯಾಸಂಗ ಮಾಡಿ ಟಿಪ್ಪಣಿ ಬರೆದುಕೊಂಡು ಸಿದ್ಧ ಮಾಡಿಕೊಳ್ಳುತ್ತಿದ್ದದ್ದು. ಯಾವುದರಲ್ಲೂ ಧೋರಣೆಯಿಲ್ಲ;

ಉಡಾಫೆಯಿಲ್ಲ. ತಮ್ಮ ಅಧಿಕಾರ ನಡೆದೀತೆಂದು ಯಾವುದನ್ನೂ ಅಲಕ್ಷ್ಯ ಮಾಡುವವರಲ್ಲ. ಅಂಥ ಪ್ರಾಮಾಣಿಕರು.

ಗುಣವಿಶೇಷ

ಹಿರಿಯಣ್ಣನವರ ಗುಣವಿಶೇಷವನ್ನು ತಿಳಿಸುವುದಕ್ಕಾಗಿ ನಾನು ಮೂರು ಪದಗಳನ್ನು ಆರಿಸಿಟ್ಟುಕೊಂಡಿದ್ದೇನೆ– (೧) ಅವರು ಪ್ರಾಮಾಣಿಕರು; (೨) ಅವರು ಪರಿಶುದ್ಧರು; (೩) ಅವರು ಉಪಶಾಂತರು. ಪರಿಶುದ್ಧಿ, ಉಪಶಾಂತತೆ–ಇವೆರಡೂ ಪ್ರಾಮಾಣಿಕತೆ ಎಂಬುದರಲ್ಲಿಯೇ ಅಡಗಿದೆ. ಅರ್ಥಸ್ಪಷ್ಟತೆಗಾಗಿ ಆ ಎರಡು ಮಾತನ್ನೂ ಬೇರೆಯಾಗಿ ಹೇಳಿದ್ದೇನೆ.

ಪ್ರಾಮಾಣಿಕತೆ ಎಂದರೆ ಸತ್ಯವನ್ನು ಹೆಚ್ಚು ಕಡಮೆಗಳಿಲ್ಲದಂತೆ ತೂಕ ಮಾಡಿ ಹೇಳುವು. "ಪ್ರಮಾ" ಎಂದರೆ "ಸರಿಯಾದ ಅಳತೆ", "ಸರಿಯಾದ ತೂಕ", ಲೆಕ್ಕಾಚಾರದಿಂದ ಶುದ್ಧವಾದ ಕರಾರುವಾಕ್ಕು. "ಪ್ರಮಾಣಕರಣಂ ಪ್ರಮಾಣಮ್." ಹಾಗೆ ಕರಾರುವಾಕ್ಕಾಗಿ, ಹೆಚ್ಚೂ ಇಲ್ಲದೆ ಕಡಮೆಯೂ ಇಲ್ಲದೆ, ವಸ್ತು ಹೇಗಿದೆಯೋ ಹಾಗೆ ತಿಳಿದುಕೊಂಡು ಆ ಯಥಾರ್ಥವನ್ನು ಹೇಳುವುದು ಪ್ರಾಮಾಣಿಕತೆ.

ಯಥಾರ್ಥವು ಮನಸ್ಸಿಗೆ ಬರಬೇಕಾದರೆ ಮನಸ್ಸಿನಲ್ಲಿ ಹಿಂದಿನಿಂದ ಅಡಗಿಕೊಂಡಿದ್ದ ಕೊಳೆಗಳು ತೊಡೆದುಹೋಗಬೇಕು. ಸಂದೇಹ, ಬರಿಯ ಅನುಮಾನ, ಅನೃತ, ಆಗ್ರಹ, ಪೂರ್ವಾಭಿಮಾನ–ಇವೆಲ್ಲ ಕಶ್ಮಲಗಳು. ಸತ್ಯಕ್ಕೆ ವಿರೋಧವಾದದ್ದೆಲ್ಲ ಕೊಳೆ. ಇಂಥ ಕೊಳೆಗಳು ತೊಲಗಿ ಮನಸ್ಸು ಪರಿಶುದ್ಧವಾದ ಮೇಲೆಯೇ ಅದಕ್ಕೆ ಯಥಾರ್ಥ ಲಾಭ. ಆದದ್ದರಿಂದ ಪಾರಿಶುದ್ಧ್ಯವು ಪ್ರಾಮಾಣಿಕತೆಗೆ ಪೂರ್ವಭಾವಿಯಾಗಿರಬೇಕಾದ ಸಿದ್ಧತೆ.

ಉಪಶಾಂತಿಯೂ ಹಾಗೆಯೇ. ಉಪಶಾಂತಿಯೆಂದರೆ ಮನಸ್ಸು ಉದ್ವೇಗವಿಲ್ಲದೆ ಇರುವ ಸ್ಥಿತಿ. ನಮ್ಮ ಮನಸ್ಸಿನಲ್ಲಿ ವಿಧವಿಧವಾದ ರಾಗದ್ವೇಷಗಳು ಇರುವಾಗ ಅವುಗಳ ಕಾವಿನ ಝಳದಲ್ಲಿ ಯಥಾರ್ಥವು ಕಣ್ಣಿಗೆ ಯಥಾವತ್ತಾಗಿ ದೊರೆಯಲಾರದು. ಕೋಪತಾಪಗಳ ಬೆಳಕಿನ ಝಳದಲ್ಲಿ ಸತ್ಯವು ನಮ್ಮ ಕಣ್ಣಿಗೆ ವಿಕಾರವಾಗಿ ಕಾಣುತ್ತದೆ. ಮನಸ್ಸು ಶಾಂತವಾಗಿರುವಾಗ ಸತ್ಯವು ಅಲೆದಾಟವಿಲ್ಲದ ದೀಪದಂತೆ, ನಿಶ್ಚಲಜ್ವಾಲೆಯಂತೆ ಏಕರೂಪದಲ್ಲಿ ಕಾಣುತ್ತದೆ. ಆದದ್ದರಿಂದ ಸತ್ಯಾನ್ವೇಷಿಯು ಉದ್ವೇಗವಿಲ್ಲದವನಾಗಿ, ರಾಗದ್ವೇಷವಿಲ್ಲದವನಾಗಿ, ನಿರ್ಮಲದೃಷ್ಟಿಯುಳ್ಳವನಾಗಿರಬೇಕು.

ಹಿರಿಯಣ್ಣನವರು ಈ ಮೂರು ಗುಣಗಳಿಗೂ ಆದರ್ಶಸ್ವರೂಪರಾಗಿದ್ದರು. ಅವರು ಸತ್ಯದ ವಿನಾ ಯಾವ ವಿಧವಾದ ಆಕಾಂಕ್ಷೆಯನ್ನೂ ಮನಸ್ಸಿನಲ್ಲಿಟ್ಟುಕೊಂಡು ನಡೆದವರಲ್ಲ; ಮೇಲಿನವರ ಮುಖೋಲ್ಲಾಸಕ್ಕಾಗಿ ಪ್ರಯತ್ನಿಸಿದವರಲ್ಲ. ಪ್ರತಿಯಾಗಿ ಮೇಲಧಿಕಾರಿಗಳ ಮನಸ್ಸಿಗೆ ಇಷ್ಟವಾಗಿರದ ಸತ್ಯವನ್ನು ಸ್ಪಷ್ಟವಾಗಿ ಹೇಳಿದವರು; ಈ ಸತ್ಯ ನಿಷ್ಠೆಯಿಂದ ಕೊಂಚಮಟ್ಟಿನ ಅನಾನುಕೂಲವನ್ನೂ ಸಹಿಸಿದವರು.

ಅವರು ಸತ್ಯ ನುಡಿಯುವುದರಲ್ಲಿ ನಿಷ್ಠುರ ಮಾಡಿದವರಲ್ಲ; ಯಾವ ಸಮಯದಲ್ಲಿಯೂ ಗಂಟಲನ್ನು ದೊಡ್ಡದು ಮಾಡಿದವರಲ್ಲ. ಅವರು ಆಡಿದ ಮಾತು ಸಾಮಾನ್ಯವಾಗಿ ಯಾರನ್ನು ಉದ್ದೇಶಿಸಿತ್ತೋ ಅವರಿಗೆ ಕೇಳಿಸುವಷ್ಟು ಮಾತ್ರ ಅವರ ಧ್ವನಿ ಇರುತ್ತಿತ್ತು. ಅವರು ಹೆಚ್ಚು ಮಾತಿನವರಲ್ಲ; ಹೆಚ್ಚಿದ ಧ್ವನಿಯವರೂ ಅಲ್ಲ. ಮಾತೂ ಧ್ವನಿಯೂ ಸೌಮ್ಯವಾಗಿದ್ದವು.

> ಯಸ್ಮಾನ್ನೋದ್ವಿಜತೇ ಲೋಕಃ
> ಲೋಕಾನ್ನೋದ್ವಿಜತೇ ಚ ಯಃ ॥

ಇದು ಹಿರಿಯಣ್ಣನವರ ನಡತೆಯ ಸೂತ್ರ.

ಅತಿವಾದ ಕೂಡದು

ಅವರ ಪಾಠಕ್ರಮದ ಒಂದು ನಿಯಮವನ್ನು ಕೊಂಚ ವಿಸ್ತರಿಸಿ ಹೇಳಿದರೆ ಅಯುಕ್ತವಾಗದು. ಅವರು ಯಾವ ವಿಷಯವನ್ನು ಪ್ರತಿಪಾದಿಸ ಹೊರಟರೂ ಅದರಲ್ಲಿ ಅತಿವಾದ ಬೆಳಸಬಾರದೆಂಬ ನಿಯಮವನ್ನಿಟ್ಟುಕೊಂಡಿದ್ದರು. ಎಷ್ಟು ಅವಶ್ಯವೋ ಅಷ್ಟೇ ಇರಬೇಕು ವ್ಯಾಖ್ಯಾನ. ಕೋಲಾಚಲ ಮಲ್ಲಿನಾಥನೆಂಬ ವ್ಯಾಖ್ಯಾತ ಶಿರೋಮಣಿ ತನ್ನ ಸ್ವಂತಕ್ಕಾಗಿರಿಸಿಕೊಂಡಿದ್ದ ನಿಯಮ ಹೀಗೆ:

> ನಾಮೂಲಂ ಲಿಖ್ಯತೇ ಕಿಂಚಿತ್
> ನಾನಪೇಕ್ಷಿತಮುಚ್ಯತೇ ॥

“ಮೂಲಗ್ರಂಥದಲ್ಲಿಲ್ಲದ್ದನ್ನು ಕಲ್ಪನೆ ಮಾಡಿ ಬರೆಯುವುದಿಲ್ಲ; ಅವಶ್ಯವಲ್ಲದ್ದನ್ನು, ಎಂದರೆ ಯಾವುದನ್ನು ವಾಚಕರು ತಾವಾಗಿ ಊಹಿಸಿಕೊಳ್ಳಲಾಗುತ್ತದೆಯೋ ಅಂಥಾದ್ದನ್ನು ಹೇಳುವುದಿಲ್ಲ.”

ಈ ಕಟ್ಟುನಿಟ್ಟಿನ ನಿಯಮವನ್ನು ತಮ್ಮ ಗ್ರಂಥಲೇಖನದಲ್ಲಿ ಹಿರಿಯಣ್ಣನವರು ಇಟ್ಟುಕೊಂಡಿದ್ದರು.

ಅವರು ಬರೆದಿರುವ ಗ್ರಂಥಗಳಲ್ಲಿ

1. Outlines of Indian Philosophy.
2. Essentials of Indian Philosophy.

ಈ ಎರಡು ಗ್ರಂಥಗಳೂ ಗ್ರಂಥಲೇಖನ ಹೇಗಿರಬೇಕೆಂಬುದಕ್ಕೆ ಉದಾಹರಣೆಗಳು. ಪ್ರತಿಯೊಂದು ವಿಷಯವೂ ವಿಶದಪಟ್ಟಿದೆ. ವಾಕ್ಯಗಳು ಸರಳವಾಗಿವೆ, ಮತ್ತು ನಿಷ್ಕರ್ಷೆಯನ್ನು ತೋರಿಸುತ್ತವೆ, ವಿಷಯವು ಗಂಭೀರವೂ ಗಹನವೂ ಆದದ್ದರಿಂದ ಅವರ ವಾಕ್ಯಗಳ ವಿಶದತೆಯೂ ಸರಳತೆಯೂ ಓದುಗರಿಗೆ ಮನಃಪ್ರಸಾದಕರವಾಗಿ, ಒಂದು ಮೃದುಕಾಂತಿಯನ್ನು ತುಂಬಬಲ್ಲವಾಗಿವೆ.

ಗ್ರಂಥ ಸಂಪಾದನೆ

-ಈ ಗ್ರಂಥಗಳ ಜೊತೆಗೆ ಅವರು ಕೆಲವು ಕ್ಲಿಷ್ಟವಾದ ವೇದಾಂತಗ್ರಂಥಗಳನ್ನು ಸಂಪಾದನ ಮಾಡಿ ಉಪೋದ್ಘಾತ ಟಿಪ್ಪಣಿಗಳಿಂದ ವಾಚಕರಿಗೆ ಸುಲಭಪಡಿಸಿದ್ದಾರೆ. ಇಂಥ ಸಂಸ್ಕೃತ ಗ್ರಂಥಗಳಲ್ಲಿ (೧) ವೇದಾಂತಸಾರ, (೨) ನೈಷ್ಕರ್ಮ್ಯ ಸಿದ್ಧಿ, (೩) ಇಷ್ಟ ಸಿದ್ಧಿ–ಇವು ಮುಖ್ಯವಾದವು. ಇಷ್ಟಸಿದ್ಧಿಯೆಂಬುದು ಜ್ಞಾನಸಾಧನದ ವಿಷಯವನ್ನು ಕುರಿತದ್ದು. ಅದು ಬಹು ಕ್ಲಿಷ್ಟವಾದ ಗ್ರಂಥ; ತರ್ಕಭೂಯಿಷ್ಠವಾದದ್ದು. ಅದರಲ್ಲಿ, ಒಂದು ವಸ್ತುವು ತನ್ನ ಇರುವಿಕೆಯನ್ನು ನಮಗೆ ಹೇಗೆ ತಿಳಿಸಿಕೊಡುತ್ತದೆ? – ಎಂಬುದು ವಿಚಾರ. ಇದನ್ನು ಪಾರಿಭಾಷಿಕವಾಗಿ "ಖ್ಯಾತಿ" ಎಂದು ಹೇಳುತ್ತಾರೆ. ಈ ಗ್ರಂಥಕ್ಕೆ ಹಿರಿಯಣ್ಣನವರು ಇಂಗ್ಲಿಷಿನಲ್ಲಿ ಬರೆದಿರುವ ಪೀಠಿಕೆ ಅದು ತಾನೇ ಒಂದು ಸ್ವತಂತ್ರ ಗ್ರಂಥವೆಂದು ಹೇಳಬಹುದು.

ಹಿರಿಯಣ್ಣನವರು ಈಶ ಕೇನ ಕಠೋಪನಿಷತ್ತುಗಳನ್ನೂ ಬೃಹದಾರಣ್ಯಕದ ಕೆಲವು ಭಾಗಗಳನ್ನೂ ಶಾಂಕರಭಾಷ್ಯಸಮೇತವಾಗಿ ಇಂಗ್ಲಿಷಿಗೆ ಪರಿವರ್ತನೆ ಮಾಡಿಕೊಟ್ಟಿದ್ದಾರೆ.

***

ಹಿರಿಯಣ್ಣನವರ ಇಂಗ್ಲಿಷ್ ಸಾಹಿತ್ಯಪ್ರಜ್ಞೆಯು ಅವರ ಸಂಸ್ಕೃತ ಪ್ರಜ್ಞೆಗಿಂತ ಕಡಿಮೆಯಾದದ್ದಲ್ಲ. ಅವರು ಸಂಸ್ಕೃತ ಪ್ರೊಫೆಸರಾಗದೆಹೋಗಿದ್ದಿದ್ದರೆ ಇಂಗ್ಲಿಷ್ ಪ್ರೊಫೆಸರಾಗಬಹುದಾಗಿತ್ತು. ಷೇಕ್ಸ್ಪಿಯರನ ಸಾಹಿತ್ಯದಲ್ಲಿಯೂ ವರ್ಡ್ಸ್ ವರ್ತ್ ಮೊದಲಾದವರ ಇಂಗ್ಲಿಷ್ ಕಾವ್ಯಗಳ ವಿಷಯದಲ್ಲಿಯೂ ಅವರು ತುಂಬ ಉತ್ಸಾಹಿಗಳಾಗಿದ್ದರು. ಒಂದು ಸಾರಿ ಏನೋ ಚರ್ಚೆ ನಡೆಯುತ್ತಿದ್ದಾಗ ಅವರು ಕೇವಲ ಜ್ಞಾಪಕದಿಂದ ವರ್ಡ್ಸ್‌ವರ್ತ್ ಕವಿಯ ಒಂದು ಸಾನೆಟ್ ಪದ್ಯದ ಉದಾಹರಣೆ ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ.

ಇದಲ್ಲದೆ ಅವರು 'ಲಂಡನ್ ಟೈಮ್ಸ್' ಪತ್ರಿಕೆಯ ವಾರವಾರದ 'ಲಿಟರರಿ ಸಪ್ಲಿಮೆಂಟ್' ಎಂಬ ಸಾಹಿತ್ಯ ವಿಮರ್ಶನ ಪತ್ರಿಕೆಯನ್ನೂ ಅದರಂತೆ ಪ್ರಮಾಣಭೂತವೆನಿಸಿದ ಇತರ ಇಂಗ್ಲಿಷ್ ಪತ್ರಿಕೆಗಳನ್ನೂ ಅತಿಶಯವಾದ ಆಸಕ್ತಿಯಿಂದ ವ್ಯಾಸಂಗ ಮಾಡಿ ಗಮನಾರ್ಹವೆಂದು ತಮಗೆ ತೋರಿದ ಸಾಹಿತ್ಯಮೀಮಾಂಸೆಯ ಅಭಿಪ್ರಾಯಗಳನ್ನೂ

ತತ್ತ್ವಜಿಜ್ಞಾಸೆಯ ಅಭಿಪ್ರಾಯಗಳನ್ನೂ ಕ್ರಮವಾಗಿ ಗುರುತುಹಾಕಿಕೊಂಡಿರುತ್ತಿದ್ದರು. ಯಾವುದಾದರೊಂದು ಉದ್ಗ್ರಂಥದ ವಿಮರ್ಶೆಯನ್ನು ನೋಡಿದ ಕೂಡಲೆ ಆ ವಿಮರ್ಶನ ಪ್ರಬಂಧವನ್ನು ಬೇರೆ ತೆಗೆದು ಸಂಬಂಧಪಟ್ಟ ಪುಸ್ತಕದಲ್ಲಿ ಜೋಪಾನವಾಗಿರಿಸಿಕೊಳ್ಳುತ್ತಿದ್ದರು.

ಸರಳ-ಗಂಭೀರ

ಹಿರಿಯಣ್ಣನವರ ವಿದ್ವತ್ತೆಯ ಮಾತೂ ಅವರ ವಿಚಾರಗಾಂಭೀರ್ಯದ ಮಾತೂ ನನ್ನ ಶಕ್ತಿಯನ್ನು ಮೀರಿದವು. ಅವರಲ್ಲಿ ಸಾಮಾನ್ಯರು ಕಾಣಬಹುದಾಗಿದ್ದ ದೊಡ್ಡ ಗುಣವೆಂದರೆ ಪರಿಷ್ಕಾರಶ್ರದ್ಧೆ. ಅವರ ಕೈಬರಹ ಅಂದವಾದದ್ದು, ಇಂಗ್ಲಿಷ್ ಆಗಲಿ ಕನ್ನಡವಾಗಲಿ ದೇವನಾಗರಿ ಆಗಲಿ; ಅಕ್ಷರದ ಗಾತ್ರ ಸಣ್ಣದು, ಆದರೆ ಸ್ಫುಟವಾಗಿ ಸ್ವಾಭಾವಿಕ ರೂಪದಲ್ಲಿದ್ದದ್ದರಿಂದ ಅದನ್ನು ಓದುವುದೇ ಒಂದು ಸಂತೋಷವೆನಿಸುತ್ತಿತ್ತು. ಅವರು ಅಚ್ಚಿನ ಕರಡುಗಳಲ್ಲಿ ಮಾಡುತ್ತಿದ್ದ ತಿದ್ದುಪಾಟುಗಳೂ ಹಾಗೆಯೇ. ಒಂದು ಚಿತ್ತೂ ಇರುತ್ತಿರಲಿಲ್ಲ. ಎಲ್ಲ ಸುಗಮವಾಗಿರುತ್ತಿತ್ತು. ಅವರು ಕಾಗದಗಳನ್ನು ಬರೆಯುತ್ತಿದ್ದದ್ದೂ ಹಾಗೆಯೇ. ಸೊಗಸಾದ ಅಕ್ಷರ. ಕಾಗದದ ಆಡಂಬರವಿಲ್ಲ. ವಾಕ್ಯಗಳು ಲಲಿತವಾಗಿರುತ್ತಿದ್ದವು. ಎಷ್ಟು ಪ್ರಶ್ನೆಯೋ ಅಷ್ಟೇ ಉತ್ತರ, ಗಹನವಾದ ವಿಷಯಗಳನ್ನು ಸುಲಭವಾಗುವಂತೆ ಮಿತಪದಗಳಲ್ಲಿ ಹೇಳುತ್ತಿದ್ದರು. ವಾಕ್ಯಶೈಲಿಯಲ್ಲಿ ಆಡಂಬರವಿಲ್ಲ. ಎಲ್ಲ ಸರಳ, ಎಲ್ಲ ಗಂಭೀರ.

ಮನೆಯಲ್ಲಿ ಅವರ ಪುಸ್ತಕಭಂಡಾರದಲ್ಲಿ, ಆರಿಸಿ ಆರಿಸಿದ ಗ್ರಂಥಗಳಿದ್ದವು. ವರ್ಷಕ್ಕೊಮ್ಮೆ ಅವರು ತಮ್ಮಲ್ಲಿ ಸೇರಿದ್ದ ಪುಸ್ತಕಗಳನ್ನೆಲ್ಲ ಪುನಃ ಪರೀಕ್ಷೆಮಾಡಿ, ಎರಡನೆಯ ಮೂರನೆಯ ದರ್ಜೆಯ ಪುಸ್ತಕಗಳನ್ನು ಬೇರೆ ಮಾಡಿ ಯಾರಿಗಾದರೂ ಕೊಟ್ಟುಬಿಡುತ್ತಿದ್ದರು.

ಅವರ ಇನ್ನೊಂದು ದೊಡ್ಡ ಗುಣ ಚೊಕ್ಕಟ. ಪುಸ್ತಕವಾಗಲಿ ಕುರ್ಚಿಯಾಗಲಿ, ಸಣ್ಣ ಮೇಜಾಗಲಿ, ಎಲ್ಲ ಚೊಕ್ಕಟವಾಗಿರಬೇಕು. ಮನೆಯಲ್ಲಿ ಅವರು ಸಾಮಾನ್ಯವಾಗಿರುತ್ತಿದ್ದದ್ದು ಮನೆಯ ಮುಂದುಗಡೆಯ ಕೊಠಡಿಯಲ್ಲಿ. ಅದರಲ್ಲಿದ್ದ ಪರಿಕರಗಳು: ಒಂದು ಸೊಗಸಾದ ಚಾಪೆ, ಒಂದು ಸಣ್ಣ ಇಳಿಜಾರು ಡೆಸ್ಕು, ಒಂದು ಬೆಂಚು, ಒಂದು ಸಣ್ಣ ಸ್ಟೂಲು; ಒಂದು ಅರ್ಧ ಆರಾಮ ಕುರ್ಚಿ. ಹಿರಿಯಣ್ಣನವರು ಸಾಮಾನ್ಯವಾಗಿ ಚಾಪೆಯ ಮೇಲೆ ಕುಳಿತು ಡೆಸ್ಕನ್ನು ಮುಂದಿರಿಸಿಕೊಂಡು ಓದು ಬರಹ ನಡಸುವರು. ಅವರ ಹಿಂದುಗಡೆಯೇ ಗೋಡೆಯಲ್ಲಿ ಐದಾರು ಅರೆಗಳುಳ್ಳ ಕಪಾಟು. ಅದರಲ್ಲಿ ತಮ್ಮ ಕೈಬರಹದ ಪ್ರತಿಗಳನ್ನೂ ಸಾಮಾಗ್ರಿಯನ್ನೂ ಫೈಲುಗಳಲ್ಲಿ ಕಟ್ಟಿ ನೀಟಾಗಿ ಇಟ್ಟಿರುತ್ತಿದ್ದರು.

ಅತಿಥಿಗಳು ಯಾರಾದರೂ ಬಂದಾಗ ಅವರನ್ನು ಆ ಅರ್ಧ ಆರಾಮ ಕುರ್ಚಿಯ ಮೇಲೆ ಕೂಡಿಸಿ ತಾವು ಸ್ಟೂಲಿನ ಮೇಲೆ ಕೂಡುವರು. ಈ ಮರ್ಯಾದೆ ಎಂದೂ ತಪ್ಪಿದ್ದಲ್ಲ, ಬಂದ

ಅತಿಥಿಗಳು ಒಬ್ಬರಿಗಿಂತ ಹೆಚ್ಚಾಗಿದ್ದರೆ ಮಿಕ್ಕವರು ಬೆಂಚಿನ ಮೇಲೆ ಕೂಡುವರು.

ಈ ಕೂಡುವ ಕೋಣೆಯ ಹಿಂಭಾಗದಲ್ಲಿ ಗ್ರಂಥಭಂಡಾರ. ಅಲ್ಲಿಯೂ ಚೊಕ್ಕಟ. ಒಂದು ಕಣವೂ ಧೂಳಿರುತ್ತಿರಲಿಲ್ಲ. ಎಲ್ಲವನ್ನೂ ಒರಸಿಡುತ್ತಿದ್ದರು.

ಕಾಲ ನಿಯಮ

ಹಿರಿಯಣ್ಣನವರ ಕಾಲನಿಯಮಪಾಲನೆಯೂ ಪ್ರಶಂಸೆಗೆ ಅರ್ಹವಾದದ್ದು. ಮಸಲ ನಾನು ಒಂದು ಸೋಮವಾರ ಬೆಳಗ್ಗೆ ಎಂಟೂವರೆ ಘಂಟೆಗೆ ಅವರನ್ನು ನೋಡುವುದಕ್ಕಾಗಿ ಅವರ ಮನೆಗೆ ಹೋಗುವೆನೆಂದು ಮುಂಚಿತವಾಗಿ ತಿಳಿಸಿರುತ್ತಿದ್ದೆನೆನ್ನಿ. ಎಂಟೂವರೆ ಘಂಟೆಗೆ ಸರಿಯಾಗಿ, ನಾನು ಅವರ ಮನೆ ತಲಪುವ ವೇಳೆಗೆ, ಅವರು ಗೇಟಿನ ಬಳಿ ಕಾದು ನಿಂತಿರುತ್ತಿದ್ದರು. ಕೈಯಲ್ಲಿ ಪುಸ್ತಕ ಪೆನ್ಸಿಲು. ನನ್ನನ್ನು ಕಂಡ ಕೂಡಲೆ ಅವರು ಕೋಣೆಗೆ ನನ್ನನ್ನು ಕರೆದುಕೊಂಡು ಹೋಗಿ, ನನ್ನನ್ನು ಕೂಡಿಸಿ ತಾವು ಕೂಡುವರು. ನಾನು ಚಾಪೆಯ ಮೇಲೆಯೇ ಕೂಡಲು ಇಷ್ಟವುಳ್ಳವನು; ಆದದ್ದರಿಂದ ಅವರೂ ಹಾಗೆಯೇ ಕೂಡುವರು, ಕುಳಿತ ಉತ್ತರಕ್ಷಣವೇ ಪ್ರಾರಂಭಿಸುವರು:

"ಈ ಗ್ರಂಥದಲ್ಲಿ ಇಷ್ಟನೇ ಪುಟದಲ್ಲಿ ಆರನೆಯ ಪಂಕ್ತಿಯಲ್ಲಿ ಈ ಪ್ರಯೋಗವನ್ನು ನೀವು ಪುನಃ ಯೋಚನೆ ಮಾಡಿ ನೋಡಬೇಕು ಅಂತ ತೋರುತ್ತದೆ...."

ಕುಶಲಪ್ರಶ್ನೆ ಯೋಗಕ್ಷೇಮ ಮೊದಲಾದ ಹರಟೆ ಆಮೇಲೆ. ಮೊದಲು ಕೈಯಲ್ಲಿದ್ದ ಕೆಲಸ. ಇದು ಅವರ ದಾರಿ. ಇದನ್ನು ನಾನು ಎಷ್ಟೋ ಸಾರಿ ಕಂಡಿದ್ದೇನೆ.

(೧) ಹಿರಿಯಣ್ಣನವರಲ್ಲಿ ಹರಟೆಗೆ ಅವಕಾಶವಿಲ್ಲ. (೨) ಧ್ವನಿ ಮೇಲಕ್ಕೆತ್ತಬೇಕಾದ ಕಾರಣವಿಲ್ಲ. ನನ್ನ ಮಾತು ಅವರಿಗೆ ಕೇಳಬೇಕು; ಇತರರಿಗೆ ಕೇಳಿಸಬೇಕಾದದ್ದಿಲ್ಲ. ಎಷ್ಟೋ ಅಷ್ಟು ಮಾತು; ಎಷ್ಟು ಅವಶ್ಯವೋ, ಅಷ್ಟೇ ಧ್ವನಿಯ ಗಾತ್ರ.

ಹಿರಿಯಣ್ಣನವರಲ್ಲಿ ಯಾವ ಬಗೆಯ ಆಡಂಬರವೂ ಇರಲಿಲ್ಲ. ಉಡಿಗೆ ತೊಡಿಗೆ, ಮಾತು, ಅಂಗಾಂಗಸಂಜ್ಞೆ -ಯಾವುದರಲ್ಲೂ ದರ್ಪದ ಛಾಯೆಯಿಲ್ಲ. ಇಬ್ಬರು ಮಾನ್ಯರಾದ ಸುಸಂಸ್ಕೃತ ಪುರುಷರು ಪರಸ್ಪರ ಹೇಗೆ ನಡೆದುಕೊಳ್ಳುತ್ತಾರೋ ಆ ಬಗೆಯ ನಡವಳಿಕೆ.

ತತ್ತ್ವ ಕುತೂಹಲ

ತತ್ತ್ವವಿಚಾರದಲ್ಲಿ ಹಿರಿಯಣ್ಣನವರು ಪುಸ್ತಕಪಾಂಡಿತ್ಯಕ್ಕಿಂತ ಸ್ವಾನುಭವ ದೊಡ್ಡದೆಂದು ತಿಳಿದಿದ್ದರು. ಒಂದು ಸಾರಿ ಅವರು ನನಗೆ ಹೀಗೆ ಹೇಳಿದರು!

ಹಿ: "ನನ್ನ Outlines ಪುಸ್ತಕದಲ್ಲಿ ದ್ವೈತಸಿದ್ಧಾಂತವನ್ನು ಕುರಿತು ಒಂದು ಪ್ರಕರಣ ಬರೆಯದೆ ಬಿಟ್ಟದ್ದಕ್ಕೆ ಕಾರಣ ನನಗೆ ಅಸಹನೆ ಎಂದು ಕೆಲಮಂದಿ ಆಡಿಕೊಂಡದನ್ನು ಕೇಳಿದ್ದೇನೆ. ನಿಜವಾದ ಕಾರಣವನ್ನು ನಿಮಗೆ ಹೇಳುತ್ತೇನೆ: ನನಗೆ ಆ ಸಿದ್ಧಾಂತದ ಸ್ವಾನುಭವ ಸಾಲದು. ಅದನ್ನು ನಾನು ಅನುಭವಕ್ಕೆ ತಂದುಕೊಳ್ಳಬೇಕೆಂದು ಅಭಿಪ್ರಾಯವಿದೆ. ಅನುಭವ ಮಾಡಿಕೊಡಬಲ್ಲವರನ್ನು ಹುಡುಕಿತ್ತಿದ್ದೇನೆ. ನಿಮಗೆ ತಿಳಿದಿರುವ ದ್ವೈತವಿದ್ವಾಂಸರಲ್ಲಿ ಅಂಥವರು ಯಾರಾದರೂ ಇದ್ದರೆ ನನಗೆ ಹೇಳಬೇಕಲ್ಲ? ನಾನು ಅವರ ಪರಿಚಯಮಾಡಿಕೊಳ್ಳಬಯಸುತ್ತೇನೆ."

ನಾನು ಎರಡು ಮೂರು ಹೆಸರುಗಳನ್ನು ಹೇಳಿದೆ.ಅವರು ಸಾಂಖ್ಯಶಾಸ್ತ್ರ, ತರ್ಕ ಶಾಸ್ತ್ರಗಳನ್ನು ಪಾಠ ಹೇಳುತ್ತಿದ್ದವರೆಂದೂ ಮಾಧ್ವಮಂಡಳಿಯಲ್ಲಿ ಪಂಡಿತವರ್ಗದಲ್ಲಿ ಬಹುಮಾನಿತರಾದವರೆಂದೂ ಹೇಳಿದೆ.

ಹಿ: "ಅವರು ಪುಸ್ತಕದಿಂದ ಪಾಠ ಹೇಳುವರೋ, ಅನುಭವದಿಂದ ಪಾಠ ಹೇಳುವರೋ?"

ನನಗೆ ಗಂಟಲು ಕಟ್ಟಿತು.

ಹಿ: "ಪುಸ್ತಕದಿಂದ ತಿಳಿದುಕೊಳ್ಳಬಹುದಾದ್ದನ್ನು ನಾನು ಒಂದಿಷ್ಟು ನೋಡಿಕೊಂಡಿದ್ದೇನೆ. ನನಗೆ ಬೇಕಾದದ್ದು ಆ ಅನುಷ್ಠಾನ ಅಭ್ಯಾಸಗಳನ್ನು ತಾವು ಮಾಡಿಕೊಂಡು ತತ್ತ್ವವನ್ನು ಅಂತರಂಗದಲ್ಲಿ ಅನುಭವಿಸಿರತಕ್ಕವರು."

ನಾನು ಸುಮ್ಮನಿದ್ದೆ. ಒಂದೆರಡು ಕ್ಷಣ ಕಳೆದು ಅವರೇ ಹೇಳಿದರು:

"ನಾನು ಅಂಥವರನ್ನು ಹುಡುಕುತ್ತಿದ್ದೇನೆ."

ಈ ಮಾತುಕಥೆ ನಡೆದ ಐದಾರು ತಿಂಗಳ ತರುವಾಯ ಎ. ಆರ್. ಕೃಷ್ಣಶಾಸ್ತ್ರಿಗಳು ನನಗೆ ಒಂದು ದಿನ ಹೇಳಿದರು: "ಯಾರೋ ಒಬ್ಬ ಮಾಧ್ವವಿದ್ವಾಂಸರಿದ್ದಾರಂತೆ, ತುಂಬ

ಮುದುಕರಂತೆ. ಹಿರಿಯಣ್ಣನವರು ಅವರಲ್ಲಿ ಹೋಗಿಬರುತ್ತಿದ್ದಾರಂತೆ" –ಎಂದು. [1]

ಪೂರ್ವಪಾಂಡಿತ್ಯ ಭಕ್ತಿ

ಹಿರಿಯಣ್ಣನವರಿಗೆ ಪೂರ್ವಕಾಲದ ವಿದ್ವಾಂಸರಲ್ಲಿ ಅತ್ಯಂತ ಗೌರವ. "ಪ್ರಾಚೀನರದು ಚರ್ವಿತ ಚರ್ವಣ ಪಾಂಡಿತ್ಯ. ನಮ್ಮ ಹೊಸ ಯುಕ್ತಿಗಳು ಅವರಿಗಿಲ್ಲ. ನಮ್ಮ ವಿಶಾಲ ದೃಷ್ಟಿ ಅವರಿಗಿಲ್ಲ" –ಎಂಬೀ ರೀತಿಯ ತಿರಸ್ಕಾರ ಬುದ್ಧಿ ಸ್ವಲ್ಪವೂ ಇದ್ದದ್ದಲ್ಲ. ಪ್ರತಿಯಾಗಿ ಅವರು ಸಾಂಪ್ರದಾಯಿಕ ಪಂಡಿತರನ್ನು ಆದರದಿಂದ ಬರಮಾಡಿಕೊಂಡು ವಿಚಾರ ವಿನಿಮಯ ಮಾಡುತ್ತಿದ್ದರು. ಹೀಗೆ ಅವರಲ್ಲಿ ಹೆಚ್ಚಾಗಿ ಹೋಗಿಬರುತ್ತಿದ್ದ ವಿದ್ವಾಂಸರು ಅದ್ವೈತ ವೇದಾಂತಿಗಳಾದ ಬ್ರಹ್ಮಶ್ರೀ ಪಾಲಘಾಟ್ ನಾರಾಯಣಶಾಸ್ತ್ರಿಗಳು ಒಬ್ಬರು; ಬ್ರಹ್ಮಶ್ರೀ ಲಕ್ಷ್ಮೀಪುರಂ ಶ್ರೀನಿವಾಸಾಚಾರ್ಯರು ಇನ್ನೊಬ್ಬರು.

ಹಿರಿಯಣ್ಣನವರಿಗೆ ಪ್ರಾಚೀನ ವಿದ್ಯಾಪೀಠಗಳಲ್ಲಿ ತುಂಬ ಗೌರವ. ಶೃಂಗೇರಿಯಲ್ಲಿ ವಿದ್ವದ್ಗೋಷ್ಠಿ ಸೇರಿದಾಗಲೂ ಕಾಲಟಿಯಲ್ಲಿ ವಿದ್ವತ್ಸಭೆ ನಡೆದಾಗಲೂ ಅಲ್ಲಿಯ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪಾರಿತೋಷಿಕಗಳನ್ನು ಕೊಡುವರು. ವರ್ಷೇ ವರ್ಷೇ ದ್ರವ್ಯ ಸಲ್ಲಿಸುತ್ತಿದ್ದರು. ಆ ಕ್ಷೇತ್ರಗಳಿಗೆ ಹೋಗಿಬರುತ್ತಿದ್ದದ್ದೂ ಉಂಟು.

ಹಿರಿಯಣ್ಣನವರಿಗೆ ತತ್ತ್ವ ಶಾಸ್ತ್ರವಿಚಾರದಲ್ಲಿ ಅಭಿಮತರಾಗಿದ್ದ ಸ್ನೇಹಿತರಲ್ಲಿ ಮುಖ್ಯರಾದ ಒಬ್ಬರು ಪಿ.ಎನ್. ಶ್ರೀನಿವಾಸಾಚಾರ್ಯರೆಂಬವರು. ಇವರು ಕೆಲವು ಕಾಲ ಮದರಾಸಿನ ಪಚ್ಚಯಪ್ಪ ಕಾಲೇಜಿನ ಅಧ್ಯಕ್ಷರಾಗಿದ್ದರು. ಅವರು ವಿಶಿಷ್ಟಾದ್ವೈತ ವೇದಾಂತದ ಗ್ರಂಥಗಳನ್ನು ಬರೆದಿದ್ದಾರೆ. ಅವರನ್ನು ನಾನು ಕಾಣತಕ್ಕದ್ದೆಂದೂ ಅವರ ಗ್ರಂಥಗಳಲ್ಲಿ ಒಂದೆರಡನ್ನು ಓದತಕ್ಕದ್ದೆಂದೂ ಹಿರಿಯಣ್ಣನವರು ನನಗೆ ಸಲಹೆ ಕೊಟ್ಟರು. ನಾನು ಅದರಂತೆ ಮಾಡಿದೆ.

ಗುಪ್ತದಾನ

ಹಿರಿಯಣ್ಣನವರು ಉದಾರಿಗಳೆಂದು ಹೇಳಿದರೆ ಹೊರಗಿನವರು “ಹಾಗೆಯೆ?” ಎಂದು ಆಶ್ಚರ್ಯ ಸೂಚಿಸಿಯಾರು. ಅವರು ಉದಾರಿಗಳೆಂಬುದನ್ನು ನಾನು ಸ್ವತಃ ಬಲ್ಲೆ. ಹತ್ತಾರು ಮಂದಿ ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದಾರೆ. ಅದು ಸಂತೋಷಪೂರ್ವಕವಾದ ಸಹಾಯ. ಹಾಗೆಯೇ ಸಂಸ್ಕೃತ ಸಾಹಿತ್ಯಗಳಿಗೆ ಸಂಬಂಧಿಸಿದ ಪ್ರಯತ್ನಗಳಿಗೂ ಮನಸಾರ ಸಹಾಯ ಕೊಡುತ್ತಿದ್ದರು.

ಆದರೆ ಒಂದು ವಿಶೇಷ. ಸಹಾಯ ತೆಗೆದುಕೊಂಡವರು ಯಾರೂ ಅದನ್ನು ಮತ್ತೊಬ್ಬರಿಗೆ ಉಸುರಕೂಡದು. ಇದು ಕಟ್ಟಾಜ್ಞೆ. ನನಗೆ ತಿಳಿದ ಒಬ್ಬ ಸಂಸ್ಕೃತ ವಿದ್ಯಾರ್ಥಿ ಎಂ.ಎ. ತರಗತಿಯಲ್ಲಿ ಓದುತ್ತಿದ್ದ. ಆತನ ಹೆಸರು ಹರಿ ಎಂದಿಟ್ಟುಕೊಳ್ಳೋಣ. ಆತನಿಗೆ ಹಿರಿಯಣ್ಣನವರು ಗುಪ್ತವಾಗಿ ಮಾಸಾಶನ ಕೊಡುತ್ತಿದ್ದರು. ಆತನ ಸಹಪಾಠಿಯೊಬ್ಬನು ಕಷ್ಟದಲ್ಲಿದ್ದಾಗ ತನ್ನ ಕಷ್ಟವನ್ನು ಹರಿಯೊಡನೆ ಹೇಳಿಕೊಂಡ. ಹರಿ ತಾನು ಹಿರಿಯಣ್ಣನವರಿಂದ ಪಡೆಯುತ್ತಿದ್ದ ಸಹಾಯವನ್ನು ಹೇಳಿ ಆ ಉದಾರಿಗಳನ್ನು ಆಶ್ರಯಿಸುವಂತೆ ಸಲಹೆಕೊಟ್ಟ. ಈ ಎರಡನೆಯ ವಿದ್ಯಾರ್ಥಿ ಹಿರಿಯಣ್ಣನವರಲ್ಲಿಗೆ ಹೋಗಿ ತನ್ನ ಕಥೆಯನ್ನು ಹೇಳಿಕೊಂಡ. ಹಿರಿಯಣ್ಣನವರು ಆತನಿಗೂ ಸಹಾಯ ಕೊಡುವುದಾಗಿ ಭರವಸೆಕೊಟ್ಟು ಹಾಗೆ ನಡಸಿದರು.

ಹರಿಗಾದರೋ ಅಂದಿನಿಂದ ಮೂರು ತಿಂಗಳ ಮಾಸಾಶನ ಕೊಡಬೇಕಾದದ್ದು ಉಳಿದಿತ್ತು. ಕೋರ್ಸ್ ಮುಗಿಯಲು ಇನ್ನು ಮುಂದಿನ ಮೂರು ತಿಂಗಳ ಮೊಬಲಗನ್ನು ಒಟ್ಟಿಗೆ ಪೊಟ್ಟಣಕಟ್ಟಿ ಹರಿ ಬಂದಾಗ ಹಿರಿಯಣ್ಣನವರು ಆ ಪೊಟ್ಟಣವನ್ನು ಆತನ ಕೈಗೆ ಕೊಟ್ಟರು. ಆತ ಅದನ್ನು ಬಿಚ್ಚಿ ನೋಡಿಕೊಂಡು ಆಶ್ಚರ್ಯ ಸೂಚಿಸಿದ.

ಹಿ: “ನೀವು ಈ ಸಂಗತಿಯನ್ನು ಯಾರಿಗೂ ತಿಳಿಸಬಾರದೆಂದು ಹೇಳಿದ್ದೆ. ನೀವು ಹೇಳಿಬಿಟ್ಟಿರಿ. ಒಳ್ಳೆಯದು. ಇಲ್ಲಿಗೆ, ನಾನು ಕೊಟ್ಟಿದ್ದ ಮಾತು ನಡೆದಿದೆಯಲ್ಲ?”

ಆತ್ಮೌಪಮ್ಯಸಿದ್ಧಿ

ಹಿರಿಯಣ್ಣವರು ಆಚಾರ ವ್ಯವಹಾರಗಳಲ್ಲಿ ಸಂಪ್ರದಾಯವರ್ತಿಗಳು. ಹಣೆಗೆ ವಿಭೂತಿ ಇಟ್ಟುಕೊಳ್ಳುವರು. ಅವರು ಸ್ವತಃ ದೇವತಾರ್ಚನೆ ಮಾಡುತ್ತಿದ್ದದ್ದುಂಟು. ಆದರೆ ಹೊರಗಡೆಯಿಂದ ನೋಡುವವರಿಗೆ ಅವರ ನಿಯಮ ನಿಷ್ಠೆಗಳು ಕಾಣಬರುತ್ತಿರಲಿಲ್ಲ. ಅವರ ವಿಭೂತಿ ಅವರ ಸ್ವಂತಕ್ಕಾಗಿ; ನೋಡುವವರ ಕಣ್ಣು ಕುಕ್ಕುವುದಕ್ಕಾಗಲ್ಲ. ಎಲ್ಲ ಸದ್ಗುಣ ಸೌಶೀಲ್ಯಗಳೂ ಅವರ ಅಂತರಾತ್ಮದ ನೈಜ ವಿಕಾಸವಾಗಿದ್ದವು. ಅದರಲ್ಲಿ ಕೃತಕತೆಯಾಗಲಿ ಪ್ರಯಾಸವಾಗಲಿ ಕಿಂಚಿತ್ತೂ ಇರಲಿಲ್ಲ. ಅವರು ಪದೇ ಪದೇ ಉದಾಹರಿಸುತ್ತಿದ್ದ ಒಂದು ಪೂರ್ವಿಕ ವಚನ ಅವರ ಸ್ವಭಾವವನ್ನು ತಿಳಿಸುತ್ತದೆ. ಸೌಜನ್ಯವು ಉಚ್ಛ್ವಾಸ ನಿಃಶ್ವಾಸಗಳಂತೆ ಸ್ವಾಭಾವಿಕವಾಗಿ, ಅಪ್ರಯತ್ನವಾಗಿರಬೇಕು. ಇದೇ ಆತ್ಮೌಪಮ್ಯದ ಸಿದ್ಧಿ.

ಹಿರಿಯಣ್ಣನವರಿಗೆ ನಡುವಯಸ್ಸಿನಲ್ಲಿಯೇ ಪತ್ನೀವಿಯೋಗವಾಗಿತ್ತು. ಅನಂತರ ಅವರು ತಪಸ್ವಿಗಳಂತೆ ಬಾಳಿದರು. ಬಿ.ಎಂ. ಶ್ರೀಕಂಠಯ್ಯನವರಿಗೂ ನಡುವಯಸ್ಸಿನಲ್ಲಿ ವಿಧುರತ್ವ ಬಂತು. ಶ್ರೀಕಂಠಯ್ಯನವರೂ ನಾನೂ ಆಪ್ತವಾಗಿ ಮಾತನಾಡಿಕೊಳ್ಳುತ್ತಿದ್ದಾಗ ಅವರು ನನಗೆ ಹೇಳುತ್ತಿದ್ದರು: “ಹಿರಿಯಣ್ಣನವರನ್ನು ಜ್ಞಾಪಕ ಮಾಡಿಕೊಂಡು ನಾನು ಹೇಗೋ ಸಹಿಸಿಕೊಂಡಿದ್ದೇನೆ. ಅವರ ಉದಾಹರಣೆಯಿಂದ ನನಗೊಂದು ಧೈರ್ಯ, ಮತ್ತು ನಿಯಮಶ್ರದ್ಧೆ.”

ಸೌಮ್ಯ ವಾತ್ಸಲ್ಯ

ಹಿರಿಯಣ್ಣನವರು ದೊಡ್ಡ ಕುಟುಂಬವನ್ನು ಸಾಕಿ ಬೆಳೆಸಿದವರು. ಮಗಳು; ಅಳಿಯ, ಮೊಮ್ಮಕ್ಕಳು, ತಮ್ಮಂದಿರು, ಸೋದರಳಿಯಂದಿರು–ಹೀಗೆ ದೊಡ್ಡ ಕುಟುಂಬ. ಬಂಧು ವರ್ಗದಲ್ಲಿ ಅಕೃತ್ರಿಮವಾದ ಪ್ರೀತಿಯಿಂದಲೂ ಉದ್ವೇಗಕಾರಕ ಸಂದರ್ಭಗಳಲ್ಲಿ ಸೌಮ್ಯ ವಾತ್ಸಲ್ಯದಿಂದಲೂ ನಡೆದುಕೊಂಡು ಶಾಂತಿಯನ್ನು ಕಾಪಾಡಿಕೊಳ್ಳುತ್ತಿದ್ದರು. ಕಲಹ ನಿಷ್ಠುರಗಳಿಗೆ ದೂರವಾಗಿದ್ದರು.

***

ಒಂದು ದಿನ ಧಾರವಾಡ ಬೆಳಗಾಂ ಕಡೆಯ ವಿದ್ವಾಂಸರು ಹಿರಿಯಣ್ಣನವರನ್ನು ಕಾಣಬೇಕೆಂದು ಬಂದರು. ಹಿರಿಯಣ್ಣನವರು ಮಾಮೂಲಿನಂತೆ ಅವರಿಗೆ ಕುರ್ಚಿ ತೋರಿಸಿದರು. ಕುರ್ಚಿಯಲ್ಲಿ ಕೂಡುತ್ತಿದ್ದ ಹಾಗೆಯೇ ಆ ವಿದ್ವಾಂಸರು ತಾವು ಬರೆದಿದ್ದ ಒಂದು ಪುಸ್ತಕವನ್ನು ಹಿರಿಯಣ್ಣನವರ ಕೈಗೆ ಕೊಟ್ಟು ಅದರ ವಿಷಯವನ್ನು ಹೇಳಲಾರಂಭಿಸಿದರು. ತಮ್ಮ ಪಾಂಡಿತ್ಯ, ಆ ಗ್ರಂಥವನ್ನು ಬರೆಯುವುದಕ್ಕಾಗಿ ತಾವು ಪಟ್ಟ ಶ್ರಮ, ತಾವು ನೋಡಿದ ಗ್ರಂಥಗಳು, ಅಲ್ಲಿಯ ವಾದ ಪ್ರತಿವಾದಗಳು, ತಾವು ಅದರ ಮೇಲೆ ಮಾಡಿರುವ ಖಂಡನೆಗಳು, ತಾವು ಉದಾಹರಿಸಿದ ವಾಕ್ಯಗಳು, ಆ ವಾಕ್ಯಗಳ ಪ್ರಾಮಾಣಿಕತೆ–ಇದನ್ನೆಲ್ಲ ಕುರಿತು ಅರ್ಧಘಂಟೆ ಎಡೆಬಿಡದೆ ಉಪನ್ಯಾಸ ಮಾಡಿದರು. ಅವರು ಮಾತು ಮುಗಿದ ಮೇಲೆ ಒಂದೆರಡು ಕ್ಷಣ ಸುಮ್ಮನಿದ್ದರು. ಹಿರಿಯಣ್ಣನವರೂ ಸುಮ್ಮನಿದ್ದರು. ಬಂದಿದ್ದ ವಿದ್ವಾಂಸರು ಆಗ ಎದ್ದುನಿಂತರು. ಹಿರಿಯಣ್ಣನವರು ಅವರು ಕೊಟ್ಟಿದ್ದ ಪುಸ್ತಕವನ್ನು ಅವರಿಗೆ ಹಿಂತಿರುಗಿಸಿದರು. ವಿದ್ವಾಂಸರು ಅದನ್ನು ತೆಗೆದು ಕೊಂಡರು. ಹಿರಿಯಣ್ಣನವರು ಮುಗುಳ್ನಗೆ ನಗುತ್ತ ನಮಸ್ಕಾರ ಹೇಳಿದರು.

ಇದು ಅವರ ಸ್ವಭಾವದ ಯಥಾವತ್ತಾದ ಪ್ರತಿಬಿಂಬ. ಅತಿ ಮಾತಾದರೆ ಅವರಿಗೆ ಮೆಚ್ಚಿಕೆಯಾಗುತ್ತಿರಲಿಲ್ಲ.

ಒಂದು ಪತ್ರಪ್ರಸಂಗ

ಯಾವುದೋ ಒಂದು ಸಂದರ್ಭದಲ್ಲಿ ಮಹಾಪ್ರಖ್ಯಾತನಾದ ಗ್ರೀಕ್‌ತತ್ತ್ವವಿಚಾರಿ ಪ್ಲೇಟೊವಿನ (Plato) ಅಭಿಪ್ರಾಯವನ್ನು ಕುರಿತು ಹಿರಿಯಣ್ಣನವರಿಗೂ ನನಗೂ ಕೊಂಚ ಪತ್ರಪ್ರಸಂಗ ನಡೆಯಿತು. ಅದರ ವಿವರಗಳು ನನಗೆ ಮರೆತುಹೋಗಿವೆ. ಮತ್ತು ಆ ಪತ್ರವೂ ಎಲ್ಲಿಯೋ ಹೋಗಿದೆ. (ನನ್ನನ್ನು ಬಲ್ಲವರು ನಾನು ಕೊಂಚ ಎರ್ರಿಬರ್ರಿ ಮನುಷ್ಯನೆಂಬುದನ್ನು ಬಲ್ಲರು. ಮಹಾನುಭಾವ ಹಿರಿಯಣ್ಣನವರಿಗೆ ಇದ್ದ ಅಧ್ಯವಸಾಯದಲ್ಲಿ ಸಾವಿರದಲ್ಲಿ ಒಂದರಷ್ಟನ್ನಾದರೂ ದೇವರು ನನಗೆ ಅನುಗ್ರಹಿಸಲಿಲ್ಲವೆಂದು ಈಗ ವಿಷಾದವಾಗುತ್ತದೆ.) ಹಿರಿಯಣ್ಣನವರು ಪ್ಲೇಟೊವಿನ ಸಂವಾದಗಳಲ್ಲಿ (Dialogues) ಯಾವ ಯಾವ ಕಡೆ ವೇದಾಂತ ತತ್ತ್ವವು ಪ್ರತಿಧ್ವನಿತವಾದಂತೆ ತೋರುತ್ತದೆಂಬುದನ್ನು ಪುಟದ ಅಂಕಿ, ಪಂಕ್ತಿಯ ಅಂಕಿಯ ಸಮೇತವಾಗಿ ಸೂಚಿಸಿ ಕಾಗದ ಬರೆದಿದ್ದರು. ಅವರು ಆ ನಾನಾ ಅಂಶಗಳನ್ನು ಒಟ್ಟುಗೂಡಿಸಿ ಗ್ರಥನಮಾಡಿಕೊಟ್ಟರೆ ಬುಭುತ್ಸುಗಳಿಗೆ ಉಪಕಾರವಾದೀತೆಂದು ನಾನು ಬಿನ್ನಯಿಸಿದೆ. ಅವರು ಪರಮಾನುಗ್ರಹ ಮಾಡಿ, "ನಾವಿಬ್ಬರೂ ಸೇರಿ ಆ ಕೆಲಸ ಮಾಡೋಣ" ಎಂದರು. ನಮ್ಮ ಯೋಚನೆ ಒಳ್ಳೆಯದಾದರೂ ದೈವಕ್ಕೆ ಅದರಲ್ಲಿ ಸಹನೆ ಇರಬೇಕಲ್ಲ! ನನ್ನ ಸಾವಿರ ಹವ್ಯಾಸಗಳ ನಡುವೆ ಆ ಕೆಲಸ ನಡೆಯಲಿಲ್ಲ; ಈಗ ವಿಚಾರವೆಲ್ಲ ನೆನಪಿನಿಂದ ಅಳಿಸಿಹೋಗಿದೆ.

ನಿರ್ಣಯ ಸ್ವಾತಂತ್ರ್ಯ

ಹೀಗೆಯೇ ಸಂಸ್ಕೃತದ ವ್ಯಾಕರಣಕ್ಕೆ ಸಂಬಂಧಪಟ್ಟ ವಿಷಯ. ನಾನು ಯಾವುದೋ ಒಂದು ಪ್ರಯೋಗವನ್ನು ಬಳಸಿದೆ. ಆದರೆ ಅದು ನಾನು ಮಾಡಿದ್ದ ತಿದ್ದಾವಣೆ. ಹಿರಿಯಣ್ಣನವರು,

“ನಿಮ್ಮ ಪ್ರಯೋಗವನ್ನು ವ್ಯಾಕರಣಸೂತ್ರದಿಂದ ಸಮರ್ಥನೆಮಾಡಬಹುದು. ಆದರೆ ಅದು ಇಡಿಯಮ್ (Idiom) ರೂಢಿಯ ಮರ್ಯಾದೆಯಲ್ಲವೆಂದು ತೋರುತ್ತದೆ. ಹಿಂದಿನ ಪ್ರಯೋಗವನ್ನು ಒಪ್ಪಿಕೊಳ್ಳಬಹುದೆಂದು ತೋರುತ್ತದೆ. ವಿಚಾರಮಾಡಿ ನೋಡುವುದಾಗಲಿ.”

ನಾನು ಯಾವುದೋ ಪದ್ಯಕ್ಕೆ ಅರ್ಥಯೋಜನೆ ಮಾಡಿದ್ದದ್ದರ ವಿಷಯದಲ್ಲಿಯೂ ಹೀಗೆಯೇ ಅವರ ಮಾತು, “ಆಲೋಚಿಸಿ ನೋಡುವುದಾಗಲಿ.”

ತಮ್ಮ ಅಭಿಪ್ರಾಯವನ್ನು ಅವರು ಎಂದೂ ಯಾರಮೇಲೂ ಹೇರಿದವರಲ್ಲ. ವಿಚಾರದ ಮಾರ್ಗವನ್ನು ಸೂಚಿಸಿದಮೇಲೆ ನಿರ್ಣಯವನ್ನು ಅವರವರೇ ಮಾಡಿಕೊಳ್ಳಲಿ ಎಂಬುದು ಅವರ ಸೂತ್ರ.

ಆತ್ಮಸಂತುಷ್ಟಿಗಾಗಿ ಲೇಖನ

ಹಿರಿಯಣ್ಣನವರು ಪರಮ ಪ್ರಾಮಾಣಿಕರೆಂದು ಹಿಂದೆ ಹೇಳಿದ್ದೇನೆ. ಈ ಪ್ರಾಮಾಣಿಕತೆ ಅವರ ಒಂದು ನೈಜ ಗುಣ. ಅವರ ಬರವಣಿಗೆ ಎಷ್ಟು ಮಾತ್ರವೂ ಪ್ರತಿಫಲಕ್ಕಾಗಿ ಆದದ್ದಲ್ಲ. ನಮ್ಮ ಪ್ರಾಚೀನ ಕಾವ್ಯ ಮೀಮಾಂಸಕರಲ್ಲಿ ಕವಿಯು ಯಾವುದೋ ಉದ್ದೇಶವನ್ನು ಗುರಿಯಲ್ಲಿಟ್ಟುಕೊಂಡು ಕಾವ್ಯ ರಚನೆ ಮಾಡುತ್ತಾನೆಂಬ ಮತ ಒಂದುಂಟು.

> ಕಾವ್ಯಂ ಯಶಸೇಽರ್ಥಕೃತೇ....
> ಸದ್ಯಃ ಪರನಿರ್ವೃತಯೇ...

ಕೀರ್ತಿಸಂಪಾದನೆಗಾಗಿ, ದ್ರವ್ಯ ಸಂಪಾದನೆಗಾಗಿ–ಇತ್ಯಾದಿ. ಹೀಗೆ ಮಾಡಿದ ಕವಿಗಳು ಕಾಳಿದಾಸನಿಂದ ಅರ್ವಾಚೀನರಾದವರಲ್ಲಿ ಕೆಲವರಿದ್ದಿರಬಹುದು. ದೇಶದ ರಾಜನು ಕವಿಗಳಿಗೂ ಪಂಡಿತರಿಗೂ ಆಶ್ರಯ ಕೊಡತಕ್ಕದ್ದೆಂಬ ಸಂಪ್ರದಾಯ ಬೆಳೆದ ಮೇಲೆ ಹಾಗೆ ಆಗಿರಬಹುದು. ಅದರೆ ಗ್ರಂಥ ಲೇಖನದಲ್ಲಿ ಅಂಥ ಉದ್ದೇಶವಿಲ್ಲದೆ ಲೇಖನ ಮಾಡಿದವರೂ ಎಷ್ಟೋ ಮಂದಿ ಇದ್ದಾರೆ. ಆತ್ಮ ಸಂತುಷ್ಟಿಗಾಗಿ, ಸ್ವಂತ ಹೃದಯಭಾರವನ್ನಿಳಿಸಿಕೊಳ್ಳುವುದಕ್ಕಾಗಿ ಬರೆದವರೂ ಇದ್ದಾರೆ. ಹಿರಿಯಣ್ಣನವರನ್ನು ಈ ವರ್ಗದಲ್ಲಿ ಸೇರಿಸಬಹುದು. ಅವರು ನನಗೆ ನಾಲ್ಕಾರು ಸಲ ಉದಾಹರಣೆ ಮಾಡುತ್ತಿದ್ದದ್ದು ಸುರೇಶ್ವರಾಚಾರ್ಯರ ಒಂದು ವಾಕ್ಯವನ್ನು. ಸುರೇಶ್ವರಾಚಾರ್ಯರು 'ನೈಷ್ಕರ್ಮ್ಯಸಿದ್ಧಿ' ಯ ಪ್ರಾರಂಭದಲ್ಲಿ ಹೀಗೆಂದಿದ್ದಾರೆ:

> ನ ಖ್ಯಾತಿಲಾಭಪೂಜಾರ್ಥಂ
> ಗ್ರಂಥೋಽಸ್ಮಾಭಿರುದೀರ್ಯತೇ ।
> ಸ್ವಭೋಧಪರಿಶುದ್ಧ್ಯರ್ಥಂ
> ಬ್ರಹ್ಮವಿನ್ನಿಕಷಾಶ್ಮಸು ॥

ಸ್ವಬೋಧ ಪರಿಶುದ್ಧಿ

ಇದರಲ್ಲಿ "ಸ್ವಬೋಧಪಶುದ್ಧ್ಯರ್ಥಂ" ಎಂಬುದು ಮುಖ್ಯಪದ. "ವಿಷಯವನ್ನು ನಾನು ಚೆನ್ನಾಗಿ ತಿಳಿದುಕೊಂಡಿದ್ದೇನೆಯೆ? ನನ್ನ ತಿಳಿವಳಿಕೆಯಲ್ಲಿ ದೋಷಗಳೂ ಲೋಪಗಳೂ ಪ್ರಮಾದಗಳೂ ಏನೂ ಇಲ್ಲವೆ? ಇದನ್ನು ಪರೀಕ್ಷೆ ಮಾಡಿಕೊಳ್ಳುವುದಕ್ಕಾಗಿ ಬರೆಯಹೊರಟಿದ್ದೇನೆ." ಬರವಣಿಗೆಗೆ ಕುಳಿತರೆ ಆಗ ತನ್ನ ಜ್ಞಾನ ಸಮಂಜಸವಾದದ್ದೆ, ಅಲ್ಲವೆ-ಎಂಬುದು ಪರೀಕ್ಷೆಗೆ ಬರುತ್ತದೆ. ಹಿಂದೂಸ್ತಾನಿಯಲ್ಲಿ ಒಂದು ಗಾದೆಯುಂಟಂತೆ: ಸೌ ಬಕ್ ನಾ; ಏಕ್ ಲಿಖ್‌ನಾ" (ನೂರು ಮಾತನ್ನಾಡಬಹುದು; ಒಂದು ಮಾತಿನಲ್ಲಿ ಬರೆಯಬೇಕು). ಹೀಗೆ ಒಂದು ಮಾತಿನಲ್ಲಿ ಜ್ಞಾನವನ್ನು ಸಂಗ್ರಹಿಸಿ ಹೇಳಬೇಕಾದರೆ ಅದಕ್ಕೆ ಪೂರ್ವಭಾವಿಯಾಗಿ ಸಾವಿರ ಸಾರಿ ಆಲೋಚಿಸಿ ಸಾವಿರ ಶಂಕೆಗಳನ್ನು ಪರಿಹರಿಸಿ ಸಾವಿರ ಸಂದೇಹಗಳನ್ನು ನಿವಾರಣೆ ಮಾಡಿ ಒಂದು ನಿಷ್ಕರ್ಷೆಗೆ ಬಂದಿರಬೇಕು. ಇದು "ಬೋಧಪರಿಶುದ್ಧಿ". ತನ್ನ ಮನಸ್ಸಿನ ವಿಶದತೆಗಾಗಿ, ತನ್ನ ಸ್ವಂತ ನಂಬಿಕೆಗಾಗಿ, ತನ್ನ ಬುದ್ಧಿಯ ಪರಿಷ್ಕಾರಕ್ಕಾಗಿ ಬರೆಯಬೇಕೆಂಬುದು "ಸ್ವಬೋಧಪರಿಶುದ್ಧಿ."

ಇದು ಹಿರಿಯಣ್ಣನವರ ದಾರಿ. ಅವರ Outlines of Indian Philosophy ಗ್ರಂಥ ಪ್ರಕಟವಾದ ಎರಡು ಮೂರು ತಿಂಗಳೊಳಗಾಗಿ ನಾನು ಒಬ್ಬ ಪ್ರಸಿದ್ಧರಾದ ತತ್ತ್ವಲೇಖಕರನ್ನು ಕಾಣುವ ಅವಕಾಶ ದೊರಕಿತು. ಅವರು ವೇದಾಂತಶಾಸ್ತ್ರದಲ್ಲಿ ಅತಿಶಯವಾಗಿ ಪರಿಶ್ರಮ ಮಾಡಿದವರು. ಮತ್ತು ಪಾಶ್ಚತ್ಯ ತತ್ತ್ವಶಾಸ್ತ್ರದಲ್ಲಿಯೂ ಪಾರಂಗತರೆನಿಸಿದವರು. ನಮ್ಮ ಮಾತುಕಥೆಯ ಸರಣಿಯಲ್ಲಿ ನಾನು ಅವರನ್ನು ಕೇಳಿದೆ: "ಹಿರಿಯಣ್ಣನವರ ಗ್ರಂಥವನ್ನು ನೋಡೋಣವಾಯಿತೆ?"

ಅವರು: "ಆಹಾ! ನಾನು ಅದು ಅಚ್ಚಾಗುವುದಕ್ಕೆ ಮುಂಚೆಯೇ ಕೈ ಬರಹದಲ್ಲಿ ಅದನ್ನು ನೋಡಿದ್ದೆ. ಅವರದು ಪ್ರಮಾಣಭೂತವಾದ ಬರಣಿಗೆ–ಅವರ ರೀತಿಯಲ್ಲಿ ನಾನು ಒಂದು ಗ್ರಂಥ ಬರೆಯಬೇಕಾದರೆ ಹನ್ನೆರಡು–ಹದಿನೈದು ವರ್ಷ ಹಿಡಿದೀತು!"

ಸಾವಧಾನ

ಹಿರಿಯಣ್ಣನವರದು ಸಾವಧಾನವಾದ ಬರವಣಿಗೆ. ವಾಕ್ಯ ವಾಕ್ಯವನ್ನೂ, ಪದ ಪದವನ್ನೂ ಕುರಿತು ಚಿಂತಿಸಿ ಮುಂದಕ್ಕೆ ಹೊರಡುವರು. ಮತ್ತೆ ಹಿಂದಕ್ಕೆ ಬರುವರು, ಬರೆದದ್ದನ್ನು ಪುನಃ ವಿಮರ್ಶೆ ಮಾಡಿ ತಿದ್ದುವರು. ಅವರ ತಿದ್ದಾವಣೆಗಳನ್ನು ನಾನು ನೋಡಿದ್ದೇನೆ. ಕುಮಾರವ್ಯಾಸನ ಪದವಿಟ್ಟಳುಪದಿರುವ ಅಗ್ಗಳಿಕೆ ಅವರಿಗೆ ಬೇಕಾಗಲಿಲ್ಲ. ಹಿರಿಯಣ್ಣನವರ Indian Conception of Values ಪುಸ್ತಕ ಇನ್ನೂ ಅಚ್ಚಾಗಿಲ್ಲ. ಗ್ರಂಥ ಮುಗಿದಿದ್ದರೂ ಅವರು ಅದನ್ನು ಪ್ರಕಟಪಡಿಸಲು ಸಾವಕಾಶದಲ್ಲಿದ್ದರು. “ಬರವಣಿಗೆಯನ್ನು ಇನ್ನೂ ನೋಡಬೇಕು, ಮತ್ತೂ ನೋಡಬೇಕು” -ಹೀಗೆ: ಬರೆದದ್ದು ಸ್ವಲ್ಪವಾದರೂ ಅದು ಪ್ರಮಾಣವತ್ತಾಗಿರಬೇಕು–ಎಂಬುದು ಅವರ ನಿಯಮ.

ತಾವು ಬರೆದ ಮಾತಿಗೆ–ಅರ್ಥ ವಿವರಣೆಗೆ, ವಾದ ಪ್ರತಿಪಾದನೆಗೆ–ಆಧಾರವಿರಬೇಕು. ಆಧಾರವಿಲ್ಲದ್ದನ್ನು ಬರೆಯಲಾಗದು. ಹಾಗೆಯೇ ಅವಶ್ಯವಲ್ಲದ್ದನ್ನು ಬರೆಯಲಾಗದು. ಯಾವುದನ್ನು ವಾಚಕನು ತಾನಾಗಿ ಊಹಿಸಿಕೊಂಡಾನೋ, ಯಾವುದು ಆತನಿಗೆ ತಿಳಿದಿದೆಯೋ, ಯಾವುದನ್ನು ಒಪ್ಪಿಕೊಂಡಿದ್ದಾನೋ, ಅದನ್ನು ನಾನು ಬರೆಯಬೇಕಾಗಿಲ್ಲ. ಯಾವುದು ಅಪೇಕ್ಷಿತವಲ್ಲವೋ ಅದನ್ನು ಬರೆಯಲಾಗದು. ಇದು ಹಿರಿಯಣ್ಣನವರ ನಿಯಮ. ನಿರಾಧಾರವಾಗಿರಬಾರದು, ಚರ್ವಿತಚರ್ವಣವಾಗಬಾರದು.

ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಿದ್ದರಿಂದ ಅವರ ವಾಕ್ಯವು ಪ್ರಮಾಣಭೂತವಾಯಿತು.

ಬೋಧೈಕ ತಾತ್ಪರ್ಯ

ಮೇಲೆ ಹೇಳಿದ 'ಔಟ್‌ಲೈನ್ಸ್' ; 'ಎಸೆನ್ಷಲ್ಸ್' ಈ ಎರಡು ಗ್ರಂಥಗಳಲ್ಲದೆ ಅವುಗಳ ಜೊತೆಗೆ ಬೇರೆ ಗ್ರಂಥಗಳೂ ಅವರವು ಮೈಸೂರಿನ ಕಾವ್ಯಾಲಯ ಸಂಸ್ಥೆಯಿಂದ ಪ್ರಕಾಶಿತವಾಗಿವೆ. ಅವು ಸಾಮಾನ್ಯವಾಚಕರಿಗೆ ಅತ್ಯಂತ ಉಪಯುಕ್ತವಾಗುತ್ತವೆ. ಆಧ್ಯಾತ್ಮ ಶಾಸ್ತ್ರದ ಪ್ರಶ್ನೆಗಳು, ಕಾವ್ಯಮೀಮಾಂಸೆ, ಇವು ಈ ಉಪನ್ಯಾಸ ಸಂಗ್ರಹಗಳ ಮುಖ್ಯ ವಿಷಯ. ಉಪನ್ಯಾಸಗಳಲ್ಲಿ ಕೆಲವು ಗ್ರಂಥವಿಮರ್ಶನ ರೂಪದವು. ಇನ್ನು ಕೆಲವು ಸ್ವತಂತ್ರ ಪ್ರಬಂಧಗಳು. ವಿಮರ್ಶನ ಪ್ರಬಂಧಗಳನ್ನು ನೋಡಿದರೆ ಅವರ ದೃಷ್ಟಿ ಎಷ್ಟು ಉದಾರವಾದದ್ದು, ಅವರ ಮನಸ್ಸು ಇತರ ಲೇಖಕರ ವಿಷಯದಲ್ಲಿ ಹೇಗೆ ಸಹಾನುಭೂತಿಯುಳ್ಳದ್ದು, ಅವರ ವಾಕ್ಯಶೈಲಿ ಎಷ್ಟು ಸರಳವಾದದ್ದು, ಮತ್ತು ಎಷ್ಟು ವಿಶದವಾಗಿ ಬೋಧೈಕ ತಾತ್ಪರ್ಯವುಳ್ಳದ್ದು–ಎಂಬುದು ಎಂಥವರಿಗೂ ಕಾಣಬಾರದೆ ಇರದು.

ಕ್ಷೇತ್ರಪರಿಮಿತಿ

ಹಿರಿಯಣ್ಣನವರು ಬರೆದದ್ದು ಗಾತ್ರದಲ್ಲಿ ಸ್ವಲ್ಪ, ಆದರೆ ಅಷ್ಟೂ ಅದರ ತೂಕ ಗಾತ್ರದಷ್ಟು ಅಪರಂಜಿ. ಅವರಿಗೆ ಪರಿಮಾಣಕ್ಕಿಂತ ಗುಣ ದೊಡ್ಡದು. ಅವರು ಹೀಗೆ ಕೈಯಿಟ್ಟದ್ದು ಚಿನ್ನವಾದದ್ದಕ್ಕೆ ಕಾರಣ, ಅವರು ಇಟ್ಟುಕೊಂಡಿದ್ದ ಕ್ಷೇತ್ರಪರಿಮಿತಿಯೆಂದು ನನಗನ್ನಿಸುತ್ತದೆ. ಅವರು ಕೆಲವು ವಿಷಯಗಳನ್ನು ತಮ್ಮದನ್ನಾಗಿ ಮಾಡಿ ಕೊಂಡಿದ್ದರು. ಮೊದಲನೆಯದು ಕಾವ್ಯಪಾಠ, ಅದು ಅವರ ಉದ್ಯೋಗಕ್ಕೆ ಸೇರಿದ್ದು. ಅದಕ್ಕೆ ಬೇಕಾದ ಸಂಸ್ಕೃತ ಸಾಹಿತ್ಯ, ಇಂಗ್ಲಿಷ್ ಸಾಹಿತ್ಯಗಳಲ್ಲಿ ಪಾರಂಗತರಾಗಿದ್ದರು. ಆಮೇಲೆ ತತ್ತ್ವಶಾಸ್ತ್ರ, ಷಡ್ದರ್ಶನಗಳ ಪ್ರಕ್ರಿಯೆಗಳನ್ನೂ ಪ್ರಮಾಣ ಪ್ರಮೇಯಗಳನ್ನೂ ಸ್ವಾಧೀನಪಡಿಸಿಕೊಂಡಿದ್ದರು. ಅದರಲ್ಲಿ ವಿಶೇಷವಾಗಿ ಅದ್ವೈತ ವಿಶಿಷ್ಟಾದ್ವೈತ ಶಾಸ್ತ್ರಗಳನ್ನು ತಲಸ್ಪರ್ಶಿಯಾಗಿ ನೋಡಿದ್ದರು. ವೇದಾಂತಶಾಸ್ತ್ರಕ್ಕೆ ಸಂವಾದಿಯಾಗಿ ಗಣ್ಯವಾಗುವ ಪಾಶ್ಚಾತ್ಯ ತಾತ್ತ್ವಿಕ ಗ್ರಂಥಗಳನ್ನೂ ಕೂಲಂಕಷವಾಗಿ ಪರಾಮರ್ಶಿಸಿದ್ದರು. ಇಷ್ಟೆಲ್ಲ ಇದ್ದರೂ, ಸಾಮಾನ್ಯ ಸಂಭಾಷಣೆಯಲ್ಲಾಗಲಿ ಲೇಖನದಲ್ಲಿಯಾಗಲಿ ಪಾಂಡಿತ್ಯವೂ ಧೋರಣೆಯೂ ರವೆಯಷ್ಟೂ ಎದ್ದುಕಾಣುತ್ತಿರಲಿಲ್ಲ. ಪ್ರಕೃತಕ್ಕೆ ಎಷ್ಟು ಬೇಕೋ ಅಷ್ಟೇ ಮಾತು, “ನ ಅನಪೇಕ್ಷಿತಂ ಉಚ್ಯತೇ”.

ತತ್ತ್ವಶಾಸ್ತ್ರ, ಯತ್ಕಿಂಚಿತ್ತು ಕಾವ್ಯಮೀಮಾಂಸೆ–ಈ ಎರಡನ್ನು ಬಿಟ್ಟು ಬೇರೆ ಯಾವ ವಿಷಯಕ್ಕೂ ಅವರು ತಲೆಹಾಕಿಕೊಂಡು ಬರುತ್ತಿರಲಿಲ್ಲ. ಅವರಿಗೆ ತಿಳಿದಿದ್ದ ವಿಷಯಗಳು ಇವಲ್ಲದೆ ನಾಲ್ಕಾರಿದ್ದವು. ಗಣಿತಶಾಸ್ತ್ರದಲ್ಲಿ ಅವರಿಗೆ ಪರಿಶ್ರಮವಿತ್ತು; ಸಂಗೀತದ ಪರಿಚಯವಿತ್ತು. ಅದರೆ ತಮಗೆ ಸೇರದಿದ್ದ ಈ ವಿಷಯಗಳಲ್ಲಿ ಅವರು ತಟಸ್ಥರಾಗಿರುತ್ತಿದ್ದರು; ವಿಷಯದ ಪರಿಚಯವೇ ಅವರಿಗಿಲ್ಲವೇನೋ ಎನ್ನಿಸುವಷ್ಟರ ಮಟ್ಟಿಗೆ. ತಮ್ಮ ಕಾರ್ಯಕ್ಷೇತ್ರವನ್ನು ಅವರು ಹೀಗೆ ಕಟ್ಟುನಿಟ್ಟಾಗಿ ಮಿತಪಡಿಸಿಕೊಂಡಿದ್ದದ್ದರಿಂದ ಆ ಮಿತಕ್ಷೇತ್ರದಲ್ಲಿ ಅವರು ಮಾಡಿದ ವ್ಯವಸಾಯ ಫಲಕಾರಿಯಾಯಿತು. ವಿಸ್ತಾರ ಕಡಮೆಯಾದರೂ ಆಳ ದೊಡ್ಡದು.

ಈ ಕ್ಷೇತ್ರಪರಿಮಿತಿಯ ಗುಣಾಂಶವನ್ನು ನಮ್ಮ ಲೇಖಕರೂ ಭಾಷಣಕರ್ತರೂ (ನಾನೂ ಸಹ) ಲಕ್ಷ್ಯದಲ್ಲಿರಿಸಿಕೊಳ್ಳುವುದು ಸಾಹಿತ್ಯದೃಷ್ಟಿಯಿಂದ ತುಂಬ ಅವಶ್ಯವೆನಿಸುತ್ತದೆ. ಸರ್ವಜ್ಞ ಪೀಠಕ್ಕೆ ಏಣಿ ಹಾಕುವುದಕ್ಕೆ ಬದಲಾಗಿ ಯಾವುದೋ ಒಂದೋ ಎರಡೋ ವಿಷಯಗಳಲ್ಲಿ ಪ್ರಾಮಾಣಿಕವಾದ ಬೋಧೆಯನ್ನು ಸಂಪಾದಿಸಿಕೊಳ್ಳುವುದಕ್ಕೆ ಪ್ರಯತ್ನಿಸುವುದು ಶ್ರೇಯಸ್ಕರ.

ಹಿರಿಯಣ್ಣನವರು ಮಹಾನುಭಾವರು. ಅವರ ಸ್ಮರಣೆ ನನಗೆ ಸಂತೋಷವೂ ಹೌದು, ಸುಕೃತವೂ ಹೌದು.

೨

ನನ್ನ ಆತ್ಮಗುರುಗಳು: ಎನ್. ನರಸಿಂಹಮೂರ್ತಿಗಳು

ನನ್ನ ಆತ್ಮಗುರುಗಳನ್ನು ಕುರಿತು ಒಂದೆರಡು ಮಾತು ಬರೆಯುವುದು ಇಲ್ಲಿ ನನ್ನ ಉದ್ದೇಶ.

ಆತ್ಮಗುರು ಎಂದರೆ ಅನೇಕ ಅರ್ಥಗಳಾಗಬಹುದು: “ನಾನು ಆರಿಸಿಕೊಂಡ ಗುರು”, “ಆತ್ಮವಿಚಾರವನ್ನು ನನಗೆ ಹೇಳಿದ ಗುರು”, “ಮುಖ್ಯಗುರು” –ಮೊದಲಾಗಿ. ನನ್ನ ಮನಸ್ಸಿನಲ್ಲಿರುವ ಅರ್ಥ “ಇಷ್ಟಗುರು” ಎಂದು. ಈ ಗುರು ದೊರೆತದ್ದು ನಾನು ಹುಡುಕಾಡಿದ್ದರಿಂದ ಅಲ್ಲ, ನಾನು ಅವರ ಯೋಗ್ಯತೆಗೆ ಬೆಲೆ ಕಟ್ಟಿ ಗೊತ್ತು ಮಾಡಿಕೊಂಡವನೂ ಅವರಲ್ಲ. ಹೇಗೋ ಕಾಲಕರ್ಮ ಸಂಯೋಗದಿಂದ ಅವರಿಗೂ ನನಗೂ ಪರಿಚಯವಾಯಿತು. ನಾನು ಅವರ ಪ್ರಭಾವಕ್ಕೊಳಗಾಗಿ, ಇಂಥ ಒಳ್ಳೆಯವರನ್ನು ನಾನು ಗುರುಗಳೆಂದು ಕಾಣಬೇಕಾದದ್ದು ಎಂದುಕೊಂಡೆ. ಇದನ್ನು ನಾನು ಅವರಿಗೆ ಹೇಳಿದ್ದಿದ್ದರೆ ಅವರು ಸರ್ವಥಾ ಒಪ್ಪುತ್ತಿರಲಿಲ್ಲ. ನಾನು ಅವರನ್ನು ಗುರುವೆಂದು ಭಾವಿಸಿದ್ದೇನೇ ಹೊರತು ಅವರು ನನ್ನನ್ನು ಶಿಷ್ಯನೆಂದು ಎಣಿಸಿದವರಲ್ಲ.

ಅವರ ಹೆಸರು ಎನ್. ನರಸಿಂಹಮೂರ್ತಿ.

೧೯೦೭-ರ ಸುಮಾರಿನಲ್ಲಿ ನಾನು ಚಾಮರಾಜಪೇಟೆಯಲ್ಲಿ ವಾಸವಾಗಿದ್ದೆ, ನನ್ನ ಮಾವಂದಿರ ಮನೆಯಲ್ಲಿ. ಆ ಮನೆ ಇದ್ದದ್ದು ಮೂರನೆಯ ಅಡ್ಡರಸ್ತೆಯಲ್ಲಿ, ಎರಡನೆ ಮುಖ್ಯರಸ್ತೆ ಮತ್ತು ಮೂರನೆಯ ಮುಖ್ಯರಸ್ತೆಗಳ ನಡುವೆ. ಆ ಮನೆ ಸಂಗೀತಕ್ಕೂ, ಹರಿಕಥೆಗೂ ಹೆಸರು ಪಡೆದಿತ್ತು. ಆ ಕಾಲದಲ್ಲಿ ನರಸಿಂಹಮೂರ್ತಿಯವರು ಚಾಮರಾಜ ಪೇಟೆಯ ನಾಲ್ಕನೆಯ ಮುಖ್ಯರಸ್ತೆಯಲ್ಲಿ ವಾಸವಾಗಿದ್ದರು. ಅವರಿಗೆ ಸೆಕ್ರೆಟೇರಿಯಟ್ಟಿನಲ್ಲಿ ಉದ್ಯೋಗವಿತ್ತು. ಅವರ ಪ್ರತಿದಿನದ ಪ್ರಯಾಣಕ್ಕಾಗಿ ಅವರ ತಂದೆಯವರು ಒಂದು ರಬ್ಬರ್ ಟೈರ್ ಜಟಕಾ ಗಾಡಿಯನ್ನಿಟ್ಟಿದ್ದರು. ಗಾಡಿಯೂ ಕುದುರೆಯೂ ನೋಟಕ್ಕೆ ಜಬರ್ದಾಗಿದ್ದವು.

ಒಂದು ದಿನ ಸುಮಾರು ೧೦ ಘಂಟೆ. ನರಸಿಂಹಮೂರ್ತಿಗಳು ಆ ಗಾಡಿಯಲ್ಲಿ ಮಾಮೂಲಿನಂತೆ ಹೊರಟು ಗಾಡಿಯಲ್ಲಿ ಕೂಡುತ್ತಲೇ ರುಮಾಲು ಬಿಚ್ಚಿಹೋಯಿತು. ಆ ಕಾಲದಲ್ಲಿ ಸರಕಾರಿ ನೌಕರರು ತಲೆಗೆ ರುಮಾಲಿಲ್ಲದೆ ಕಛೇರಿಗೆ ಹೋಗುತ್ತಿರಲಿಲ್ಲ. ಮೂರ್ತಿಗಳು ಏನು ಮಾಡಬೇಕು? ಅವರಿಗೆ ರುಮಾಲು ಸುತ್ತಲು ಬಾರದು. ಆದರೆ ನನ್ನ ಮಾವನವರ ಮನೆಯ ಪರಿಚಯವಿತ್ತು. ಅದು ಸಂಗೀತದ ಮನೆಯಾದದ್ದರಿಂದ ಅಲ್ಲಿ ರುಮಾಲನ್ನು ಬಲ್ಲ ಖುಷ್‌ಭಾಷ್ ಜನ ಯಾವಾಗಲೂ ಯಾರಾದರೂ ಇರುತ್ತಾರೆಂದು ಮೂರ್ತಿಗಳಿಗೆ ಹೊಳೆಯಿತು. ನಮ್ಮ ಮನೆಯ ಮುಂದೆ ಗಾಡಿ ನಿಲ್ಲಿಸಿ ಇಳಿದು; ಎರಡು ಕೈಗಳನ್ನೂ ಚಾಚಿ ಅಂಗಲಾಚಿಕೊಂಡು, "ದಯವಿಟ್ಟು ಯಾರಾದರೂ ರುಮಾಲು ಸುತ್ತಿಕೊಟ್ಟಾರೆ?" –ಎನ್ನುತ್ತ ಬಂದರು. ರುಮಾಲು ರಸಿಕರು ಅಲ್ಲಿದ್ದರು. ಅವರು ಸೊಗಸಾಗಿ ರುಮಾಲು ಸುತ್ತಿಕೊಟ್ಟು ಅದು ಮತ್ತೆ ಬಿಚ್ಚಿಹೋಗದಂತೆ ಪಿನ್ನುಗಳನ್ನು ಸಿಕ್ಕಿಸಿ ಭದ್ರಪಡಿಸಿದರು. ಮೂರ್ತಿಗಳು ಸಮುದ್ರಮಥನ ಮಾಡಿದವರು ಅಮೃತ ಕಂಡಾಗ ಪಟ್ಟಷ್ಟು ಸಂತೋಷವನ್ನು ಸೂಚಿಸಿ ವಂದನೆ ಹೇಳಿ ಹೊರಟು ಹೋದರು.

ಆನುಪೂರ್ವಿ

ರುಮಾಲು ಸುತ್ತಿಕೊಟ್ಟ ರಸಿಕರು ತಾವೂ ಧನ್ಯರಾದಂತೆ ಭಾವಿಸಿದರು. "ಎಂಥ ವಿದ್ವಾಂಸ! ಎಂಥ ದೊಡ್ಡ ಮನುಷ್ಯ! ಎಂ.ಎ. ಪ್ಯಾಸ್ ಮಾಡಿ, ಬಿ, ಎಲ್. ಪ್ಯಾಸ್ ಮಾಡಿ ಇಷ್ಟು ಗಣ್ಯತೆ ಪಡೆದಿದ್ದರೂ ರುಮಾಲು ಸುತ್ತಿಕೊಳ್ಳುವುದಕ್ಕೆ ಬರೆದೆ ಹೋಯಿತಲ್ಲ!" ಎಂದು ಮಾತನಾಡಿಕೊಂಡು ನಗುತ್ತಿದ್ದರು.

ಆ ವೇಳೆಗೆ ನರಸಿಂಹಮೂರ್ತಿಗಳಿಗೂ ನನಗೂ ಪರಿಚಯವಾಗಿರಲಿಲ್ಲ. ಆಗ ನಾನು ಅವರನ್ನು ದೂರದಿಂದ ಕಂಡಿದ್ದದ್ದೆಷ್ಟೋ ಅಷ್ಟೇ.

ನರಸಿಂಹಮೂರ್ತಿಗಳ ತಂದೆ ನಂಜನಗೂಡಿನ ಸುಬ್ಬರಾಯರು. ಅವರು ಶ್ರೀರಂಗಪಟ್ಟಣದಲ್ಲಿ ವಕೀಲರಾಗಿ ಹೆಸರುವಾಸಿಯಾಗಿದ್ದರು. ಮೂರ್ತಿಗಳ ತಮ್ಮಂದಿರು ಮೈಸೂರು ವಿಶ್ವವಿದ್ಯಾನಿಲಯದ ವೈಸ್‌ಚಾನ್ಸಲರಾಗಿದ್ದು ಪ್ರಸಿದ್ಧಿ ಗಳಿಸಿದ ಎನ್. ಸುಬ್ಬರಾಯರು. ಅವರ ತಂಗಿ ಶ್ರೀಮತಿ ಕಾವೇರಮ್ಮನವರು ಧರ್ಮಿಷ್ಠರೂ ಸಾಹುಕಾರರೂ ಆದ ಬೆಣ್ಣೆ ಗೋವಿಂದಪ್ಪನವರ ಮಕ್ಕಳು ಬೆಣ್ಣೆ ಸುಬ್ಬರಾಯರ ಭಾರ್ಯೆ. ಈ ಲೇಖನದಲ್ಲಿ ಈ ಮಹನೀಯರ ಸ್ಮರಣೆ ಮತ್ತೆ ಬರುವ ಸಂಭವವುಂಟು. ಅದಕ್ಕಾಗಿ ಅವರ ಹೆಸರುಗಳನ್ನು ಇಲ್ಲಿಯೇ ಹೇಳಿದ್ದೇನೆ.

ತಂದೆ ಸುಬ್ಬರಾಯರ ಸ್ನೇಹಿತರು ಗವರ್ನ್‌ಮೆಂಟ್ ಪ್ಲೀಡರಾಗಿದ್ದ ಸಾಲಿಗ್ರಾಮ ಸುಬ್ಬರಾಯರು. ಇವರೂ ಪ್ರಸಿದ್ಧರಾದ ವಕೀಲರು. ಸಾಲಿಗ್ರಾಮ ಸುಬ್ಬರಾಯರೂ ನಂಜನಗೂಡಿನ ಸುಬ್ಬರಾಯರೂ ಮೈಸೂರು ಸ್ಟ್ಯಾಂಡರ್ಡ್ ಪತ್ರಿಕೆಯ ಸಂಪಾದಕರಾದ ಎಂ. ಶ್ರೀನಿವಾಸ ಅಯ್ಯಂಗಾರ್ಯರನ್ನು ನೋಡಲು ಆಗಾಗ ಬರುತ್ತಿದ್ದುದುಂಟು. ಹಾಗೆ ಅವರು ಬಂದಿದ್ದ ಒಂದು ಸಂದರ್ಭದಲ್ಲಿ ಶ್ರೀನಿವಾಸ ಅಯ್ಯಂಗಾರ್ಯರು ನನಗೆ ಇಬ್ಬರು ಸುಬ್ಬರಾಯರುಗಳ ಪರಿಚಯವನ್ನೂ ಮಾಡಿಸಿಕೊಟ್ಟರು. ನಂಜನಗೂಡು ಸುಬ್ಬರಾಯರೂ ನಾನೂ ಚಾಮರಾಜಪೇಟೆಯ ನಾಲ್ಕನೆಯ ಬೀದಿಯಲ್ಲಿ ಎದುರುಬದುರಾಗಿ ವಾಸವಾಗಿದ್ದ ಕಾರಣದಿಂದ ನಮ್ಮ ಪರಿಚಯ ಬೆಳೆದು ಪಕ್ವಕ್ಕೆಬರಲು ಅವಕಾಶವಾಯಿತು.

ಈಗ ೧೯೦೯-೧೦ರ ಸುಮಾರಿಗೆ ಬರೋಣ.

ಆಗ ನರಸಿಂಹಮೂರ್ತಿಗಳು ಯಾವುದೋ ಸಾಹಿತ್ಯ ಸಂಘದ ಆಶ್ರಯದಲ್ಲಿ ಒಂದು ಉಪನ್ಯಾಸ ಕೊಟ್ಟಿದ್ದರು. ಇಂಗ್ಲಿಷ್ ಕಾದಂಬರಿಕಾರರಲ್ಲಿ ಅಗ್ರಪಂಕ್ತಿಗೆ ಸೇರಿದ ಥ್ಯಾಕರೆಯನ್ನು ಕುರಿತದ್ದು ಆ ಉಪನ್ಯಾಸ. ಅದು 'ಸ್ಟ್ಯಾಂಡರ್ಡ್' ಪತ್ರಿಕೆಯಲ್ಲಿ ಪ್ರಕಟವಾಯಿತು. ಅದನ್ನು ಕುರಿತು ನನ್ನ ಮೆಚ್ಚಿಕೆಯನ್ನು ಮೂರ್ತಿಗಳಿಗೆ ಹೇಳಿದೆ. ಆ ಹೊತ್ತೇ ಅವರು ನನ್ನೊಡನೆ ಒಂದೆರಡು ನಿಮಿಷ ಮಾತನಾಡಿದ್ದು, ನನ್ನನ್ನು ಕೇಳಿದರು:

ಮೂ: "ನೀವು ಈಗ ಏನು ಮಾಡುತ್ತಿದ್ದೀರಿ?"

ನಾನು: "ಆಗ ಥ್ಯಾಕರೆ ಮಾಡಿದ್ದನ್ನೇ."

ಮೂ: "ಹಾಗೆಂದರೆ?"

ನಾನು: "ಥ್ಯಾಕರೆಗೆ ಒಂದು ಪ್ಯಾರಿಸ್ ಪತ್ರಿಕೆಯ ಬಾತ್ಮೀದಾರ ಕೆಲಸ ದೊರೆಯಿತು. ಆತ ಅದನ್ನು ನಂಬಿ ಮದುವೆ ಮಾಡಿಕೊಂಡ. ಆಮೇಲೆ ಒಂದೆರಡು ತಿಂಗಳಿಗೆ ಪತ್ರಿಕೆ ನಿಂತುಹೋಯಿತು. ಉದ್ಯೋಗಕ್ಕಾಗಿ ಪರದಾಡಿದ. ನಾನು 'ಸೂರ್ಯೋದಯ' ಪತ್ರಿಕೆಯನ್ನು ನಂಬಿಕೊಂಡು ಸಂಸಾರ ಹೂಡಿದೆ. ಪತ್ರಿಕೆ ನಿಂತುಹೋಯಿತು. ಈಗ ನಾನೂ ಉದ್ಯೋಗಕ್ಕಾಗಿ ಪರದಾಡುತ್ತಿದ್ದೇನೆ."

ಇದನ್ನು ಕೇಳಿ ಮೂರ್ತಿಗಳು ನಕ್ಕ ನಗುವನ್ನು ಈಗಲೂ ಮರೆಯಲಾರೆ. ಅವರು ಆ ಪ್ರಸಂಗವನ್ನು ಪದೇ ಪದೇ ನೆನೆಸಿಕೊಂಡು ಸ್ನೇಹಿತರುಗಳಿಗೆ ಹೇಳಿ ನಗುತ್ತಿದ್ದರು.

ಮಿತ್ರಗೋಷ್ಠಿ

೧೯೧೨ರಲ್ಲಿ ನಾನು ‘ಕರ್ಣಾಟಕ’ ಎಂಬ ಇಂಗ್ಲಿಷ್ ಅರ್ಧವಾರ ಪತ್ರಿಕೆಯನ್ನು ಪ್ರಾರಂಭಿಸಿದಾಗ ದೊರೆತ ನರಸಿಂಹಮೂರ್ತಿಗಳ ಪ್ರೋತ್ಸಾಹ ಅಷ್ಟಿಷ್ಟಲ್ಲ. ತಮ್ಮ ಸ್ನೇಹಿತರಿಗೆಲ್ಲ ನನ್ನನ್ನು ಪರಿಚಯ ಮಾಡಿಸಿ ಸಂಭ್ರಮಪಟ್ಟರು. ಅವರಿಗೆ ಇದ್ದ ಮಿತ್ರ ಗೋಷ್ಠಿ ವಿಸ್ತಾರವಾದದ್ದು. ಆ ಮಿತ್ರರಲ್ಲಿ ಮುಖ್ಯರಾದವರು ಅಡ್ವೊಕೇಟ್ ಎಂ.ಜಿ. ವರದಾಚಾರ್ಯರು, [1] ಅಡ್ವೊಕೇಟ್ ಸೂರ್ಯಪ್ರಕಾಶಂ, ತಿರುವೇಂಗಡಂ ಮೊದಲಿಯಾರ್, [2] ಸಿ.ಎಸ್. ಅನಂತಪದ್ಮನಾಭ ಅಯ್ಯರ್, ಕೆ. ಭೀಮರಾವ್, ಡಾ ॥ ಕುಣ್ಣಿಕಣ್ಣನ್–ಇವರು. ಇವರಿಗೆಲ್ಲ ಮೂರ್ತಿಗಳವರಲ್ಲಿ ತುಂಬ ಗೌರವ ಮತ್ತು ಪ್ರೀತಿ.

ಬರವಣಿಗೆ

ಮೂರ್ತಿಗಳು ಈ ವೇಳೆಗೆ ಹಿಂದೆಯೇ ಒಂದೆರಡು ಪ್ರೌಢ ಲೇಖನಗಳನ್ನು ಬರೆದಿದ್ದರು. ನನಗೆ ಜ್ಞಾಪಕವಿರುವ ಒಂದು ಲೇಖನ "ತಿಯೊರಿ ಆಫ್ ಸಾವರಿನ್‌ಟಿ" –ರಾಜ್ಯಸ್ವಾಮಿತ್ವದ ತತ್ತ್ವ. ಇದು ಇಂಗ್ಲಿಷ್ ಭಾಷೆಯ ಪ್ರಬಂಧ. ಅದರಲ್ಲಿ ಆಸ್ಟಿನ್, ಮಿಲ್, ಹಾಬ್ಸ್, ಲಾಕ್, ಬ್ಲುಂಟ್‌ಷ್ಲಿ ಮೊದಲಾದ ಪಾಶ್ಚಾತ್ಯ ತತ್ತ್ವವಿಚಾರಿಗಳ ಅಭಿಪ್ರಾಯಗಳನ್ನು ಕ್ರೋಡೀಕರಿಸಿ ಅವುಗಳನ್ನು ಕುರಿತ ವಾದ, ಪ್ರತಿವಾದಗಳನ್ನು ವಿಮರ್ಶೆ ಮಾಡಿದ್ದರು. ಈ ಪ್ರಬಂಧವು ಆ ಕಾಲದಲ್ಲಿ ಪ್ರಕಟವಾಗುತ್ತಿದ್ದ 'ಮೈಸೂರು ರೆವ್ಯು' ಎಂಬ ಪ್ರೌಢವರ್ಗದ ಇಂಗ್ಲಿಷ್ ಮಾಸಪತ್ರಿಕೆಯ ಮೂರು ನಾಲ್ಕು ಸಂಚಿಕೆಗಳಲ್ಲಿ ಪ್ರಕಟವಾಗಿತ್ತು. ಆ ಪ್ರಬಂಧದಲ್ಲಿ ಕಾಣಬರುತ್ತಿದ್ದ ಪಾಂಡಿತ್ಯಕ್ಕೂ ವಾದವಿಶದತೆಗೂ ಸಮನ್ವಯನೀತಿಗೂ ನಾನು ಮನಸೋತವನಾದೆ. ಈಗ ಅದನ್ನು ಯಾರಾದರೂ ನನಗೆ ಕೊಡುವುದಾದರೆ ಅತ್ಯಂತ ಕೃತಜ್ಞನಾಗಿರುವೆನು.

ಮೂರ್ತಿಗಳು ಹೆಚ್ಚಾಗಿ ಬರೆಯುತ್ತಿದ್ದವರಲ್ಲ. ಅವರ ಮಾತುಕಥೆಯೂ ಹೆಚ್ಚಾಗಿರಲಿಲ್ಲ. ಬಹಿರಂಗ ಭಾಷಣ ಅಂದರೆ ಅವರಿಗೆ ಸಭಾಕಂಪ. ಅವರ ವಿದ್ವತ್ತಿನಿಂದ ಪ್ರಯೋಜನ ಪಡೆಯಬೇಕೆನ್ನುವವರು ಸಾವಧಾನವಾಗಿ ಅವರ ಬಳಿ ಕುಳಿತು ಲೋಕಾಭಿರಾಮವಾಗಿ ಪ್ರಶ್ನೆ ಹಾಕಬೇಕು. ಆಗ ಬರುತ್ತಿತ್ತು ಅವರಿಂದ ಉತ್ತರ. ವಿಷಯಕ್ಕೆ ಸಂಬಂಧಪಟ್ಟ ನಾನಾ ಗ್ರಂಥಗಳನ್ನು ಅವರು ಉದಾಹರಿಸಿ "ಆ ಗ್ರಂಥಗಳನ್ನು ಓದಿ ನೋಡಿರಿ" ಎನ್ನುವರು. ಆ ಗ್ರಂಥಗಳ ವಾದ ಪ್ರತಿವಾದಗಳನ್ನು ಸಂಗ್ರಹವಾಗಿ ನಿರೂಪಿಸುವರು. ಹೀಗೆ ಪ್ರಸಕ್ತ ಪ್ರಶ್ನೆಯು ನಾನಾ ಮುಖವಾಗಿ ಪರೀಕ್ಷೆಗೆ ಬರುವುದು. ಸಿದ್ಧಾಂತವು ನಿಮ್ಮ ಬಾಯಿಂದಲೇ ಬರಬೇಕು. ಹಾಗೆ ಪಕ್ಷ ವಿಪಕ್ಷಗಳನ್ನು ಪ್ರತಿಪಾದನೆ ಮಾಡುವ ನಿಪುಣತೆ ಮೂರ್ತಿಗಳಿಗಿತ್ತು. ಅವರ ಈ ಶಕ್ತಿಯಿಂದ ಆಪ್ಟಿಷ್ಟು ಪ್ರಭಾವಿತನಾದವನು ನಾನು ಎಂದು ತಿಳಿದುಕೊಂಡಿದ್ದೇನೆ. ಸರೋವರ ಎಷ್ಟು ದೊಡ್ಡದಾದರೇನು? ಅದರಿಂದ ನಾವು ತರುವುದು ನಮ್ಮ ಸಣ್ಣ ಗಿಂಡಿಯಷ್ಟನ್ನೇ ಅಲ್ಲವೆ?

ಮಾರ್ಗದರ್ಶನ

ನಾನು ಓದಿದ್ದೇನೆಂದು ಹೇಳಿಕೊಳ್ಳಬಹುದಾದ ದೊಡ್ಡ ರಾಜ್ಯಶಾಸ್ತ್ರ ಗ್ರಂಥಗಳು ಅರ್ಥಶಾಸ್ತ್ರ ಗ್ರಂಥಗಳು ಮೂರ್ತಿಗಳಿಂದ ಉಪದಿಷ್ಟವಾದವು. ಅವರು ತಮ್ಮ ಸ್ವಂತ ಪುಸ್ತಕ, ಮಾರ್ಲೆ ಪಂಡಿತನ ಬರ್ಕ್ (Edmund Burke) ಗ್ರಂಥವನ್ನು ನನಗೆ ಕೊಟ್ಟು ಓದಹೇಳಿ ಪರೀಕ್ಷೆ ಮಾಡುತ್ತೇನೆಂದರು. ಹಾಗೆಯೇ ಗ್ಲ್ಯಾಡ್‌ಸ್ಟನ್ನಿನ, ಕಾಬ್ಡನ್ನಿನ, ಪಿಟ್ ತಂದೆಮಕ್ಕಳ ಉಪನ್ಯಾಸಗಳನ್ನು ನನ್ನಿಂದ ಓದಿಸಿದರು. ಅರ್ಥಶಾಸ್ತ್ರದಲ್ಲಿ ಮಾರ್ಷಲ್, ಜೆವಾನ್ಸ್, ಸೆಲಿಗ್ಮನ್, ಮಿಲ್ ಇವರ ಗ್ರಂಥಗಳನ್ನೋದಿಸಿದರು. ಹಾಗೆಯೇ ಆಸ್ಟಿನ್, ಜೇಮ್ಸ್ ಬ್ರೈಸ್ ಇವರ ಗ್ರಂಥಗಳನ್ನೂ ನನ್ನಿಂದ ಓದಿಸಿದರು.

ಸಾಹಿತ್ಯ ಮೀಮಾಂಸೆಯಲ್ಲಿಯೂ ತತ್ತ್ವಶಾಸ್ತ್ರದಲ್ಲಿಯೂ ಮೂರ್ತಿಗಳಿಗೆ ಇದ್ದ ಪರಿಶ್ರಮ ವಿಶಾಲವಾದದ್ದು ಆಳವಾದದ್ದು. ಎಂ.ಜಿ. ವರದಾಚಾರ್ಯರೂ ಮೂರ್ತಿಗಳೂ ನಾನೂ ಸೇರಿ ದೊಡ್ಡ ದೊಡ್ಡ ಆಂಗ್ಲ ಕವಿಗಳ ಕೃತಿಗಳನ್ನು ವಿಮರ್ಶನೆ ಮಾಡುತ್ತಿದ್ದದ್ದುಂಟು. ಕಾರ್ಡಿನಲ್ ನ್ಯೂಮನ್ನಿನ ಇಂಗ್ಲಿಷ್ ಶೈಲಿಯ ಸೊಬಗನ್ನು ನನಗೆ ತೋರಿಸಿ ಕೊಟ್ಟವರು ಮೂರ್ತಿಗಳು. ಹಾಗೆಯೇ ಫ್ರ್ಯೂಡ್, ಹಟ್ಟನ್, ಬೇಜಟ್ ಮೊದಲಾದ ಲೇಖಕರಲ್ಲಿ ನನಗೆ ಅಭಿರುಚಿಯನ್ನು ಉಂಟುಮಾಡಿದವರೂ ಮೂರ್ತಿಗಳು.

ನಾಟಕ ಮಂಡಲಿ

ಆ ಕಾಲದಲ್ಲಿ ‘ಅಮೆಚ್ಯೂರ್ ನಾಟಕ ಮಂಡಲಿ’ ಎಂಬ ಒಂದು ಸಂಸ್ಥೆ ಇತ್ತು. [1] ಮೂರ್ತಿಗಳು ಆ ಸಂಸ್ಥೆಯ ವಿಷಯದಲ್ಲಿ ಉತ್ಸಾಹವುಳ್ಳವರಾಗಿದ್ದರು. ನಾಟಕರಂಗದಲ್ಲಿ ಎಂ.ಜಿ. ವರದಾಚಾರ್ಯರೂ ಅಡ್ವೊಕೇಟ್ ಸೂರ್ಯಪ್ರಕಾಶಂ ಅವರೂ ಬಳ್ಳಾರಿ ರಾಘವಾಚಾರ್ಯರೂ ಕೆ. ಭೀಮರಾಯರೂ ವಿ. ವೆಂಕಟಾಚಾರ್ಯರೂ ವೇಷಧಾರಣೆ ಮಾಡಿ ಬಂದಾಗ ಮೂರ್ತಿಗಳಿಗೆ ಅತ್ಯಂತ ಸಂಭ್ರಮ. ಅವರು ಆಡುತ್ತಿದ್ದ ನಾಟಕಗಳು ಇಂಗ್ಲಿಷ್ ಭಾಷೆಯವು; ಷೇಕ್ಸ್‌ಪಿಯರ್ನವೇ ಅವುಗಳಲ್ಲಿ ಹೆಚ್ಚು. ಅಡ್ವೊಕೇಟ್ ಸೂರ್ಯಪ್ರಕಾಶಂ ಅವರು ಗಡ್ಡ ಬೆಳಸಿದ್ದರು. ಕನ್ನಡಕ ಹಾಕಿಕೊಂಡ ಮೇಲಂತೂ ಸಾಮಾನ್ಯರಿಗೆ ಕೊಂಚ ದಿಗಿಲೇ ಆಗುತ್ತಿತ್ತು. ಮೂರ್ತಿಗಳು ಸೂರ್ಯಪ್ರಕಾಶಂ ಹ್ಯಾಮ್ಲೆಟ್ ನಾಟಕದಲ್ಲಿ ಭೂತದ (ಘೋಸ್ಟ್) ಪಾತ್ರಕ್ಕೆ ಸಹಜವಾಗಿ ಸರಿಯಾದವರು ಎಂದು ಹೇಳಿ ಹಾಸ್ಯಮಾಡುತ್ತಿದ್ದರು.

ಮೂರ್ತಿ-ಸೂರ್ಯಪ್ರಕಾಶಂ

ಸೂರ್ಯಪ್ರಕಾಶಂ ಹೆಸರು ಬಂದಾಗ ಒಂದು ವಿನೋದದ ಸಂಗತಿ ನೆನಪಿಗೆ ಬರುತ್ತದೆ.

ಮೂರ್ತಿಗಳು ಸೆಕ್ರೆಟೇರಿಯಟ್ಟಿನಲ್ಲಿ ಕೆಲವು ಕಾಲ ಉದ್ಯೋಗ ಮಾಡಿದ ಬಳಿಕ ಕಂಟೋನ್ಮೆಂಟಿನ ನ್ಯಾಯಸ್ಥಾನದ ಶಿರಸ್ತೆದಾರ್ ಕೆಲಸಕ್ಕೆ ಹೋದರು. ಆ ಕಾಲದಲ್ಲಿ ಕಂಟೋನ್ಮೆಂಟಿನ ಡಿಸ್ಟ್ರಿಕ್ಟ್ ಜಡ್ಜಿಯಾಗಿದ್ದವರು ಎನ್.ಎಸ್. ತಿರುಮಲಯ್ಯಂಗಾರ್ ಎಂಬವರು. ಒಂದು ಸಲ ಆ ಕೋರ್ಟಿನ ಕಟ್ಟಡದ ರಿಪೇರಿ ಕೆಲಸ ನಡೆಯುತ್ತಿತ್ತು. ಆ ಅವಸರದಲ್ಲಿ ಕೆಲಸಗಾರರು ಹಾರೆಗಳಿಂದ ಗೋಡೆಗಳನ್ನೊಡೆಯತ್ತಲೂ ಇಟ್ಟಿಗೆ ಗಾರೆ ಸಾಗಿಸುವ ಭರದಲ್ಲಿ ಕೂಲಿಯವರೊಡನೆ ಗಟ್ಟಿಯಾಗಿ ಕೂಗಾಡುತ್ತಲೂ ಇದ್ದರು. ಇದರಿಂದ ಕೋರ್ಟಿನ ಕೆಲಸಕ್ಕೆ ತುಂಬ ಅಡ್ಡಿಯಾಗುತ್ತಿತ್ತು. ಜಡ್ಜಿ ತಿರುಮಲಯ್ಯಂಗಾರ್ಯರು ಆ ಸದ್ದನ್ನು ನಿಲ್ಲಿಸಬೇಕೆಂದು ಮ್ಯಾನೇಜರ್ ಮೂರ್ತಿಗಳಿಗೆ ಹೇಳಿಕಳುಹಿಸುತ್ತಿದ್ದರು. ಮೂರ್ತಿಗಳು ಕೆಲಸಗಾರರನ್ನು ಕರೆದು,

“ಅಯ್ಯಾ! ನಿಮ್ಮನ್ನು ಕೇಳಿಕೊಳ್ಳುತ್ತೇನೆ...” ಎಂದು ಕೈ ಮುಗಿದು ಅಂಗಲಾಚುತ್ತಿದ್ದರು. ಕೆಲಸಗಾರರು,

“ಇಲ್ಲ ಸ್ವಾಮಿ, ಆಗಿಹೋಯಿತು” ಎಂದು ಹೇಳುತ್ತ ಸದ್ದನ್ನು ನಡಸುತ್ತಲೇ ಇದ್ದರು. ಹೀಗೆ ಅರ್ಧ ಘಂಟೆಯಾದ ಮೇಲೆ ಕೋರ್ಟಿನಲ್ಲಿ ವಾದಿಸುತ್ತಿದ್ದ ಸೂರ್ಯಪ್ರಕಾಶಂ ಅವರು ಮೂರ್ತಿಗಳ ಆಫೀಸಿಗೆ ಬಂದು ಅವರನ್ನು ಕೇಳಿದರು. ಮೂರ್ತಿಗಳು,

“ನೋಡಿ ಸಾರ್, ಹೇಳುತ್ತಲೇ ಇದ್ದೇನೆ, ಅವರು ಕೇಳುವುದೇ ಇಲ್ಲವಲ್ಲ!” ಎಂದರು. ಸೂರ್ಯಪ್ರಕಾಶಂ ಅವರು,

“ನಾನು ಹೇಳುತ್ತೇನೆ ನೋಡಿ” ಎನ್ನುತ್ತಾ ಕೆಲಸ ನಡೆಯುತ್ತಿದ್ದ ಕಡೆಗೆ ಹೋಗಿ ನಿಂತು ತೆಲುಗಿನಲ್ಲಿ,

“ಏಮಂಡ್ರಾ ದೊಂಗ ಲೌಡೀ ಕೊಡುಕಲ್ಲಾಲಾ?” ಎಂದು ಹೇಳುತ್ತಾ ಒಂದು ಕಾಲನ್ನು ಒದೆಯುವಂತೆ ಮೇಲಕ್ಕೆತ್ತಿದರು. ಆ ಕಾಲು ಕೆಳಕ್ಕಿಳಿಯುವಷ್ಟರೊಳಗಾಗಿ ಕೆಲಸಗಾರರು ದೌಡಾಯಿಸಿದರು.

“ನೋಡಿದಿರಾ ಮೂರ್ತಿ? ಅವರಿಗೆ ಹೇಳಬೇಕಾದದ್ದು ಹೀಗೆ.”

ಈ ಕಥೆಯನ್ನು ಮೂರ್ತಿಗಳು, ಸೂರ್ಯಪ್ರಕಾಶಂ ಇಬ್ಬರೂ ಪದೇಪದೇ ಹೇಳಿಕೊಂಡು ನಗುತ್ತಿದ್ದರು.

ಪ್ರಮೋಷನ್ ನಿರಾಕರಣೆ

ಕಂಟೋನ್ಮೆಂಟ್ ಕೋರ್ಟಿನಲ್ಲಿ ರಾಮಯ್ಯ ಪುಂಜ ಎಂಬುವರು ಡಿಸ್ಟ್ರಿಕ್ಟ್ ಜಡ್ಜಿ ಆಗಿದ್ದರು. ಅವರಿಗೆ ಮೂರ್ತಿಗಳವರಲ್ಲಿ ತುಂಬ ಗೌರವ ಮತ್ತು ಪ್ರೀತಿ. ಬಳ್ಳಾರಿಯಲ್ಲಿಯೂ ಇತರ ಕಡೆಗಳಲ್ಲಿಯೂ ಮುನ್ಸಿಫ್ ಪದವಿಯೋ, ಸಬ್ ಜಡ್ಜಿ ಪದವಿಯೋ ಖಾಲಿಯಾಗಿದ್ದಾಗ ಮೂರ್ತಿಗಳವರನ್ನು ಆ ಪದವಿಗಳಿಗೆ ಎತ್ತಬೇಕೆಂದು ಬಹುವಾಗಿ ಪ್ರಯತ್ನ ನಡೆಯಿತು. ಮೂರ್ತಿಗಳು ಅದು ಬೇಡವೆಂದರು. ರಾಮಯ್ಯ ಪುಂಜ ಅವರು "ಇದೆಂಥ ಹುಚ್ಚು ಮನುಷ್ಯ! ಪ್ರೊಮೋಷನ್ ಬೇಡವೆನ್ನುತ್ತಾನೆ!" ಎಂದು ಆಶ್ಚರ್ಯಪಟ್ಟು ಮೂರ್ತಿಗಳನ್ನು ಮತ್ತೆ ಒತ್ತಾಯ ಮಾಡಿ ಕೇಳಿದರು. ಮೂರ್ತಿಗಳು ಹೇಳಿದ ಉತ್ತರ ಇದು:

"ಬಳ್ಳಾರಿಯಲ್ಲಿಯೂ ಮಡಕೇರಿಯಲ್ಲಿಯೂ ವರದಾಚಾರ್ಯರು ಸಿಕ್ಕುತ್ತಾರೆಯೆ? ಭೀಮರಾಯರು ಸಿಕ್ಕುತ್ತಾರೆಯೆ? ಗುಂಡಪ್ಪ ಸಿಕ್ಕುತ್ತಾರೆಯೇ? ಇವರ ಸ್ನೇಹ, ಇವರ ವಾಗ್ವಾದ, ಇದೇ ನನಗೆ ಸಂತೋಷ. ಇಂಥ ಸಂತೋಷ ಪ್ರೊಮೋಷನ್ನಿನಿಂದ ಸಿಗುತ್ತದೆಯೆ?"

ದೊಡ್ಡ ಪ್ರೊಫೆಸರ್ ಸಾಹೇಬರು ರೆಸಿಡೆಂಟರಾಗಿದ್ದಾಗ ಮೂರ್ತಿಗಳು ರೆಸಿಡೆಂಟ್ ಕಛೇರಿಯ ಜ್ಯುಡಿಷಿಯಲ್ (ನ್ಯಾಯಶಾಸ್ತ್ರದ) ಇಲಾಖೆಯಲ್ಲಿದ್ದರು. ಆಗ ರೆಸಿಡೆಂಟರ ತೀರ್ಮಾನಕ್ಕಾಗಿ ಹೋಗಬೇಕಾಗಿದ್ದ ಮೊಕದ್ದಮೆಗಳ ಪೂರ್ವಾಪರ ನ್ಯಾಯಗಳ ವಿಷಯದಲ್ಲಿ ನೋಟ್ ಹಾಕಿಕೊಡುವುದು ಮೂರ್ತಿಗಳ ಕರ್ತವ್ಯವಾಗಿತ್ತು. ತೀರ್ಮಾನ ಕೊಡುವುದರಲ್ಲಿ ಮೂರ್ತಿಗಳ ನೋಟುಗಳು ಬಹು ಸಹಾಯಕವಾಗಿತ್ತು. ಇದನ್ನು ಪ್ರೊಫೆಸರ್ ಸಾಹೇಬರು ಕಂಡುಕೊಂಡು ಮೂರ್ತಿಗಳ ಲಾ ಪಾಂಡಿತ್ಯವನ್ನು ಮೆಚ್ಚಿದರು. ಹಾಗೆಯೇ ಮೂರ್ತಿಗಳಿಗೆ ಇಂಗ್ಲಿಷ್ ಸಾಹಿತ್ಯ ಚರಿತ್ರೆಗಳಲ್ಲಿದ್ದ ಪರಿಜ್ಞಾನವನ್ನೂ ಕಂಡುಕೊಂಡರು. ಪ್ರೊಫೆಸರ್ ಅವರು ಕೆಲಸದಿಂದ ನಿವೃತ್ತರಾಗಿ ಬೆಂಗಳೂರಿನಿಂದ ಹೊರಡುವ ಸಮಯದಲ್ಲಿ ಮೂರ್ತಿಗಳಿಗೆ ತಮ್ಮ ಮೆಚ್ಚಿಕೆಯ ಗುರುತಾಗಿ ಕೆಲವು ಗ್ರಂಥಗಳನ್ನು ಕೊಟ್ಟರು. ಹಾಗೆ ಬಹುಮಾನವಾಗಿ ಬಂದ ಗ್ರಂಥಗಳಲ್ಲಿ ಮಿಲ್ ತತ್ತ್ವ ವಿಚಾರಿಯ ಅಮೂಲ್ಯ ಅರ್ಥಶಾಸ್ತ್ರ ಗ್ರಂಥವೂ ಇನ್ನೆರಡು ಅಮೂಲ್ಯ ಗ್ರಂಥಗಳೂ ಇದ್ದವೆಂದು ನನ್ನ ಜ್ಞಾಪಕ. ಈ ಪುಸ್ತಕಗಳಲ್ಲಿ ಕೆಲವು ನಮ್ಮ ಗೋಖಲೆ ಸಂಸ್ಥೆಯ ಗ್ರಂಥ ಭಂಡಾರಕ್ಕಾಗಿ ಬಂದಿವೆ.

ಸಂಗೀತೋತ್ಸಾಹ

ನರಸಿಂಹಮೂರ್ತಿಗಳೂ ನಾನೂ ಒಂದು ಸಂಜೆ ಚಿಕ್ಕಪೇಟೆಯ ಪೂರ್ವಭಾಗದಲ್ಲಿರುವ ಅಹಮದ್ ಬಿಲ್ಡಿಂಗ್ಸ್ ಬಳಿ ಬಂದೆವು. ಆ ಜಾಗದಲ್ಲಿದ್ದ ಅಪ್ಪಣ್ಣನವರ ಹಿಂದೂ ರೆಸ್ಟೋರೆಂಟಿಗೆ ಹೋಗಿ ಕಾಫಿ ಸೇವನೆ ಮಾಡಿದೆವು. ನಾವಿದ್ದ ಜಾಗದಿಂದ ಒಂದಿಪ್ಪತ್ತು ಗಜದೊಳಗಾಗಿ ಎದುರು ಶ್ರೇಣಿಯ ಒಂದು ಮನೆಯ ಮುಂದೆ ಚಪ್ಪರ, ತೋರಣ, ಜನ ಸಂದಣಿ ಕಾಣಿಸಿತು. ಮೂರ್ತಿಗಳು ಅಲ್ಲಿಗೆ ಹೋಗಿ ಯಾರನ್ನೋ ವಿಚಾರಿಸಿದರು;

"ಏನು ಈ ಹೊತ್ತು ಇಲ್ಲಿ?"

"ಮದುವೆ ಸ್ವಾಮಿ"

"ಸಂಗೀತ ಉಂಟೋ?"

"ಉಂಟು ಸ್ವಾಮಿ."

"ಯಾರದು?"

"ತಾಯಪ್ಪನವರು [1] ಹಾಡುತ್ತಾರೆ ಸ್ವಾಮಿ."

"ನಾವೂ ಬರಬಹುದೋ?"

"ಅಗತ್ಯವಾಗಿ ದಯಮಾಡಿಸಿ ಸ್ವಾಮಿ, ಬಹಳ ಸಂತೋಷ."

ಆ ಹೊತ್ತಿಗೆ ಸರಿಯಾಗಿ ನಮಗೆ ಗುರುತಾಗಿದ್ದವರೊಬ್ಬರು ಚಾಮರಾಜಪೇಟೆ ಕಡೆಯವರು ಅಲ್ಲಿಗೆ ಬಂದರು. ಮೂರ್ತಿಗಳು ಅವರಿಗೆ ಹೇಳಿದರು:

"ನಮ್ಮ ಮನೆಗೂ ಇವರ ಮನೆಗೂ ತಿಳಿಸಿಬಿಡಿ–ಎದುರುಬದುರು ಮನೆಗಳು–ನಾವು ಬರುವುದು ಹೊತ್ತಾಗುತ್ತದೆಂದು."

ನಮ್ಮ ಬೈಸಿಕಲ್ಲುಗಳನ್ನು ಅಪ್ಪಣ್ಣನವರ ಹೋಟಲಿನಲ್ಲಿ ಬಿಟ್ಟು ಕೊಂಚ ಹೊತ್ತು ಅಲ್ಲಿ ಇಲ್ಲಿ ಸುತ್ತಾಡಿ ಎಂಟು ಘಂಟೆ ವೇಳೆಗೆ ಮದುವೆ ಮನೆಗೆ ಹೋಗಿ ಕುಳಿತೆವು. ಜನ ಇನ್ನೂ

ಬರುತ್ತಲೇ ಇದ್ದರು. “ಎಷ್ಟು ಹೊತ್ತಿಗೆ ಆರಂಭ?” ಎಂದು ಅಲ್ಲಿದ್ದ ಒಬ್ಬರನ್ನು ಕೇಳಿದೆವು. ಅವರು ಹೇಳಿದರು:

“ಸ್ವಾಮಿ, ನಾವು ವರ್ತಕರು. ಅಂಗಡಿ ಬಾಗಿಲು ಹಾಕುವುದಕ್ಕೆ ಮುಂಚೆ ಎಲ್ಲಿ ಬರುವುದಕ್ಕಾಗುತ್ತದೆ?”

ತಾಯಪ್ಪನವರ ಹಾಡಿಕೆ

ತಾಯಪ್ಪ ಬಂದು ಕಛೇರಿ ಪ್ರಾರಂಭ ಮಾಡುವ ವೇಳೆಗೆ ಘಂಟೆ ಒಂಭತ್ತಾಗಿತ್ತು. ನಾವು ಇನ್ನೊಂದು ಸಲ ಹೊರಗೆ ಹೋಗಿ ಹೊಟ್ಟೆ ಗಟ್ಟಿ ಮಾಡಿಕೊಂಡು ಬಂದೆವು. ಆ ರಾತ್ರಿ ನಾವು ಕೇಳಿದ ಸಂಗೀತ ಎಂದೆಂದೂ ಮರೆಯಲಾಗದ್ದು. ಸುಮಾರು ೧೨ ಘಂಟೆಯ ವೇಳೆಗೆ ತಾಯಪ್ಪನವರು ಗೌಳಿಪಂತು ರಾಗದ 'ತೆರ ತೀಯಗ ರಾದಾ' ಕೀರ್ತನೆಯನ್ನು ಹಾಡಿದಾಗ ನಮಗೆ ಲೋಕ ಮರೆತುಹೋಯಿತು. ನಾವು ರಾಗದಲ್ಲಿ ತಲ್ಲೀನರಾದೆವು. ರಾಗಭಾವದಲ್ಲಿ ತನ್ಮಯರಾದೆವು. ಅದು ನಿಜವಾದ ರಾಗಾನುಭವ. ಅಂಥ ಅನುಭವ ಹತ್ತು ನಿಮಿಷಗಳದ್ದಾದರೂ ಅದು ಯಾವಜ್ಜೀವವೂ ಬಾಳತಕ್ಕದ್ದು. ನಾವು ಪ್ರಪಂಚದ ಅನುಭವಗಳನ್ನು ಕ್ಷಣಿಕಗಳೆಂದು, ಬೆಲೆಯಿಲ್ಲದವೆಂಬಂತೆ ಮಾತನಾಡುವುದುಂಟು. ಆದರೆ ಆ ಹತ್ತು ನಿಮಿಷದ ಗೌಳಿಪಂತು ರಾಗದ ಆರ್ತನಾದವು ಅದನ್ನು ಕೇಳಿದವರ ಪಾಲಿಗೆ ನೂರು ವರುಷ ಬದುಕಿರುತ್ತದೆ. ಆ ಕೃತಿಯಲ್ಲಿ ತ್ಯಾಗರಾಜರು ಬೇಡುತ್ತಾರೆ. "ಸ್ವಾಮಿ, ಮಾನ ಮತ್ಸರ ಮೊದಲಾದ ತೆರೆ ಕವಿದು ಸತ್ಯ ಕಾಣದಂತಾಗುತ್ತದೆ ನನಗೆ. ನೀನು ಆ ತೆರೆಯನ್ನು ಎತ್ತಬಾರದೆ?" ಎಂದು ಮೊರೆಯಿಡುತ್ತಾರೆ.

ಇಂಥದು ದೊಡ್ಡ ಕಲೆಯ ಮಹತ್ತ್ವ.

ಅಮಲ್ದಾರ ಸೀತಾರಾಮಯ್ಯನವರು

ಇನ್ನೊಂದು ಸಂದರ್ಭ.

ಬಸವನಗುಡಿಯ ಮೂರನೆಯ ಅಡ್ಡರಸ್ತೆಯಲ್ಲಿ ನಾವಿಬ್ಬರೂ ನಡೆದು ಬರುತ್ತಿದ್ದೆವು. ಒಂದಾನೊಂದು ಮನೆಯ ಹತ್ತಿರ ಬಂದಾಗ ಯಾರೋ ಹಾಡುತ್ತಿದ್ದದ್ದು ಕೇಳಿಸಿತು. ಒಂದು ಕ್ಷಣ ಅಲ್ಲಿ ನಿಂತು ಆಲಿಸಿದೆವು. ಅದು ಯಾರ ಮನೆಯೋ ನಮಗೆ ಗೊತ್ತಿಲ್ಲ. ಯಾರನ್ನಾದರೂ ವಿಚಾರಿಸೋಣವೆಂದು ನಾನು ಈ ಕಡೆ ಆ ಕಡೆ ನೋಡುತ್ತಿರುವಷ್ಟರಲ್ಲಿ ಮೂರ್ತಿಗಳು ಹೋಗಿ ಕದ ತಟ್ಟಿದರು. ಒಳಗಿನಿಂದ ಯಾರೋ ಎದ್ದು ಬಂದು ಬಾಗಿಲು ತೆಗೆದು ನೋಡಿ ಕೇಳಿದರು:

“ನೀವು ಪಟ್ಟಣದ ಸುಬ್ಬರಾಯರ ಮಕ್ಕಳಲ್ಲವೇನಪ್ಪ?

ಅಗ ಮೂರ್ತಿಗಳಿಗೆ ಜ್ಞಾಪಕ ಬಂತು. ಆ ದೊಡ್ಡ ಮನುಷ್ಯರು ಶ್ರೀರಂಗಪಟ್ಟಣದಲ್ಲಿ ಅಮಲ್ದಾರರಾಗಿದ್ದ ಸೀತರಾಮಯ್ಯನವರೆಂಬುದು. ಅವರಿಬ್ಬರೂ ಹಿಂದಿನ ಜ್ಞಾಪಕಗಳನ್ನು ಹೇಳಿಕೊಂಡರು. ನಾವಿಬ್ಬರೂ ನಡುಮನೆಯಲ್ಲಿ ಕುಳಿತೆವು. ಅಲ್ಲಿ ಹಾಡುತ್ತಿದ್ದವರು ಸೀತಾರಾಮಯ್ಯನವರ ಮಗ ಗಂಗಾಧರಯ್ಯನವರು. ಇವರ ಒಬ್ಬ ಸೋದರರು ಪಿಟೀಲು ನುಡಿಸುತ್ತಿದ್ದರು, ಇನ್ನೊಬ್ಬ ಸೋದರರು ಮೃದಂಗ ನುಡಿಸುತ್ತಿದ್ದರು. ಇಬ್ಬರು ಬಂಧುಗಳು ಅಲ್ಲಿ ಕುಳಿತಿದ್ದರು. ಅವರು ಸಂಕೇತಿಗಳು. ಸೀತಾರಾಮ್ಯನವರಿಗೆ ತುಂಬ ಸಂಗೀತದ ಖಯಾಲಿ. ಅವರು ಭಜನೆಯೆಂದು ಹೆಸರಿಟ್ಟು ವಾರವಾರವೂ ಸಂಗೀತ ಕಛೇರಿ ನಡಸುತ್ತಿದ್ದರು. ಆ ದಿನ ಚೆನ್ನಾಗಿ ಹಾಡಿದರು.

ಆ ಮೇಲೆ ಕೆಲವು ಕಾಲ ನಾವು ವಾರವಾರವೂ ಅಲ್ಲಿಗೆ ಹೋಗುತ್ತಿದ್ದೆವು.

ಮೂರ್ತಿಗಳ ಸಂಗೀತಪ್ರೇಮವನ್ನು ತೋರಿಸುವುದಕ್ಕಾಗಿ ಈ ಕಥೆ ಹೇಳಿದೆ.

ಒಬ್ಬ ವಿದ್ವನ್ಮಹನೀಯರು

ಮೈಸೂರಿಗೆ ಹೋಗಿದ್ದವನು ನಾನು ದಸರಾ ಸಮಯದಲ್ಲಿ ಒಂದು ದಿನ ಮಧ್ಯಾಹ್ನ ಮೂರ್ತಿಗಳ ಮನೆಗೆ ಹೋದೆ. ತಲೆಬಾಗಿಲು ಹತ್ತಿರ ನಿಂತು "ಮೂರ್ತೀ" ಎಂದು ಗಟ್ಟಿಯಾಗಿ ಕೂಗಿದೆ. ಆ ಕ್ಷಣಕ್ಕೆ ಸರಿಯಾಗಿ ಇನ್ನೊಬ್ಬರು ಅಲ್ಲಿಗೆ ಬಂದರು. ನಾನು ಸರಿಗೆ ಪಂಚೆಯನ್ನು ಹೊದ್ದಿದ್ದೆ. ಅವರು ನನ್ನನ್ನು ತಲೆಯಿಂದ ಕಾಲವರೆಗೆ, ಕಾಲಿನಿಂದ ತಲೆಯವರೆಗೆ ಎರಡು ಮೂರು ಸಲ ದಿಟ್ಟಿಸಿ ನೋಡಿದರು. ಹಾಗೆ ನೋಡಿ ಕೇಳಿದರು,

ಅವರು: "ಏನ್ನಾಯ್ಯಾ, ಪಾಟ್ಟುಕಾರಾ ನೀ?" (ನೀವು ಹಾಡುಗಾರರೆ?)

ನಾನು: "ಅಲ್ಲ".

ಅವರು: "ಯಾಕಲ್ಲ? ತೊಂಡೆ ಇರುಕೇಯ್ಯ?"

ನಾನು: "ಗಂಟಲು ಒಂದಿದ್ದರೆ ಆಯಿತೇ?"

ಅವರು: "ಸರಿಗೆ ಪಂಚೆಯನ್ನು ಹೊದ್ದಿದ್ದೀಯಲ್ಲ?"

ಈ ವೇಳೆಗೆ ಮೂರ್ತಿಗಳು ಒಳಗಡೆಯಿಂದ ಬಂದು ಕದ ತೆಗೆದರು. ನಾವಿಬ್ಬರೂ ಒಳಗೆ ಹೋಗಿ ಜಗಲಿಯ ಮೇಲೆ ಕುಳಿತೆವು. ಆ ಜಗಲಿಯ ಮೇಲೆ ವೀಣೆ ಇತ್ತು. ಆ ಅಪರಿಚಿತರು ವೀಣೆಯ ಮುಂದೆ ಕುಳಿತು ಹೇಳಿದರು:

"ನೀನು ಹಾಡು, ನಾನು ಶ್ರುತಿ ನುಡಿಸುತ್ತೇನೆ."

"ನೀವು ನನ್ನನ್ನು ನಂಬಿ. ನಾನು ಹಾಡುವವನಲ್ಲ."

–ಎಂದು ನಾನು ಅಂಗಲಾಚಿದೆ. ಈ ಮಾತುಕಥೆ ನಡೆಯುತ್ತಿದ್ದಾಗ ಮೂರ್ತಿಗಳು ಬಾಯಿ ಮೇಲೆ ಪಂಚೆ ಹಾಕಿಕೊಂಡು ನಗುತ್ತಿದ್ದರು. ಆಗ ಆ ಅಪರಿಚಿತರು ಹೇಳಿದರು:

"ನಾನು ಹಾಡುತ್ತೇನೆ. ನೀನು ಕೇಳು."

ಹೀಗೆಂದು ಅವರು ರೀತಿಗೌಳ ರಾಗ ಪ್ರಾರಂಭಿಸಿದರು. ನಾನು ಬುದ್ಧಿ ಕೆಟ್ಟು "ಭೇಷ್" ಎಂದೆ. ಅವರು,

"ನೋಡಿದಿಯಾ, ನೀನು ಡಾಡ್ಜ್ ಮಾಡುವುದು!"

ನಾನು ಮೂರ್ತಿಯ ಕಡೆ ತಿರುಗಿ ಕೇಳಿದೆ:

ನಾನು: "ಇವರು ಯಾರೋ ಗೊತ್ತಾಗಲಿಲ್ಲವಲ್ಲ?"

ಮೂರ್ತಿ: (ಕೊಂಚ ನಕ್ಕು) "ಇವರು ಎನ್.ವಿ. ರಾಘವನ್-ಆಡಿಟರ್ ಜನರಲ್ ಆಫ್ ಇಂಡಿಯ."

ನನಗೆ ತಬ್ಬಿಬ್ಬಾಯಿತು. ಆ ಕಾಲದಲ್ಲಿ ಭಾರತೀಯ ಜನಕ್ಕೆ ದೊರೆಯಬಹುದಾಗಿದ್ದ ಬಹು ಮೇಲಿನ ಹುದ್ದೆ ಆಡಿಟರ್ ಜನರಲ್ ಹುದ್ದೆ. ಆ ಪದವಿ ಇದ್ದದ್ದು ಒಟ್ಟು ಇಂಡಿಯಕ್ಕೆ ಮೂರೇ ಸ್ಥಳ. ಆ ಮೂರರಲ್ಲಿ ಒಂದರ ಅಧಿಕಾರಿಗಳು ಎನ್.ವಿ. ರಾಘವನ್. ಇವರು ಇಂಗ್ಲಿಷ್ ಸಾಹಿತ್ಯ, ಸಂಸ್ಕೃತ, ತತ್ತ್ವ ಜಿಜ್ಞಾಸೆ, ಗಣಿತಶಾಸ್ತ್ರ ಇವುಗಳಲ್ಲಿ ಉತ್ತಮೋತ್ತಮ ದರ್ಜೆಗೆ ಸೇರಿದ್ದವರೆಂದು ಲೋಕಪ್ರಸಿದ್ಧಿ. ಅವರಿಗೆ ಸಂಗೀತದಲ್ಲಿ ಖಯಾಲಿ–ಹುಚ್ಚು ಖಯಾಲಿ. ಅವರೂ ಮೂರ್ತಿಗಳೂ ಅತ್ಯಂತ ಸ್ನೇಹಿತರು, ರಾಘವನ್ ಅವರ ವಿಷಯವನ್ನು ನಾನು ಎಷ್ಟೋ ಸಲ ಶ್ರೀನಿವಾಸಶಾಸ್ತ್ರಿಗಳು, ವೆಂಕಟರಾಮಶಾಸ್ತ್ರಿಗಳು ಮೊದಲಾದ ವಿದ್ವನ್ಮಹನೀಯರಿಂದ ಕೇಳಿದ್ದೆ.

ಮೂರ್ತಿಗಳ ಸಂಗೀತಪಾಠ

ಮೂರ್ತಿಗಳಿಗೆ ಸಂಗೀತದಲ್ಲಿ ನಿರತಿಶಯವಾದ ಆಸಕ್ತಿ. ವೀಣೆ ಕಲಿಯುತ್ತಿದ್ದರು: ಕಲಿಯುತ್ತಲೇ ಇದ್ದರು. ಸ್ವತಂತ್ರವಾಗಿ ನುಡಿಸಿದ್ದು ಒಂದು ಸಾರಿಯೂ ಇಲ್ಲ. ನಾಚಿಕೆ, ತುಂಬ ನಾಚಿಕೆ. ಒಂದು ಪದವನ್ನೋ, ಒಂದು ಸ್ವರವನ್ನೋ ಗಟ್ಟಿಯಾಗಿ ನುಡಿಯಬೇಕೆಂದರೆ ಹಿಂದೇಟು. ವೀಣೆ ವಿಶ್ವನಾಥ ಶಾಸ್ತ್ರಿಗಳು ಕೆಲವು ಕಾಲ, ವೀಣೆ ಗೋಪಾಲರಾಯರು * ಕೆಲವು ಕಾಲ ಮೇಷ್ಟರಾಗಿ ಬರುತ್ತಿದ್ದರು. ಅವರು ಬಂದ ಕೂಡಲೆ ಅವರಿಗೆ ಉಪಚಾರ. “ಪಾಠ ಉಪಕ್ರಮಿಸೋಣ” ಎಂದು ಅವರು ಹೇಳಬೇಕು. ಆ ಕೂಡಲೆ ಕೋಣೆಯ ಕಿಟಕಿ ಬಾಗಿಲುಗಳನ್ನೆಲ್ಲ ಮೂರ್ತಿಗಳು ಭದ್ರವಾಗಿ ಮುಚ್ಚುವರು. ಅವರು ಸಂಗೀತಪಾಠ ಕಲಿತದ್ದು ಯಾರಿಗೂ ಕಾಣಿಸಬಾರದು. ಅಷ್ಟೇ ಅಲ್ಲ, ಯಾರಿಗೂ ಕೇಳಿಸಲೂ ಬಾರದು. ಬಾಗಿಲ ನಡುವೆ ಸಂದು ಬಿಟ್ಟಿದ್ದರೆ ಅದಕ್ಕೆ ಬಟ್ಟೆ ಸಿಕ್ಕಿಸುವರು. ಇದೆಲ್ಲ ನಾನು ಕಣ್ಣಾರೆ ಕಂಡದ್ದು.

ಪಾಠ ಪ್ರಾರಂಭವಾದ ಒಂದೆರಡು ನಿಮಿಷ ವೀಣೆಯ ತಂತಿಯನ್ನು ಬೆರಳಿನಿಂದ ಸೋಕುವುದು. ಅಲ್ಲಿಗೆ ನಿಲ್ಲಿಸಿ ಮೇಷ್ಟರನ್ನು ಕುರಿತು ಹೇಳುವರು:

“ಈ ಹೊತ್ತು ನೀವೇ ನುಡಿಸಿ, ಬಹಳ ಸೊಗಸಾಗಿದೆ ನಿಮ್ಮ ಕೈ. ನಾನು ಕೇಳುತ್ತೇನೆ.”

ಹೀಗೆ ಹೇಳಿ ಕೂಡುವರು. ವಿದ್ವಾಂಸರು ಯಾವುದೋ ಒಂದು ಕೃತಿಯನ್ನು ನುಡಿಸಿ ಕೊಂಚ ಹೊತ್ತು ಹರಟುವರು. “ಮಿಕ್ಕದ್ದು ನಾಳೆ” ಎಂದು ಹೇಳಿ ಮೂರ್ತಿಗಳು ಪಾಠವನ್ನು ಮುಗಿಸುವರು.

ಮಡಿ

ನಾಚಿಕೆಯ ಜೊತೆಗೆ ಮಡಿ. ಶೃಂಗಾರವಿಚಾರ ಬರಕೂಡದು.

“ಸಾರಸ”

“ಸರಸುಡ”

ಇಂಥ ಮಾತುಗಳು ಬಂದಾಗ ಅದರ ಅರ್ಥವೇನೆಂದು ನನ್ನನ್ನು ಕೇಳುವರು. ಅವರಿಗೆ ತೆಲುಗು ಬಾರದಿದ್ದದ್ದು ಸಂಗೀತದ ಅದೃಷ್ಟ. ನನ್ನನ್ನು ಅವರು ಕೇಳಿದಾಗ ತತ್‌ಕ್ಷಣ ನಾನು

“ಇದೆಲ್ಲ ದೇವರ ಸ್ತೋತ್ರ ಮೂರ್ತಿ. ಸಾರಸ ಎಂದರೆ ಮಹಾಲಕ್ಷ್ಮಿ: ಲಕ್ಷ್ಮೀಕಾಂತ, ಮಹಾವಿಷ್ಣು. ಸರಸುಡಾ ಎಂದರೆ ರಸಸ್ವರೂಪಿ ಭಗವಂತ.”

ಹೀಗೆ ಅರ್ಥ ಹೇಳಿ ಅವರನ್ನು ಸಮಾಧಾನ ಪಡಿಸಬೇಕಾಗಿತ್ತು.

ಮೂರ್ತಿಗಳಿಗೆ ತುಂಬ ಇಷ್ಟವಾದ ಕೃತಿ ಆನಂದಭೈರವಿ ರಾಗದ

> ಮಾನಸ ಗುರುಗುಹರೂಪಂ ಭಜರೇ
> ಮಾಯಾ ಮಾರುತ ಜನಿ ಹೃತ್ತಾಪಂ ತ್ಯಜರೇ

ಇದು ಕೇಳುವುದಕ್ಕೆ ತುಂಬ ಇಷ್ಟ. ಪದೇ ಪದೇ ಹೇಳಿಸುವರು.

> ಮಾನವ ಜನ್ಮನಿ ಸಂತೃಪ್ತೇ ಸತಿ ಪರಮಾತ್ಮನಿ ನಿರತಿಶಯ ಸುಖಂ ವ್ರಜರೇ

ಒಂದು ದಿನ ನಮ್ಮ ಸ್ನೇಹಿತರಾದ ಅಡ್ವೊಕೇಟ್ ಡಿ. ರಾಘವಾಚಾರ್ಯರ ಮನೆಯಲ್ಲಿ ಸಂಗೀತ ಕಛೇರಿ. ಕೋಲಾರದ ನಾಗರತ್ನಾಸಾನಿಯ ಹಾಡಿಕೆ. ಮೂರ್ತಿಗಳು, ಎಂ. ಜಿ. ವರದಾಚಾರ್ಯರು, ಇನ್ನೂ ನಾಲ್ಕೈದು ಮಂದಿ ಸ್ನೇಹಿತರು ಕುಳಿತಿದ್ದೆವು. ನನ್ನ ಗ್ರಹಚಾರದಿಂದ ನಾನು ಆಕೆಯ ಎದುರಿನಲ್ಲಿ ಕೂಡುವಂತಾಯಿತು. ಕೋಲಾರದವರಾದ್ದರಿಂದ ಸ್ವಲ್ಪ ಪರಿಚಯವೂ ಇತ್ತು. ಆಕೆ ಪೀಠಿಕೆ, ರಾಗಾಲಾಪನೆ ಮೊದಲಾದವು ಆದಮೇಲೆ ಶಂಕರಾಭರಣದಲ್ಲಿ

ಮಂ-ದ-ಹಾ-ಸ
ವ-ದ-ನ ಹೇ-ಕೃ-ಷ್ಣ॥

ಈ ಪಲ್ಲವಿಯನ್ನು ಆರಂಭಿಸಿದರು. ನನ್ನ ಬೆರಳು ಅಭ್ಯಾಸದಿಂದ ತಾಳ ಹಾಕುತ್ತಿತ್ತೆಂದು ಕಾಣುತ್ತದೆ. ಆಕೆಗೆ ಸಂತೋಷ. ನಡುನಡುವೆ ನನ್ನ ಕಡೆ ನೋಡಿ ಕೊಂಚ ನಗುವಳು. ನನಗೋ, ಎದೆಯಲ್ಲಿ ಡವಡವ, ಪಕ್ಕದಲ್ಲಿ ಮೂರ್ತಿಗಳಿದ್ದಾರೆ ಎಂದು. ಕಡೆಗೆ ಮೂರ್ತಿಗಳು ನನ್ನನ್ನು ಕೇಳಿಯೇಬಿಟ್ಟರು:

"ಯಾಕ್ರಿ ಆಕೆ ನಿಮ್ಮನ್ನು ನೋಡಿ ನಗುವುದು?"

"ಅದೆಲ್ಲ ಭಕ್ತಿ ಮೂರ್ತಿಗಳೆ. ಕೃಷ್ಣನು ಮಂದಹಾಸ ತೋರುತ್ತಿದ್ದಾನೆ. ಅದನ್ನು ಆಕೆ ಅಭಿನಯದಿಂದ ಸೂಚಿಸುತ್ತಿದ್ದಾಳೆ."

"ಒಳ್ಳೆ ಆಸಾಮಿಯನ್ನು ಕೇಳಿದಿರಿ!" ಎಂದು ಇನ್ನೊಂದು ಪಕ್ಕದಲ್ಲಿದ್ದ ಎಂ.ಜಿ. ವರದಾಚಾರ್ಯರು ಹಾಸ್ಯ ಮಾಡಿದರು.

ಒಂದು ಸಾರಿ ನಾನು ನವರಾತ್ರಿ ಹಬ್ಬದಲ್ಲಿ ಮೂರ್ತಿಗಳ ಮನೆಗೆ ಹೋಗಿದ್ದೆ. ಅವರ ಕುಟುಂಬ ತೌರುಮನೆಗೆ ಹೋಗಿದ್ದರು. ನಾನು ಕೇಳಿದೆ:

"ಮೂರ್ತಿ, ನಿಮ್ಮ ಮನೆಯಲ್ಲಿ ಹಬ್ಬವೊ ಈ ಹೊತ್ತು? ಏನು ತಿಂಡಿ?"

"ಬನ್ನಿ, ನೋಡೋಣ."

ಹೀಗೆಂದು ಮೂರ್ತಿಗಳು ನನ್ನನ್ನು ಒಳಕ್ಕೆ ಕರೆದುಕೊಂಡು ಹೋದರು. ಹೋಗುವಾಗ ನಡುಮನೆಯಲ್ಲಿ ಬೊಂಬೆ ಇರಿಸಿದ್ದದ್ದು ಕಾಣಿಸಿತು. ನಾನು ಅಲ್ಲಿ ನಿಂತದ್ದನ್ನು ಕಂಡು ಮೂರ್ತಿ ಹಣೆ ಹಣೆ ಚಚ್ಚಿಕೊಂಡರು. ಏಕೆಂದರೆ ಆ ಬೊಂಬೆಗಳ ಪ್ರದರ್ಶನದಲ್ಲಿ ಒಂದು ದಂಪತಿಗಳದು. ಸಣ್ಣ ಬೊಂಬೆ ಮಂಚದ ಮೇಲೆ. ಆ ಸಂದರ್ಭಕ್ಕೆ ತಕ್ಕ ಪ್ರಕರಣಗಳೆಲ್ಲ ಇದ್ದವು.

ಮೂರ್ತಿ: "ಏನಪ್ಪಾ–ದೇವರುಗಳನ್ನೂ ಬಿಡುವುದಿಲ್ಲವಲ್ಲ ಈ ಆಟ!"

ತಿಂಡಿಗಳ ಅಯತನ

ಮೂರ್ತಿಗಳಿಗೆ ಹೆಚ್ಚಿನ ಸಂತೋಷವೆಂದರೆ ಮಿತ್ರಗೋಷ್ಠಿ. ಅವರು ಹರಟುವವರಲ್ಲ. ಇತರರು ಹರಟುತ್ತಿರಬೇಕು. ಅವರು ಕೇಳಿ ನಗಬೇಕು. ಮಿತ್ರಗೋಷ್ಠಿ ಸೇರಿದಾಗಲೆಲ್ಲ ವಿಧವಿಧವಾದ ತಿಂಡಿಗಳು, ಕಾಫಿ, ಇತ್ಯಾದಿಗಳಿರಬೇಕು. ಅವರು ಯಾವ ಪದಾರ್ಥವನ್ನೂ ಕೈ ತುಂಬ ತೆಗೆದು ಬಾಯಿ ತುಂಬ ಇಟ್ಟುಕೊಂಡವರಲ್ಲ. ಒಳ್ಳೊಳ್ಳೆಯ ತಿಂಡಿಗಳ ಹೆಸರುಗಳನ್ನು ಹೇಳಿ ಉತ್ಸಾಹಪಡುವರು. ಆದರೆ ಯಾವುದನ್ನೂ ಒಂದು ಚಿಟಕೆಗಿಂತ ಹೆಚ್ಚಾಗಿ ಸೇವಿಸಿದವರಲ್ಲ. ಅವರು ಕಂಟೋನ್ಮೆಂಟ್ ಕೋರ್ಟಿನಲ್ಲಿದ್ದಾಗ ದೀವಳಿಗೆ ಕಾಲದಲ್ಲಿ ಮಾರ್ವಾಡಿ ಮುಲ್ತಾನಿ ಗುಜರಾತಿ ಮುಂತಾದ ಜನ ವಿಧವಿಧವಾದ ಭಕ್ಷ್ಯಗಳನ್ನು ಅವರಿಗೆ ತಂದುಕೊಡುವರು. ಆ ತಿಂಡಿಗಳಿಗೆಲ್ಲ ಪರಮಾಯತನ ನಮ್ಮ ಹೊಟ್ಟೆ.

ದೊಡ್ಡತನದ ಒಂದು ನಿದರ್ಶನ

ಒಂದು ಸಾರಿ ಸಂಜೆ ಈ ಫಲಾಹಾರದ ಸಮಾರಾಧನೆಗಾಗಿ ನಾವು ನಾಲ್ವರೈವರು ಉಂಡಾಡಿಗಳು ಅವರ ಮನೆಯಲ್ಲಿ ಸೇರಿದ್ದೆವು. ಜಮಖಾನದ ಮೇಲೆ ದೊಡ್ಡ ದೊಡ್ಡ ನ್ಯೂಸ್ ಪೇಪರ್ ಹಾಳೆಗಳನ್ನು ಹಾಸಿ ಅದರ ಮೇಲೆ ಲಡ್ಡು, ಜಿಲೇಬಿ, ಘೀವರ್, ಸೋಹನ್ ಪುಪಡಿ, ಚೂಡಾ, ಕಾಳುಗಳು; ಬೋಂಡ, ಪಕೋಡಗಳು ಇದನ್ನೆಲ್ಲ ರಾಶಿಮಾಡಿ ಎಲ್ಲವೂ ತಿಂದೆವು. ಕುಡಿಯುವುದಕ್ಕೆ ನೀರು ಬೇಕಾಯಿತು. ಮೂರ್ತಿಗಳು ಕೇಳಿದರು:

"ಆಚಾರ್ರೆ, ಕೊಂಚ ನೀರು ತಂದುಕೊಡುತ್ತೀರಾ?"

ಆಚಾರ್ರು, ನೀರು ತಂದುಕೊಟ್ಟರು. ಅಷ್ಟು ಹೊತ್ತಿಗೆ ನಮ್ಮ ಮುಂದಿದ್ದ ಪೇಪರುಗಳೆಲ್ಲ ಖಾಲಿಯಾಗಿದ್ದವು. ಮೂರ್ತಿಗಳು

"ಆಚಾರ್ರೆ ಈ ಕಾಗದ ತೆಗೆದು ಹೊರಗೆ ಹಾಕುತ್ತೀರಾ?"

ಆಚಾರ್ರು ಸಂತೋಷದಿಂದ ಆ ಕಾಗದಗಳನ್ನು ತೆಗೆದುಕೊಂಡು ಹೋದರು. ಮೂರ್ತಿಗಳಿಗೆ ಪಶ್ಚಾತ್ತಾಪದ ಸಂಕಟ ಪ್ರಾರಂಭವಾಯಿತು. ನನ್ನೊಡನೆ "ಅಯ್ಯೋ ಹೀಗೆ ಮಾಡಿಬಿಟ್ಟೆನಲ್ಲ!" ಎಂದರು.

ನಾನು: "ಏನು ಮಾಡಿದಿರಿ? ಏನೂ ಆಗಲಿಲ್ಲವಲ್ಲ?"

ಮೂ: "ಆಚಾರ್ಯರನ್ನು ಎಂಜಲು ಕಾಗದ ತೆಗೆಯುವಂತೆ ಹೇಳಿದೆನಲ್ಲ! ನಾನೇ ತೆಗೆಯಬೇಕಿತ್ತು."

ನಾನು: "ಬಿಡಿ ಮೂರ್ತಿ ಏನು ದೊಡ್ಡ ವಿಷಯ."

ಮೂ: "ಹಾಗಲ್ಲಪ್ಪ, ಆಚಾರ್ರು ಮಾಡಬೇಕಾದ ಕೆಲಸವಲ್ಲ ಅದು. ನಾನು ಬಾಯಿ ತಪ್ಪಿ ಹಾಗಂದೆ. ಆಲೋಚನೆ ಮಾಡಿ ಆಡಿದ ಮಾತಲ್ಲ. ಈಗ ನಾನು ಪ್ರಾಯಶ್ಚಿತ್ತ ಮಾಡಿಕೊಳ್ಳಬೇಕು."

ಹೀಗೆ ಹೇಳಿ ಆಚಾರ್ಯರನ್ನು ಕರೆದು "ಕ್ಷಮಾಪಣೆ" ಕೇಳಿಕೊಂಡರು. ಆಚಾರ್ರು ನಗುತ್ತಿದ್ದರು "ಏನು ಸ್ವಾಮಿ ಇದು! ನಾವು ಎಲ್ಲ ಕಡೆಯೂ ಮಾಡುವುದಿಲ್ಲವೆ?"

ಮೂರ್ತಿಗಳಿಗೆ ಮನಸ್ಸು ನಿಲ್ಲಲಿಲ್ಲ. ಮಾರನೆಯ ದಿನ ಆಚಾರ್ರು ಬಂದ ಕೂಡಲೆ ಒಂದು ಜಟಕಾ ತರಿಸಿ ಅದರಲ್ಲಿ ಆಚಾರ್ರನ್ನು ಕೂಡಿಸಿ ದರ್ಜಿ ಅಂಗಡಿಗೆ ಹೋಗಿ ಒಂದು ಕೋಟು ಹೊಲಿಸಿಕೊಟ್ಟರು.

ಆಚಾರ್ರಿಗೆ ಇಂಥ ದೊಡ್ಡ ಮನುಷ್ಯರಲ್ಲಿ ಕೆಲಸ ಮಾಡುತ್ತಿರುವೆನೆಂದು ಹಿಗ್ಗು. ಕಂಡಾಗಲೆಲ್ಲ ಈ ವಿಷಯವನ್ನು ನಗುತ್ತ ಪ್ರಸ್ತಾಪಿಸಿದರು.

ಜಾನಪದ ಸಂಸ್ಕೃತಿ

ಮೂರ್ತಿಗಳಿಗೆ ಜನಸಾಮಾನ್ಯರ ಜೀವನದ ವಿವರಗಳನ್ನು ಕಂಡುಕೊಳ್ಳಬೇಕೆಂದು ತುಂಬ ಕುತೂಹಲ. ಫೋಕ್‌ಲೋರ್-ಗ್ರಾಮಜನ ಚರಿತ್ರೆ, ಗ್ರಾಮಜನ ಸಂಸ್ಕೃತಿ-ಇದನ್ನು ನಾವು ಶೋಧನೆ ಮಾಡಿದರೆ ನಮ್ಮ ಜನದ ಸ್ವಭಾವ ಚೆನ್ನಾಗಿ ತಿಳಿದುಬರುತ್ತದೆ. ಅದರ ಕಷ್ಟ ನಿಷ್ಠುರಗಳ ಸಾಕ್ಷಾತ್ತಾದ ಅರಿವಿಲ್ಲದೆ ಮಾಡುವ ದೇಶೋದ್ಧಾರ ಪ್ರಯತ್ನ ಬಿರುಗಾಳಿಯಲ್ಲಿ ಹಿಡಿದ ದೀಪದಂತಾಗುತ್ತದೆ–ಎಂದು ಪದೇ ಪದೇ ಹೇಳುವರು. ಈ ಜಾನಪದ ಸಾಹಿತ್ಯದ ಉತ್ಸಾಹದ ಪ್ರಸಂಗವೊಂದು ಜ್ಞಾಪಕಕ್ಕೆ ಬರುತ್ತದೆ.

ಕಳಾಸಿಪಾಳ್ಯದಲ್ಲಿ ಧರ್ಮರಾಯನ ಗುಡಿಯೊಂದುಂಟಷ್ಟೆ? ಆ ಗುಡಿಯ ಭಕ್ತರು ವಿಶೇಷವಾಗಿ ತಿಗಳರು. ಒಂದು ಸಾರಿ ಅವರು ತಮ್ಮ ಗುಡಿಯ ಕರಗದ ಸಮಯದಲ್ಲಿ ಒಂದು ನಾಟಕವನ್ನೇರ್ಪಡಿಸಿ ಅದಕ್ಕೆ ಬರಬೇಕೆಂದು ಮೂರ್ತಿಗಳನ್ನೂ ಇನ್ನು ಒಬ್ಬಿಬ್ಬ ಮಿತ್ರರನ್ನೂ ಆಹ್ವಾನಿಸಿದ್ದರು. ನಾಟಕ ಪ್ರಾರಂಭವಾಗುವುದು ರಾತ್ರಿ ಎಂಟಕ್ಕೆಂದು ಹೆಸರು. ನಾಟಕ ಬಯಲಿನಲ್ಲಿ. ನಾನು ಇಷ್ಟಕ್ಕೆ ಸಿದ್ಧನಾಗಿರಲಿಲ್ಲ. ಮೂರ್ತಿಗಳಿಗಾದರೋ ಅಲ್ಲಿಗೆ ಹೋಗಲೇಬೇಕೆಂದು ಕರ್ತವ್ಯಶ್ರದ್ಧೆ. ನಾನು ಅಲ್ಲಿಗೆ ಬರತಕ್ಕವನಲ್ಲವೆಂದು ಹೇಳಿದಾಗ ನನ್ನನ್ನು ಮೂದಲಿಸಿ ಹಾಸ್ಯ ಮಾಡಿ ಆಕ್ಷೇಪಿಸಿ ಒತ್ತಾಯಪಡಿಸಿದರು. ಕಡೆಗೆ ನಾನೂ ಹೋದೆ. ಅಲ್ಲಿ ಸೇರಿದ್ದ ಬೀಡೋ, ಹತ್ತಾರು ಸಾವಿರ ಮಂದಿ. ಆ ನಡುವೆ ಒಂದು ಕಲ್ಲುಬೆಂಚಿನ ಮೇಲೆ ನಮ್ಮನ್ನು ಕೂಡಿಸಿದರು. ಸುಮಾರು ೧೦ ಘಂಟೆಗೆ ನಾಟಕ ಉಪಕ್ರಮವಾಯಿತು. ಅದು ಕೊಚ್ಚೆ ತಮಿಳು ಮಾತಿನಲ್ಲಿ. ನಾವು ಆ ಜಾಗಕ್ಕೆ ಪ್ರವೇಶ ಮಾಡುವ ಕಡೆ ಒಂದು ರಥದ ಬಂಡಿ ಇತ್ತು. ಹನ್ನೆರಡು ಘಂಟೆಗೆ ನಮಗೆ ಸಾಕಾಗಿತ್ತು. ಹಿಂದಿರುಗೋಣವೆಂದು ಆ ಬಂಡಿಯ ಸಮೀಪಕ್ಕೆ ಬರುವ ವೇಳೆಗೆ ಅದರ ಮೇಲೆ ಶ್ರೀಕೃಷ್ಣ ಕುಳಿತಿದ್ದ. ಒಳ್ಳೆ ಕಪ್ಪಿನ ಮೇಲೆ ಕಪ್ಪು. ಅದರ ಮೇಲೆ ಮೀಸೆ ಕಪ್ಪು. ಕೈಯಲ್ಲಿ ಗದೆ. ಈ ಕೃಷ್ಣನು ನಮ್ಮನ್ನು ನೋಡಿದ ಕೂಡಲೆ ಎದ್ದು ನಿಂತು ತಮಿಳಿನಲ್ಲಿ "ಏನು ಸ್ವಾಮಿ, ನನ್ನನ್ನು ನೋಡದೆ ಹೋಗುತ್ತೀರಾ? ಇರಲಿ!" ಎಂದ. ಅವನ ಆರ್ಭಟಕ್ಕೆ ಮೂರ್ತಿ ಬೆಚ್ಚಿದರು. "ಇನ್ನು ಸ್ವಲ್ಪ ಹೊತ್ತು ಇದ್ದುಬಿಡೋಣ" ಎಂದರು. ಹಿಂದಿನ ಜಾಗಕ್ಕೇ ಬಂದೆವು.

ಈ ಅನುಭವವನ್ನು ಮೂರ್ತಿಗಳು ಆಗಾಗ ನೆನಸಿಕೊಂಡು ನಗುವರು.

‘ಪೆರಿಯಪುರಾಣಂ’

ಇನ್ನೊಂದು ಸಾರಿ ಕಂಟೋನ್ಮೆಂಟಿನಲ್ಲಿ ಯಾರೋ ಮೊದಲಿಯಾರರ ಅಥವಾ ಪಿಳ್ಳೆಯವರ ಮನೆಯಲ್ಲಿ ಆ ರಾತ್ರಿ “ಪೆರಿಯಪುರಾಣಂ” (ಅಥವಾ ತಿರುವಾಯ್ಮೊಳಿ) ಪ್ರವಚನ ನಡೆಯುವುದೆಂದೂ ಅದಕ್ಕೆ ನಾವು ಹೋಗಬೇಕೆಂದೂ ಆಹ್ವಾನ ಬಂದಿತ್ತು, ಮೂರ್ತಿಗಳೂ ನಾನೂ ಜಟಕಾದಲ್ಲಿ ಹೊರಟೆವು. ಈ ಸಂಜೆ ಕೊಂಚ ಕೊಂಚ ಮಳೆ. ಬೀದಿ ಯಾವುದೆಂದು ಗೊತ್ತು ಮಾಡಿಕೊಳ್ಳುವುದಕ್ಕೆ ಹೊತ್ತಾಯಿತು. ಮನೆಯನ್ನು ಪತ್ತೆ ಮಾಡುವುದಕ್ಕೆ ಇನ್ನಷ್ಟು ಹೊತ್ತಾಯಿತು. ಸುಮಾರು ಒಂಭತ್ತು ಘಂಟೆಗೆ ಆ ಜಾಗ ಸೇರಿದೆವು. ಅಲ್ಲಿ ಆಗ ಇದ್ದವರು ಹತ್ತು ಹನ್ನೆರಡು ಮಂದಿ ಮಾತ್ರ. ಯಾರೋ ಒಬ್ಬಾತ ಕುಳಿತು ಗ್ರಂಥವನ್ನು ನೋಡಿಕೊಂಡು ಪ್ರವಚನ ನಡಸುತ್ತಿದ್ದ. ನಾವು ಹೋದ ಅರ್ಧ ಘಂಟೆಯಾದ ಮೇಲೆ ಬಿಸಿ ಬಿಸಿ ಕಡಲೆ ಗುಗ್ಗರಿಯನ್ನು ಹಂಚಿದರು. ನಾವು ಅಂದು ಪಟ್ಟಿದ್ದ ಪ್ರಯಾಸಕ್ಕೆ ಅದೇ ಪ್ರತಿಫಲವೆಂದು ನಾನು ಉಸುರಿದೆ. ಆ ಪ್ರಸಾದವನ್ನು ನಾವು ತಿನ್ನಲೂ ಇಲ್ಲ, ಮಡಿಯ ಅವಾಂತರ ನಮ್ಮನ್ನು ಬಾಧಿಸುತ್ತಿತ್ತು. ನನ್ನ ಮಾತನ್ನು ಮೂರ್ತಿಗಳು ಕೇಳಿ,

“ಹಾಗಂದ್ರೇನ್ರಿ? ನಮಗೆ ಈ ಜನದ ಸಮಾಚಾರ ತಿಳಿಯಿತಲ್ಲ? ಇನ್ನು ಹೇಗೆ ಜನರನ್ನು ತಿಳಿದುಕೊಳ್ಳುವುದು?”

***

ಚಾಮರಾಜಪೇಟೆಯಲ್ಲಿ ನರಸಿಂಹಮೂರ್ತಿಗಳ ಮನೆಯ ಎದುರುಗಡೆ ಹತ್ತಿರದ ಮನೆಯಲ್ಲಿ ನಾನು ವಾಸವಾಗಿದ್ದೆ. ಆಗ ದಿನಾಗಲೂ, ಮಿಸುಕಿದರೆ ಅವರ ಮನೆಗೆ ಹೋಗುವುದು ವಾಡಿಕೆಯಾಯಿತು. ಹಾಗೆ ಹೋದಾಗ ಅವರ ಅಜ್ಜಿ ಗಿರಿಯಮ್ಮನವರು ಮನೆಯಲ್ಲಿಲ್ಲದಿದ್ದಾಗ ನಾನು ಸಮಯ ನೋಡಿ ಉಗ್ರಾಣಕ್ಕೂ ಅಡಿಗೆಮನೆಗೂ ಹೋಗಿ ಅಲ್ಲಿ ಪಾತ್ರೆಗಳಲ್ಲಿರುತ್ತಿದ್ದ ಒಣಕೊಬರಿ, ಬೆಲ್ಲ, ಹಸಿಕೊಬರಿ, ಸಕ್ಕರೆ, ಅವಲಕ್ಕಿ, ಅರಳು ವಗೈರೆ ಪದಾರ್ಥಗಳನ್ನು ಸಮಯೋಚಿತವಾಗಿ ಸೇವಿಸುತ್ತಿದ್ದದ್ದುಂಟು. ಒಂದು ಸಾರಿ ನಾನು ಉಗ್ರಾಣದ ಮೇಲೆ ಧಾಳಿ ಮಾಡುತ್ತಿದ್ದಾಗ ಗಿರಿಯಮ್ಮನವರು ಪುರಾಣಕ್ಕೆ ಹೋಗಿದ್ದವರು ಮನೆಗೆ ವಾಪಸ್ ಬಂದರು. ಮೂರ್ತಿಗಳು,

“ಗಿರಿ, ಇವರು ನೋಡು, ನೀನು ಮನೆಯಲ್ಲಿಲ್ಲದಿದ್ದಾಗ ಅಡಿಗೆಮನೆಗೆ ಹೋಗಿ ಕಲ್ಲು ಮರಿಗೆಗಳನ್ನೆಲ್ಲ ಮುಟ್ಟುತ್ತಾರೆ.”

ಎಂದು ದೂರು ಹೇಳಿದರು. ಆಕೆ “ಹೋಗಲೇಳು–ಹುಡುಗ. ಅಲ್ಲೇನಿದೆ, ಕೊಬರಿ ಬೆಲ್ಲ ಅವಲಕ್ಕಿ, ಮುಸುರೆ ಪದಾರ್ಥ ಏನೂ ಇಲ್ಲ” ಎಂದರು. ಮೂರ್ತಿಗಳು “ನಾನು ಬಂದರೆ ಬೇಡವೆನ್ನುತ್ತಿ?” ಎಂದರು.

ಗಿ: “ನೀನು ಆಚಾರ ಕಡಮೆ. ಅವರನ್ನ ನೋಡು–ವಿಭೂತಿ ಇಟ್ಟುಕೊಳ್ಳುತ್ತಾರೆ. ಮಂತ್ರ ಹೇಳುತ್ತಾರೆ. ಅವರಿಗೆ ಆಚಾರ ಇದೆ; ನಿನಗೆ ಅದಿಲ್ಲ.”

ನಾವಿಬ್ಬರೂ ಹೊಟ್ಟೆ ಬಿರಿಯ ನಕ್ಕೆವು.

ಪುರಾಣ ಸ್ವಾರಸ್ಯ

ಇನ್ನೊಂದು ದಿನ ಗಿರಿಯಮ್ಮನವರು ಪುರಾಣ ಮುಗಿಸಿಕೊಂಡಿ ಸಂಜೆ ಮನೆಗೆ ಬಂದರು. ಮೂರ್ತಿಗಳು ಕೇಳಿದರು:

ಮೂ: "ಏನು ಗಿರಿ, ಈ ಹೊತ್ತು ಏನು ಕಥೆ?"

ಗಿ: "ಆಂಜನೇಯದೇವರು ಲಂಕಾಪಟ್ಟಣದಲ್ಲಿ ರಾವಣನನ್ನ ಮೂದಲಿಸಿದರಲ್ಲ–ಆ ಕಥೆ."

ಮೂ: "ಅದೇನು ಕಥೆ?"

ಗಿ: "ಏನೋ ಮೂರ್ತಿ–ಇದು ತಿಳಿಯದೇನೊ ನಿನಗೆ? ಮುಖ್ಯಪ್ರಾಣ ದೇವರು ಬಾಲ ಸುತ್ತಿ, ಸುರುಳಿ ಸುತ್ತಿ, ಸುತ್ತೀ ಸುತ್ತೀ ಎತ್ತರವಾಗಿ ಬೆಳೆದು ರಾವಣಾಸುರನ ಸಿಂಹಾಸನಕ್ಕಿಂತ ಮೂರು ಬಾರು ಎತ್ತರವಾಗಿ ತಮ್ಮ ಬಾಲದ ಸಿಂಹಾಸನದ ಮೇಲೆ ಕುಳಿತುಕೊಳ್ಳಲಿಲ್ಲವೇನೊ?"

ಮೂ: "ಆ ಆ. ಹೌದು ಹೌದು."

ಗಿ: "ಆಗ ರಾವಣ ಕೇಳಿದ: ನೀನು ಯಾವ ಕೋತಿಯೊ?" –ಅಂತ. ಆಂಜನೇಯ ದೇವರು 'ನಾನು ಯಾರೆ? ನಾನು ನಿನ್ನನ್ನ ಧ್ವಂಸ ಮಾಡುವುದಕ್ಕೆ ಬಂದಿರುವವನು, ನೀನು ಯಾರು?' ಎಂದರು. ಅದಕ್ಕೆ ರಾವಣ ಹೇಳಿದ: 'ನಾನು ದಶಕಂಠ, ಎಲ್ಲ ದಿಕ್ಪಾಲಕರನ್ನೂ ಗೆದ್ದಿದ್ದೇನೆ' –ಅಂತ. ಆಗ ಪ್ರಾಣದೇವರು 'ಓಹೋ–ನೀನೇಯೊ ಆ ಹತ್ತುತಲೆಯ ಹುಳು? ನಮ್ಮ ಕಿಷ್ಕಿಂಧೆಯ ರಾಜ ವಾಲಿ ನಿನ್ನನ್ನೇನೊ ಕಂಕುಳಲ್ಲಿ ಸಿಕ್ಕಿಸಿಕೊಂಡು ಇರುಕಿಸಿದ್ದು? ನೀನೇಯೋ ಆಗ ಕೊಂಯ್ ಕೊಂಯ್ ಗುಟ್ಟಿದ್ದು?'... ನೋಡಿದಿಯಾ ಮೂರ್ತಿ ಹೇಗೆ ಹೇಳಿದರು ಮುಖ್ಯಪ್ರಾಣದೇವರು ರಾವಣನಿಗೆ ಜವಾಬನ್ನ?"

ಸರಳ ಶ್ರದ್ಧೆ

ಮೂರ್ತಿಗಳು ಮೊದಲು ಮುಸಿಮುಸಿ ನಗುತ್ತಿದ್ದವರು ಆಮೇಲೆ ಗಟ್ಟಿಯಾಗಿ ನಗಲಾರಂಭಿಸಿದರು. ಆದರೂ ಅಜ್ಜಿಯಲ್ಲಿ ನಿರತಿಶಯವಾದ ಪ್ರೇಮ. ಮೂರ್ತಿಗಳಿಗೆ ಚಿಕ್ಕಂದಿನಲ್ಲಿಯೇ ತಾಯಿ ತೀರಿಕೊಂಡಿದ್ದರು. ಅವರನ್ನೂ ಬೆಳಸಿ ಸಲಹುತ್ತಿದ್ದವರು ಅಜ್ಜಿ ಗಿರಿಯಮ್ಮನವರು. ಆಕೆಯ ಮನಸ್ಸಿನ ನೈಜವಾದ ಸರಳತೆಯನ್ನೂ ಪುರಾಣ ಶ್ರದ್ಧೆಯನ್ನೂ ನೋಡಿ ಮೂರ್ತಿಗಳಿಗೆ ತುಂಬ ಗೌರವ. ಆ ಸರಳ ಶ್ರದ್ಧೆಯನ್ನು ನನಗೆ ತೋರಿಸಬೇಕೆಂಬುದು ಅವರ ತಾತ್ಪರ್ಯ.

ಆ ತೆರೆದ ಸರಳ ಶ್ರದ್ಧೆ ಅತ್ಯಂತ ಪೂಜ್ಯವಾದದ್ದು. ಅದೇ ಶರಣಾಗತಿ. ಆ ಸರಳ ಶ್ರದ್ಧೆಯೇ ಎಲ್ಲ ಮಹಾಕಾರ್ಯಕ್ಕೂ ಮೂಲ. ನಮ್ಮ ಇಂದಿನ ವೈಜ್ಞಾನಿಕ ಚಮತ್ಕಾರದ ಬುದ್ಧಿವೈಪರೀತ್ಯದಿಂದ ಲೋಕಜೀವನಕ್ಕಾಗುತ್ತಿರುವ ಹಾನಿ ಇಳಿಯಬೇಕಾದರೆ ಈ ಸ್ವತಂತ್ರ ಬುದ್ಧಿಪ್ರವೃತ್ತಿಯ ಜೊತೆಗೆ ಅಂಥ ಸರಳ ಶ್ರದ್ಧೆ ಜೊತೆಗೂಡಬೇಕು.

***

ನರಸಿಂಹಮೂರ್ತಿಗಳ ಸಾಹಿತ್ಯಪ್ರೇಮವನ್ನು ಕುರಿತು ಹಿಂದೆ ಹೇಳಿದ್ದೇನೆ. ಅದರ ಸಂಬಂಧದಲ್ಲಿ ಒಂದೆರಡು ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ.

ನಾವು ಕೆಲವರು ಒಂದು "ಬುಕ್ ಕ್ಲಬ್" ಎಂಬ ಸಂಸ್ಥೆಯನ್ನು ಮಾಡಿಕೊಂಡಿದ್ದೆವು. ಬಾಲಸುಂದರಂ ಅಯ್ಯರ್ ಅದಕ್ಕೆ ಅಧ್ಯಕ್ಷರಾಗಿದ್ದರು. ಎಂ.ಜಿ. ವರದಾಚಾರ್, ಕುಣ್ಣಿಕಣ್ಣನ್, ಎಂ. ವೆಂಕಟನಾರಣಪ್ಪ ಮೊದಲಾದ ನಾವು ಆ ಕ್ಲಬ್ಬಿನ ಮೆಂಬರುಗಳಾಗಿದ್ದೆವು. ಅದರ ಉದ್ದೇಶವೇನೆಂದರೆ: ಪ್ರತಿಯೊಬ್ಬರೂ ತಿಂಗಳಿಗೆ ಒಂದೊಂದು ಅಥವಾ ಎರಡೆರಡು ರೂಪಾಯಿ ಚಂದಾ ಕೊಡತಕ್ಕದ್ದು. ಆ ಹಣದಿಂದ ಯಾವುದಾದರೊಂದು ಒಳ್ಳೆ ಹೊಸ ಗ್ರಂಥವನ್ನು ತರಿಸತಕ್ಕದ್ದು. ಆ ಗ್ರಂಥವನ್ನು ನಮ್ಮ ಪೈಕಿ ಯಾರಾದರೊಬ್ಬರು ಚೆನ್ನಾಗಿ ವ್ಯಾಸಂಗ ಮಾಡಿ ಅದರ ಸಾರಾಂಶವನ್ನು ಉಪನ್ಯಾಸರೂಪದಲ್ಲಿ ಬರೆಯತಕ್ಕದ್ದು. ತಿಂಗಳಿಗೊಂದು ದಿನ ಸದಸ್ಯರೆಲ್ಲ ಸೇರಿದಾಗ ಆ ಪ್ರಬಂಧವನ್ನು ಓದತಕ್ಕದ್ದು. ಇದರಿಂದ ಸಮಸ್ತ ಸದಸ್ಯರಿಗೂ ಒಂದು ಹೊಸ ಗ್ರಂಥದ

ಪರಿಚಯವಾಗುತ್ತದೆ. ಅನಂತರ ಆ ಗ್ರಂಥವನ್ನು ಕ್ಲಬ್ಬಿನ ಭಂಡಾರದಲ್ಲಿರಿಸಿದಲ್ಲಿ ಸದಸ್ಯರು ಯಾರು ಬೇಕಾದರೂ ಅದನ್ನು ತೆಗೆದುಕೊಂಡು ಹೋಗಿ ಓದಿ ಹಿಂದಿರುಗಿಸಬಹುದು.

ಈ ಸಂಸ್ಥೆ ಒಂದೆರಡು ವರ್ಷಕಾಲ ನಡೆಯಿತೆಂದು ನನ್ನ ಜ್ಞಾಪಕ. ಅದು ಹೇಗೆ ನಿಂತುಹೋಯಿತೋ ಹೇಳಲಾರೆ. ಇಂಥ ಸಂಸ್ಥೆಗಳಿಗೆ ಜನ ಮೊದಮೊದಲು ಉತ್ಸಾಹದಿಂದ ಸೇರುತ್ತಾರೆ. ಕೆಲವರು ಜಂಭಕ್ಕಾಗಿ ಸೇರುತ್ತಾರೆ; ಕೆಲವರು ದಾಕ್ಷಿಣ್ಯಕ್ಕಾಗಿ ಸೇರುತ್ತಾರೆ. ಜಂಭಗಾರರಲ್ಲಿಯೂ ದಾಕ್ಷಿಣ್ಯಗಾರರಲ್ಲಿಯೂ ಒಂದೆರಡು ತಿಂಗಳು ಕಳೆದ ಮೇಲೆ ಉತ್ಸಾಹ ಕುಗ್ಗುತ್ತದೆ. ಚಂದಾ ಹಣ ಬಾಕಿ ಬೀಳುತ್ತದೆ. ಹೊಸ ಪುಸ್ತಕ ಬರಲಿಲ್ಲವೆಂದು ಗೊಣಗಾಟ ಪ್ರಾರಂಭವಾಗುತ್ತದೆ. ಪ್ರಬಂಧಲೇಖಕರ ವಿಷಯದಲ್ಲಿ ಆಕ್ಷೇಪಣೆ ಹೊರಡುತ್ತದೆ. ಒಂದೆರಡು ವಾರಗಳಲ್ಲಿ ಸಂಸ್ಥೆ ತಣ್ಣಗಾಗುತ್ತದೆ.

‘ಬಿ. ಸಿ. ಸಿ.’

ಇಷ್ಟು ಸುಲಭವಾಗಿ ಮುರಿದುಹೋಗತಕ್ಕದ್ದೆ ನಮ್ಮ ಉತ್ಸಾಹ? ಅಲ್ಲ, ಖಂಡಿತವಾಗಿ ಅಲ್ಲ! ಮತ್ತೊಂದು ಪ್ರಾರಂಭ ಮಾಡಿದೆವು. ಅದಕ್ಕೆ ‘ಬಿ.ಸಿ.ಸಿ.’ ಎಂದು ತಮಾಷೆಯ ಹೆಸರು ಕೊಟ್ಟರು. ಹಾಗೆಂದರೆ ‘ಬೆಂಗಳೂರು ಸಿಟಿಜನ್ಸ್ ಕ್ಲಬ್’ ಎಂದಾದರೂ ಆಗಬಹುದು, ‘ಕ್ರ್ಯಾಕ್ಸ್ ಕ್ಲಬ್’ ಎಂದಾದರೂ ಆಗಬಹುದು. ಈ ಎರಡನೆಯ ಅರ್ಥವೇ ನಮ್ಮ ಮನಸ್ಸಿನಲ್ಲಿ ಇದ್ದದ್ದು. ‘ಕ್ರ್ಯಾಕ್’ ಎಂದರೆ ಐಲ್‌ಪೈಲು.

ಈ ಸಂಸ್ಥೆಯ ಕಾರ್ಯಕ್ರಮ ಹೇಗೆಂದರೆ: ನಮ್ಮಲ್ಲಿ ಒಬ್ಬರನ್ನು ಒಂದು ಗೊತ್ತಾದ ವಿಷಯವನ್ನು ಕುರಿತ ಉಪನ್ಯಾಸ ಮಾಡುವಂತೆ ಒಪ್ಪಿಸತಕ್ಕದ್ದು. ಉಪನ್ಯಾಸದ ದಿವಸ ಸದಸ್ಯರೆಲ್ಲರೂ ಭೋಜನಕ್ಕೆ ಸೇರತಕ್ಕದ್ದು. ಮೊದಲು ಉಪನ್ಯಾಸ, ಅದರ ಮೇಲೆ ಚರ್ಚೆ. ಆಮೇಲೆ ಭೋಜನ. ಹೀಗೆ ತಿಂಗಳಿಗೆ ಒಂದಾದರೂ ನಡೆಯಬೇಕಾದದ್ದು.

ಮೊದಲ ಸಭೆ

ಇದರಂತೆ ನಾವು ಸೇರಿದ ಮೊದಲನೆಯ ಸಭೆಯಲ್ಲಿಯೇ ನಿಯಮ ಕೊಂಚ ವ್ಯತ್ಯಾಸವಾಯಿತು. ಭೋಜನ ಸಾಮಗ್ರಿಗಳನ್ನು ಸಿದ್ಧಪಡಿಸಿ ತರಬೇಕೆಂದು ಅಪ್ಪಣ್ಣನವರನ್ನು ಕೇಳಿಕೊಂಡಿದ್ದೆವು. ಉಪನ್ಯಾಸದ ಸ್ಥಳ ಐರಿಷ್ ಪ್ರೆಸ್ಸಿನ ಕಟ್ಟಡ. ಅದು ಸಿದ್ದೀಕಟ್ಟೆಯಲ್ಲಿರುವ ಗುಂಡೋಪಂತರ ಮನೆ. ಅಲ್ಲಿ ಒಂದು ದೊಡ್ಡ ಕೋಣೆಯಲ್ಲಿ ಒಂದು ಪಕ್ಕದಲ್ಲಿ ಜಮಖಾನೆ ಹಾಸಿ ಹೂವು ಗಂಧ ಇಟ್ಟು ಉಪನ್ಯಾಸದ ಏರ್ಪಾಡು. ಇನ್ನೊಂದು ಪಕ್ಕದಲ್ಲಿ ಭೋಜನದ ಏರ್ಪಾಡು. ಭೋಜನ ಸಾಮಗ್ರಿಗಳು ಬಂದು ಘಮಘಮಾಯಿಸುತ್ತಿದ್ದುವು. ಅಂದಿನ ಉಪನ್ಯಾಸಕರ್ತರು ವರದಾಚಾರ್ಯರು. ಇವರು ಸೊಗಸಾದ ಮಾತುಗಾರರು. ಅವರು ಕೋಣೆಯೊಳಕ್ಕೆ ಕಾಲಿಡುತ್ತಲೇ ಒಂದೆರಡು ಸಲ ಗಟ್ಟಿಯಾಗಿ ಉಸಿರೆಳೆದರು. ಯಾರೋ ಒಬ್ಬರು ಹೇಳಿದರು:

"ಉಪನ್ಯಾಸ ನಡೆದ ಮೇಲೆ ಊಟ"

ವ: "ಎಲ್ಲಾದರೂ ಉಂಟೆ? ಅನ್ನ ಪರಬ್ರಹ್ಮ ಸ್ವರೂಪ. ಅದಕ್ಕೆ ಅವಮಾನ ಮಾಡುತ್ತಾರೆಯೆ? ಉಪನ್ಯಾಸ ಎಲ್ಲಿ ಹೋಗುತ್ತದೆ? ಮೊದಲು ಊಟವಾಗಿಬಿಡಲಿ."

ಇದು ಎಲ್ಲರಿಗೂ ಇಷ್ಟವಾದ ವಾದವೇ. ಪುಷ್ಕಳವಾಗಿ ಭೋಜನವಾಯಿತು. ಅನಂತರ ಹದಿನೈದು ನಿಮಿಷ ವರದಾಚಾರ್ಯರು ವಿನೋದವಾಗಿ ಮಾತನಾಡಿ ಉಪನ್ಯಾಸದ 'ಶಾಸ್ತ್ರ' ಮಾಡಿ ಮುಗಿಸಿದರು. ಅದು ಇಷ್ಟಕ್ಕೂ ಪ್ರಾರಂಭೋತ್ಸವ ತಾನೆ? ಮುಂದಿನ ಸಲ ಪರಿಷ್ಕಾರವಾಗಿ ಮಾಡೋಣ–ಎಂದುಕೊಂಡು ಹಿಂದಿರುಗಿದೆವು. ರಾತ್ರಿ ೧೦ ಘಂಟೆಯಾಗಿತ್ತು. ಎಲ್ಲರಿಗೂ ನಿದ್ರೆಯ ಮಂಪರ.

ಎರಡನೆಯ ಅಧಿವೇಶನ

ಅಲ್ಲಿಂದ ಮುಂದಿನ ತಿಂಗಳ ಕೂಟ. ಅಂದು ನರಸಿಂಹಮೂರ್ತಿಗಳ ಉಪನ್ಯಾಸ. ಅವರದು Grotius, Father of International Law (ದೇಶ ವಿದೇಶ ಸಂಬಂಧ ಕಾನೂನಿನ ಮೂಲ ಪುರುಷ–ಗ್ರೋಷಸ್)–ಇದು ವಿಷಯ. ಆಹೊತ್ತೂ ಅಪ್ಪಣ್ಣನವರದೇ ಸರಬರಾಯಿ.

ಆ ದಿನದ ವಾದ ಇನ್ನೊಂದು ರೀತಿ: "ಊಟವೆಂಬುದು ಜುಜುಬಿ ವಿಚಾರ. ಉಪನ್ಯಾಸ ಘನವಿಚಾರ. ಮೊದಲು ಜುಜುಬಿ ವಿಚಾರವನ್ನು ಮುಗಿಸಿದರೆ ಒಂದೇ ಮನಸ್ಸಿನಿಂದ ಘನವಿಚಾರಕ್ಕೆ ಕೂಡಬಹುದು." ಸಭಿಕರೆಲ್ಲ ಏಕಮುಖದಿಂದ ಇದನ್ನು ಅಂಗೀಕರಿಸಿದರು. ಅಂದು ಈರುಳ್ಳಿ ಬದನೆಕಾಯಿ ಇತ್ಯಾದಿ ತರಕಾರಿಗಳ ಹುಳಿ. ಅಗಲಗಲವಾದ ಹಪ್ಪಳ, ಬಾಳೆ ದಿಂಡಿನ ಅರಳು ಸಂಡಿಗೆ, ಕೀರು, ಚಿರೋಟಿ, ಆಂಬೊಡೆ ವಗೈರೆಗಳೆಲ್ಲ ಇದ್ದವು. ಭೋಜನಾನಂತರ ತಾಂಬೂಲಚರ್ವಣಕ್ಕೆ ಕುಳಿತೆವು, ಘಂಟೆ ೧೦ರ ಸುಮಾರಿಗೆ ಬಂದಿತ್ತು. ಮೂರ್ತಿಗಳು ಪ್ರಬಂಧವನ್ನೋದತಕ್ಕದ್ದೆಂದು ಕೇಳಿಕೊಂಡದ್ದಾಯಿತು. ಅವರು ಎರಡು ಹಾಳೆ ತಿರುಗಿಸುವಷ್ಟರಲ್ಲಿ ಅಲ್ಲಿದ್ದ ಹದಿನೈದು ಮಂದಿಯಲ್ಲಿ ಐದು ಜನ ರೆಪ್ಪೆ ಮುಚ್ಚಿದ್ದರು. ಇನ್ನೈದು ಜನರ ಗೊರಕೆ ಕೇಳಿಸುತ್ತಿತ್ತು. ವರದಾಚಾರ್ಯರು, ಭೀಮರಾವ್, ನಾನು–ಈ ಮೂರು ನಾಲ್ಕು ಮಂದಿ ಮಾತ್ರ ಮನಸ್ಸು ಗಟ್ಟಿಮಾಡಿ ಕೊಂಡು ರೆಪ್ಪೆ ಬಿಟ್ಟು ಕುಳಿತಿದ್ದೆವು. ಇನ್ನೈದು ನಿಮಿಷ ಕಳೆದ ಮೇಲೆ ವರದಾಚಾರ್ಯರು ಹೇಳಿದರು:

ವ: We shall take it as read."

ಕೃಷ್ಣಯ್ಯರ್: We will print it in the 'Karnataka.' We may read it afterwards."

ವಿದ್ವತ್ತಿಗೆ ಪ್ರತಿಫಲ

ಕೆಲವು ವಾರಗಳಾದ ಮೇಲೆ ಆ ಉಪನ್ಯಾಸ ಪತ್ರಿಕೆಯಲ್ಲಿ ಅಚ್ಚಾಯಿತು. ಅದನ್ನು ಓದಿದ ಒಬ್ಬ ದೊಡ್ಡ ಮನುಷ್ಯರು –ಮೂರ್ತಿಗಳವರಲ್ಲಿ ಸಲಿಗೆಯಿಂದ ಮಾತನಾಡುವವರು, ಅವರು ಹೇಳಿದರು:

ಏನಪ್ಪಾ ಮೂರ್ತಿ ನೀನು ಬರೆದಿರುವುದು–ಅದೇನೋ ಗ್ರೋಷಸ್ ಅಂತೀಯಲ್ಲ ಅಟ್ರೋಷಸ್ ಆಗಿದೆಯಲ್ಲ? ಅದೆಲ್ಲ ನಮ್ಮ ತಲೆಗೆ ಹಿಡಿಯುತ್ಯೆ"

ಇದು ವಿದ್ವತ್ತಿಗೆ ದೊರೆತ ಪ್ರತಿಫಲ.

ಇಂಥ ಸಂಸ್ಥೆಗಳನ್ನು ಇನ್ನೂ ಮೂರು ನಾಲ್ಕನ್ನು ನಾವು ಹುಟ್ಟುಹಾಕಿದೆವು. ಮೂರ್ತಿಗಳ ಉತ್ಸಾಹ ಹಾಸ್ಯಮಾಡಿ ನಗುತ್ತಾ ನಮ್ಮೊಡನೆ ದನಿಗೂಡಿಸುತ್ತಿತ್ತು.

ನನ್ನನ್ನು ಸಾರ್ವಜನಿಕ ಜೀವನಕ್ಕೆ ಒಡಂಬಡಿಸಿ ಸಾರ್ವಜನಿಕರ ನೀತಿಯನ್ನು ನನಗೆ ಪಾಠ ಕಲಿಸಿದ ಗುರುಗಳಲ್ಲಿ ಮೊದಲನೆಯವರೆಂದರೆ ನರಸಿಂಹಮೂರ್ತಿಗಳು. ಅವರ ಅನಂತರ ವಾಜಪೇಯಂ ವೆಂಕಟಸುಬ್ಬಯ್ಯನವರು.

ಮೂರ್ತಿಗಳು, ನಾನು ಯಾವ ಕಮಿಟಿಗೆ ಸೇರಿದವನು, ಯಾವ ಸಂಘದ ಸದಸ್ಯ, ಯಾವ ಸಾರ್ವಜನಿಕದಲ್ಲಿ ಮನಸ್ಸುಳ್ಳವನು ಎಂಬುದನ್ನು ಆಗಾಗ ವಿಚಾರಿಸುವವರು. ಮೀಟಿಂಗಿನ ಹೊತ್ತಿಗೆ ವೇಳೆತಪ್ಪದೆ ಹೋಗಬೇಕೆಂದು ಒತ್ತಾಯಪಡಿಸುತ್ತಿದ್ದರು. ಮೀಟಿಂಗಿಗೆ ಸಂಬಂಧಪಟ್ಟ ಎಲ್ಲ ಕಾಗದ ಪತ್ರಗಳನ್ನೂ ಜಾಗರೂಕವಾಗಿ ಮುಂಚೆಯೇ ಓದಿರಬೇಕೆಂದು ವಿಧಿಸುವರು. ಮಾತು ಕಥೆಯಲ್ಲಿ ವಿನಯ ಮರ್ಯಾದೆಗಳು ಹೇಗೆಂಬುದನ್ನು ತಿಳಿಸುವರು. ಮೀಟಿಂಗಿನ ವಿಷಯವನ್ನು ಕುರಿತು ಸಂಗ್ರಹವಾಗಿ ಚರ್ಚಿಸುವರು. ವಿಷಯದ ಪರವಾಗಿ ಹೇಳಬಹುದಾದದ್ದನ್ನೂ ವಿರುದ್ಧವಾಗಿ ಹೇಳಬಹುದಾದದ್ದನ್ನೂ ಸೂಕ್ಷ್ಮವಾಗಿ ಹೇಳಿ ನಿರ್ಣಯವನ್ನು ನನ್ನ ಸ್ವಂತ ವಿಚಾರಕ್ಕೆ ಬಿಡುವರು. "ಯಾವುದರಲ್ಲಿಯೂ ನೀತಿಯೊಂದುಂಟು. ದೊಡ್ಡ ದಾರಿ ಒಂದುಟು. ಸತ್ಯದಿಂದಲೂ ನೀತಿಯಿಂದಲೂ ಯಾವ ಸಂದರ್ಭದಲ್ಲಿಯೂ ಎಷ್ಟು ಮಾತ್ರವೂ ಸಡಿಲಗೊಳ್ಳಬಾರದು" ಎಂದು ಪದೇ ಪದೇ ಹೇಳುವರು. ಮತ್ತು ಆ ವಿಷಯಕ್ಕೆ ಸಂಬಂಧಪಟ್ಟಂತೆ ಈ ಗ್ರಂಥ ನೋಡು, ಈ ಪತ್ರಿಕೆಯನ್ನೊದು–ಎಂದು ಹೇಳಿ ಪಕ್ಷ

ಪ್ರತಿಪಕ್ಷಗಳೆರಡನ್ನೂ ವ್ಯಾಸಂಗ ಮಾಡಿಸುವರು. ಅವರ ಈ ಪ್ರಭಾವಕ್ಕೆ ಸಿಕ್ಕಿ ಬೆಳೆದವನು ನಾನು.

ಮೂರ್ತಿಗಳು ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಭಂಡಾರದ ಅಧಿಕಾರಿಯಾಗಿ ಮೈಸೂರಿಗೆ ಹೋಗುವವರೆಗೂ ಅವರೂ ನಾನೂ ದಿನಕ್ಕೆ ಒಂದು ಸಾರಿಯಾದರೂ ಕಲೆತು ಮಾತನಾಡದಿದ್ದ ದಿನವಿಲ್ಲ.

ಸಾರ್ವಜನಿಕ ಪ್ರಯತ್ನಗಳು

ಮೂರ್ತಿಗಳೂ ನಾನು ಸೇರಿ ಮಾಡಿದ ಸಾರ್ವಜನಿಕ ಪ್ರಯತ್ನಗಳು ಎಷ್ಟೆಂಬುದು ನೆನಪಿಲ್ಲ. ಅಂಥ ಪ್ರತಿಯೊಂದು ಪ್ರಯತ್ನದಲ್ಲಿಯೂ ಬಹುಶಃ ನಮ್ಮೊಡನೆ ಇರುತ್ತಿದ್ದವರು ಎಂ.ಜಿ. ವರದಾಚಾರ್ಯರು ಮತ್ತು ಕೆ.ಎಸ್. ಕೃಷ್ಣಯ್ಯರ್.

ಕೃಷ್ಣಯ್ಯರ್ ಅವರ ಐರಿಷ್ ಪ್ರೆಸ್ಸಿನಲ್ಲಿ ಕಟ್ಟಡಕ್ಕೆ ಅಂಟಿಕೊಂಡಂತೆ ಒಂದು ಸಣ್ಣ ಕೊಠಡಿ (ಹಾಲ್) ಇತ್ತು. ಅದು ಹೊರಬ್ಬಾಗಿ ಬೀದಿಯಿಂದ ಜನ ಬರಲು ಅನುಕೂಲಿಸುವಂತೆ ಇತ್ತು. ಅಲ್ಲಿ ನಾವು 'ಪಾಪ್ಯುಲರ್ ಎಜ್ಯುಕೇಷನ್ ಲೀಗ್' ಎಂಬ ಸಂಸ್ಥೆಯನ್ನಾರಂಭಿಸಿದೆವು. ಅದರಲ್ಲಿ ಒಂದು ವಾಚನಾಲಯ; ವಾರಕ್ಕೋ ಎರಡು ವಾರಕ್ಕೋ ಒಮ್ಮೆ ಉಪನ್ಯಾಸ. ಉಪನ್ಯಾಸವೆಂದರೆ ನಮಗೆ ಸುಲಭವಾಗಿ ದೊರೆಯುತ್ತಿದ್ದದ್ದು ವರದಾಚಾರ್ಯರ ವಾಗ್ವೈಖರಿ. ಅವರು ನಗುತ್ತ ಬರುವರು, ನಮ್ಮನ್ನೆಲ್ಲ ನಗಿಸುವರು. ಈ ಚಟುವಟಿಕೆ ಒಂದು ಆರು ತಿಂಗಳಕಾಲ ನಡೆಯಿತು.

ಇಂಥ ಮತ್ತೊಂದು ಚಟುವಟಿಕೆ 'ರಾಮಕೃಷ್ಣ ಸರ್ವಿಸ್ ಲೀಗ್'. ಇದು ಶ್ರೀರಾಮಕೃಷ್ಣ ಪರಮಹಂಸರ ಮೇಲಣ ಭಕ್ತಿಯ ಉದ್ರೇಕ. ಭಜನೆಯೂ ನಮ್ಮ ಕಾರ್ಯಕ್ರಮದಲ್ಲಿ ಸೇರಿತ್ತು. ನಮ್ಮ ಸಂಗಡಿಗರಲ್ಲೊಬ್ಬರಾದ ಅನಂತಪದ್ಮನಾಭಯ್ಯರ್ ಅವರದು ಇದಕ್ಕೆ ಹೆಚ್ಚು ಪ್ರೋತ್ಸಾಹ. "ಹೌದು ಅಂದರೆ, ಇದೆಲ್ಲ ಮಾಡಬೇಕು. ನಮ್ಮ ಜನಕ್ಕೆ ದೊಡ್ಡ ದೊಡ್ಡ ಐಡಿಯಲ್ಸ್ ಹೇಳಿ ಉತ್ಸಾಹ ಹೆಚ್ಚಿಸಬೇಕು"... ಎಲ್ಲ ಪಾಡೂಪಟ್ಟೆವು.

ಈ ಎಲ್ಲ ಪ್ರಯತ್ನಗಳಲ್ಲಿಯೂ ಮೂರ್ತಿಗಳದು ನಮಗೆ ಮುಖ್ಯ ಬೆಂಬಲ.

ಕಡೆಯದಾಗಿ ಮೂರ್ತಿಗಳಿಗಿದ್ದ ಸೆನ್ಸ್ ಆಫ್ ಹ್ಯೂಮರ್–ಹಾಸ್ಯಾಸ್ಪದವನ್ನು ಕಾಣುವ ಶಕ್ತಿ. ಇದು ಬಹು ತೀವ್ರವಾಗಿತ್ತು. ನಮ್ಮ ಎಲ್ಲ ಪ್ರಯತ್ನಗಳ ಸಾಧ್ಯಾಸಾಧ್ಯತೆಗಳನ್ನೂ ಅವರು ಚೆನ್ನಾಗಿ ಅಂತರಂಗದಲ್ಲಿ ಕಂಡುಕೊಂಡಿದ್ದರು. ಆದರೆ ನಮ್ಮ ಉತ್ಸಾಹವನ್ನು ಕೆಡಿಸಬಾರದೆಂದು ತಾವೂ ಉತ್ಸಾಹವನ್ನು ತೋರಿಸುತ್ತಿದ್ದರು.

ನಿತ್ಯಪುರಂದರದಾಸರು

ಇನ್ನು ಅವರ ಔದಾರ್ಯವೋ ಎಂದರೆ ಅವರ ಕೈಯಲ್ಲೆಲ್ಲ ಸಂದುಗಳೇ! ಹಿಡಿತವೇ ಇಲ್ಲ. ಸಂಬಳ ಆ ಕಾಲದ ದರ್ಜೆಗೆ ಭಾರಿಯದೆಂದು ಕಂಡರೂ ಅವರು ನಿತ್ಯಪುರಂದರದಾಸರು. "ಕೋಆಪರೇಟಿವ್ ಸೊಸೈಟಿಗಳೂ ಬ್ಯಾಂಕುಗಳೂ ಇಲ್ಲದೆ ನಮಗೆ ಸಾಲ ಎಲ್ಲಿ ಹುಟ್ಟಬೇಕು? ನಮ್ಮ ಮಾನ ಹೇಗೆ ಉಳಿಯಬೇಕು?" –ಎಂದು ಪದೇ ಪದೇ ಹೇಳುವರು.

ಅವರು ತೊಡುತ್ತಿದ್ದ ದಿರಸು ಹಳೆಯ ಹಳ್ಳಿ ಮೇಷ್ಟರದು. ಸುಕ್ಕುಸುಕ್ಕಾದ ಇಜಾರು, ಸುಕ್ಕುಸುಕ್ಕಾದ ಪಂಚೆ, ಸುಕ್ಕು ಸುಕ್ಕಾದ ಕೋಟು. ಅವರ ಕೋಟನ್ನಂತೂ ನಾನು ವರ್ಣಿಸಲಾರೆ. ಅವರೇ ನಗುವರು.

ಒಂದು ಸಂದೇಹ

ಒಂದು ದಿನ ಮೂರ್ತಿಗಳು ಬಚ್ಚಲುಮನೆಯ ಕಡೆ ಹೊರಡಲು ತಂಬಿಗೆಯಲ್ಲಿ ನೀರು ಎತ್ತಿ ಹಿಡಿಯುವಷ್ಟರಲ್ಲಿ ಅವರಿಗೆ ಒಂದು ಸಂದೇಹ ಹೊಳೆಯಿತು. ನನ್ನನ್ನು ಕೇಳಿದರು:

"ಏನ್ರೀ, ದ್ವೈತ ರೀತಿಯಲ್ಲಿ ಲೈಬ್ನಿಟ್ಸ್ ಹೇಳುದಕ್ಕೂ, ಪಾಸ್ಕಲ್ ಹೇಳುವುದಕ್ಕೂ ಏನು ವ್ಯತ್ಯಾಸ? ಎರಡೂ ಸಮಸಮಾನವಾಗಿ ಕಾಣುತ್ತದಲ್ಲ?"

ನಾನು: "ಈ ಪ್ರಶ್ನೆ ಈಗಲೆ ಫೈಸಲಾಗಬೇಕೊ ಅಥವಾ ನೀವು ಆ ಕೆಲಸ ಮುಗಿಸಿ ಕೊಂಡು ಬರುವವರೆಗೂ ಪುರಸತ್ತುಂಟೊ?"

ನಾನು ಹೀಗೆ ಹೇಳುವವರೆಗೆ ಸಂದರ್ಭದ ಸ್ವಭಾವ ಅವರಿಗೆ ಗೋಚರಿಸಿರಲಿಲ್ಲ. ನನ್ನ ಮಾತು ಕೇಳುತ್ತಲೇ ತಂಬಿಗೆಯನ್ನು ಅಲ್ಲಿಯೇ ನೆಲದ ಮೇಲೆ ಕುಕ್ಕಿ ನಗುವಿನಲ್ಲಿ ಎಲ್ಲವನ್ನೂ ಮರೆತುಬಿಟ್ಟರು.

ಹೀಗೆ ಪದೇ ಪದೇ ಆಗುತ್ತಿತ್ತು.

ಯಾವ ಪ್ರಶ್ನೆಯೇ ಆಗಲಿ, ಅದನ್ನು ಅವರು "ಇದಮಿತ್ಥಂ" ಎಂದು ನಿರ್ಣಯಿಸುತ್ತಿರಲಿಲ್ಲ. ಸಾಮಾನ್ಯವಾಗಿ ಅವರು "Much might be said on both sides" ಎಂದು ಅಡಿಸನ್ ಪ್ರಬಂಧಕಾರನು ತನ್ನ ಕಥಾನಾಯಕನ ಬಾಯಿಂದ ಹೇಳಿಸುವಂತೆ ಉತ್ತರಕೊಡುವರು. ಆಗ ನಾವು ಯಾರಾದರೂ "ಮೂರ್ತಿ, ಈಗ ನೀವು ಜಡ್ಜಿ ಆಗಿದ್ದಿದ್ದರೆ ಹೇಗೆ ತೀರ್ಮಾನಿಸುತ್ತಿದ್ದಿರಿ?" ಎಂದು ಕೇಳಿದರೆ "ಭಗವಂತ ನನ್ನನ್ನು ಆ ಸಂಕಟಕ್ಕೆ ಸಿಕ್ಕಿಸಲಿಲ್ಲ" ಎನ್ನುವರು. ನಿರ್ಣಯ ಮಾಡುವ ಜವಾಬ್ದಾರಿಗೆ ಅವರು ಸಿದ್ಧರಾಗಿರಲಿಲ್ಲ.

ಸ್ವಯಂಪಾಕ

ಮೂರ್ತಿಗಳಿಗೆ ಆಗಾಗ ತಾವು ಏಕಾಕಿಯಾಗಿರಬೇಕೆಂಬ ಯೋಚನೆ ಬರುತ್ತಿತ್ತು.

ವಿವಿಕ್ತಸೇವಿ ಲಘ್ವಾಶೀ

ಬೇರೆಯಾಗಿ, ಒಬ್ಬಂಟಿಯಾಗಿರುವುದು: ಊಟ ಹಗುರ ಮಾಡಿಕೊಳ್ಳುವುದು. ಈ ನಿಯಮವನ್ನು ತಾವು ಅನುಸರಿಸಬೇಕೆಂದು ಅವರ ಮನಸ್ಸು. ಇದಕ್ಕಾಗಿ ಆಗಾಗ ಸ್ವಯಂಪಾಕದ ಹುಚ್ಚು.

ಒಂದು ದಿನ ಶ್ರೀನಿವಾಸಶಾಸ್ತ್ರಿಗಳು ಮೈಸೂರಿಗೆ ಬಂದಿದ್ದಾಗ ಅವರೂ ನಾನೂ ಮೂರ್ತಿಗಳ ಮನೆಗೆ ಹೋದೆವು. ಶಾಸ್ತ್ರಿಗಳಿಗೆ ಮೂರ್ತಿಯವರಲ್ಲಿ ತುಂಬ ಗೌರವ, ಪ್ರೀತಿ. ನಾವು ಮನೆಯೊಳಕ್ಕೆ ಕಾಲಿಟ್ಟು ಆತನನ್ನು ನಡುಮನೆಯಲ್ಲಿ ಕಾಣದೆ ಆಗ ಆತ ಬಹುಶಃ ತನ್ನ ಕೋಣೆಯಲ್ಲಿ ಏಕಾಂತವಾಗಿ ಗ್ರಂಥವ್ಯಾಸಂಗದಲ್ಲಿರಬಹುದೆಂದು ಆ ಕೋಣೆಯ ಬಾಗಿಲನ್ನು ನೂಕಿದೆವು. ನಾವು ನೋಡಿದ್ದೇನು? ಮೂರ್ತಿಗಳು ಸ್ಟೌವ್ ಮುಂದೆ ಕುಳಿತು ಪಾತ್ರೆಯಲ್ಲಿ ಏನನ್ನೋ ಬೇಯಿಸುತ್ತ ಕೈಯಲ್ಲಿ ಆಲೂಗಡ್ಡೆಯನ್ನು ಹೆಚ್ಚುತ್ತಿದ್ದರು. ನಾವು ದಿಢೀರನೆ ಅವರಿಗೆ ಕಾಣಿಸಿದ ಕೂಡಲೆ ಅವರು ಗಾಬರಿಯಿಂದ ಎದ್ದು ನಿಂತು ನಮ್ಮನ್ನು ಸ್ವಾಗತಿಸಿದರು. ಆದರೆ ಆ ಅವಸರದಲ್ಲಿ ಅಲ್ಲಿದ್ದ ಪಾತ್ರೆಗೆ ಕೈಯೋ ಕಾಲೋ ತಗಲಿ ಅದು ಉರುಳಿತು. ನೀರು ಚೆಲ್ಲಿತು. ನಾನು ಕೇಳಿದೆ:

“ಮೂರ್ತಿ, ಇದೇನು ಅವಸ್ಥೆ? ಸ್ವಯಂಪಾಕದ ಹುಚ್ಚೇನು? ನಿಮ್ಮ ಕೈಯಲ್ಲಿ ಇದಾಗುತ್ತದೆಯೆ? ಅರ್ಧಬೆಂದ ಅನ್ನ ತಿಂದು ಕಾಯಿಲೆ ಮಲಗೀರಿ.”

ಅಷ್ಟರೊಳಗಾಗಿ ನನ್ನ ಮಾತನ್ನು ಕೇಳಿಸಿಕೊಂಡ ಮೂರ್ತಿಗಳ ಹೆಂಡತಿ ಶ್ರೀಮತಿ ನರಸಮ್ಮನವರು ಒಳಗಿನಿಂದ ನಾವಿದ್ದ ಕಡೆಗೆ ಬಂದು ನನ್ನನ್ನು ಕುರಿತು “ನೋಡೀಪ್ಪಾ ಇವರು ಮಾಡುವುದನ್ನ. ನಾನು ಎಷ್ಟು ಹೇಳಿದರೂ ಕೇಳುವುದಿಲ್ಲ. ಅದೇನೋ ನಿಯಮವಂತೆ ನಿಯಮ. ನಾನು ನಿಯಮದಿಂದ ಮಾಡಿದ ಅಡಿಗೆ ಅವರಿಗೆ ಬೇಡವಂತೆ. ನಾನು ಇನ್ನು ಯಾಕೆ ಇರುವುದು?”

ಹೀಗೆ ಅಸಮಾಧಾನದಿಂದ ನಿಷ್ಠುರದ ಮಾತನ್ನಾಡಿದರು. ಮೂರ್ತಿಗಳು ಮಹಾ ಕನಿಕರವಂತರು.

"ಹೋಗಲಿ, ಅದೆಲ್ಲ ತಪ್ಪಾಯಿತು ಬಿಡಿ" ಎಂದು ಕ್ಷಮೆ ಬೇಡಿದರು.

ಈಗ ಶ್ರೀಮತಿ ನರಸಮ್ಮನವರನ್ನು ಕುರಿತು ಹೇಳಬೇಕೆನಿಸುತ್ತದೆ. ಆಕೆ ಶ್ರೀಮಂತರ ಮಗಳು. ಆಕೆಯ ತಂದೆ ಪ್ರಸಿದ್ಧರಾಗಿದ್ದ ಗವರ್ನ್‌ಮೆಂಟ್ ಅಡ್ವೊಕೇಟ್ ಜನರಲ್ ಎಸ್. ನಾರಯಣರಾಯರು. 'ಭದ್ರಾಶಯ' ಅವರ ಮೆನೆ. ಹೀಗೆ ಐಶ್ವರ್ಯವಂತರ ಮನೆಯಲ್ಲಿ ಹುಟ್ಟಿ ಬೆಳೆದವರಾದರೂ ಶ್ರೀಮತಿ ನರಸಮ್ಮನವರು ಗರ್ವವಿಲ್ಲದವರು; ಮಹಾ ಆಚಾರನಿಷ್ಠರು. ಮಡಿಗಾಗಿಯೂ ಅಚಾರಕ್ಕಾಗಿಯೂ, ಭಗವತ್ಸೇವೆಗಾಗಿಯೂ ತಮ್ಮ ಜೀವಮಾನವನ್ನು ತೇಯ್ದರು. ಅಂಥ ಪತಿವ್ರತಾ ಶಿರೋಮಣಿಯನ್ನು ನೆನಸಿಕೊಳ್ಳುವುದೇ ಒಂದು ಪುಣ್ಯ.

ನೀತಿಗುಣ

ನಾವು ನಾಲ್ವರೈವರು ಸ್ನೇಹಿತರು ಆ ಕಾಲದಲ್ಲಿ ಶೇಷಾದ್ರಿ ಮೆಮೋರಿಯಲ್ ಕಟ್ಟಡದಲ್ಲಿದ್ದ ಸೆಂಚುರಿ ಕ್ಲಬ್ಬಿನಲ್ಲಿ ಸಂಜೆ ಸಂಜೆಯೂ ಸೇರುತ್ತಿದ್ದೆವು. ಕೊಂಚ ಉಪಾಹಾರ, ತುಂಬ ಹರಟೆ, ಚರ್ಚೆ–ಇದು ನಮ್ಮ ಕಾರ್ಯಕ್ರಮ.

ಒಂದು ಸಂಜೆ ಮೂರು ನಾಲ್ಕು ಮಂದಿ ಸ್ನೇಹಿತರು ನಮ್ಮ ಜೊತೆಗೆ ಸೇರಿದ್ದರು. ಅದೇ ಸಂಜೆ ಆರೂವರೆ ಘಂಟೆಗೆ ವೈ.ಎಂ.ಸಿ.ಎ. ಸಭಾಮಂದಿರದಲ್ಲಿ ಒಂದು ಉಪನ್ಯಾಸದ ಏರ್ಪಾಟಿತ್ತು. ಉಪನ್ಯಾಸ ಕೊಡತಕ್ಕವರು ಮದರಾಸಿನ ಒಬ್ಬ ಪ್ರಸಿದ್ಧಳಾದ ಐರೋಪ್ಯ ಮಹಿಳೆ. ನಾವು ಕ್ಲಬ್ಬಿನಿಂದ ಉಪನ್ಯಾಸದ ಹೊತ್ತಿಗೆ ಸರಿಯಾಗಿ ಅಲ್ಲಿಗೆ ಹೋಗತಕ್ಕದ್ದೆಂದು ಯೋಚನೆ ಮಾಡಿದೆವು. ತಿಂಡಿಯ ಸಂಭ್ರಮ ಮುಗಿದ ಕೂಡಲೆ ಇಬ್ಬರು ಸ್ನೇಹಿತರು ಅಲ್ಲಿಂದ ತಾವು ಬೇರೆಯಾಗಿ ಹೊರಡಲು ಅನುವಾಗಿ ನಿಂತರು. ಮೂರ್ತಿಗಳು ಅವರನ್ನು ಕೇಳಿದರು:

"ನೀವು ಬರುವುದಿಲ್ಲವೆ?"

ಆ ಇಬ್ಬರಲ್ಲೊಬ್ಬರು "ಯಾವ ಲೆಕ್ಚರು?" ಎಂದರು. ಮೂರ್ತಿಗಳು,

"ಅದು ಗೊತ್ತಿಲ್ಲವೇನ್ರಿ? ಮಿಸೆಸ್ ಎಕ್ಸ್ ವೈ ಜೆಡ್ ಅವರದು."

"ನೀವು ಹೋಗಿಬನ್ನಿ ಸಾರ್. ನಮಗೆ ಬೇರೆ ಕೆಲಸವಿದೆ."

"ನೀವೆಲ್ಲ ಬರಬೇಕು. ಕೋಆಪರೇಟ್ ಮಾಡಬೇಡವೆ ಇಂಥ ಒಳ್ಳೆಯ ವಿಷಯದಲ್ಲಿ?"

ಒಬ್ಬರು ಒಂದು ಚೇಷ್ಟೆಯ ಮಾತನ್ನಾಡಿದರು: "ಅವರೊಡನೆ ಕೋಆಪರೇಟ್ ಮಾಡುವುದಕ್ಕೆ ನಾನು ಯಾವಾಗಲೂ ಸಿದ್ಧ."

ಮೂರ್ತಿಗಳ ಮುಖ ಆ ಕ್ಷಣವೇ ಕಪ್ಪು ತಿರುಗಿತು. ಬೇರೆ ಕಡೆ ಮುಖ ಮಾಡಿದರು. ಆ ಇಬ್ಬರೊಡನೆ ಮಾತು ನಿಂತುಹೋಯಿತು. ಅವರು ಹೊರಟು ಹೋದ ಮೇಲೆ "ಅಂಥವರೊಡನೆ ಮಾತು ಬೆಳಸಬಾರದು" ಎಂದರು.

ಇಂಥದು ಅವರ ಸ್ವಭಾವ. ಅಶ್ಲೀಲದ ಸೂಚನೆಯನ್ನು ಕೂಡ ಅವರು ಸಹಿಸುತ್ತಿರಲಿಲ್ಲ.

ಸಾಹಿತ್ಯ ವಿಮರ್ಶೆ

ಒಂದು ಸಾರಿ ನಾನು ಸ್ವಿನ್‌ಬರ್ನ್ (Swinburne) ಕವಿಯ ವಾಗ್ಧೋರಣೆಯಿಂದ ಮೋಹಿತನಾಗಿದ್ದೆ. ಆ ಮೋಹದ ಹೊಸತಿನಲ್ಲಿ ಬಹುಶಃ ಎಲ್ಲ ಸ್ವಿನ್‌ಬರ್ನ್ ಕಾವ್ಯಗಳನ್ನೂ ಆತನ ಪತ್ರಗಳನ್ನೂ ಓದಿ ಆ ಉತ್ಸಾಹವನ್ನು ಮೂರ್ತಿಗಳಲ್ಲಿ ಹೇಳಿಕೊಂಡೆ, ಅವರು ಕೊಂಚ ನಕ್ಕು,

"ಹೌದು ಹೌದು, ಜುವೆನೈಲ್ ಮೈಂಡ್ಸ್‌ಗೆ (ಅಪ್ರಬುದ್ಧರ ಮನಸ್ಸುಗಳಿಗೆ) ಅದು ಬಹಳ ಮೋಹಕವಾದದ್ದು"

ಎಂದು ಟೀಕೆ ಮಾಡಿದರು. ನನಗೆ ತುಂಬಕೋಪ ಬಂತು. ಏನೋ ಬಿರುಸಾಗಿ ಜವಾಬು ಹೇಳಿದೆ. ಮೂರ್ತಿಗಳು,

"ಹೌದು ಹೌದು, ಇದೆಲ್ಲ ಸ್ವಿನ್‌ಬರ್ನ್ ಆವೇಶ"

ಎಂದರು. ಆಮೇಲೆ ೨೦-೨೫ ವರ್ಷ ಕಳೆಯಿತು. ಆಗ ನಾನು ಎಡ್ಮಂಡ್ ಗಾಸ್ (Edmund Gosse) ಎಂಬ ಪ್ರಸಿದ್ಧ ಕಾವ್ಯವಿಮರ್ಶಕನು ಸ್ವಿನ್‌ಬರ್ನ್ ಕವಿಯನ್ನು ಕುರಿತು ಬರೆದಿದ್ದ ಪ್ರಬಂಧವನ್ನು ಓದಿದೆ. ಅದರಲ್ಲಿ ಆತ ಮೂರ್ತಿಗಳು ಕೊಟ್ಟ ಅಭಿಪ್ರಾಯವನ್ನೇ ಕೊಟ್ಟಿದ್ದಾನೆ. ಈ ಸಂಗತಿಯನ್ನು ನಾನು ಮೂರ್ತಿಗಳಿಗೆ ಹೇಳಿ ಅವರ ವಿಮರ್ಶನಸೂಕ್ಷ್ಮತೆಯನ್ನು ಶ್ಲಾಘನೆ ಮಾಡಿದೆ. ಆಗ ಅವರು "ನಿಮ್ಮ ಸ್ವಂತ ಅನುಭವವೇನು?" ಎಂದು ಕೇಳಿದರು. ನಾನು ಹೇಳಿದೆ: "ಈಗ ನಾನು ಆಗಿಗಿಂತ ಒಂದು ಹಾಗ ಶತಮಾನದಷ್ಟು ಕಾಲ ಬೆಳೆದಿದ್ದೇನೆ. ನನ್ನ ರುಚಿ ಈಗ ಬೇರೆಯಾಗಿದೆ. ಸ್ವಿನ್‌ಬರ್ನ್ ಕವಿಯಲ್ಲಿ ಭಾವಪುಷ್ಟಿಗಿಂತ ಶಬ್ದಾಡಂಬರ ಅತಿಯಾಗಿದೆ. ಎಷ್ಟೋ ಕಡೆ ಈಗ ನನಗೆ ಕಾಣುವುದು ಶಬ್ದದ ಜರ್ಬು, ಪ್ರಾಸಗಳ ಜರ್ಬು, ಅಲಂಕಾರದ ಜರ್ಬು; ತಿರುಳು ಅಷ್ಟಾಗಿ ಮೇಲಕ್ಕೆ ಕಾಣುತ್ತಿಲ್ಲ. ಇಂಗ್ಲಿಷ್ ಭಾಷೆಯ ಶಬ್ದ ಸಂಪತ್ತನ್ನೂ ಅದರ ವಿವಿಧತೆಯನ್ನೂ ಅನುಭವಿಸಬೇಕೆಂದರೆ ಸ್ವಿನ್‌ಬರ್ನ್ ಕವಿ. ಅದೂ ಒಂದು ಬಗೆಯ ಸೊಗಸೆನ್ನಲು ಸಂಶಯವಿಲ್ಲ, ಆದರೆ ಆ ಸೊಗಸು ಒಂದು ಮಟ್ಟದ್ದು, ಈಗ ನನಗೆ ಅದು ಸಾಲದು."

ಇದನ್ನು ಕೇಳಿ ಮೂರ್ತಿಗಳು "ಹೀಗೆ ವ್ಯತ್ಯಾಸವಾಗುತ್ತದೆಂದು ನಾನು ಆ ಹೊತ್ತೇ ಊಹೆ ಮಾಡಿದ್ದೆ" ಎಂದರು.

ಪ್ರಣತಿ

ನರಸಿಂಹಮೂರ್ತಿಗಳು ನನ್ನ ಬಡ ಜೀವನದಲ್ಲಿ ಬೆಳಕು ತೋರಿಸಿದ ಮಹಾತ್ಮರು. ಇಂಗ್ಲಿಷ್ ಸಾಹಿತ್ಯದಲ್ಲಿ, ಚರಿತ್ರೆಯಲ್ಲಿ, ಅರ್ಥಶಾಸ್ತ್ರದಲ್ಲಿ, ರಾಜ್ಯಶಾಸ್ತ್ರದಲ್ಲಿ, ಲಾ ವಿಜ್ಞಾನದಲ್ಲಿ, ತತ್ತ್ವಶಾಸ್ತ್ರದಲ್ಲಿ ಅವರು ನೋಡದೆ ಇದ್ದ ಪ್ರಮಾಣಗ್ರಂಥವಿಲ್ಲ. ಸ್ವಾಧೀನಪಡಿಸಿಕೊಳ್ಳದೆ ಅವರು ಓದಿದ್ದೇ ಇಲ್ಲ. ಅಷ್ಟು ಪಾರಂಗತರಾದರೂ ತಾವು ಆ ವಿಷಯಕ್ಕೆ ಅಧಿಕಾರಿ ಎಂದು ತಿಳಿದುಕೊಂಡಿರಲಿಲ್ಲ. ಯಾವ ವಿಷಯ ಪ್ರಸಕ್ತವಾದರೂ ಇದನ್ನು ನೋಡಬೇಕು, ಹಿಂದೆ ಮುಂದೆ ತೂಗಿ ನೋಡಬೇಕು, ಕಕ್ಷಿ ಪ್ರತಿಕಕ್ಷಿಗಳನ್ನು ತೂಕ ಮಾಡಬೇಕು, ವಾದ ಪ್ರತಿವಾದಗಳನ್ನು ತೋಲನ ಮಾಡಬೇಕು; ನಿರ್ಣಯವೋ ಎಂದರೆ “ಅದು ನಿಮ್ಮ ಅಂತರಂಗಸಾಕ್ಷಿಯಂತೆ, ಅದನ್ನು ಇತರರು ಹೇಳತಕ್ಕದ್ದಲ್ಲ. ನಿಮ್ಮ ನಿರ್ಣಯ ನಿಮ್ಮ ಸ್ವತಂತ್ರಾಧಿಕಾರದ್ದು”

ಈ ರೀತಿ ನನ್ನ ಬುದ್ಧಿವೃತ್ತಿಯನ್ನು ನನ್ನ ಯೋಗ್ಯತೆಯ ಪರಿಮಿತಿಗೆ ಒಳಪಟ್ಟು ತಿದ್ದಿ ಪರಿಷ್ಕಾರಪಡಿಸಿದವರು ನರಸಿಂಹಮೂರ್ತಿಗಳು.

ಸೌಜನ್ಯ, ಉದಾತ್ತಮನಸ್ಕತೆ, ಪ್ರಾಮಾಣಿಕತೆ -ಈ ಗುಣಗಳ ವಿಷಯದಲ್ಲಿ ನನಗೆ ಆದರ್ಶಪ್ರಾಯರಾಗಿ ಗುರುಸ್ಥಾನದಲ್ಲಿರುವ ಆ ಮಹನೀಯರಿಗೆ,

ಪುನಶ್ಚ ಭೂಯೋಽಪಿ ನಮೋ ನಮಸ್ತೇ ॥

೭

ಪೋಲೇಪಲ್ಲಿ ಚಿನ್ನಸ್ವಾಮಿಶೆಟ್ಟರು

ಚಿನ್ನಸ್ವಾಮಿಶೆಟ್ಟರು ಪೋಲೇಪಲ್ಲಿ ಸಾಹುಕಾರರ ಅಳಿಯಂದಿರೆಂದು ಕೇಳಿದ್ದೇನೆ. ನನಗೆ ಅವರ ಪರಿಚಯವಾದದ್ದು ಬಹುಶಃ ೧೯೧೦-೧೧ರ ಸುಮಾರಿನಲ್ಲಿ. ನನಗೆ ಕೊಂಚ ಹಣ ಸಾಲ ಬೇಕಾಯಿತು. ನನಗೆ ಆಪ್ತರಾಗಿದ್ದ ವೈದ್ಯವರ ಕೆ.ಶೇಷಯ್ಯರ್ ಅವರಲ್ಲಿ ಪ್ರಸ್ತಾವಿಸಿದೆ.

ಶೇಷಯ್ಯರ್ ಅವರು ನಮ್ಮ ಊರಿಗೆ ಸಮೀಪದಲ್ಲಿರುವ ದೇವರಾಯ ಸಮುದ್ರದ ಕಡೆಯವರು. ಸಂಸ್ಕೃತ ಬಲ್ಲವರು. ಆಯುರ್ವೇದ ಅಭ್ಯಾಸ ಮಾಡಿದ್ದವರು. ಥಿಯೊಸಾಫಿಕಲ್ ಸೊಸೈಟಿಗೆ ಸೇರಿ ಆನಿಬೆಸಂಟ್, ಸರ್.ಎಸ್. ಸುಬ್ರಹ್ಮಣ್ಯಯ್ಯರ್ ಮೊದಲಾದವರಲ್ಲಿ ಬಳಕೆಯಿಂದ ಇದ್ದವರು. ಪರಮಸಾತ್ತ್ವಿಕರು. ಅವರು ನಾನು ಹೇಳುತ್ತಿರುವ ಕಾಲದಲ್ಲಿ ಇಂಡಿಯನ್ ಸ್ವದೇಶಿ ಸ್ಟೋರ್ಸ್ ಎಂಬ ವ್ಯಾಪಾರ ಸಂಸ್ಥೆಯನ್ನು ನಡಸುತ್ತಿದ್ದರು. ಅವೆನ್ಯೂ ರೋಡಿನಲ್ಲಿ ತುಪ್ಪದಾಂಜನೇಯಸ್ವಾಮಿ ಗಲ್ಲಿಯಿಂದ ಉತ್ತರಕ್ಕೆ ಹೋದರೆ ಮೂರನೆಯದೋ ನಾಲ್ಕನೆಯದೋ ಅಂಗಡಿ, ಅಲ್ಲಿ ಗಣಪ್ಪ ಎಂಬವರ ದೊಡ್ಡ ಪುಸ್ತಕದಂಗಡಿಯಿತ್ತು. ನಾನು ಅಲ್ಲಿ ಎಷ್ಟೋ ಪುಸ್ತಕಗಳನ್ನು ಕೊಂಡಿದ್ದೇನೆ. ಶೇಷಯ್ಯರ್ ಸ್ವದೇಶಿ ವ್ರತಸ್ಥರು.

ಕೂಷ್ಮಾಂಡಲೇಹ್ಯ

ಶೇಷಯ್ಯರ್ ಅವರ ಸ್ವದೇಶಿ ಸ್ಟೋರ್ಸ್ ಅಂಗಡಿಯಲ್ಲಿ ಅವರೂ, ಅವರ ಮಿತ್ರರಾದ ವೈದ್ಯ ರಾಮರಾಯರೂ ಸೇರಿ ತಯಾರುಮಾಡಿದ್ದ ಲೇಹ್ಯಗಳನ್ನೂ ಹಲ್ವಾಗಳನ್ನೂ ಸೀಸೆಗಳಲ್ಲಿ ಭರ್ತಿಮಾಡಿ ಇರಿಸಿದ್ದರು. ಒಂದು ದಿನ ನಮ್ಮ ಮಿತ್ರರಾದ ಅಡ್ವೋಕೇಟ್ ಎ.ಆರ್. ನಾಗೇಶ್ವರಯ್ಯರ್ ಅವರ ಸವಾರಿ ಅಲ್ಲಿಗೆ ಚಿತ್ತೈಸಿತು. ಅವರು ಆಗಾಗ ಅಲ್ಲಿಗೆ ಬರುತ್ತಿದ್ದದ್ದುಂಟು. ಆ ದಿವಸ ನಾಗೇಶ್ವರಯ್ಯರ್ ಒಂದು ಸೀಸೆಯನ್ನು ನೋಡಿ ಅದೇನೆಂದು ಶೇಷಯ್ಯರ್ ಅವರನ್ನು ಕೇಳಿದರು.

ಶೇಷಯ್ಯರ್: “ಅದು ಕೂಷ್ಮಾಂಡಲೇಹ್ಯ.”

ನಾ: “ಅದು ಏತಕ್ಕೆ?”

ಶೇ: “ಇದು ಮೈಗೆ ಪುಷ್ಟಿ ಬರುವುದಕ್ಕೆ. ದಿನಾಗಲೂ ಕೊಂಚ ಸೇವಿಸಿದರೆ ಒಳ್ಳೆಯದು.”

ನಾಗೇಶ್ವರಯ್ಯರ್ ಅವರು ಆ ಕೂಡಲೆ ಆ ಸೀಸೆಯನ್ನು ತಮ್ಮ ಗಾಡಿಯಲ್ಲಿ ಇರಿಸಿಕೊಂಡರು; ಕೋರ್ಟುಗಳ ಕಡೆ ಹೊರಟರು. ಇದು ಬೆಳಿಗ್ಗೆ ೧೦-೧೧ ಘಂಟೆಯ ಸುಮಾರಿನಲ್ಲಿ.

೨ ಘಂಟೆಯ ವೇಳೆಗೆ ಅವರು ಸ್ವದೇಶಿ ಸ್ಟೋರ್ಸ್‌ಗೆ ಮತ್ತೆ ಬಂದರು.

“ಆ ಸೀಸೆ ಕೊಟ್ಟಿರಲ್ಲ, ಅಂಥಾದ್ದು ಇನ್ನೊಂದು ಕೊಡಿ.”

ನಾಗೇಶ್ವರಯ್ಯರ್ ಅದನ್ನು ತೆಗೆದುಕೊಂಡು ಹೋದವರು ಸಂಜೆ ೫ ಘಂಟೆಗೆ ಬಂದು ಮತ್ತೊಂದು ಸೀಸೆಯನ್ನು ಕೇಳಿದರು. ಆ ವೇಳೆಗೆ ಶೇಷಯ್ಯರ್ ಅಲ್ಲಿದ್ದರು. ಅವರು ಕೇಳಿದರು

“ಆವಾಗಲೇ ತೆಗೆದುಕೊಂಡು ಹೋದಿರಲ್ಲ? ಅದನ್ನು ಏನು ಮಾಡಿದಿರಿ?”

“ಏನು ಮಾಡುವುದು? ತಿಂದುಬಿಟ್ಟೆ. ಚೆನ್ನಾಗಿತ್ತು. ಎರಡನೆಯದೂ ಮುಗಿದು ಹೋಯಿತು. ಈಗ ಇನ್ನೊಂದನ್ನು ನೀವು ಕೊಟ್ಟರೆ ಅದು ರಾತ್ರಿಗೆ ಆಗುತ್ತದೆ.”

ಶೇಷಯ್ಯರ್ ಅವರಿಗೆ ಗಾಬರಿಯಾಯಿತು.

“ನಾನು ನಿಮಗೆ ಆ ಸೀಸೆ ಕೊಡುವುದಿಲ್ಲ. ದೇವರ ದಯೆಯಿಂದ ಈ ಹೊತ್ತು ರಾತ್ರಿ ಸುಖವಾಗಿ ಕಳೆದರೆ ಪುಣ್ಯ. ಲೇಹ್ಯ ನಾಲಗೆಗೆ ರುಚಿಯೆಂದು ಹೀಗೆ ಸೀಸೆಗಳಗಟ್ಟಲೆ ತಿನ್ನುತ್ತಾರೆಯೆ? ತಿನ್ನಬೇಕಾದದ್ದು ಒಂದು ಸಾರಿಗೆ ಒಂದು ಗಜ್ಜಿಗದ ಕಾಯಷ್ಟು, ದಿನಕ್ಕೆ ಎರಡೋ ಮೂರೋ ಗಜ್ಜಿಗದ ಕಾಯಷ್ಟು ಸೇರಿದರೆ ಸಾಕು.”

ನಾಗೇಶ್ವರಯ್ಯರ್ ನಗುತ್ತಿದ್ದರು. ನಮಗೆಲ್ಲ ಸಂಗತಿ ತಿಳಿದ ಮೇಲೆ ನಮಗೂ ವಿನೋದವಾಯಿತು. ಶೇಷಯ್ಯರ್ ಅವರ ವೈದ್ಯಕೀಯ ಪ್ರಸ್ತಾವ ಬಂದದ್ದರಿಂದ ಈ ಪ್ರಸಂಗ ಜ್ಞಾಪಕಕ್ಕೆ ಬಂದಿತು.

ಚಿನ್ನಸ್ವಾಮಿಶೆಟ್ಟರ ಸಹಾಯಬುದ್ಧಿ

ಶೇಷಯ್ಯರ್ ಅವರು ನನ್ನನ್ನು ಚಿನ್ನಸ್ವಾಮಿಶೆಟ್ಟರವರಲ್ಲಿಗೆ ಕರೆದುಕೊಂಡು ಹೋಗಿ ಭೇಟಿ ಮಾಡಿಸಿದರು. ನನಗೆ ಬೇಕಾಗಿದ್ದ ಅನುಕೂಲ ದೊರೆಯಿತು. ಕಾಲಕ್ರಮದಲ್ಲಿ ಭಗವತ್ಕೃಪೆಯಿಂದ ಸಾಲ ತೀರಿಸಿದ್ದೂ ಆಯಿತು.

ಅಲ್ಲಿಂದ ನಾಲ್ಕೈದು ವರ್ಷ ಕಳೆದ ಮೇಲೆ ನಾನು ಮ್ಯುನಿಸಿಪಲ್ ಕೌನ್ಸಿಲಿನ ಸದಸ್ಯನಾಗಿದ್ದಾಗ ಚಿನ್ನಸ್ವಾಮಿಶೆಟ್ಟರು ಅಲ್ಲಿ ಸಹಸದಸ್ಯರಾಗಿದ್ದರು, ಆಗ ನಾನು ಕಂಡುಕೊಂಡೆ, ಅವರ ಒಳ್ಳೆಯತನ ಎಂಥಾದ್ದು, ಜಾಗರೂಕತೆ ಎಂಥಾದ್ದು, ವಿವೇಕ ಎಂಥಾದ್ದು-ಎಂಬುದನ್ನು.

ಅವರು ಸಹಾಯ ಮಾಡತಕ್ಕವರೆಂದು ಎಷ್ಟೋ ಹಿಂದಿನ ಕಾಲದಿಂದ ಹೆಸರಾಗಿತ್ತು. ವಿಶೇಷವಾಗಿ ಅವರು ವಿದ್ಯಾರ್ಥಿಗಳಿಗೆ ಸಹಾಯ ಮಾಡಿದ್ದವರು. ಕಾಲೇಜುಗಳಲ್ಲಿಯೂ, ಲಾ ಮೊದಲಾದ ಕಸಬುಗಳಿಗಾಗಿಯೂ ವ್ಯಾಪಾರಕ್ಕೆಂದೂ ಪ್ರಯತ್ನಪಡುತ್ತಿದ್ದ ಯುವಕರಿಗೆ ಅವರು ಮನಸಾರ ಸಹಾಯ ಕೊಟ್ಟಿದ್ದರು. ಹಣವನ್ನು ಸಾಲ ಕೊಟ್ಟಿದ್ದದ್ದು ನಿಜ. ಆದರೆ ಆ ಸಾಲ ತೆಗೆದುಕೊಂಡವರಿಗೆ ಒಂದು ಹೊರೆಯಾಗದಂತೆ ವಿಧ ವಿಧವಾಗಿ ರಿಯಾಯಿತಿ ತೋರಿಸುತ್ತಿದ್ದದ್ದೂ ಮಾಫಿ ಮಾಡುತ್ತಿದ್ದದ್ದೂ ಅಷ್ಟೇ ನಿಜ.

ಆ ಕಾಲದಲ್ಲಿ ಆ ವಿದ್ಯಾರ್ಥಿಗಳಿಗೆ ಈ ಸಹಾಯವೇ ಒಂದು ಮಹೋಪಕಾರವಾಗಿತ್ತು. ಆಗ್ಗೆ ಮೈಸೂರು ಬ್ಯಾಂಕ್ ಮೊದಲಾದ ಸಂಸ್ಥೆಗಳು ಹುಟ್ಟಿರಲಿಲ್ಲ. ಚಿನ್ನಸ್ವಾಮಿಶೆಟ್ಟರು ಕೊಟ್ಟ ಧೈರ್ಯದಿಂದ ಮುನ್ನುಗ್ಗಿ ಬಿ.ಎ., ಬಿ.ಎಲ್. ಮೊದಲಾದ ವಿದ್ಯಾಪದವಿಗಳನ್ನು ಸಂಪಾದಿಸಿ ಅಭಿವೃದ್ಧಿಗೆ ಬಂದ ಯುವಕರನ್ನು ನಾನು ಬಲ್ಲೆ. ಅವರಲ್ಲಿ ಕೆಲವರು ನನ್ನ ಆಪ್ತ ಸ್ನೇಹಿತರು. ಅವರು ಚಿನ್ನಸ್ವಾಮಿಶೆಟ್ಟರ ಹೆಸರನ್ನು ನಿಜವಾದ ಕೃತಜ್ಞತೆಯಿಂದ ಪದೇ ಪದೇ ಸ್ಮರಿಸಿಕೊಳುತ್ತಿದ್ದರು.

ಚಿನ್ನಸ್ವಾಮಿಶೆಟ್ಟರು ಬಸವನಗುಡಿಯಲ್ಲಿ ಮನೆ ಕಟ್ಟಿಸುತ್ತಿದ್ದಾಗ ಅವರಿಗೂ ನನಗೂ ಒಂದು ದಿನ ಕೊಂಚ ಚರ್ಚೆ ನಡೆಯಿತು. ನಾನು ಹೇಳಿದೆ:

“ವೈಶ್ಯರು ಈಗ ಮನೆಗಳ ಮೇಲೂ ಆಡಂಬರಗಳ ಮೇಲೂ ಭೋಗ ವಿಲಾಸಗಳ ಮೇಲೂ ಹಣ ಹಾಕುವುದು ಈಚೀಚೆಗೆ ಹೆಚ್ಚಾಗುತ್ತಿದೆ.”

ಚಿ: "ಅದರಿಂದ ಯಾರಿಗೇನು ನಷ್ಟ ಸ್ವಾಮಿ? ಅವರು ಸಂತೋಷವಾಗಿರಕೂಡದೆ?"

ನಾನು: "ಅವರಿಗೆ ಸಂತೋಷ ಬೇಡವೆಂದು ನಾನು ಹೇಳಲಿಲ್ಲ. ಪ್ರತಿಫಲ ಕೊಡಲಾರದ ದಾರಿಯಲ್ಲಿ ಅವರು ಹಣ ವೆಚ್ಚ ಮಾಡಬಾರದೆಂದು ನನ್ನ ಅಭಿಪ್ರಾಯ."

ಚಿ: "ಮಿಕ್ಕವರು ಹಾಗೆ ಮಾಡಬಹುದೋ? ಬ್ರಾಹ್ಮಣರು ಮಾಡುತ್ತಿಲ್ಲವೋ?"

ನಾನು: "ಯಾರೂ ಹೀಗೆ ಮಾಡಬಾರದೆಂಬುದು ನನ್ನ ಅಭಿಪ್ರಾಯ. ಭೋಗಕ್ಕೆ ಮಿತಿಯಿರಿಸಿಕೊಳ್ಳಬೇಕಾದದ್ದು ಎಲ್ಲರಿಗೂ ಕರ್ತವ್ಯವೇ. ಆದರೆ ಅದು ವೈಶ್ಯರ ವಿಶೇಷ ಧರ್ಮ. ವೈಶ್ಯರು ನಮ್ಮ ಸಮಾಜಕ್ಕೆ ನ್ಯಾಸಪಾಲಕರಾಗಿ, ಟ್ರಸ್ಟೀ (Trustee) ಗಳಂತೆ ಇರಬೇಕಾದವರು. ನಮ್ಮ ಸಮಾಜದ ಸಂಪತ್ತನ್ನು ಅಭಿವೃದ್ಧಿಪಡಿಸಿ ಕಾಪಾಡಿ ಅದನ್ನು ಸಮಾಜೋಪಕಾರಕ್ಕಾಗಿ ವಿನಿಯೋಗಿಸಬೇಕಾದದ್ದು ವೈಶ್ಯಧರ್ಮ. ವೈಶ್ಯರು ಉಳಿಸಬೇಕಾದವರು. ಯಾರಿಗೋಸ್ಕರ ಉಳಿಸಬೇಕು? ಲೋಕದ ಜನಕ್ಕೋಸ್ಕರ ಉಳಿಸಬೇಕು. ಉಳಿಸಬೇಕಾದವರೇ ಪೋಲು ಮಾಡಲಾರಂಭಿಸಿದರೆ, ಸಮಾಜದ ಗತಿ ಏನಾದೀತು?"

ಚಿ: "ನೀವು ಹೇಳಿದ ಮಾತು ಒಪ್ಪಿದೆ ಸ್ವಾಮಿ. ನಾನು ಮನೆ ಕಟ್ಟಿಸುತ್ತಿರುವುದರಲ್ಲಿ ಅನಾವಶ್ಯಕವಾಗಿ ಹಣ ಖರ್ಚುಮಾಡುತ್ತಿದ್ದೇನೆಂದಲ್ಲವೆ ನಿಮ್ಮ ತಾತ್ಪರ್ಯ? ನಾನು ಈ ಮನೆಯ ಕೆಲಸಕ್ಕಾಗಿ ಒಂದಷ್ಟು ಹಣವನ್ನು ಒಂದು ಲಾಭಕರವಾದ ಏರ್ಪಾಟಿನಲ್ಲಿ ಹಾಕಿದ್ದೇನೆ. ಆ ಏರ್ಪಾಟಿನಿಂದ ವರ್ಷವರ್ಷವೂ ಒಂದಷ್ಟು ಹಣ ಉತ್ಪತ್ತಿಯಾಗುತ್ತದೆ. ಉತ್ಪತ್ತಿಯಾದಷ್ಟನ್ನು ಮಾತ್ರವೇ ನಾನು ಖರ್ಚು ಮಾಡುವುದು. ನೀವು ಹೇಳಿದಿರಲ್ಲ, ಜನೋಪಯೋಗವಾದ ಕೆಲಸಕ್ಕೆ ಹಣ ವಿನಿಯೋಗಿಸಬೇಕೆಂದು? ಅದೇ ಈಗ ನಾನು ಮಾಡುತ್ತಿರುವುದು. ಮರಗೆಲಸದವರು, ಇಟ್ಟಿಗೆಯವರು, ಗಾರೆಯವರು, ಕಲ್ಲಿನವರು- ಇವರಿಗೆಲ್ಲ ಜೀವನ ನಡೆಯುತ್ತಿದೆಯಲ್ಲ? ಅದು ಪ್ರಜೋಪಯೋಗವಲ್ಲವೆ?"

ಹೀಗೆ ನಡೆಯಿತು ನಮ್ಮ ಚರ್ಚೆ. ಕಡೆಗೆ ನಮ್ಮಿಬ್ಬರ ಅಭಿಪ್ರಾಯಗಳೂ ಪರಸ್ಪರ ವಿರೋಧವಲ್ಲ, ಒಂದೇ–ಎಂದು ಸಮಾಧಾನ ಮಾಡಿಕೊಂಡೆವು.

ವೈಶ್ಯಧರ್ಮದ ತಿರುಳು

ಒಂದು ದಿನ ಅವರ ಮನೆಯ ಮುಂದೆ ಲಾಲ್‌ಬಾಗಿಗೆ ಹೋಗುವ ದಾರಿಯಲ್ಲಿ ನನಗೆ ಮಾನ್ಯ ಮಿತ್ರರಾಗಿದ್ದ ಡಾ ॥ ಕೆ. ಶ್ರೀನಿವಾಸಾಚಾರ್ಯರ ನೂತನ ಗೃಹಪ್ರವೇಶವಾಯಿತು. ನಾನೂ ಅಲ್ಲಿಗೆ ಹೋಗಿದ್ದೆ. ಗಂಧ ಪುಷ್ಪ ಫಲ ತಾಂಬೂಲಗಳನ್ನು ತೆಗೆದುಕೊಂಡು ಹಿಂತಿರುಗಿ ಬರುತ್ತ ನ್ಯಾಷನಲ್ ಕಾಲೇಜ್ ಬಳಿಯ ಐದು ದೀಪದ ಕಂಬದ ಹತ್ತಿರ ಬರುವ ವೇಳೆಗೆ, ಎದುರುಗಡೆಯಿಂದ ಚಿನ್ನಸ್ವಾಮಿಶೆಟ್ಟರು ಬರುತ್ತಿದ್ದರು. ನಮಸ್ಕಾರ ಪ್ರತಿನಮಸ್ಕಾರಗಳಾದ ಮೇಲೆ ಅಲ್ಲಿ ಮಾತನಾಡುತ್ತ ನಿಂತೆವು. ಮಾತಿನ ಅವಸರದಲ್ಲಿ ನನ್ನ ಕೈಯಲ್ಲಿದ್ದ ತಾಂಬೂಲದಿಂದ ಒಂದು ಅಡಕೆಯ ಚೂರು ಜಾರಿ ನೆಲದ ಮೇಲೆ ಬಿತ್ತು. ನಾನು ಅದನ್ನು ಹಾಗೆಯೇ ಬಿಟ್ಟೆ. ಚಿನ್ನಸ್ವಾಮಿಶೆಟ್ಟರು ನನ್ನ ಮುಖ ನೋಡಿ ತಾವೇ ಬಗ್ಗಿ ಆ ಅಡಿಕೆಚೂರನ್ನು ಮೇಲಕ್ಕೆತ್ತಿ, ಮೊದಲು ಅದನ್ನು ಉಫ್ ಎಂದು ಊದಿ ಧೂಳು ಹೋಗಲಾಡಿಸಿ, ಬಳಿಕ ಕೈಬೆರಳಿನಿಂದ ಉಜ್ಜಿ ಚೊಕ್ಕಟಮಾಡಿ, ಆನಂತರ ತಮ್ಮ ಮೈಮೇಲಿದ್ದ ಸರಿಗೆ ಪಂಚೆಯ ಕೊನೆಯಿಂದ ಅದನ್ನು ಮತ್ತೊಂದು ಬಾರಿ ಶುದ್ಧಪಡಿಸಿ ಅದನ್ನು ನನ್ನ ಕೈಯಲ್ಲಿಟ್ಟು ಹೀಗೆ ಹೇಳಿದರು (ತೆಲುಗಿನಲ್ಲಿ):

"ಮನಕು ವದ್ದಕುಂಟೆ ಎವ್ವರಿಕೈನಾ ಪ್ಯಾದ ಸಾದಲ ಚೇತ ವೇಸ್ತೆ ನೋಟಿಲೋ ವೇಸುಕೊಂಟಾರು ಸ್ವಾಮಿ."

(ನಮಗೆ ಬೇಡದಿದ್ದರೆ ಇದನ್ನು ಯಾರಾದರೂ ಬಡಬಗ್ಗರ ಕೈಗೆ ಹಾಕಿದರೆ ಅವರು ಬಾಯಲ್ಲಿ ಹಾಕಿಕೊಂಡಾರು ಸ್ವಾಮಿ.)

ಇದು ವೈಶ್ಯಧರ್ಮದ ತಿರುಳು. ಸಾಹುಕಾರಿಯಲ್ಲಿ ಭಾರಿತನ, ಹಣಕ್ಕೆ ಸಲ್ಲುವ ಮರ್ಯಾದೆಯ ವಿಷಯದಲ್ಲಿಯೂ ಭಾರಿತನ.

೪

ಮಂಡಿ ಹರಿಯಣ್ಣನವರು

೧೯೧೪-೧೫ರ ಸುಮಾರಿನಲ್ಲಿ ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಮಂಡಿವರ್ತಕರಾದ ಹರಿಯಣ್ಣನವರನ್ನು ಶಾಸನ ಪರಿಷತ್ತಿಗೆ (ಲೆಜಿಸ್ಲೆಟಿವ್ ಕೌನ್ಸಿಲ್) ಸರಕಾರದವರು ನಿಯಮಿಸಿದರು.

ಆಗ್ಗೆ ಮಂಡಿ ಹರಿಯಣ್ಣನವರ ಪರಿಚಯ ನನಗೆ ಹೆಚ್ಚಾಗಿ ಆಗಿರಲಿಲ್ಲ. ಅವರು ಭಾರಿ ವರ್ತಕರೆಂದೂ ತುಂಬ ಮರ್ಯಾದಸ್ಥರೆಂದೂ ಕೇಳಿದ್ದೆ. ಒಂದೆರಡು ಸಾರಿ ಯಾವುದೋ ಸಾರ್ವಜನಿಕ ಕಾರ್ಯಕ್ಕಾಗಿ ಚಂದಾ ಬೇಡಲು ಅವರಲ್ಲಿಗೆ ಹೋಗಿದ್ದದ್ದೂ ಉಂಟು. ಆಗ ಅವರು ದೊಡ್ಡ ಮನುಷ್ಯರೆಂಬ ಮುದ್ರಿಕೆ ನನ್ನ ಮನಸ್ಸಿನಲ್ಲುಂಟಾಗಿತ್ತು.

ಒಂದಾನೊಂದು ದಿನ ದಿವಾನ್ ವಿಶ್ವೇಶ್ವರಯ್ಯನವರೊಡನೆ ಮಾತನಾಡುವ ಅವಕಾಶ ದೊರೆತಾಗ, ಹರಿಯಣ್ಣನವರನ್ನು ಲೆಜಿಸ್ಲೆಟಿವ್ ಕೌನ್ಸಿಲಿಗೆ ಸದಸ್ಯರಾಗಿ ನೇಮಕ ಮಾಡಿದ್ದರ ಪ್ರಸಕ್ತಿ ಬಂತು. ವಿಶ್ವೇಶ್ವರಯ್ಯನವರು,

“We must have businessmen and merchants like Mr. Hariyanna in the Council. Mr. Hariyanna and I were class fellows in the same school.”

ಎಂದು ಹೇಳಿದರು. ಅಲ್ಲಿಗೆ ಆ ಪ್ರಶ್ನೆ ಸಮಾಧಾನಕರವಾಗಿ ಮುಗಿಯಿತು.

ಹರಿಯಣ್ಣನವರು ಮಾತಿನ ಮನುಷ್ಯರಲ್ಲ. ಅವರು ಮಿತಭಾಷಿಗಳು. ಎಷ್ಟು ಪ್ರಕೃತವೋ ಅಷ್ಟೇ ಮಾತು. ಒಂದು ಅಕ್ಷರ ಹೆಚ್ಚು ಬರುತ್ತಿರಲಿಲ್ಲ.

ಚಂದಾ

ನಾನು ಚಂದಾ ಹಣಕ್ಕಾಗಿ ಅವರಲ್ಲಿ ಆಗಾಗ ಹೋಗುತ್ತಿದ್ದದ್ದುಂಟೆಂದು ಹೇಳಿದೆ. ಅವರ ಗುಮಾಸ್ತೆ ಬಹುಶಃ ಹರಿಯಪ್ಪನೆಂಬ ಹೆಸರಿನವರು. ಹರಿಯಣ್ಣನವರು ನನ್ನನ್ನು ಕಂಡ ಕೂಡಲೆ,

“ಬನ್ನಿ, ಕುಳಿತುಕೊಳ್ಳಿ” ಎಂದು ಹೇಳಿ ಗುಮಾಸ್ತೆಯ ಕಡೆಗೆ ತಿರುಗಿ, ಅವರಿಗೆ ಸಹಜವಾಗಿದ್ದ ಮೆಲುದನಿಯಲ್ಲಿ,

“ಹರಿಯಪ್ಪ, ಸ್ವಾಮಿಗಳು ಬಂದಿದ್ದಾರೆ, ನೋಡಿದಿಯಾ?” ಎನ್ನುವರು. ಆತ,

“ಹೌದು-ದೀಪಾವಳಿ ಧರ್ಮಕ್ಕೆ” ಎನ್ನುವರು. ಹರಿಯಣ್ಣನವರು,

“ಮಾಮೂಲಿನಂತೆ ನಡಸಿಬಿಡು” ಎನ್ನುವರು. ಗುಮಾಸ್ತರು ಲೆಕ್ಕದ ಪುಸ್ತಕ ನೋಡಿ,

“ಹೋದ ವರ್ಷ ಹದಿನೈದು ರೂಪಾಯಿ ಕೊಟ್ಟಿದೆ” –ಎನ್ನುವರು. ಅದರಂತೆ ಈ ಸಾರಿಯೂ ನಡೆಯುವುದು. ನಾನು ಅಲ್ಲಿಗೆ ಹೋದ ಐದು ನಿಮಿಷದೊಳಗಾಗಿ ಹಣ ನನ್ನ ಕೈಸೇರುವುದು.

ಅದು ಮೊದಲನೆ ಯುದ್ಧದ ಕಾಲ, ಹೊಸ ತರಗುಪೇಟೆಯಲ್ಲಿ ಅನೇಕ ಮಂಡಿಗಳು ಹುಟ್ಟಿದ್ದವು. ಆ ವರ್ತಕರಲ್ಲಿ ಕೆಲಮಂದಿ ನನಗೆ ಹೇಳಿದ್ದರು:

“ಸ್ವಾಮಿ, ನಾವೆಲ್ಲ ಹರಿಯಣ್ಣನವರ ಅನ್ನ ಊಟ ಮಾಡುವವರು.”

ಹಾಗೆಂದರೆ ಅವರಿಗೆ ಬಂಡವಾಳ ಕೊಟ್ಟವರು, ಸಹಾಯ ಒದಗಿಸಿದವರು ಹರಿಯಣ್ಣನವರು.

ಸ್ವಧರ್ಮನಿಷ್ಠೆ

ನಾನು ಒಂದು ದಿನ ಒಂದು ಸಾಹಸ ಮಾಡಿದೆ.

ನಾನು: “ಈಗ ಯುದ್ಧಕಾಲ. ವ್ಯಾಪಾರ ನಡೆಯಲು ಒಳ್ಳೆಯ ಅನುಕೂಲ.”

ಹ: “ನನಗೆ ದೇವರು ಕೊಟ್ಟಿರುವುದು ಸಾಕು ಸ್ವಾಮಿ. ನಮ್ಮ ಹಿರಿಯರು ಹಾಕಿದ ನಿಯಮಗಳನ್ನು ನಾನು ಬಿಡುವುದಕ್ಕಾಗುವುದಿಲ್ಲ. ಅಷ್ಟರಲ್ಲಿ ಎಷ್ಟು ಲಾಭ ಬಂದರೆ ಅಷ್ಟು ಸಾಕು. ಬೇರೆಯ ಜನ ಅವರ ದಾರಿಯಲ್ಲಿ ವ್ಯಾಪಾರ ಮಾಡಿಕೊಂಡು ಸಂಪಾದಿಸಿಕೊಳ್ಳಲಿ. ಅವರವರ ಧರ್ಮ ಅವರವರದು. ನಾನು ಹೊಸ ದಾರಿಗಳಿಗೆ ಹೋಗಲಾರೆ.”

ಹರಿಯಣ್ಣನವರು ಹುಟ್ಟಿನಿಂದ ಶ್ರೀಮಂತರು. ಅವರ ತಂದೆಯವರು ಪ್ರಸಿದ್ಧರಾಗಿದ್ದ ಮಂಡಿ ವರ್ತಕರು. ದಾನಧರ್ಮಗಳಿಗೆ ಹೆಸರಾದವರು. ಬಸವನ ಗುಡಿಯ ಪಶ್ಚಿಮದ ಕಡೆಯ ಸಣ್ಣ ಗುಡ್ಡದ ಮೇಲಿನ ಹರಿಹರೇಶ್ವರ ದೇವಾಲಯ ಅವರು ಕಟ್ಟಿಸಿದ್ದು. ಅಲ್ಲಿ ಶಿವರಾತ್ರಿಯ ಪೂಜೆಯನ್ನು ಹರಿಯಣ್ಣನವರು ತುಂಬ ಭಕ್ತಿ-ಶ್ರದ್ಧೆಗಳಿಂದ ನಡಸುತ್ತಿದ್ದರು. ವಿಶ್ವೇಶ್ವರಪುರದ ಮಧ್ಯರಸ್ತೆಯ ಸಮೀಪದಲ್ಲಿಯೂ ಇವರ ಪೂರ್ವಿಕರು ಮಾಡಿದ ಧರ್ಮಸಂಸ್ಥೆ ಒಂದಿತ್ತು.

ಹರಿಯಣ್ಣನವರು ದರ್ಶನೀಯವಾದ ಆಕಾರವುಳ್ಳವರು. ಎತ್ತರವಾದ ಆಳು, ಮೈ ಹೊಂಬಿಳುಪು ಬಣ್ಣ. ಮುಖ ಗಂಭೀರವಾಗಿ ಸೌಮ್ಯಮುದ್ರೆಯುಳ್ಳದ್ದು. ಉಡುಪು ಪಟಾಟೋಪವಿಲ್ಲದೆ ಮರ್ಯಾದೆವಂತರ ರೀತಿಯದು. ಸೊಗಸಾದ ಕೋಟು, ಮೇಲೆ ಸರಿಗೆಯ ಉತ್ತರೀಯ. ಕೈಯಲ್ಲಿ ಒಂದು ಸಣ್ಣ ಬೆತ್ತ. ಇದು ಅವರ ಸಾಮಾನ್ಯ ದಿನದ ಉಡುಪು.

ವಿಶ್ವೇಶ್ವರಯ್ಯನವರಿಗಿದ್ದಂತೆಯೇ ಮಿರ್ಜಾ ಸಾಹೇಬರಿಗೂ ಹರಿಯಣ್ಣನವರಲ್ಲಿ ಮನಃಪೂರ್ವಕವಾದ ವಿಶ್ವಾಸ ಗೌರವಗಳಿದ್ದವು. ಒಂದಾನೊಂದು ಉತ್ಕಟ ಸಂದರ್ಭದಲ್ಲಿ ಮಿರ್ಜಾ ಅವರು ಒಬ್ಬಾನೊಬ್ಬ ಮನುಷ್ಯನ ವಿಷಯದಲ್ಲಿ ಕನಿಕರ ತೋರಿ “ಮಂಡಿ ಹರಿಯಣ್ಣನವರಿಗೋಸ್ಕರ ನಾನು ಈ ಮನುಷ್ಯನ ವಿಷಯದಲ್ಲಿ ರಿಯಾಯಿತಿ ತೋರಿಸುತ್ತಿದ್ದೇನೆ” ಎಂದು ಹೇಳಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ.

ಹರಿಯಣ್ಣನವರ ಮನೆ, ಮಂಡಿ-ಎರಡೂ ಒಂದೇ ಕಟ್ಟಡ. ಮಾಮೂಲ್ ಪೇಟೆಯಿಂದ ಹಿಡಿದು ಹಳೆಯ ತರಗುಪೇಟೆಯವರೆಗೂ ಆ ಮನೆ ಇತ್ತು. ಒಂದೊಂದು ದಿನ ಹರಿಯಣ್ಣನವರು ಬೆಳಗ್ಗೆ ಐರಿಷ್ ಪ್ರೆಸ್ ಕಡೆ ಬರುವರು ಕೆ.ಎಸ್. ಕೃಷ್ಣಯ್ಯರ್ ಒಡನೆ ಮಾತನಾಡಲು. ಹಾಗೆಯೇ ನನ್ನೊಡನೆಯೂ ಒಂದೆರಡು ನಿಮಿಷ ಕಳೆಯುವರು. ಆಗ ನನ್ನ 'ಕರ್ಣಾಟಕ' ಪತ್ರಿಕೆ ನಡೆಯುತ್ತಿತ್ತು. ಹರಿಯಣ್ಣನವರು ಅದನ್ನು ಕ್ರಮವಾಗಿ ಓದುವರು. ಅದರಲ್ಲಿದ್ದ ಟೀಕೆಗಳನ್ನು ಕುರಿತು ತಮ್ಮ ಅಭಿಪ್ರಾಯಗಳನ್ನು ಸಂಗ್ರಹವಾಗಿ ಸೂಚನೆ ಮಾಡುವರು. ಅವರು ಒಳ್ಳೆಯ ಇಂಗ್ಲಿಷ್ ಮಾತನಾಡುತ್ತಿದ್ದರು. ಮಾತನಾಡುತ್ತಿದ್ದದ್ದು ಕೊಂಚ; ಆದರೆ ಆ ಕೊಂಚವು ಶುದ್ಧವಾಗಿರುತ್ತಿತ್ತು.

ಮನ್ನಣೆ

ಹರಿಯಣ್ಣನವರಿಗೆ ಬೆಂಗಳೂರು ಪೇಟೆಯಲ್ಲಿದ್ದ ಪ್ರಸಿದ್ಧಿ ಮನ್ನಣೆಗಳು ಅಲ್ಲಿಂದೀಚಿನ ಇನ್ನು ಯಾರಿಗೂ ಇದ್ದಂತೆ ನನಗೆ ತೋರುವುದಿಲ್ಲ. ಆಗ ನಾವು ಎಂದರೆ ನಾಲ್ಕೈದು ಮಂದಿ ಮಿತ್ರರು ಸಾರ್ವಜನಿಕ ಉದ್ದೇಶಗಳಿಗಾಗಿ ಪೇಟೆಯ ವರ್ತಕರಲ್ಲಿ ಬಳಕೆಯಿಟ್ಟುಕೊಂಡಿದ್ದೆವು. ನಾವು ಯಾವ ಸಣ್ಣ ಅಂಗಡಿಗೆ ಹೋಗಿ,

“ಏನಪ್ಪಾ, ಈ ಹೊತ್ತು ಅಂಗಡಿ ಮುಚ್ಚಬೇಕಲ್ಲ? ದೇಶಭಕ್ತರಾದ ತಿಲಕರು ತೀರಿಕೊಂಡರು. ನಮ್ಮ ಸಂತಾಪವನ್ನು ಪ್ರದರ್ಶನ ಮಾಡಬೇಕು” ಎಂದು ಸೂಚಿಸಿದರೆ, ಅಥವಾ,

“ಏನಪ್ಪಾ–ಮಾಗಡಿ ರಸ್ತೆಯಲ್ಲಿರುವ ಆಸ್ಪತ್ರೆಗೆ ಒಂದಿಷ್ಟು ಧರ್ಮ ಮಾಡಬೇಕಲ್ಲ?” ಎಂದು ಕೇಳಿದರೆ, ಅಂಗಡಿ ಅಂಗಡಿಯಲ್ಲಿಯೂ ಒಂದೇ ಜವಾಬು:

“ಯಜಮಾನರು ಏನು ಹೇಳುತ್ತಾರೊ? ಅವರು ಹೇಳಿದಂತೆ ನಾವು.”

ಯಜಮಾನರು ಎಂದರೆ ಮಂಡಿ ಹರಿಯಣ್ಣನವರು, ಅವರು ಯಾವುದನ್ನೂ ದುಡುಕಿ ಹೇಳುವವರಲ್ಲ, ದುಡುಕಿ ಮಾಡುವವರಲ್ಲ. ಅರ್ಹರಾದವರನ್ನು ಕೇಳಿ ಸ್ವಂತವಾಗಿ ವಿಚಾರಮಾಡಿ ಮಾತನಾಡತಕ್ಕವರು, –ಎಂದು ಎಲ್ಲರಿಗೂ ನಂಬಿಕೆ ಸಂಪೂರ್ಣವಾಗಿತ್ತು.

ವರ್ತಕ ಧರ್ಮ

ಎಲ್ಲಕ್ಕಿಂತ ಮೇಲಾಗಿ ಅವರು ಪ್ರಾಮಾಣಿಕರು. ವರ್ತಕತನಕ್ಕೂ ನೀತಿ ನಿಯಮಗಳುಂಟು. ಲಾಭಸಂಪಾದನೆಗೂ ಮಿತಿ ಮೇರೆಗಳುಂಟು. ಜಾನ್ ರಸ್ಕಿನ್ ತತ್ತ್ವಜ್ಞನು ಮನುಷ್ಯ ಸಮಾಜದ ಉಪಕಾರಿಗಳಲ್ಲಿ ನೀತಿವಂತನಾದ ವ್ಯಾಪಾರಿ ಬಹುಮುಖ್ಯನಾದವನೆಂದು ಪದೇ ಪದೇ ಬೋಧಿಸಿದ್ದಾನೆ. "ವ್ಯಾಪಾರವಿಲ್ಲದೆ ಸಮಾಜವಿಲ್ಲ. ಅಂಗಡಿಯಿಲ್ಲದೆ ಊರಿಲ್ಲ." ಹೀಗೆ ವರ್ತಕನು ಸಮಾಜಜೀವನಕ್ಕೆ ಮೂಲ ಸಹಾಯಕರಲ್ಲೊಬ್ಬ. ಅವನು ನಿಜವಾಗಿ ಸಹಾಯಕನಾಗಬೇಕಾದರೆ ಅವನೂ ಕೆಲವು ಸಮಯ ನಿಯಗಳನ್ನಿಟ್ಟುಕೊಳ್ಳಬೇಕು. ಇಂಥ ಉತ್ತಮವಾದ ವರ್ತಕ ಧರ್ಮಕ್ಕೆ ಆದರ್ಶಪ್ರಾಯರಾಗಿದ್ದವರು ಮಂಡಿ ಹರಿಯಣ್ಣನವರು.

ಹರಿಯಣ್ಣನವರು ಮಾತಿನವರಲ್ಲವೆಂದು ಹೇಳಿದೆ. ಆದರೆ ಅವರು ಮಾತುಬೇಡದವರಲ್ಲ. ಇನ್ನು ಯಾರಾದರೂ ವಿನೋದವಾಗಿ ಮಾತನಾಡುತ್ತಿದ್ದರೆ, ನಗುತ್ತ ಕೇಳುವರು. ದೊಡ್ಡ ವಿಚಾರವನ್ನು ಕುರಿತು ತಿಳಿದವರು ಮಾತನಾಡುತ್ತಿದ್ದರೆ ಗಮನಿಸಿ ಕೇಳುವರು.

ಅವರಿಗೆ ಮನಸ್ಸು ಪ್ರಸನ್ನವಾಗುವಂತೆ ಮಾತನಾಡುತ್ತಿದ್ದವರು ಸಜ್ಜನರಾಯರು. ಇವರು ಹಾಸ್ಯವಿಟ್ಟು ಮಾತನಾಡುವರು; ಕೊಂಚ ಚಮತ್ಕಾರವಿಟ್ಟೂ ಮಾತನಾಡುವರು. ಸಜ್ಜನರಾಯರು ಬಂದವರನ್ನು ಆದರಿಸುವರು, ಪ್ರಶ್ನೆ ಹಾಕುವರು, ಕೊಂಚ ಟೀಕೆಯನ್ನೂ ಮಾಡುವರು. ಅದರಲ್ಲೆಲ್ಲ ಕೊಂಚ ಕೊಂಚ ಸ್ವಾರಸ್ಯವಿರುತ್ತಿತ್ತು. ಹರಿಯಣ್ಣನವರು ಆ ಸ್ವಾರಸ್ಯವನ್ನು ಗ್ರಹಿಸಿ ಪ್ರಸನ್ನರಾಗಿರುವರು.

ಈ ಇಬ್ಬರು ಘನ ಸಾಹುಕಾರರೂ ಅವರಿಗೆ ಸಮಾನರಾದ ಮತ್ತು ಸ್ನೇಹಿತರಾದ ವೆಂಕಟಮುನಯ್ಯಶೆಟ್ಟರ ಅಂಗಡಿಯ ಬಳಿಗೆ ಬರುವರು. ಅದು ಸಂಜೆ ೬-೭ ಘಂಟೆಯ ಸುಮಾರಿಗೆ, ಆ ಗೋಷ್ಠಿಗೆ ಇನ್ನೂ ಒಬ್ಬರಿಬ್ಬರು ಆಗಾಗ ಬಂದು ಸೇರುತ್ತಿದ್ದದ್ದುಂಟು. ಆದೆಪ್ಪನವರು, ಚಿನ್ನಸ್ವಾಮಿಶೆಟ್ಟರು–ಇತ್ಯಾದಿ. ಈ ಗೋಷ್ಠಿ ಅರ್ಧಘಂಟೆ ಒಂದು ಘಂಟೆ ನಡೆಯುವುದು. ಆಗ ಪೇಟೆಯ ವಿದ್ಯಮಾನಗಳು ಮಾತಿನ ವಿಷಯ.

ನನಗೆ ಚೆನ್ನಾಗಿ ತಿಳಿದಿರುವ ಒಂದು ಸಂಗತಿಯನ್ನು ಅದರ ನೀತಿಪಾಠಕ್ಕಾಗಿ ಇಲ್ಲಿ ಹೇಳುತ್ತೇನೆ. ಹರಿಯಣ್ಣನವರ, ಸಜ್ಜನರಾಯರ ಆಪ್ತ ಸ್ನೇಹಿತರಲ್ಲಿ ಒಬ್ಬರು ವ್ಯಾಪಾರಸ್ಥರು

ಕಷ್ಟಕ್ಕೆ ಸಿಕ್ಕಿದರು–ಯಾರೋ ತಪ್ಪಿದ ಕಾರಣದಿಂದ. ಆ ಸಾಹುಕಾರರು ಭಾರಿ ವ್ಯಾಪಾರಿಗಳು, ತಮ್ಮ ಬಂಧುಗಳನ್ನೂ ಗುಮಾಸ್ತರುಗಳನ್ನೂ ನಂಬಿ ಅವರಲ್ಲಿ ಅತಿಯವಾದ ವಿಶ್ವಾಸದಿಂದ ನಡೆದುಕೊಳ್ಳುತ್ತಿದ್ದರು. ಹಾಗೆ ಪ್ರೀತಿಪಾತ್ರನಾಗಿದ್ದ ಒಬ್ಬಾನೊಬ್ಬ ಮನುಷ್ಯನ ಅವಿವೇಕದಿಂದಲೂ ಅಜಾಗರೂಕತೆಯಿಂದಲೂ ಬಹು ನಷ್ಟವಾಗುತ್ತಿತ್ತು. ಒಂದಾನೊಂದು ದಿನ ಆ ನಷ್ಟದ ಮೊತ್ತ ಬಹು ಭಾರಿಯದೆಂದು ಸಾಹುಕಾರರಿಗೆ ಅಕಸ್ಮಾತ್ತಾಗಿ ತಿಳಿವಳಿಕೆಗೆ ಬಂದಿತು. ಅವರು ಏನು ಮಾಡಿಯಾರು? ತಮ್ಮ ಆಪತ್ತನ್ನು ಗೋಪ್ಯವಾಗಿ ಸ್ನೇಹಿತರಲ್ಲಿ ಹೇಳಿಕೊಂಡರು. ಹರಿಯಣ್ಣನವರೂ ಸಜ್ಜನರಾಯರೂ ಇನ್ನಿಬ್ಬರು ಸ್ನೇಹಿತರೊಡನೆ ಆ ಆಪತ್ತಿನ ಸಮಾಚಾರವನ್ನು ಪ್ರಸ್ತಾವಿಸಿದರು. ಆ ನಾಲ್ಕು ಮಂದಿಯಲ್ಲಿ ಬಿ.ಕೆ. ಗರುಡಾಚಾರ್ಯರೂ ಇದ್ದರು. ಆ ನಾಲ್ಕು ಮಂದಿಯ ಆಲೋಚನೆಯ ಫಲವಾಗಿ ಕಷ್ಟದಲ್ಲಿದ್ದ ಆ ಸ್ನೇಹಿತರಿಗೆ ಆಪತ್ತಿನ ನಿವಾರಣೆಯಾಯಿತು. ಅವರು ನಾಲ್ವರೂ ಆ ಸ್ನೇಹಿತರಿಗೆ ಅವಶ್ಯವಾಗಿದ್ದ ಭಾರಿ ಸಹಾಯವನ್ನು ತಾವು ಒದಗಿಸಿ, ಆ ಸ್ನೇಹಿತರ ಹೆಸರು ಬೀದಿಗೆ ಬಾರದಂತೆ ಕಾಪಾಡಿದರು.

ಮೇಲಿನ ಸಂಗತಿ ಸ್ವಾತಂತ್ರ್ಯಪೂರ್ವಯುಗದ್ದು. ಸ್ವಾತಂತ್ರ್ಯಾನಂತರದ ಯುಗದಲ್ಲಿಯೂ ಅಂಥ ಸ್ನೇಹವು ಜನದಲ್ಲಿ ಉಳಿದುಕೊಂಡಿದೆಯೆಂದು ನನಗೆ ಯಾರಾದರೂ ಭರವಸೆ ಕೊಟ್ಟರೆ ಸಂತೋಷವಾಗುತ್ತದೆ.

೫

ಧರ್ಮಪ್ರಕಾಶ ಸಜ್ಜನರಾಯರು

ಮಂಡಿ ಹರಿಯಣ್ಣನವರ ಹೆಸರಿನ ಕೂಡ ನೆನಪಿಗೆ ಬರತಕ್ಕ ಹೆಸರು ಧರ್ಮಪ್ರಕಾಶ ಎಸ್. ಸಜ್ಜನರಾಯರದು. ಅವರಿಬ್ಬರೂ ಅಶ್ವಿನೀ ದೇವತೆಗಳ ಹಾಗೆ ಜೊತೆ ಜೊತೆಯಾಗಿ ಇರುತ್ತಿದ್ದರು. ಪ್ರತಿ ದಿನವೂ ಇಬ್ಬರೂ ಸೇರಿ ವಾಯುಸೇವನೆಗೆ ಹೊರಡುವರು. ಪ್ರತಿ ಸಂಜೆಯೂ ಹಾಗೆಯೇ. ಒಂದೇ ಜೀವ ಎರಡು ದೇಹಗಳಲ್ಲಿ ವ್ಯವಹಾರ ನಡಸುತ್ತಿದೆಯೋ ಎಂಬಂತೆ ಇತ್ತು ಅವರ ಸ್ನೇಹ. ಅವರಲ್ಲೊಬ್ಬರನ್ನು ಮಾತ್ರ ಸ್ನೇಹಿತರು ಕಂಡರೆ “ಏನು ಒಬ್ಬರೇ ಇದ್ದೀರಲ್ಲ ಅವರೆಲ್ಲಿ?” ಎಂದು ಕೇಳುವುದು ವಾಡಿಕೆ.

ನನಗೆ ಹರಿಯಣ್ಣನವರ ಪರಿಚಯವಾಗುವುದಕ್ಕೆ ಎಷ್ಟೋ ಕಾಲ ಹಿಂದೆ ಸಜ್ಜನರಾಯರ ವಿಶ್ವಾಸ ದೊರೆತಿತ್ತು. ಆಗ ಅವರ ವ್ಯಾಪಾರಸ್ಥಳ ತುಪ್ಪದಾಂಜನೇಯನ ಗುಡಿಯ ಬೀದಿಯಿಂದ ಉತ್ತರದ ಕಡೆಗೆ ದೊಡ್ಡಪೇಟೆಯಲ್ಲಿತ್ತು.

ಅವರ ಅಳಿಯಂದಿರು ನನ್ನ ಮಾನ್ಯ ಸ್ನೇಹಿತರು ಮನ್ನಾಜಿರಾಯರೂ ಅವರೊಡನೆ ವ್ಯಾಪಾರದಲ್ಲಿದ್ದರು. ಆಗಿನ ಒಂದು ಸಂದರ್ಭ ನನ್ನ ಜ್ಞಾಪಕದಲ್ಲಿ ನಿಂತಿದೆ.

ಕುದುರೆಯ ಪ್ರಸಿದ್ಧಿ

ಸಜ್ಜನರಾಯರು ಆಗ ಫಸ್ಟ್ ಕ್ಲಾಸ್ ಕೋಚ್ ಗಾಡಿಯನ್ನಿಟ್ಟಿದ್ದರು. ಅದರ ಕುದುರೆಯ ಪ್ರಸಿದ್ಧಿ ಆಗ ಬೆಂಗಳೂರಿನಲ್ಲೆಲ್ಲ ಜನಜನಿತವಾಗಿತ್ತು. ಮುಖದಿಂದ ಬಾಲದವರೆಗೂ ಒಂದು ಅಂಗುಲ ಬಿಡದೆ ಸಂಪೂರ್ಣ ಬಿಳುವಾದ ಮೈಬಣ್ಣ. ಅದೂ ಕಾಂತಿಯುಳ್ಳದ್ದು. ಅದರ ನಡಿಗೆ ಕುಣಿತವೆನ್ನಬೇಕು. ಅದಕ್ಕೆ ನವಾರು ಮೊದಲಾದವನ್ನು ಬೆಳ್ಳಿಯಿಂದಲೂ ರೇಷ್ಮೆಯಿಂದಲೂ ಮಾಡಿಸಿದ್ದರು. ಬೆಂಗಳೂರು ಜನಕ್ಕೆ ಕಣ್ಣಿಗೆ ಹಬ್ಬ ಮಾಡಿಸುವ ಪದಾರ್ಥವೆಂದರೆ ಸಜ್ಜನರಾಯರ ಕುದುರೆ ಏನು ಸೊಗಸಾದ ಕುದುರೆ! ಏನು ಅಂದವಾದ ನಡಿಗೆ! ಆ ಕುದುರೆ-ಯಾವ ಕಾರಣದಿಂದಲೋ ನನಗೆ ಜ್ಞಾಪಕವಿಲ್ಲ ದೈವಾಧೀನವಾಯಿತು. ಆದನ್ನು ನೆನೆದು ಕಣ್ಣೀರಿಡದವರಿಲ್ಲ.

ಸಜ್ಜನರಾಯರು ದೊಡ್ಡಪೇಟೆ ಚೌಕದ ಸಮೀಪದಲ್ಲಿರುವ ಅವರ ಈಗಿನ ಅಂಗಡಿಯನ್ನು ಕೊಂಡುಕೊಂಡು ಅದನ್ನು ಕಟ್ಟಿಸಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ. ಅದರಲ್ಲಿ ಒಂದು ವಿಕಟ ಪ್ರಸಂಗ.

ಕಟ್ಟಡದ ಕೆಲಸ ಇನ್ನೂ ಅರ್ಧಮರ್ಧವಾಗಿದ್ದಾಗ ಸಜ್ಜನರಾಯರು ರಾತ್ರಿ ಹೊತ್ತು ಅಲ್ಲಿಯೇ ಮಹಡಿಯ ಮೇಲೆ ಮಲಗಿರುತ್ತಿದ್ದರು. ಒಂದು ರಾತ್ರಿ ಸುಮಾರು ೧೨ ಘಂಟೆಯ ನಂತರ, ಅವರು ಅರೆನಿದ್ರೆಯಲ್ಲಿದ್ದಾಗ ಒಂದು ಭಯಂಕರವಾದ ಆರ್ತಧ್ವನಿ ಅವರಿಗೆ ಕೇಳಿಬಂತು, “ಅಯ್ಯೋ! ಅಯ್ಯೋ!” ಎಂದು. ರಾಯರಿಗೆ ಕೊಂಚ ದಿಗಿಲಾಯಿತು. ಆದರೂ ಎದ್ದು ಬಂದು ಅಂಗಡಿಯ ಮಹಡಿಯ ಮೇಲಿನ ಕೈಸಾಲೆಯಲ್ಲಿ ನಿಂತು ಚೌಕದ ಕಡೆ-ದೊಡ್ಡ ಪೇಟೆ ಚಿಕ್ಕಪೇಟೆಗಳು ಸೇರುವ ಕಡೆ-ನೋಡಿದರು. ಕಾಣಿಸಿದ್ದೇನು? ಒಬ್ಬ ಮನುಷ್ಯ ವ್ಯಕ್ತಿ, ಕಾಲಿನಿಂದ ತಲೆಯವರೆಗೂ ಉರಿಯುತ್ತಿದ್ದಾನೆ. ಹಾಗೆ ನಿಂತಿದ್ದದ್ದು ಒಂದೇ ನಿಮಿಷ. ಮರುನಿಮಿಷ ಆ ವ್ಯಕ್ತಿ ಸತ್ತುಬಿದ್ದ.

ಅದು ಯಾರು? ಕನ್ನಡದ ಗ್ರಂಥಲೇಖಕರಾದ ಬಿದರೆ ಅಶ್ವತ್ಥನಾರಾಯಣ ಶಾಸ್ತ್ರಿಗಳೆಂಬವರು. ಈ ಶಾಸ್ತ್ರಿಗಳ ಮನೆ ಕಾಳಮ್ಮನ ಗುಡಿಯ ಸಮೀಪದಲ್ಲಿ ಯಾವುದೋ ಸಂದಿಯಲ್ಲಿತ್ತಂತೆ. ಏನಾಯಿತೋ ಏನೋ, ಆ ಮನುಷ್ಯ ತನ್ನ ಪಕ್ಕದಲ್ಲಿ ಮಲಗಿ ನಿದ್ರಿಸುತ್ತಿದ್ದ ಇಬ್ಬರು ಹೆಂಡಿರನ್ನೂ ಇಬ್ಬರು ಮಕ್ಕಳನ್ನೂ ಕಡಿದು ಕೊಲೆಮಾಡಿ, ತನ್ನ ಮೈಗೆ ಕಾಲಿನಿಂದ ತಲೆಯವರೆಗೂ ಬಟ್ಟೆ ಸುತ್ತಿ, ಅದರ ಮೇಲೆ ಸೀಮೆ ಎಣ್ಣೆ ಸುರಿದುಕೊಂಡು ಅದಕ್ಕೆ ಬೆಂಕಿಯುರಿಯನ್ನು ತಾನೇ ಹೊತ್ತಿಸಿಕೊಂಡು, ಅಲ್ಲಿಂದ ಘೋರವಾಗಿ ಕೂಗಿಕೊಂಡು ಓಡಿಬಂದು ದೊಡ್ಡಪೇಟೆ ಚೌಕದಲ್ಲಿ ಬಿದ್ದು ದೇಹತ್ಯಾಗ ಮಾಡಿದ.

ಈ ಘೋರವಾದ ಕಥೆಯನ್ನು ಅದರ ಮಾರನೆಯ ದಿನ ಸಜ್ಜನರಾಯರೇ ನನಗೆ ಹೇಳಿದರು. ಶಿವಶಿವ. ಶಾಂತಂ ಪಾಪಂ.

ರಾಮಲಿಂಗಸ್ವಾಮಿಗಳು

ಸಜ್ಜನರಾಯರಿಗೆ ಬಹುಶಃ ಅವರ ಚಿಕ್ಕ ವಯಸ್ಸಿನಿಂದ ಅಧ್ಯಾತ್ಮಭಕ್ತಿಯು ಸಹಜವಾಗಿ ಬಂದಿದ್ದಂತೆ ಕಾಣುತ್ತದೆ. ಬೈರಾಗಿಗಳು, ಸಾಧುಗಳು, ಯತಿಗಳು, ವಿರಕ್ತರು, ಫಕೀರರು, ಯೋಗಾಭ್ಯಾಸಿಗಳು–ಇಂಥವರಲ್ಲಿ ತುಂಬ ಆದರಣೆ, ಅವಧೂತ ಮಹಾದೇವಶಾಸ್ತ್ರಿಗಳ ವಿಷಯವನ್ನು ಕುರಿತು ಬರೆಯುವಾಗ ಇದನ್ನು ಪ್ರಸ್ತಾವಿಸಿದ್ದೇನೆ (ಅಧ್ಯಾಯ ೮). ಅಂಥ ಮಹನೀಯರನ್ನು ಹುಡುಕಿ ಗುರುತು ಹಿಡಿದು ಆಶ್ರಯಿಸುವುದು ಸಜ್ಜನರಾಯರ ಸ್ವಭಾವ.

ಯಾವುದೋ ಒಂದು ಸಂದರ್ಭದಲ್ಲಿ ಅವರಿಗೆ ಹಾಗೆಯೇ ರಾಮಲಿಂಗಸ್ವಾಮಿಗಳೆಂಬ ತಮಿಳುದೇಶದ ಒಬ್ಬ ವಿರಕ್ತ ಸ್ವಾಮಿಗಳ ಪರಿಚಯವಾಯಿತು. ಆ ಪರಿಚಯವು ಭಕ್ತಿಯಾಯಿತು. ಏಕಾಂತ ಭಕ್ತಿಯಾಯಿತು. ಆ ಸ್ವಾಮಿಗಳು ತಮ್ಮ ಸ್ವಂತಕ್ಕಾಗಿ ಏನನ್ನೂ ಯಾರಿಂದಲೂ ತೆಗೆದುಕೊಳ್ಳುತ್ತಿದ್ದವರಲ್ಲ. ಅತಿಶಯವಾದ ಪ್ರೀತಿಯಿಂದ ಭಕ್ತರು ಯಾರಾದರೂ ಒತ್ತಾಯಪಡಿಸಿದರೆ ಅವರು ತೆಗೆದುಕೊಳ್ಳುತ್ತಿದ್ದದ್ದು ಒಂದು ಬಾಳೆಹಣ್ಣು ಅಥವಾ ಒಂದು ಹಿಡಿ ಅರಳು, ಒಂದು ಬಟ್ಟಲು ಹಾಲು–ಇಷ್ಟನ್ನು ಮಾತ್ರ. ಅವರ ವೈಯುಕ್ತಿಕವಾದ ಚರಿತ್ರೆ, ಯಾರಿಗೂ ತಿಳಿದಂತಿಲ್ಲ. ಅವರು ಆಗಾಗ ಸಜ್ಜನರಾಯರಲ್ಲಿಗೆ ಬರುವರು. ಅವರಿಗೂ ಸಜ್ಜನರಾಯರಿಗೂ ಏನು ಮಾತುಕಥೆ ನಡೆಯುವುದೋ ಅದನ್ನು ಯಾರೂ ಅರಿಯರು. ರಾಯರಿಗೆ ಪರಮ ಪ್ರಿಯರಾಗಿದ್ದ ಅವರ ಅಳಿಯಂದಿರಾದ ಮನ್ನಾಜಿರಾಯರಿಗೂ ಇದು ಗೋಪ್ಯವಾದ ಸಂಗತಿಯೇ.

ಆದರೆ ಆ ಸ್ವಾಮಿಗಳ ಉಪದೇಶದಂತೆ ಸಜ್ಜನರಾಯರು ಸುಬ್ರಹ್ಮಣ್ಯಸ್ವಾಮಿಯ ದೇವಾಲಯವನ್ನೂ, ಧರ್ಮಸತ್ರವನ್ನೂ ಕಟ್ಟಿಸಿದರೆಂದು ಅವರಿವರು ಹೇಳಿದ್ದನ್ನು ನಾನು ಕೇಳಿದ್ದೇನೆ; ಹಾಗಿದ್ದರೂ ಇರಬಹುದೆಂದು ತಿಳಿದಿದ್ದೇನೆ.

ಪರಿಷ್ಕಾರ

ಸಜ್ಜನರಾಯರು ಯಾವ ಕೆಲಸವನ್ನು ಕೈಗೆ ತೆಗೆದುಕೊಂಡರೂ ಅದನ್ನು ಪರಿಷ್ಕಾರ ಕ್ರಮದಿಂದ ಮಾಡುತ್ತಿದ್ದರು. ಅವರು ಕಟ್ಟಿಸಿದ ದೇವಾಲಯದಲ್ಲಿ ವಿಗ್ರಹಗಳನ್ನೂ ಕಂಭಗಳನ್ನೂ ಮಾತ್ರವೇ ಅಲ್ಲ, ನೆಲದ ಮೇಲಿನ ಹಾಸುಗಳನ್ನೂ ಮಂಟಪದಲ್ಲಿನ ಹಾಸುಗಲ್ಲುಗಳನ್ನೂ ದಿನದಿನವೂ ತೊಳೆಯಬೇಕು. ಎಣ್ಣೆಯ ಜಿಡ್ಡು ಏನಾದರೂ ಇದ್ದರೆ ಅದನ್ನು ಉಜ್ಜಿ ಚೊಕ್ಕಟ ಮಾಡಬೇಕು. ಇದಕ್ಕಾಗಿ ತಿಂಗಳು ತಿಂಗಳೂ ಬೇಕಾಗುವ ಪಟಿಕ ಉಪ್ಪಿನ ಸರಬರಾಯಿ, ಪೊರಕೆಗಳು, ಗೋಣಿತಾಟಿನ ಬಟ್ಟೆ–ಈ ಎಲ್ಲ ಪರಿಕರಗಳಿಗೂ ಪಟ್ಟಿ ಮಾಡಿ ಇಷ್ಟಿಷ್ಟು ವಿನಿಯೋಗವಾಗತಕ್ಕದ್ದೆಂದು ಬರೆಯಿಸಿಟ್ಟರು. ಅದರಂತೆ ಕೆಲಸ ನಡೆಯುತ್ತಿದೆಯೆ ಎಂದು ತಾವು ಅಲ್ಲಲ್ಲಿ ಕೈಯಿಟ್ಟು ನೋಡಿ ಪರೀಕ್ಷಿಸುವರು.

ದೇವಸ್ಥಾನಕ್ಕಾಗಿ ಜಾಗ ಬೇಕೆಂದು ದಿವಾನ್ ಮಿರ್ಜಾರವರಲ್ಲಿಯೂ ಇತರ ಅಧಿಕಾರಿಗಳಲ್ಲಿಯೂ ಅವರು ಪದೇ ಪದೇ ಹೋಗಿಬರಬೇಕಾಗಿತ್ತು. ಆಗ ಅವರನ್ನು ನಾನು ಪದೇ ಪದೇ ಕಾಣುತ್ತಿದ್ದೆ. ಜಾಗ ದೊರೆತ ಮೇಲೆ ಕಟ್ಟಡಕ್ಕಾಗಿ ನಕಾಶೆ ತಯಾರಿಸಿದ್ದು, ಕೆಲಸಗಾರರನ್ನು ನಿಯಮಿಸಿಕೊಂಡದ್ದು, ಕಲ್ಲು ಇಟ್ಟಿಗೆ ಗಾರೆಗಳ ಏರ್ಪಾಟು, ಈ ನಾನಾ ಕಾರುಬಾರುಗಳನ್ನು ಅವರು ನಡಸಿದ್ದನ್ನು ನಾನು ನೋಡಿದ್ದೇನೆ. ರಾಯರು ಸ್ವಂತ ಕೈಯಿಂದ ಮುಟ್ಟಿ ನೋಡಿ ಅಜಮಾಯಿಷಿ ಮಾಡದೆ ಇದ್ದ ಕಲ್ಲು ಆ ಕಟ್ಟಡದೊಳಗೆ ಒಂದು ಅಂಗುಲದಷ್ಟೂ ಇಲ್ಲ. ಪ್ರತಿಯೊಂದು ಸಣ್ಣ ತಪಶೀಲನ್ನೂ ಸಹ ಅವರು ಪಾಲುಮಾರದೆ ನೋಡಿಕೊಂಡರು. ಕಟ್ಟಡದ ಕೆಲಸ ಎರಡು ಮೂರು ವರ್ಷ ನಡೆಯಿತೆಂದು ನನ್ನ ಜ್ಞಾಪಕ. ಪ್ರತಿದಿನವೂ ಬೆಳಿಗ್ಗೆ ಸುಮಾರು ೮ ರಿಂದ ರಾತ್ರಿ ೮ರ ವರೆಗೂ ರಾಯರು ಅಲ್ಲಿಯೇ ಇರುತ್ತಿದ್ದರು. ಅವರ ಸ್ನೇಹಿತರೂ ಇತರ ಜನರೂ ಅವರನ್ನು ಕಾಣಲು ಅಲ್ಲಿಗೇ ಬರುತ್ತಿದ್ದರು.

‘ದುಡ್ಡು’

ಗುಡಿಯ ಕಟ್ಟಡ ಮುಗಿಯಿತು. ಪ್ರತಿಷ್ಠೆಯಾಯಿತು. ಆಗ ಒಂದು ವಿನೋದ.

ಅಲ್ಲಿಗೆ ಸಮೀಪದಲ್ಲಿ ಸೀನಿಯರ್ ಸರ್ಜನ್ ಎಸ್. ಸುಬ್ಬರಾಯರ ಮನೆ. ನಾನು ಸ್ನೇಹದ ಭೇಟಿಗಾಗಿ ಅಲ್ಲಿಗೆ ಹೋಗಿದ್ದೆ. ಹತ್ತು ನಿಮಿಷದೊಳಗಾಗಿ ಸಜ್ಜನರಾಯರೂ ಅಲ್ಲಿಗೆ ಬಂದರು. ಡಾ ॥ ಸುಬ್ಬರಾಯರು ಕೇಳಿದರು,

ಸು: “ಏನು ರಾಯರೆ, ಗುಡಿ ಕಟ್ಟಿಸಿದಿರಿ. ಬೋಳು ಬೋಳಾಗಿ ನಿಲ್ಲಿಸಿದಿರಿ; ಗೋಪುರ ಕಟ್ಟುವುದಿಲ್ಲವೆ?”

ಸ: “ದುಡ್ಡಿಲ್ಲ ಸ್ವಾಮಿ.”

ಸುಬ್ಬರಾಯರು ತತ್‌ಕ್ಷಣವೇ ಕೋಣೆಯೊಳಕ್ಕೆ ಹೋಗಿ ಬಂದು, ಒಂದು ಮೂರು ಕಾಲಿನ ಬಿಲ್ಲೆ, ಅದರ ಒಂದು ಬಿಡಿಕಾಸು; – ಇದನ್ನು ಮೇಜಿನ ಮೇಲೆ ಕುಕ್ಕಿದರು.

ಸ: “ಇದೇನು?”

ಸು: “ದುಡ್ಡಿಲ್ಲವೆಂದಿರಲ್ಲ–ತೆಗೆದುಕೊಳ್ಳಿ, ಗೋಪುರ ಕಟ್ಟಿಸಿ, ಗೋಪುರವಿಲ್ಲದ ಗುಡಿಯನ್ನು ಎಷ್ಟು ದಿನ ನೋಡುವುದು?”

ಸಜ್ಜನರಾಯರು ಆಗ ಹೇಳಿದರು: “ಸ್ವಾಮಿ, ಪುಣ್ಯಾತ್ಮರು ಲೋಕದಲ್ಲಿ ಯಾರು ಯಾರಿದ್ದಾರೋ–ಅಂಥವರೆಲ್ಲರಿಂದಲೂ ನಾನು ಹಣ ಬೇಡುತ್ತೇನೆ. ಇದರಲ್ಲಿ ನನ್ನದೇನೂ ಇಲ್ಲ. ನಿಮ್ಮಂಥವರ ಪುಣ್ಯದಿಂದ ದೇವರ ಕಾರ್ಯ ನಡೆಯಬೇಕು. ನಿಮ್ಮ ಈ ದುಡ್ಡಿನಿಂದಲೇ ಪುಣ್ಯಕಾರ್ಯ ಪ್ರಾರಂಭ.”

ಇದು ನಡೆದ ಒಂದೆರಡು ತಿಂಗಳೊಳಗಾಗಿ ಗೋಪುರದ ಕೆಲಸ ಆರಂಭವಾಯಿತು.

ರಾಯರು ಮಡಿಯುಟ್ಟು ಪತ್ನೀಸಮೇತರಾಗಿ ನಾಲ್ಕು ಬೀದಿ ತಿರುಗಿದರು. ಜನರಿಗೆಲ್ಲ ಒಳ್ಳೆಯ ಕಾರ್ಯವನ್ನು ಅಷ್ಟು ಒಳ್ಳೆಯವರು ಪ್ರಾರಂಭ ಮಾಡಿದರಲ್ಲ ಎಂದು ಸಂತೋಷ. ತಮತಮಗೆ ತೋರಿದ ಕಾಣಿಕೆಗಳನ್ನು ಅವರೆಲ್ಲ ರಾಯರ ತಟ್ಟೆಯಲ್ಲಿ ಹಾಕಿದರು. ಆ

ಕಾಣಿಕೆಗಳಿಗೆ ಬೆಲೆಯನ್ನು ಬ್ಯಾಂಕಿನ ದೃಷ್ಟಿಯಿಂದ ಕಟ್ಟತಕ್ಕದ್ದಲ್ಲ, ಗಣಿತದ ದೃಷ್ಟಿಯಿಂದಲೂ ಅಲ್ಲ; ಜನದ ಮನೋಭಾವದ ದೃಷ್ಟಿಯಿಂದ, ಬಹು ಜನರ ಪರಿಶುದ್ಧವಾದ ಭಕ್ತಿ ತಮ್ಮ ಪ್ರಯತ್ನದಲ್ಲಿ ಸೇರಬೇಕೆಂದು ಸಜ್ಜನರಾಯರ ಹಂಬಲ.

ಕೃತಕೃತ್ಯತೆ

ಗೋಪುರದ ಕೆಲಸ ಮುಗಿದ ಮೇಲೆ ಕಲಶಸ್ಥಾಪನೆಯಾಗಿ ಸಂಪ್ರೋಕ್ಷಣೆ ನಡೆದ ದಿನ ಸಜ್ಜನರಾಯರನ್ನು ನೋಡಬೇಕು: ಆಗ ಅವರು ಕೃತಕೃತ್ಯತೆಯ ಸಂತೋಷದ ಮೂರ್ತಸ್ವರೂಪರು, ತುಂಬ ಆನಂದ. ಮನುಷ್ಯಜೀವನದ ಸಾರಭಾಗವೆಂದರೆ ಆ ಸಂತೋಷ. ಅಂಥ ನಿರ್ಮಲವಾದ ಸಂತೋಷಕ್ಕಾಗಿ ಬದುಕಬೇಕು. ಯಾರಿಗೆ ಆ ಸಂತೋಷ ದೊರೆತಿದೆಯೋ ಅವರೇ ಧನ್ಯರು.

***

ಒಂದು ದಿನ ಮಧ್ಯಾಹ್ನ ಸುಮಾರು ಮೂರು ಘಂಟೆಯ ಸಮಯದಲ್ಲಿ ಸಜ್ಜನರಾಯರು ನನ್ನ ಮನೆಗೆ ದಯಮಾಡಿಸಿದರು. ನಾನು ಅವರನ್ನು ಬರಮಾಡಿಕೊಂಡು ಅವರು ಕುಳಿತ ಮೇಲೆ ಕೇಳಿದೆ:

ನಾನು: “ಏನು ರಾಯರೆ–ಈ ಬಿಸಿಲಿನಲ್ಲಿ ಬರೋಣವಾಯಿತಲ್ಲ? ಉರಿಬಿಸಿಲು.”

ಸ: “ಬಿಸಿಲಿರಲಿ ಸ್ವಾಮಿ, ಅದನ್ನು ಹೇಗಾದರೂ ತಡೆಯಬಹುದು. ನನ್ನ ಮನಸ್ಸಿನಲ್ಲಿ ಒಂದು ಕಳವಳ ಎದ್ದಿದೆಯಲ್ಲ? ಅದರ ತಾಪ ಬಲವಾಗಿದೆ. ನಿಮ್ಮನ್ನು ಒಂದು ಕೇಳಬೇಕು ಅನ್ನಿಸಿತು, ಬಂದೆ.”

ನಾನು: “ಏನು ರಾಯರೆ ಅಂಥ ಕಳವಳ ನಿಮಗೆ? ದೇವಸ್ಥಾನದ ಕೆಲಸ ಚೆನ್ನಾಗಿ ನಡೆದಿದೆಯಲ್ಲ?”

ಸ: “ಸ್ವಾಮಿ, ನಮ್ಮ ಹಿಂದೂ ಮತ ಉಳಿಯುತ್ತದೆಯೆ?”

ನಾನು: “ಇದೇನು ಹೀಗೆನ್ನುತ್ತೀರಿ? ಎರಡು ವರ್ಷದ ಹಿಂದೆಯಾದರೂ ಕೇಳಿದ್ದಿದ್ದರೆ ನಿಮಗೆ ಎರಡು ಲಕ್ಷ ರೂಪಾಯಿ ಉಳಿಸುವ ಏರ್ಪಾಟು ಮಾಡಬಹುದಾಗಿತ್ತು!”

ಸ: “ಅದು ಹೇಗೆ?”

ನಾನು: “ಗುಡಿ, ಸತ್ರ ಕಟ್ಟುವುದನ್ನು ಆಗ ನಿಲ್ಲಿಸಬಹುದಾಗಿತ್ತು.”

ಸ: “ತಮಾಷೆ ಮಾಡಬೇಡಿ ಸ್ವಾಮಿ, ನನಗೆ ಮನಸ್ಸಿನಲ್ಲಿ ಕಾತರವಾಗಿದೆ.”

ನಾನು: “ರಾಯರೆ, ನಿಮಗೇಕೆ ಇಂಥ ಭಯ? ಹಿಂದೂ ಮತ ಶಾಶ್ವತವಾಗಿರತಕ್ಕದ್ದು. ಅದಕ್ಕೆ ಎಂದಿಗೂ ಚ್ಯುತಿ ಬರಲಾರದು.”

ಸ: “ಯಾರುಯಾರೋ ಅಂತಾರೆ ಸ್ವಾಮಿ– ‘ಗುಡಿಗೆ ಯಾಕೆ ಹಾಕಿದೆ ದುಡ್ಡು? ಅದಕ್ಕೆ ಬದಲಾಗಿ ಇನ್ನೇನಾದರೂ ಧರ್ಮಕಾರ್ಯ ಮಾಡಬಹುದಾಗಿತ್ತು. ಸ್ಕೂಲೋ ಆಸ್ಪತ್ರೆಯೋ ಪಶುವೈದ್ಯಶಾಲೆಯೋ ವಿದ್ಯಾರ್ಥಿನಿಲಯವೋ ಮಾಡಿದ್ದರೆ ಚೆನ್ನಾಗಿತ್ತು’ –ಅನ್ನುತ್ತಾರೆ ಸ್ವಾಮಿ. ಅದರಿಂದ ಮನಸ್ಸು ಕೊಂಚ ನೋಯುತ್ತದೆ.”

ನಾನು: “ಸ್ಕೂಲು, ವಿದ್ಯಾರ್ಥಿನಿಲಯ ಅದೆಲ್ಲ ಒಳ್ಳೆಯದೇ. ಅದು ಕೆಟ್ಟದ್ದೆಂದು ಯಾರೂ ಹೇಳರು. ಆದರೆ ಅದೆಲ್ಲಕ್ಕೂ ಮೂಲಭೂತವಾದದ್ದು ಭಗವಂತ. ಭಗವಂತನಲ್ಲಿ ನಂಬಿಕೆಯಿದ್ದರೆ ಆ ನಂಬಿಕೆಯಿಂದ ಹುಟ್ಟತಕ್ಕದ್ದು ಧರ್ಮ. ಭಗವಂತನೇ ಇಲ್ಲವೆಂದರೆ ಧರ್ಮವೇಕೆ, ನೀತಿಯೇಕೆ? ನಮ್ಮ ಜೀವನ ಇರುವುದು ಭಗವಂತನಲ್ಲಿ ಇಟ್ಟಿರುವ ವಿಶ್ವಾಸದ ಆಧಾರದ ಮೇಲೆ. ಆ ಭಗವಂತನಾದರೋ ನಮ್ಮ ಕಣ್ಣಿಗೆ ಕಾಣಿಸುವ ವಸ್ತುವಲ್ಲ. ಅದು ನಮ್ಮ ಕೈಗೆ ದೊರಕತಕ್ಕದಲ್ಲ. ಆದದ್ದರಿಂದ ಭಗವಂತನನ್ನು ನಾವು ಧ್ಯಾನ ಮಾಡುವುದಕ್ಕೆ ಏನಾದರೂ ಒಂದು ಗುರುತು ಬೇಕು. ನಾವು ಆ ಗುರುತಿನ ಮೂಲಕ ಭಗವಂತನನ್ನು ಮನಸ್ಸಿನಲ್ಲಿ ಕಲ್ಪನೆ ಮಾಡಿಕೊಳ್ಳುತ್ತೇವೆ. ಆ ಗುರುತೇ ಗುಡಿ. ಆದದ್ದರಿಂದ ಮನುಷ್ಯನಿಗೆ ಭಗವಂತನ ಆವಶ್ಯಕತೆ ಎಷ್ಟು ಕಾಲ ಇರುತ್ತದೆಯೋ ಅಷ್ಟು ಕಾಲ ಗುಡಿಯ ಆವಶ್ಯಕತೆ ಇರುತ್ತದೆ. ಗುಡಿಯೇ ಭಗವಂತನಲ್ಲ. ಆದರೆ ಗುಡಿಯ ಮೂಲಕ ಭಗವಂತ. ಇದು ಸಾಮಾನ್ಯ ಜನಗಳ ದಾರಿ.”

ಶಾಶ್ವತ ವಸ್ತು

“ಮುಸಲ್ಮಾನರ ವಿಷಯದಲ್ಲಿಯೂ ಕಿರಸ್ತಾನರ ವಿಷಯದಲ್ಲಿಯೂ ಕೂಡ ಇದು ಒಪ್ಪಬೇಕಾದ ಮಾತು. ದೇವರನ್ನು ಬಿಟ್ಟರೆ ಮನುಷ್ಯನಿಗೆ ಜೀವನಾಧಾರವೇನಿದೆ? ಜಮೀನು, ಮನೆ. ಬ್ಯಾಂಕಿನಲ್ಲಿ ಹಣ, ಚಿನ್ನ–ಇದನ್ನೆಲ್ಲ ನಂಬಿಕೊಂಡು ಮನುಷ್ಯ ಎಷ್ಟು ದಿನ ಬದುಕಿಯಾನು? ಮಕ್ಕಳು ಮಡದಿ, ಸ್ನೇಹಿತರು ಬಳಗ–ಇವೆಲ್ಲ ಎಷ್ಟು ದಿನ ಇರುತ್ತವೆ? ದೇವರಲ್ಲವೆ ಶಾಶ್ವತವಾದ ವಸ್ತು? ಮನುಷ್ಯ ಎಷ್ಟು ಬಲಿಷ್ಠನಾದರೂ, ಎಂಥ ಬುದ್ಧಿವಂತನಾದರೂ ಅವನ ಶಕ್ತಿಗೂ ಸಂಪತ್ತಿಗೂ ಎಂದೋ ಒಂದು ದಿನ ಕೊನೆ ಬಂದೇಬರುತ್ತದಲ್ಲವೆ? ಆಗ ಅವನು ತನ್ನ ಅಸಹಾಯಕತೆಯನ್ನು ಕಂಡುಕೊಂಡು ಭಗವಂತನನ್ನು ನಂಬಬೇಕಾಗುತ್ತದೆ. ಅಂಥ ಜನ ಬೆಂಗಳೂರು ಸುತ್ತಮುತ್ತಲಿನವರು ವಿಶ್ವೇಶ್ವರಪುರಕ್ಕೆ ಬಂದು ಸುಬ್ರಹ್ಮಣ್ಯಸ್ವಾಮಿಯನ್ನು ಶರಣುಹೋಗುತ್ತಾರೆ. ಸಾವಿರಾರು ವರ್ಷ ಸಾವಿರಾರು ಮಂದಿಗೆ ಬದುಕಲು ಒಂದು ಧೈರ್ಯವನ್ನೂ ಒಂದು ಉತ್ಸಾಹವನ್ನೂ ಉಂಟುಮಾಡಲು ಕಾರಣವಾಗುವ ಕೆಲಸವನ್ನು ನೀವು ಮಾಡಿದ್ದೀರಿ. ಇದೇ ಶಾಶ್ವತ ಧರ್ಮ.”

ಸಜ್ಜನರಾಯರು ನನ್ನ ಮಾತನ್ನು ಗಮನವಿಟ್ಟು ಲಾಲಿಸಿದರು. ತಮ್ಮ ಮನಸ್ಸಿಗೆ ಧೈರ್ಯ ಬಂತೆಂದು ಹೇಳಿ ಹೊರಟುಹೋದರು.

ನಮ್ರತೆ

ರಾಯರ ಸ್ವಭಾವವನ್ನು ತಿಳಿಸುವ ಒಂದು ಸಂಗತಿಯನ್ನು ಹೇಳುತ್ತೇನೆ.

ಇನ್ನೊಂದು ದಿನ ಮಧ್ಯಾಹ್ನ ಅವರು ನನ್ನ ಮನೆಗೆ ಬಂದರು. ಆಗ ನಾನು ಸಾಮಾನ್ಯವಾಗಿ ಕಾಫಿ ಸೇವಿಸುವ ಹೊತ್ತು. ಅಂಥ ಸಮಯಕ್ಕೆ ರಾಯರು ನನ್ನ ಮನೆಗೆ ಬಂದದ್ದು ನನಗೆ ತುಂಬ ಸಂತೋಷ. ನನ್ನ ಮನೆಯಲ್ಲಿ ಮಾಡಿದ ಉಪ್ಪಿಟ್ಟನ್ನು ಒಂದು ತಟ್ಟೆಯಲ್ಲಿಯೂ ಕಾಫಿಯನ್ನು ಒಂದು ಬಟ್ಟಲಿನಲ್ಲಿಯೂ ನನ್ನ ತಂಗಿ ತಂದು ನನಗೆ ಕೊಡುವಂತೆಯೇ ಅವರಿಗೂ ಕೊಟ್ಟಳು. ನಾವು ಆ ಮಾತು ಈ ಮಾತು ಆಡುತ್ತ ಉಪಾಹಾರ ಮಾಡುತ್ತಿದ್ದೆವು. ಅಷ್ಟರಲ್ಲಿ ಒಂದು ವಿಷಯ ನನಗೆ ಜ್ಞಾಪಕಕ್ಕೆ ಬಂತು. ರಾಯರು ತಾಂಬೂಲಪ್ರಿಯರು. ಏನು ಆಹಾರ ತೆಗೆದುಕೊಂಡರೂ ಆಮೇಲೆ ಕೊಂಚ ಮಜ್ಜಿಗೆ ಕುಡಿದು ತಾಂಬೂಲಚರ್ವಣವಾಗಬೇಕು. ಆದರೆ ನಾನು ತಾಂಬೂಲ ಹಾಕುವವನಲ್ಲ. ತಾಂಬೂಲವನ್ನು ಸಿದ್ಧಪಡಿಸಬೇಕೆಂದು ನನ್ನ ತಂಗಿಗೆ ಹೇಳುವುದಕ್ಕಾಗಿ ನಾವು ಕುಳಿತಿದ್ದ ಕೋಣೆಯಿಂದ ಮನೆಯೊಳಕ್ಕೆ ಹೋದೆ. ಹೋಗಿ ತಾಂಬೂಲದ ಮಾತನ್ನು ಹೇಳಿ ನಾನು ಕೊಠಡಿಗೆ ಹಿಂತಿರುಗಿ ಬರುವಾಗ ರಾಯರು ಕೊಠಡಿಯಿಂದ ಎದ್ದು ಹಾಲಿನೊಳಕ್ಕೆ ಬಂದು ಬಾಗಿಲುಗಳ ಹಿಂದುಗಡೆ ಹುಡುಕುತ್ತಿದ್ದರು. ಅದು ನನಗೆ ಅರ್ಥವಾಗಲಿಲ್ಲ. ನಾನು ಕೇಳಿದೆ: “ಏನು ರಾಯರೆ, ಏನು ಬೇಕು?”

ರಾಯರು: (ಕೈತೋರಿಸಿ, ಮೆಲುಮಾತಿನಲ್ಲಿ) “ಸಣ್ಣ ಪೊರಕೆ!”

ನನಗೆ ತುಂಬ ಆಶ್ಚರ್ಯವಾಯಿತು. “ಯಾತಕ್ಕೆ?” ಎಂದೆ.

ರಾಯರು: “ಸ್ವಾಮಿ ಬ್ರಾಹ್ಮಣರ ಮನೆ, ಉಪ್ಪಿಟ್ಟು ತಿಂದಾಗ ಒಂದೆರಡು ಕಾಳು ನೆಲದ ಮೇಲೆ ಬಿದ್ದಿರಬಹುದು. ಪೊರಕೆ ಸಿಕ್ಕಿದರೆ ಅದನ್ನು ನಾನೇ ಬಳಿದು ನೀರುಹಾಕಿ ಚೊಕ್ಕಟಪಡಿಸುತ್ತೇನೆ.”

ನನಗಾದ ಆಶ್ಚರ್ಯವನ್ನು ವಾಚಕರು ಊಹಿಸಿಯಾರು. ಲಕ್ಷಾಧೀಶರಾಗಿದ್ದವರು, ಮಹಾಧರ್ಮಿಷ್ಠರಾದವರು, ನನ್ನಂಥವರನ್ನು ನೂರು ಜನರನ್ನು ಕೈಕೆಳಗಿರಿಸಿಕೊಳ್ಳಬಹುದಾದವರು, –ಹೀಗುಂಟೆ?

ಅಂತರಂಗದ ಸೊಗಸು

ನಾನು ಆಶ್ಚರ್ಯಪಟ್ಟದ್ದನ್ನು ನೋಡಿ ರಾಯರು ಹೀಗೆಂದರು:

“ಇದೇನು ಸ್ವಾಮಿ ಮಹಾವಿಷಯ? ನನಗೆ ಇದು ಸಾಮಾನ್ಯವಾದ ಅಭ್ಯಾಸ. ನನ್ನ ಸೋದರಮಾವ ಭೋಜಗಡೆ ವೆಂಕಟರಾಯರ ಅಂಗಡಿಯಲ್ಲಿ ನಾನು ಚಾಕರಿ ಮೊದಲು ಮಾಡಿದ್ದು. ಸಾಯಂಕಾಲ ೮ ಘಂಟೆಯಾಗುತ್ತಲೇ ಅಂಗಡಿ ಬಾಗಿಲು ಮುಚ್ಚಿ ಜಮಖಾನ, ದಿಂಬು ಎಲ್ಲ ಕೊಡಹಿ ಒಳಗೆಲ್ಲ ಕಸ ಬಳಿದು ಒಂದು ಕಣ ಕೂಡ ಧೂಳಿಲ್ಲದಂತೆ ಚೊಕ್ಕಟ ಮಾಡಿದ ಮೇಲೆ ಬಾಗಿಲು ಹಾಕತಕ್ಕದು. ಮಾರನೆಯ ದಿನ ಬೆಳಗ್ಗೆ ಬಾಗಿಲು ತೆಗೆಯುತ್ತಲೇ ಎಲ್ಲ ಪಾಕಾಗಿ ಪಸಂದಾಗಿರಬೇಕು. ಇದು ಅಂದಿನಿಂದ ನನಗೆ ರೂಢಿ. ಬ್ರಾಹ್ಮಣರ ಮನೆಯಲ್ಲಿ ನಾನು ಮಾಡಿದ ಮೈಲಿಗೆಯನ್ನು ನಾನು ತೆಗೆದು ಹಾಕುವುದು ಕಷ್ಟವೆ? ಬಿಡಿಬಿಡಿ ಸ್ವಾಮಿ.”

ಈ ಸಂಗತಿಯ ಮೇಲೆ ವ್ಯಾಖ್ಯಾನ ಅವಶ್ಯವೇ ಇಲ್ಲವಷ್ಟೆ?

ಸಜ್ಜನರಾಯರು ಸ್ನೇಹತತ್ಪರರು, ಉದಾರಿಗಳು. ಅದಕ್ಕಿಂತ ಹೆಚ್ಚಾಗಿ ವಿನಯಶೀಲರು.

ಸಜ್ಜನರಾಯರನ್ನು ವಿದ್ವತ್ಪಂಕ್ತಿಗೆ ಸೇರಿಸಬೇಕಾದ್ದಿಲ್ಲ. ಆದರೆ ಸುಸಂಸ್ಕೃತ ಜನದ ಪಂಕ್ತಿಯಲ್ಲಿ ಅವರು ಉನ್ನತ ಮಟ್ಟದಲ್ಲಿರುವವರು. ವಿದ್ವತ್ತಿಗಿಂತ ಮೇಲಾದದ್ದು ಸಂಸ್ಕೃತಿ. ವಿದ್ವತ್ತೆಂದರೆ ಪುಸ್ತಕಪಾಂಡಿತ್ಯ. ಸಂಸ್ಕೃತಿಯೆಂದರೆ ಜೀವನದ ಅಂತರಂಗದ ಸೊಗಸು.

೬

ಟಿ. ವಿ. ಆರ್ಮುಗಂ ಮೊದಲಿಯಾರರು

ಹಳೆಯ ಮೈಸೂರಿನಲ್ಲಿ ವೈದ್ಯರಾಗಿ ಮಹಾ ದಯಾಳುವೆಂದೂ, ಮಹಾ ಸಮರ್ಥರಾದ ಶಸ್ತ್ರಚಿಕಿತ್ಸಕರೆಂದೂ ಪ್ರಸಿದ್ಧರಾದ ರಾವ್ ಬಹದ್ದೂರ್ ಡಾ ॥ ಟಿ.ವಿ. ಆರ್ಮುಗಂ ಮೊದಲಿಯಾರ್ ಅವರು ಸರಿಸುಮಾರಾಗಿ ವಿಶ್ವೇಶ್ವರಯ್ಯನವರ ಸಮಕಾಲೀನರು. ಅವರು ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯ ಮುಖ್ಯಾಧಿಕಾರಿಯಾಗಿದ್ದ ಕಾಲದಲ್ಲಿ ಆ ಆಸ್ಪತ್ರೆಯ ಕೀರ್ತಿ ಎಲ್ಲ ದಿಕ್ಕುಗಳಲ್ಲಿಯೂ ಹರಡಿತು. ಅದಕ್ಕೆ ಮುಖ್ಯ ಕಾರಣ ಅವರ ವೈದ್ಯಕುಶಲತೆಯ ಜೊತೆಗೆ ಮಾನವೀಯ ಸಹೃದಯತೆ ಸೇರಿದ್ದದ್ದು. ಔಷಧಕ್ಕೆ ಸಮಾನವಾದದ್ದು ಅವರ ಸಹಾನುಭೂತಿ. ಎರಡೂ ಸೇರಿದ್ದದ್ದರಿಂದ ಉಂಟಾದದ್ದು ಅವರ ಲೋಕಪ್ರಯೋಜಕತೆ.

ಆರ್ಮುಗಂ ಮೊದಲಿಯಾರರದು ಬೆಂಗಳೂರಿನ ಗಣ್ಯಮನೆತನಗಳಲ್ಲಿ ಒಂದು. ಅವರು ಅನುಕೂಲವಂತರು.

ಆರ್ಮುಗಂರವರು ತುಂಬ ಹಾಸ್ಯಪ್ರಿಯರು. ಹಾಗೆಯೇ ಗಾಢವಾದ (ಮತ್ತು ಗೂಢವಾದ) ಭಗವದ್ಭಕ್ತರು.

ಭಗವತ್ಕೈಂಕರ್ಯ

ಬಾಲ್ಯದಲ್ಲಿ ಅವರು ಕಲಾಸಿಪಾಳ್ಯದಲ್ಲಿ ವಾಸವಾಗಿದ್ದರಂತೆ. ಆ ಪ್ರದೇಶದಲ್ಲಿರುವ ಸಹಜಾನಂದ ಸ್ವಾಮಿಗಳ ಮಠದಲ್ಲಿ ಅವರಿಗೆ ತುಂಬ ಭಕ್ತಿ. ಸಹಜಾನಂದ ಸ್ವಾಮಿಗಳು ರಸಿಚಿದ ಕನ್ನಡ ‘ವೇದಾಂತ ಪಂಚದಶೀ’ ಗ್ರಂಥದ ಮುದ್ರಣಕ್ಕಾಗಿ ಆರ್ಮುಗಂ ಮೊದಲಿಯಾರರು ಉದಾರವಾಗಿ ದ್ರವ್ಯಸಹಾಯ ಮಾಡಿದರು. ಆ ಗ್ರಂಥ ಮೈಸೂರಿನ ವೆಸ್ಲಿ ಪ್ರೆಸ್ಸಿನಲ್ಲಿ ಒಳ್ಳೆಯ ಕಾಗದದ ಮೇಲೆ ಮುದ್ರಿತವಾಗಿ ಸೊಗಸಾಗಿ ರಟ್ಟು ಕಟ್ಟಿದ್ದು. ಆ ಸ್ವಾಮಿಗಳವರು ‘ವೃತ್ತಿ ಪ್ರಾಭಾಕರ’ ಎಂಬ ಮೀಮಾಂಸಾ ಗ್ರಂಥವನ್ನೂ ಕನ್ನಡಕ್ಕೆ ತರ್ಜುಮೆ ಮಾಡಿದರು. ಆ ಸ್ವಾಮಿಗಳು ಹುಟ್ಟಿನಿಂದ ಬ್ರಾಹ್ಮಣೇತರರು. ಅವರ ಚರಿತ್ರೆ ಬೇರೆಯಾಗಿ ಬರಯಬೇಕಾದದ್ದು.

ಆರ್ಮುಗಂ ಮೊದಲಿಯಾರರು ಈ ವಿಧವಾದ ಭವತ್ಕೈಂಕರ್ಯಕ್ಕೆ ಬೆಂಬಲ ಕೊಟ್ಟವರು.

ಮೈಸೂರು ರಸ್ತೆಯಲ್ಲಿ ಬೆಂಗಳೂರು ಪ್ರೆಸ್ಸಿನಿಂದ ಈಚೆಗೆ ಒಂದು ಸಣ್ಣ ಶಿವಾಲಯವಿದೆ. ಈ ದೇವಾಲಯದ ಖರ್ಚಿಗಾಗಿಯೂ ಆರ್ಮುಗಂ ಮೊದಲಿಯಾರರು ಉದಾರವಾಗಿ ಹಣ ಕೊಡುತ್ತಿದ್ದರು.

ಗೂಢಭಕ್ತಿ

ಆದರೆ ಎಲ್ಲ ಗುಪ್ತ ದಾನ, ಅದು ಯಾರಿಗೂ ತಿಳಿಯಕೂಡದು. ಈ ಸಂಗತಿಯನ್ನು ನಾನು ಹೇಗೋ ಪತ್ತೆ ಮಾಡಿದ್ದೆ.

೧೯೩೮-೩೯ರ ಸುಮಾರು. ಬೆಂಗಳೂರಿನಿಂದ ಪೂರ್ವದ ಕಡೆ ಹದಿನಾಲ್ಕು ಹದಿನೈದು ಮೈಲಿ ದೂರದಲ್ಲಿ ಕಿತ್ತಗಾನಹಳ್ಳಿ ಎಂಬ ಗ್ರಾಮವಿದೆ. ಅದು ಶಿವಗಂಗೆ ಮಠದ ಸರ್ವಮಾನ್ಯ. ಅದಕ್ಕೆ ಸೇರಿದಂತೆ ಒಂದು ಭಾರಿ ಅಶ್ವತ್ಥಕಟ್ಟೆಯೂ, ನಾಗರ ಕ್ಷೇತ್ರವೂ ಇದೆ. ಈ ಸ್ಥಳ ಬೃಹಚ್ಚರಣವೆಂಬ ದ್ರಾವಿಡಬ್ರಾಹ್ಮಣ ಪಂಗಡಕ್ಕೆ ಯಾತ್ರಾಸ್ಥಳ. ಆ ನಾಗರಕಟ್ಟೆ ಮೊದಲಾದವು ಕಾಲಕ್ರಮದಲ್ಲಿ ಶಿಥಿಲವಾಗಿ, ಪೂಜಾಕಾರ್ಯಗಳಿಗೆ ಬಹು ಕಷ್ಟವಾಗಿದ್ದದ್ದರಿಂದ ಅದನ್ನು ಸರಿಪಡಿಸಿ ಆ ಪ್ರದೇಶವನ್ನು ಚೊಕ್ಕಟ ಮಾಡಿ ಅಲ್ಲಿ ಒಂದು ಶ್ರೀನಿವಾಸ ದೇವಾಲಯ, ಕಲ್ಯಾಣ ಮಂಟಪ ಮುಂತಾದ ಸೌಕರ್ಯಗಳನ್ನು ಮಾಡಿಸಬೇಕೆಂದು ರಿಟೈರ್ಡ್ ಸಬ್‌ಜಡ್ಜಿ ಕಾಚರಕನ ಹಳ್ಳಿ ಲಕ್ಷ್ಮೀನಾರಣಪ್ಪನವರು ಸಂಕಲ್ಪಮಾಡಿದರು. ಅಲ್ಲಿಂದ ಕೊಂಚ ಕಾಲದೊಳಗಾಗಿ ಅವರು ತೀರಿಕೊಂಡ ಬಳಿಕ, ಆ ಧರ್ಮಕಾರ್ಯವನ್ನು ಮುಂಬರಿಸಬೇಕೆಂದು ಅವರ ಮಕ್ಕಳು ಪದ್ಮನಾಭಯ್ಯನವರು ಮುಂದೆ ನಿಂತರು. ಅವರು ಸಹಾಯಕ್ಕಾಗಿ ತೆಗೆದುಕೊಂಡ ಸ್ನೇಹಿತರಲ್ಲಿ ನಾನೂ ಒಬ್ಬ. ಆದದ್ದರಿಂದ ನಾನು ಪದ್ಮನಾಭಯ್ಯನವರ ಮನೆಗೆ ಪದೇ ಪದೇ ಹೋಗಿಬರಬೇಕಾಗಿತ್ತು. ಈ ಕಾಲದಲ್ಲಿ ಒಂದು ದಿನ ಡಾ ॥ ಆರ್ಮುಗಂ ಮೊದಲಿಯಾರರು ಅಲ್ಲಿಗೆ ಬಂದರು. ಅವರೂ ಲಕ್ಷ್ಮೀನಾರಣಪ್ಪನವರೂ ಗಾಢ ಸ್ನೇಹಿತರು. ಆರ್ಮುಗಂ ಮೊದಲಿಯಾರರು ನನ್ನ ಕಡೆ ತಿರುಗಿ (ತಮಿಳಿನಲ್ಲಿ) ಕೇಳಿದರು:

ಆ: "ಏನಯ್ಯ, ಪಾಸ್‌ಪೋರ್ಟ್ ಕೊಂಡುಕೊಟ್ಟಿದ್ದೀಯೋ?"

ನಾನು: "ಎಲ್ಲಿಗೆ?"

ಆ: "ಏರ್ಪಾಟು ಮಾಡುತ್ತಿದ್ದೀಯಲ್ಲ. ಕಿತ್ತಗಾನಹಳ್ಳಿಯಲ್ಲಿ ಲಕ್ಷ್ಮೀನಾರಣಪ್ಪನನ್ನು ಸ್ವರ್ಗಕ್ಕೆ ಸೇರಿಸುವುದಕ್ಕೆ!"

ನಾನು: "ನಿಮ್ಮದು ಎಷ್ಟು ದೂರ ಹೋಗಿದೆ?"

ಆ: “ಏನದು? ನನ್ನದೇನು?”

ನಾನು: “ಮೈಸೂರು ರೋಡ್ ಶಿವಾಲಯ, ಕಳಾಸಿಪಾಳ್ಯದಲ್ಲಿ ಓಂಕಾರೇಶ್ವರ ದೇವಾಸ್ಥನ... ಇವಕ್ಕೆಲ್ಲ ಖರ್ಚು ಮಾಡಿದ ಹಣ...?”

ಆ: “ಏಯ್, ನೀನು ಕಳ್ಳ! ಇದೆನ್ನೆಲ್ಲ ನಿನಗೆ ಯಾರು ಹೇಳಿದರು?”

ನಾನು: “ಸತ್ಯವನ್ನು ಬಚ್ಚಿಡಲಾಗುತ್ತದೆಯೆ? ಅದು ತಾನಾಗಿ ಹೊರಕ್ಕೆ ಬರುತ್ತದೆ. ಈಗ ನಿಮ್ಮ ಜೇಬಿನಲ್ಲಿ ಸ್ಫಟಿಕಮಣಿಯ ಜಪಸರ ತಿರುಗುತ್ತಿರುವುದನ್ನು ನೀವು ನನಗೆ ಹೇಳಿದಿರಾ? ಅಪ್ಪಣೆಯಾದರೆ ನಿಮ್ಮ ಜೇಬಿನೊಳಕ್ಕೆ ಕೈ ಹಾಕಿ ಸರ ತೆಗೆದು ತೋರಿಸುತ್ತೇನೆ.”

ಆ: (ನಕ್ಕು) “ನೀನು ಕೆಟ್ಟವನು. ನಿನ್ನ ಜೊತೆ ಸಾಕು.” ಹೀಗೆ ಹೇಳಿ ಹೊರಟುಹೋದರು.

ಫೀಸಿಲ್ಲದ ಚಾಕರಿ

ಒಂದು ದಿನ ಒಬ್ಬಾತ ಬಡವ ಅವರ ಮನೆಗೆ ಬೆಳಗ್ಗೆ ಏಳು ಏಳೂವರೆ ಘಂಟೆಗೆ ಹೋಗಿ ತನ್ನ ಮಗು ತುಂಬ ಕಾಯಿಲೆಯಾಗಿರುವುದೆಂದು ಹೇಳಿ, ಅವರ ಸಹಾಯವನ್ನು ಬೇಡಿದ. ಅವರು "ಮನೆ ಎಲ್ಲಿ?" ಎಂದು ಕೇಳಿ ತಿಳಿದುಕೊಂಡು. "ನೀನು ಮನೆ ಸೇರುವಷ್ಟರೊಳಗಾಗಿ ನಾನು ಅಲ್ಲಿರುತ್ತೇನೆ" ಎಂದರು. ಆತ ಬೈಸಿಕಲ್ಲಿನ ಮೇಲೆ ಶಂಕರಪುರಕ್ಕೆ ಹೋದ. ಅವನು ಮನೆ ತಲಪುವ ವೇಳೆಗೆ ಡಾಕ್ಟರು ಕಾರಿನಿಂದ ಬಂದು ಅಲ್ಲಿಳಿದಿದ್ದರು. ಆಗ ಸುಮಾರು ಎಂಟೂವರೆ ಘಂಟೆ. ಹನ್ನೊಂದು ಘಂಟೆಯವರೆಗೂ ಕಾಯಿಲೆ ಮಗುವಿನ ಪಕ್ಕದಲ್ಲಿ ಕುಳಿತ್ತಿದ್ದರು. "ಬಿಸಿ ನೀರು ತನ್ನಿ", "ಹಾಲು ತನ್ನಿ" ಎಂದು ಕೇಳಿ ಬೇಕಾದದ್ದನ್ನು ತರಿಸಿಕೊಂಡು ಬಗೆಬಗೆಯಾಗಿ ಚಿಕಿತ್ಸೆ ನಡಸಿದರು. ಕಾಯಿಲೆ ಗುಣವಾಗುವ ಸೂಚನೆ ಕಂಡುಬರಲಿಲ್ಲ. ಹನ್ನೊಂದು ಘಂಟೆಯ ವೇಳೆಗೆ ಎದ್ದು. "ಇನ್ನು ನಾನು ಮಾಡಬಹುದಾದದ್ದು ಏನೂ ಇಲ್ಲ. ಮನಸ್ಸುಗಳನ್ನು ಗಟ್ಟಿ ಮಾಡಿಕೊಳ್ಳಿ" ಎಂದು ಹೇಳಿ ಹೊರಟುಹೋದರು.

ಅದು ಫೀಸಿಲ್ಲದ ಚಾಕರಿ. ಸಾಮಾನ್ಯವಾಗಿ ಎಲ್ಲ ಕಡೆಯೂ ಹಾಗೆಯೇ. ಮಹಾರಾಜರು ಕೊಟ್ಟ ಬಹುಮಾನದ ಹೊರತು ಅವರು ಎಲ್ಲಿಯೂ ಯಾವುದನ್ನೂ ಅಪೇಕ್ಷಿಸಿದವರಲ್ಲ, ಮುಟ್ಟಿದವರಲ್ಲ. ಮತ್ತು ಬಡವರೆಂದು ತಿಳಿದರೆ ತಾವೇ ಸಹಾಯ ಕೊಡುತ್ತಿದ್ದರು.

ಶಿವಮೊಗ್ಗದಲ್ಲಿ ಅವರಿದ್ದಾಗ ಒಂದು ದಿನ ರಾತ್ರಿ ಹನ್ನೆರಡು ಘಂಟೆಯ ಸಮಯದಲ್ಲಿ ಯಾರೋ ಒಬ್ಬ ಮುಸಲ್ಮಾನ್ ಮನುಷ್ಯ ಅವರಿದ್ದ ಮನೆಯ ಮುಂದೆ ನಿಂತು ಆರ್ತ ಸ್ವರದಿಂದ ಕೂಗುತ್ತಿದ್ದ. ಡಾಕ್ಟರ ಆಳುಗಳು ಗಟ್ಟಿಯಾಗಿ ಅರಚಿ ಅವನನ್ನು ಓಡಿಸುತ್ತಿದ್ದರು. ಡಾಕ್ಟರು ಅದರಿಂದ ಎಚ್ಚೆತ್ತು, ಮೈಮೇಲೆ ಒಂದು ಶಾಲು ಎಳೆದುಕೊಂಡು ತಾವೇ ಮಹಡಿಯಿಂದಿಳಿದು ಬಂದು, ಆ ಬಡ ಮುಸಲ್ಮಾನನ ಬಳಿ ಹೋಗಿ ವಿಚಾರಿಸಿದರಂತೆ. ಅವನ ಮನೆಯಲ್ಲಿ ಯಾರದೋ ಕಾಯಿಲೆ. ಡಾಕ್ಟರು ತಾವೇ ಒಂದು ಕೈಯಲ್ಲಿ ಲಾಂದ್ರವನ್ನೂ ಇನ್ನೊಂದರಲ್ಲಿ ಔಷಧದ ಚೀಲವನ್ನೂ ಹಿಡಿದು ಅವನ ಹಿಂದೆ ಹೋದರು. ಚಿಕಿತ್ಸೆ ಮಾಡಿದ್ದಲ್ಲದೆ, ರೋಗಿಯ ಆರೈಕೆಗೆಂದು ಹತ್ತು ರೂಪಾಯನ್ನೂ ಆತನ ಕೈಗೆ ಕೊಟ್ಟು ಹಿಂತಿರುಗಿದರು.

ಇಂಥ ಸಂದರ್ಭಗಳು ಎಷ್ಟೋ ನಡೆದಿವೆ.

‘ಹಿಟ್ಲರ್ ಕಟ್’

ಒಂದು ದಿನ ಬೆಳಗ್ಗೆ ನಾನು ವಾಕಿಂಗ್ ಹೋಗುತ್ತಿದ್ದೆ. ಆರ್ಮುಗಂ ಮೊದಲಿಯಾರರು ಎದುರುಗಡೆಯಿಂದ ಬರುತ್ತಿದ್ದರು. ನನ್ನನ್ನು ನೋಡಿ ಹೇಳಿದರು:

“ನೀನಾದರೂ ಹೇಳಪ್ಪಾ ಆ ರಾಮರಾಯನಿಗೆ, ಮೂಗು ಒರಸಿಕೊಳ್ಳಬೇಕೆಂದು.”

“ಅದೇನು ಹಾಗೆ ಹೇಳುತ್ತೀರಿ.”

“ಆ ರಾಮರಾಯನಿದ್ದಾನಲ್ಲಪ್ಪ, ಅವನು ನನ್ನ ವಯಸ್ಸಿನವನು. ಈಗ ಎದುರಿಗೆ ಸಿಕ್ಕಿದ್ದ. ನಾನು ‘ಏನಯ್ಯ, ಮಕ್ಕಳ ಹಾಗೆ ಗೊಣ್ಣೆ ಸುರಿಸಿಕೊಳ್ಳುತ್ತಿದ್ದೀಯಲ್ಲ?’ ಎಂದೆ. ಆತ ‘ಅದೆಲ್ಲಿ ಡಾಕ್ಟರೆ?’ ಎಂದು ತನ್ನ ಕರವಸ್ತ್ರವನ್ನು ತೆಗೆದು ತುಟಿಯ ಮೇಲೆಲ್ಲ ಒರಸಿಕೊಂಡ. ನಾನು ‘ಇನ್ನೂ ಹೋಗಲಿಲ್ಲಪ್ಪ, ಅಲ್ಲೆ, ಮೆತ್ತಿಕೊಂಡಿದೆ’ ಎಂದೆ. ಆತ ಮತ್ತೆ ಒರಸಿಕೊಂಡು ಬೆಟ್ಟಿಟ್ಟು ನೋಡಿಕೊಂಡ. ‘ಅಲ್ಲೇ ನೋಡು, ಬೆಳ್ಳಗಿದೆ’ ಎಂದೆ, ಆತ ಮುಟ್ಟಿ ನೋಡಿಕೊಂಡು ‘ಅದು ಸಿಂಬಳ ಅಲ್ಲ ಡಾಕ್ಟರೆ, ಮೀಸೆ. ಬೆಳ್ಳಗಾಗಿದೆ’ ಎಂದ. ‘ಕರಿಯ ಕೂದಲು ಒಂದೂ ಇಲ್ಲವಲ್ಲ?’ ಎಂದೆ. ಆತ ‘ಮೂಗಿನ ಕೆಳಗಿನ ಜಲದಾರಿಯ ಎರಡು ಪಕ್ಕದ ಮೀಸೆಗಳನ್ನೂ ಕ್ಷೌರ ಮಾಡಿದ್ದೇನೆ. ಇದು ಹಿಟ್ಲರ್ ಫ್ಯಾಷನ್’ ಎಂದ. ನಾನು ‘ನಿನಗೇನಯ್ಯ ಬಂತು? ಈ ವಯಸ್ಸಿನಲ್ಲಿ ಹಿಟ್ಲರ್ ಫ್ಯಾಷನ್ನಂತೆ. ಮೂಗಿನ ಕೆಳಗೆ ಮಧ್ಯದಲ್ಲಿ ಒಂದು ಬಿಳಿಯ ಉಂಡೆ ತಗಲಿಕೊಂಡಿದ್ದರೆ ಅದನ್ನು ಏನನ್ನಬೇಕು?”

ಆಟದ ಖಯಾಲಿ

ಆರ್ಮುಗಂ ಮೊದಲಿಯಾರರಿಗೆ ಮೆಡಿಕಲ್ ಇಲಾಖೆಯಲ್ಲಿ ಕೆಲಸವಾದ ಮೇಲೆ ಮೊದಲನೆಯ ತಿಂಗಳ ಸಂಬಳ ಬಂದ ದಿವಸ ಸಂಜೆ ಅವರು ಒಂದು ಗಾಡಿಯಲ್ಲಿ ಕ್ರಿಕೆಟ್ ಆಟದ ಬ್ಯಾಟುಗಳು (ದಾಂಡು), ಚೆಂಡುಗಳು, ವಿಕೆಟ್ಟುಗಳು (ಗಡಿಕೋಲುಗಳು), ಎಲ್ಲಕ್ಕಿಂತ ಹೆಚ್ಚಾಗಿ ಲೆಗ್ಗಿಂಗ್ಸ್ (ಮೊಣಕಾಲು, ಮುಂಗಾಲುಗಳ ತೊಗಲುಚೀಲಗಳು) ಇವನ್ನು ಭರ್ತಿಮಾಡಿಕೊಂಡು ಮನೆಗೆ ಬಂದರಂತೆ, ಅವರ ತಂದೆ ಕೇಳಿದರು:

“ಇದೇನಯ್ಯ ಅವಾಂತರ?”

ಅದು ತಮಗೂ ತಮ್ಮ ತಮ್ಮಂದಿರಿಗೂ ಸೋದರಳಿಯಂದಿರಿಗೂ ಆಟದ ಸಾಮಾನು ಎಂದರಂತೆ. ಕ್ರಿಕೆಟ್ ಮೊದಲಾದ ಆಟದ ಖಯಾಲಿ ಆ ಮನೆಯಲ್ಲಿ ಎಲ್ಲರಿಗೂ ಉಂಟಾದದ್ದು.

ಡಾ ॥ ರಾಬಿನ್‌ಸನ್

ಆರ್ಮುಗಂ ಮೊದಲಿಯಾರರ ವೈದ್ಯಶಾಸ್ತ್ರ ಪ್ರವೀಣತೆಯನ್ನು ಕುರಿತು ಮಾತನಾಡುವ ಅಧಿಕಾರ ನನಗೆ ಸುತರಾಂ ಇಲ್ಲ. ಆದರೆ ನಾನು ಕೇಳಿರುವ ಒಂದು ಸಂಗತಿಯನ್ನು ಹೇಳಬಹುದು. ಶ್ರೀಮನ್ಮಹಾರಾಜರಿಗೆ ಒಂದು ಸಾರಿ ಹೊಟ್ಟೆ ನೋವು ಬರುತ್ತಿತ್ತು. ಆಗ ಡಾ ॥ ರಾಬಿನ್‌ಸನ್ ಎಂಬಾತ ಪ್ರಸಿದ್ಧನಾಗಿದ್ದ: ಮೈಸೂರಿನಲ್ಲಿ ಕೃಷ್ಣರಾಜೆಂದ್ರ ಆಸ್ಪತ್ರೆಯ ಮುಖ್ಯ ಅಧಿಕಾರಿಯಾಗಿಯೂ ಮೆಡಿಕಲ್ ಕಾಲೇಜಿನ ಮುಖ್ಯಾಧ್ಯಾಪಕನಾಗಿಯೂ ಇದ್ದ. ಆತ ಅಮೇರಿಕದವನೆಂದು ತೋರುತ್ತದೆ. ಮಹಾರಾಜರ ದೇಹಸ್ಥಿತಿಯನ್ನು ಪರೀಕ್ಷೆ ಮಾಡಿ ಆತ ಒಂದು ಶಸ್ತ್ರಚಿಕಿತ್ಸೆ (ಆಪರೇಷನ್) ನಡೆಯುವುದು ತುರ್ತು ಅವಶ್ಯ ಎಂದು ಅಭಿಪ್ರಾಯ ಕೊಟ್ಟ. ಈ ಸಲಹೆ ಸ್ವಲ್ಪ ಕಠಿಣವಾದದ್ದು, ಅಪಾಯಕ್ಕೆ ಅವಕಾಶವಿರುವಂಥಾದ್ದು. ಆದದ್ದರಿಂದ ಇದಕ್ಕೆ ಒಪ್ಪುವುದಕ್ಕೆ ಮುಂಚೆ ಬೇರೆ ಏನಾದರೂ ಉಪಾಯವಿದ್ದೀತೇನೋ ಎಂದು ನೋಡಬೇಕೆಂದು ಅರಮನೆಯಲ್ಲಿ ಕೆಲವರಿಗೆ ಅನ್ನಿಸಿತು. ಈ ಜನದ ಯೋಚನೆಯಂತೆ ಹಳೆಯ ವೈದ್ಯ ಆರ್ಮುಗಂ ಮೊದಲಿಯಾರರಿಗೆ ಕರೆ ಹೋಯಿತು.

ಮೊದಲಿಯಾರರು ಅರಮನೆಗೆ ಬಂದರು. ತಮ್ಮ ಕೈಯಿಂದ ಮಹಾರಾಜರ ಹೊಟ್ಟೆಯ ಮೇಲೆ ಸವರುತ್ತ, ಆ ಬಳಿ ಇದ್ದವರನ್ನು ಕುರಿತು ಕೊಂಚ ಹರಳೆಣ್ಣೆತರಿಸುವಂತೆ ಹೇಳಿದರು. ಎಣ್ಣೆ ಬಂದ ಮೇಲೆ ಅದನ್ನು ತಾವೇ ಕೈಯಿಂದ ಎತ್ತಿ ಮಹಾರಾಜರಿಗೆ ಕುಡಿಸಿದರು. ಆಮೇಲೆ ಮಹಾರಾಜರನ್ನು ಕುರಿತು “ನಾನು ಇಲ್ಲಿಯೇ ಪಕ್ಕದ ಕೋಣೆಯಲ್ಲಿ ಇರುತ್ತೇನೆ. ಕೊಂಚ ಹೊತ್ತು ನೋಡೋಣ” ಎಂದು ನಗುತ್ತ ಪಕ್ಕದ ಕೋಣೆಗೆ ಬಂದು ಅರ್ಧ ಮುಕ್ಕಾಲು ಘಂಟೆಯ ಹೊತ್ತು ಅರಮನೆಯ ಅಧಿಕಾರಿಗಳೊಡನೆ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಪ್ರಭುಗಳವರ ಸವಾರಿ ಒಂದೆರಡು ಸಾರಿ ಬಚ್ಚಲು ಮನೆಗೆ ಚಿತ್ತೈಸಿತ್ತು. ಹೊಟ್ಟೆನೋವು ಇಳಿದುಹೋಗಿತ್ತು. ಮೊದಲಿಯಾರರು ಹೇಳಿದರು:

“ಇದಕ್ಕೆಲ್ಲ ಚಾಕು ಹಾಕುತ್ತಾರೆಯೆ ಎಲ್ಲಾದರೂ! ಏನಿರುತ್ತದೆ ನಮ್ಮ ಹೊಟ್ಟೆಯಲ್ಲಿ? ಹಂದಿಯೆ, ಕಾಡೆಮ್ಮೆಯೆ? ಅಮೆರಿಕದವರು ಏನು ಬೇಕಾದರೂ ಮಾಡಿಕೊಳ್ಳಲಿ.”

ಆಹಾರ ಭೈಷಜ್ಯ

ಒಂದು ಸಾರಿ ಶ್ರೀಮಾನ್ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಆರೋಗ್ಯ ತಪ್ಪಿತ್ತು, ತುಂಬ ನಿಶ್ಶಕ್ತಿಯಾಗಿತ್ತು. ಅವರ ಮಾವಂದಿರು ಎ. ಕೃಷ್ಣಸ್ವಾಮಿ ಅಯ್ಯಂಗಾರ್ಯರು ಸಬ್‌ಜಡ್ಜಿ ಲಕ್ಷ್ಮೀನಾರಣಯ್ಯನವರ ಸ್ನೇಹಿತರು. ಲಕ್ಷ್ಮೀನಾರಣಯ್ಯನವರಲ್ಲಿ ಬಂದು ಸಂದರ್ಭ ತಿಳಿಸಿ, ಆರ್ಮುಗಂ ಮೊದಲಿಯಾರರನ್ನು ವೆಂಕಟೇಶ ಅಯ್ಯಂಗಾರ್ಯರ ಮನೆಗೆ ಕರೆದುಕೊಂಡು ಹೋಗಬೇಕೆಂದು ಕೋರಿದರು. ಆ ಸಂಜೆ ಮೊದಲಿಯಾರರು ಮಾಮೂಲಿನಂತೆ ಲಕ್ಷ್ಮೀನಾರಣಯ್ಯನವರ ಮನೆಗೆ ಬಂದಾಗ ಅವರಿಬ್ಬರೂ ಕಲೆತು ವೆಂಕಟೇಶ ಅಯ್ಯಂಗಾರ್ಯರ ಮನೆಗೆ ಹೋದರು. ವೆಂಕಟೇಶ ಅಯ್ಯಂಗಾರ್ಯರು ಹಾಸಿಗೆಯ ಮೇಲೆ ಮಲಗಿದ್ದರು. ತುಂಬ ಆಯಾಸವಾದಂತಿತ್ತು. ಆರ್ಮುಗಂ ಮೊದಲಿಯಾರರು ಕೋಣೆಯಲ್ಲಿ ಕಾಲಿಟ್ಟ ಕೂಡಲೆ ರೋಗಿಯನ್ನು ನೋಡಿ ನಕ್ಕರು,

“ಏನಾಗಿದೆಯಯ್ಯ ನಿನಗೆ?”

ಎಂದು ಕೇಳಿ ಮುಖವನ್ನು ಅಲ್ಲಿದ್ದ ಜನದ ಕಡೆಗೆ ತಿರುಗಿಸಿ “ಅನ್ನ ಇದೆಯೆ?” ಎಂದರು. ವೆಂಕಟೇಶ ಅಯ್ಯಂಗಾರ್ಯರ ತಾಯಿ ತಿರುಮಲಮ್ಮನವರು “ಮಧ್ಯಾಹ್ನ ಮಾಡಿದ್ದಿದೆ. ಅಗುಳು ಬಿರುಸಾಗಿರಬಹುದು” –ಎಂದರು. ಆರ್ಮುಗಂ ಮೊದಲಿಯಾರರು “ಅದೇ ಬೇಕಾದದ್ದು. ಜೊತೆಗೆ ಕೊಂಚ ಮಜ್ಜಿಗೆಯನ್ನೂ ತನ್ನಿ” ಎಂದರು.

ತಾಯಿಯವರು ಒಂದು ಬಟ್ಟಲಿನಲ್ಲಿ ಅನ್ನವನ್ನು ಮಜ್ಜಿಗೆಯಲ್ಲಿ ಚೆನ್ನಾಗಿ ಕಿವಿಚಿ ತಂದರು. ಡಾಕ್ಟರು “ಒಂದು ಸಣ್ಣ ತುತ್ತು ಮಾಡಿ ಆತನ ಬಾಯಲ್ಲಿಡಿ” ಎಂದರು. ಆಕೆ “ನಿನ್ನೆ ಜ್ವರ ಇತ್ತು...” ಎನ್ನುತ್ತ ತಡಮಾಡಿದರು. ಡಾಕ್ಟರು,

“ಜ್ವರಕ್ಕೆ ನಾನಿದ್ದೇನಲ್ಲ? ಮೊದಲು ಹೊಟ್ಟೆಗೆ ಅನ್ನ ಸೇರಲಿ. ನೀವು ತಿನ್ನಿಸುತ್ತೀರಾ? ನಾನು ತಿನ್ನಿಸಲೆ? ನಾನು ಮೊದಲಿಯಾರಿ, ನೀವು ಬ್ರಾಹ್ಮಣರು.”

ಆಕೆ ಎರಡು ಸಣ್ಣ ತುತ್ತು ತಿನ್ನಿಸಿದರು. “ನೀರು ಕುಡಿಸಿರಿ” ಎಂದರು ಡಾಕ್ಟರು. “ಈಗ ಇದೇ ಔಷಧ. ರಾತ್ರಿ ಎಂಟು ಘಂಟೆಗೆ ಹಾಗೆಯೇ ಎರಡು ಮೂರು ತುತ್ತು ಅನ್ನ ತಿನ್ನಿಸಿರಿ.”

ಹಾಗೆಯೇ ಮಾರನೆಯ ದಿನವೂ ‘ಚಿಕಿತ್ಸೆ’ ನಡೆಯಿತು. ವೆಂಕಟೇಶ ಅಯ್ಯಂಗಾರ್ಯರು ಜಗಜಟ್ಟಿಯಾಗಿ ನಿಂತರು. ಆರ್ಮುಗಂ ಮೊದಲಿಯಾರರು,

“ತಿನ್ನಯ್ಯ, ಹೊಟ್ಟೆಗೆ ತಿನ್ನಯ್ಯ!” ಎಂದು ಉಪದೇಶ ಮಾಡಿದರು.

ಸ್ನೇಹಶೀಲತೆ

ಸ್ನೇಹವೆಂದರೆ ಆರ್ಮುಗಂ ಮೊದಲಿಯಾರರದು ಸ್ನೇಹ. ಎಚ್.ವಿ. ನಂಜುಂಡಯ್ಯನವರು ಬದುಕಿರುವವರೆಗೂ ಅವರ ಮನೆಗೆ ದಿನಕ್ಕೊಂದು ಸಾರಿಯಾದರೂ ಹೋಗಬೇಕು. ಅವರ ತಮ್ಮ ಕೃಷ್ಣಯ್ಯನವರ ಮನೆಗೆ ಹೋಗಬೇಕು. ಲಕ್ಷ್ಮೀನಾರಣಯ್ಯನವರ ಮನೆಗೆ, ಸಿ.ಬಿ. ಶೇಷಗಿರಿರಾಯರ ಮನೆಗೂ ಹೋಗಬೇಕು. ಇದು ಅವರ ನಿತ್ಯವಿಧಿಯಲ್ಲಿ ಒಂದು ಅಂಶ. ಎಚ್.ವಿ. ನಂಜುಂಡಯ್ಯನವರು ತೀರಿಕೊಂಡ ಮೇಲೂ ಆರ್ಮುಗಂ ಮೊದಲಿಯಾರರು ಅವರ ಮನೆಗೆ ಹೋಗುತ್ತಿದ್ದದ್ದನ್ನು ನಾನು ಕಣ್ಣಾರ ಕಂಡಿದ್ದೇನೆ. ಹೋಗುವುದು, ಮನೆಯ ಯಜಮಾನನಿದ್ದರೆ ಆತನೊಡನೆ ಒಂದು ಘಳಿಗೆ ಮಾತು, ಆತ ಇಲ್ಲದಿದ್ದರೆ ಯಾರನ್ನಾದರೂ ಹೆಂಗಸರನ್ನೋ ಹುಡುಗರನ್ನೋ ವಿಚಾರಿಸಿ ಕ್ಷೇಮಸಮಾಚಾರ ತಿಳಿದುಕೊಳ್ಳುವುದು.

ಜೀರ್ಣೋಪಾಯ

ನಾನು ಇನ್ನೊಂದು ಕಥೆ ಕೇಳಿದ್ದೆ. ಆರ್ಮುಗಂ ಮೊದಲಿಯಾರರು ಮೈಸೂರಿನಲ್ಲಿದ್ದಾಗ ಪ್ರತಿ ಭಾನುವಾರವೂ ಅವರ ಮನೆಯಲ್ಲಿ ಒಂದು ಸ್ನೇಹಿತರ ಕೂಟ. ಬೆಳಗ್ಗೆ ಎಂಟು ಘಂಟೆಗೆ ದೋಸೆ ಮೊದಲಾದ ತಿಂಡಿಗಳು, ಕಾಫಿ–ಇದನ್ನೆಲ್ಲ ಬಲವಂತ ಮಾಡಿ ಹೊಟ್ಟೆಬಿರಿಯ ತಿನ್ನುವಂತೆ ಮಾಡುವರು. ಅದಾದ ಮೇಲೆ ಆ ಐದಾರು ಮಂದಿಯೂ ಎರಡು ವಿಕ್ಟೋರಿಯ ಗಾಡಿಗಳಲ್ಲಿ ಕುಳಿತು ಬೆಟ್ಟದ ಕಡೆ ಹೊರಡುವರು. ಎಲ್ಲರೂ ಗಾಡಿಗಳಿಂದಿಳಿದಾಗ, ಅವರು ಇಲ್ಲಲ್ಲಿ ತಿರುಗಾಡುತ್ತಿದ್ದಾಗ ಆರ್ಮುಗಂ ಮೊದಲಿಯಾರರು ಗಾಡಿಯ ಕೋಚ್‌ಮನ್‌ಗಳನ್ನು ಬಳಿಗೆ ಕರೆದು ಅವರು ಗಾಡಿಗಳನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವಂತೆ ಮೆಲುದನಿಯಲ್ಲಿ ಹೇಳಿ ಅವರನ್ನು ಸಾಗಹಾಕಿ, ತಾವೂ ಇತರೆ ಮಿತ್ರರೊಡನೆ ತಿರುಗಾಡಿಕೊಂಡು ಒಂದು ಹತ್ತು ನಿಮಿಷ ಹರಟುತ್ತಿರುವರು. ಬಳಿಕ ವಾಪಸ್ ಹೊರಡುವ ಹೊತ್ತು ಬಂದಾಗ ಗಾಡಿಗಳಿಲ್ಲ! ಎಲ್ಲರೂ ಪೇಚಾಡುವರು. ಮೊದಲಿಯಾರರು,

“ಏನಯ್ಯ! ಅಷ್ಟು ತಿಂಡಿ ತಿಂದಿದ್ದೀರಿ. ಕೊಂಚ ದೂರ ನಡೆಯಬೇಕೆಂದರೆ ಅಳುತ್ತೀರಲ್ಲ! ಗಾಡಿ ಇಲ್ಲೇ ಹತ್ತಿರದಲ್ಲೇ ಇರುವಂತೆ ಹೇಳಿದ್ದೇನೆ.”

ಆ ಜಾಗಕ್ಕೆ ಹೋಗುವ ವೇಳೆಗೆ ಗಾಡಿ ಇನ್ನೂ ಮುಂದಕ್ಕೆ ಹೋಗಿರುವುದು.

ಹೀಗೆ ಬಲಾತ್ಕಾರವಾಗಿ ನಡಿಸಿ, ತಿಂದದ್ದನ್ನು ಜೀರ್ಣವಾಗಿಸುವರು. ಇದು ಅವರ ಉಪಾಯ.

***

ಆರ್ಮುಗಂ ಮೊದಲಿಯಾರರದು ದೊಡ್ಡ ಸಂಸಾರ. ಅಣ್ಣ ತಮ್ಮಂದಿರು, ಮಕ್ಕಳು, ಸೋದರಳಿಯಂದಿರು, ಇತರ ಬಂಧುಗಳು ಮನೆಯ ತುಂಬ ಇದ್ದರು. ಚಿಕ್ಕವರಿಗೆಲ್ಲ ವಿದ್ಯಾಭ್ಯಾಸ ಮಾಡಿಸಿದರು. ಅಂಥವರಲ್ಲಿ ಒಬ್ಬರು ಹೈಕೋರ್ಟ್ ಜಡ್ಜಿಯಾಗಿಯೂ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರಾಗಿಯೂ ಇದ್ದ ಟಿ. ಸಿಂಗಾರವೇಲು ಮೊದಲಿಯಾರರು.

ಆರ್ಮುಗಂ ಮೊದಲಿಯಾರರು ಮೃತರಾದ ದಿವಸ ಬೆಂಗಳೂರಿನಲ್ಲಿ ಶಾಸನ ಸಭೆ ನಡೆಯುತ್ತಿತ್ತು. ವರ್ತಮಾನ ಬಂದ ಮೇಲೆ ಮಿರ್ಜಾ ಸಾಹೇಬರು ಸಭೆಯನ್ನು ಬರಖಾಸ್ತು ಮಾಡಿದರು. ಅಲ್ಲಿಂದ ಬಹು ಮಂದಿ ಮೊದಲಿಯಾರರ ಕಳೇಬರಕ್ಕೆ ಗೌರವ ಸಲ್ಲಿಸಲು ಬಂದರು. ಅವರಲ್ಲಿ ಮಿರ್ಜಾರವರೇ ಮೊದಲನೆಯವರು. ಆರ್ಮುಗಂ ಮೊದಲಿಯಾರರ ಮನೆಯಿಂದ ರುದ್ರಭೂಮಿಗೆ ಒಂದು ಬಹು ದೊಡ್ಡ ಗುಂಪು ಶಿಬಿಕೆಯೊಡನೆ ನಡೆದು ಹೋಗಿ ತಮ್ಮ ಅಂತ್ಯಾಂಜಲಿಯನ್ನು ಸಲ್ಲಿಸಿತು.

ಆರ್ಮುಗಂ ಮೊದಲಿಯಾರರು ಪುಣ್ಯಶಾಲಿ, ಅಂತರಂಗದಲ್ಲಿ ಶಿವನನ್ನೂ ಬಹಿರಂಗದಲ್ಲಿ ಲೋಕಪ್ರೀತಿಯನ್ನೂ ಇರಿಸಿಕೊಂಡು ಕೃತಕೃತ್ಯರಾದವರು.

೨

ತಿರುವೇಂಗಡಂ ಮೊದಲಿಯಾರರು

ತಿರುವೇಂಗಡಂ ಮೊದಲಿಯಾರರು ಆರ್ಮುಗಂ ಮೊದಲಿಯಾರರ ತಮ್ಮಂದಿರು. ಇವರು ಜಗತ್ತಿಗೆಲ್ಲ ಸ್ನೇಹಿತರು. ಶತ್ರುವೇ ಇಲ್ಲದ ಮನುಷ್ಯರು ಆತ.

ನನಗೆ ತಿರುವೇಂಗಡಂ ಅವರಲ್ಲಿ ತುಂಬ ಬಳಕೆ. ತಿರುವೇಂಗಡಂ, ನರಸಿಂಹಮೂರ್ತಿ, ಎಂ. ಜಿ. ವರದಾಚಾರ್, ಕೆ. ಭೀಮರಾವ್, ನಾನು–ನಾವೆಲ್ಲ ಚಾಮರಾಜಪೇಟೆಯಲ್ಲಿ ವಾಸವಾಗಿದ್ದವರು. ಒಂದು ಸಾರಿಯಾದರೂ ನಾವೆಲ್ಲ ಒಟ್ಟಿಗೆ ಸೇರದಿದ್ದ ದಿನವಿಲ್ಲ. ಈ ನಮ್ಮ ಗುಂಪಿನಲ್ಲಿ ಬಹು ಜನಕ್ಕೆ ಪ್ರಿಯರಾದವರು ತಿರುವೇಂಗಡಂ. ಅವರ ಉದ್ಯೋಗ ಅಠಾರಾ ಕಛೇರಿಯಲ್ಲಿ. ಅವರು ಹಾಸ್ಯರಸಿಕರಾಗಿಯೂ ಉಪಕಾರಶೀಲರಾಗಿಯೂ ಇದ್ದದ್ದರಿಂದ ಅವರು ಎಲ್ಲರಿಗೂ ಪ್ರಿಯರು. ಹಾಗೆ ಅವರ ವ್ಯಾಪನೆ ಎಲ್ಲರದಕ್ಕಿಂತ ಹೆಚ್ಚು. ಹೀಗೆ ವ್ಯಾಪನೆ ಹೆಚ್ಚಾದದ್ದರಿಂದ ಅವರು ಅನುಭವಿಸಬೇಕಾಗಿದ್ದ ಜನಪೀಡೆಯೂ ಹೆಚ್ಚು.

ನಾವೆಲ್ಲ ಬೆಳಗ್ಗೆ ಏಳು ಘಂಟೆಗೆ ಎಲ್ಲೋ ಒಂದು ಕಡೆ ಕಲೆಯುತ್ತಿದ್ದೆವು. ಅಲ್ಲಿಗೆ ತಿರುವೇಂಗಡಂ ಬರುವರು. ಆಗ ಪ್ರಾರಂಭ ನಮ್ಮ ಜಿಜ್ಞಾಸೆ. ಯಾವ ರಸ್ತೆಯಲ್ಲಿ ಹೋಗುವುದು? ಎಲ್ಲಿ ಹೋದರೂ ತಿರುವೇಂಗಡಂರವರನ್ನು ಕಿತ್ತು ತಿನ್ನಲು ಜನ ಬರುತ್ತಾರೆ. ಅಂಥವರು ಯಾರೂ ಇಲ್ಲದ ರಸ್ತೆಗಳಲ್ಲಿ ಹೋಗಬೇಕೆಂದು ನಮ್ಮ ಸಂಕಲ್ಪ. ಉದಾಹರಣೆಗೆ: ನಾಲ್ಕನೆಯ ರಸ್ತೆಯಲ್ಲಿ ಹೊರಟೆವೆಂದಿಟ್ಟುಕೊಳ್ಳಿ. ಮುಂದಿನ ಚೌಕದಲ್ಲಿ ಯಾರೋ ಸೆಕ್ರೆಟೇರಿಯಟಿನ ಅಧಿಕಾರಿ ಬರುತ್ತಿದ್ದಾರೆ. ಅವರನ್ನು ತಪ್ಪಿಸಿಕೊಳ್ಳಲು ನಾವು ಉತ್ತರದ ಕಡೆ ತಿರುಗುವುದು. ಮೇಲೆ ಹೇಳಿದ್ದ ಅಧಿಕಾರಿ ತಾವೂ ದಾರಿ ಬದಲಾಯಿಸಿ ನಮ್ಮ ಎದುರಿಗೆ ಬಂದು,

“ಏನಪ್ಪಾ! ನಿಮ್ಮನ್ನೇ ಹುಡುಕಿಕೊಂಡು ಬಂದರೆ ತಪ್ಪಿಸಿಕೊಂಡು ಹೋಗುತ್ತೀರಾ?” ಎನ್ನುವರು. ಹೀಗೆ ಜನರನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಎಷ್ಟೋ ಸಲ ಕನ್ಸರ್ವೆನ್ಸಿ ಗಲ್ಲಿಗಳಿಗೆ ನುಗ್ಗುತ್ತಿದ್ದೆವು. ಆದರೂ ಜನ ಅಲ್ಲೇ ಬಂದು ಅವರನ್ನು ಹಿಡಿಯುತ್ತಿದ್ದರು.

ಶನಿಕಾಟ

ಹೀಗೆ ತಿರುವೇಂಗಡಂರವರನ್ನು ಜನ ಹುಡುಕಿಕೊಂಡು ಬರುತ್ತಿದ್ದದ್ದಕ್ಕೆ ಕಾರಣ ಆತನ ಮೃದು ಸ್ವಭಾವ ಮತ್ತು ಆತನಿಂದ ತಮ್ಮ ಮನಸ್ಸಿನಲ್ಲಿದ್ದ ಕೆಲಸ ನಡೆದೀತೆಂಬ ನಂಬಿಕೆ. ಮಗನಿಗೆ ವರ್ಗವಾಗಬೇಕು. ಅಳಿಯನಿಗೆ ಬಡ್ತಿ ದೊರೆಯಬೇಕು. ಮೊಮ್ಮಗನಿಗೆ ಕಾಲೇಜಿನಲ್ಲಿ ಸೀಟು ಸೀಗಬೇಕು. ಸೋದರಳಿಯನಿಗೆ ಸ್ಕಾಲರ್ಷಿಪ್ ಬೇಕು. ಇನ್ನೊಬ್ಬನಿಗೆ ಫ್ರೀಷಿಪ್ ಬೇಕು. ಇಂಥ ಬೇಡಿಕೆಗಳು ಇಲ್ಲದಿದ್ದವರೇ ಇಲ್ಲ. ಅದು ಕೈಗೂಡಬೇಕಾದರೆ ಎಲ್ಲಿಯೋ ಯಾರಿಗೋ ಶಿಫಾರಸು ಬೇಕು. ಆ ಶಿಫಾರಸನ್ನು ಸಂಪಾದಿಸಿ ಕೊಡಲು ತಿರುವೇಂಗಡಂ. ಈ ಜನಪ್ರಿಯತೆ ತಿರುವೇಂಗಡಂರವರ ಪಾಲಿಗೆ ಶನಿಕಾಟವಾಗಿತ್ತು.

ಹಾಸ್ಯಶೀಲತೆ

ತಿರುವೇಂಗಡಂರವರದು ಹಾಸ್ಯ ಸ್ವಭಾವ. ಆತ ಒಬ್ಬೊಬ್ಬರಿಗೂ ಒಂದೊಂದು ಅಡ್ಡ ಹೆಸರಿಡುತ್ತಿದ್ದ. "ವಿ.ಎಸ್." ಎಂದರೆ "ವೆರಿ ಸ್ಟೌಟ್." "ಪಿ.ಕೆ." ಪುರುಕಲು ಕಡ್ಡಿ. "ಬಿ.ಆರ್." ಬೊಗಳೆ ರಗಳೆ-ಹೀಗೆ. ಆದರೆ ಈ ಅಡ್ಡ ಹೆಸರು ಆಯಾ ಮನುಷ್ಯನ ಗುಣಕ್ಕೆ ಒಪ್ಪುವುದಾಗಿತ್ತು. ಮನುಷ್ಯನನ್ನು ಮೊದಲನೆಯ ಸಲ ಕಂಡ ಒಂದೆರಡು ನಿಮಿಷದೊಳಗಾಗಿ ಹೆಸರು ತಯಾರಾಗುತ್ತಿತ್ತು. ತಾವು ನಗುತ್ತಿರಲಿಲ್ಲ. ಇತರರು ನಗುತ್ತಿದ್ದರೆ "ಯಾಕಯ್ಯ ನಗುತ್ತೀರಿ?" ಎನ್ನುವರು.

ದಸರಾ ಪ್ರಯಾಣ

ಒಂದು ಸಾರಿ ಮೈಸೂರು ಪಟ್ಟಣದಲ್ಲಿ ದಸರಾ ಸಂದರ್ಭದಲ್ಲಿ ಜನಸಂದಣಿ ಬಹು ಹೆಚ್ಚಾಗಿತ್ತು. ಅನೇಕ ಮಂದಿ ಪಿಂಛನ್‌ದಾರರು, ಅರಮನೆಯ ಅತಿಥಿಗಳಾಗಿ ಬಂದಿದ್ದವರು ಆ ಸಂದಣಿಯಲ್ಲಿದ್ದರು. ಅವರಿಗೆ ವಾಪಸ್ ಪ್ರಯಾಣಕ್ಕೆ ಟಿಕೇಟು ಸಿಕ್ಕುವುದು ಬಹು ಕಷ್ಟವಾಗಿತ್ತು. ರೈಲ್ವೆ ಸ್ಟೇಷನ್ನಿನಲ್ಲಿ ನೂಕು ನುಗ್ಗಲು.

ಮೈಸೂರಿನಿಂದ ರಾತ್ರಿ ರೈಲು ಹೊರಡುವ ಹೊತ್ತಿಗೆ ಸರಿಯಾಗಿ ಒಬ್ಬ ರಿಟೈರ್ಡ್ ಡೆಪ್ಯುಟಿ ಕಮಿಷನರು ಅಲ್ಲಿಗೆ ಬಂದರು. ಅವರು ಬೆಂಗಳೂರಿನ ಚಾಮರಾಜಪೇಟೆಯಲ್ಲಿದ್ದವರು; ತುಂಬ ಗಣ್ಯರಾದವರು. ವಯಸ್ಸಾದವರು. ಅವರು ತಿರುವೇಂಗಡಂ ಸಹಾಯ ಮಾಡಿಯಾರೆಂಬ ಭರವಸೆ ಇಟ್ಟುಕೊಂಡು ಬಂದಿದ್ದರು. ರೈಲುಗಾಡಿ ಹೊರಡಲು ಎಂಟು ಹತ್ತು ನಿಮಿಷ ಮಾತ್ರ ಹೊತ್ತಿತ್ತು. ಅವರು ಬಂದು “ತಿರುವೇಂಗಡಂ ಮೊದಲಿಯಾರರೇ, ನನ್ನನ್ನು ಎಲ್ಲಿಯಾದರೂ ಸೇರಿಸಿಬಿಡೀಪ್ಪಾ. ನಾನು ರಿಸರ್ವ್ ಮಾಡಿಲ್ಲ. ಟಿಕೆಟ್ಟೂ ಕೊಂಡುಕೊಂಡಿಲ್ಲ. ನೀವು ಇಲ್ಲಿರುತ್ತೀರಿ, ಎಲ್ಲ ಸಹಾಯ ಮಾಡುತ್ತೀರಿ-ಎಂಬ ಭರವಸೆಯಿಂದ ಬಂದಿದ್ದೇನೆ” ಎಂದು ಅಂಗಲಾಚಿದರು.

ತಿರುವೇಂಗಡಂ ಅವರು “ಪರವಾಯಿಲ್ಲ ರಾಯರೆ” ಎಂದು ಹೇಳುತ್ತ ತಾವು ತಮ್ಮ ಸ್ವಂತಕ್ಕಾಗಿ ರಿಸರ್ವ್ ಮಾಡಿಸಿಟ್ಟಿದ್ದ ಕಂಪಾರ್ಟ್‌ಮೆಂಟಿನೊಳಕ್ಕೆ ರಾಯರನ್ನು ಕರೆದುಕೊಂಡು ಹೋಗಿ ಅದರಲ್ಲಿ ತಮಗಾಗಿ ಗೊತ್ತು ಮಾಡಿಕೊಂಡಿದ್ದ ಕೆಳ ಹಾಸಿಗೆಯ ಮೇಲೆ (Lower berth) ರಾಯರು ತಮ್ಮ ಹಾಸಿಗೆ ಹಾಸಿಕೊಂಡು ಮಲಗಬಹುದೆಂದು ಹೇಳಿದ್ದಲ್ಲದೆ, “ಮುಸುಕು ಹಾಕಿಕೊಂಡು ನಿದ್ದೆ ಮಾಡಿಬಿಡಿ. ಆಗ ಯಾರೂ ನಿಮ್ಮನ್ನು ಎಬ್ಬಿಸುವುದಿಲ್ಲ” ಎಂದು ಎಚ್ಚರಿಕೆ ಕೊಟ್ಟರು.

ಈಗ ಆ ರೈಲ್ವೆ ಕಂಪಾರ್ಟ್‌ಮೆಂಟಿನ ವ್ಯವಸ್ಥೆಯನ್ನು ನಾವು ಮನಸ್ಸಿಗೆ ತಂದುಕೊಳ್ಳಬೇಕು. ಅದು ದೊಡ್ಡ ಗಾಡಿ. ಗಾಡಿಯ ದಕ್ಷಿಣದ ಕಡೆಯಲ್ಲಿದ್ದದ್ದು ತಿರುವೇಂಗಡಂ ಅವರ ಕಂಪಾರ್ಟ್‌ಮೆಂಟು, ಸೆಕಂಡ್ ಕ್ಲಾಸಿನದು. ಗಾಡಿಯ ಮಿಕ್ಕ ಭಾಗ ಮೂರನೆಯ ತರಗತಿಯದು. ಎರಡನೆಯ ತರಗತಿಗೂ ಮೂರನೆಯ ತರಗತಿಗೂ ನಡುವೆ ಒಂದು ಮರದ ಕಟಕಟೆಯಿತ್ತು. ಮೂರನೆಯ ತರಗತಿಯ ಭಾಗಕ್ಕೆ ಎರಡನೆಯ ತರಗತಿಯ ಪ್ರಯಾಣಿಕರು ಕಾಣುವಂತಿತ್ತು. ತಿರುವೇಂಗಡಂ ಅವರು ತಮ್ಮ ಎರಡನೆಯ ತರಗತಿಯ

ಜಾಗವನ್ನು ರಾಯರಿಗೆ ಬಿಟ್ಟುಕೊಟ್ಟು, ಮೂರನೆಯ ತರಗತಿಯ ಭಾಗದಲ್ಲಿ ತಮ್ಮ ಸ್ನೇಹಿತರೊಡನೆ ವಿನೋದವಾಗಿ ಮಾತನಾಡಿಕೊಂಡು ಕುಳಿತಿದ್ದರು.

ರಾಯರು ಕಣ್ಣುಮುಚ್ಚಿದ ಎರಡು ಮೂರು ನಿಮಿಷಗಳೊಳಗಾಗಿ ತಿರುವೇಂಗಡಂ ಮೊದಲಿಯಾರರ ಇನ್ನೊಬ್ಬ ಸ್ನೇಹಿತರು ಅದೇ ಕಂಪಾರ್ಟ್‌ಮೆಂಟಿಗೆ ಬಂದರು. ಅವರನ್ನು ಅಯ್ಯಂಗಾರ್ ಎಂದು ಕರೆಯೋಣ. ಈ ಆಸಾಮಿ ಆಳೂ ಕೈಯುದ್ದ, ಎತ್ತರ. ಅದಕ್ಕೆ ತಕ್ಕ ದಪ್ಪ. ವಯಸ್ಸು ೩೫-೪೦.

ಅಯ್ಯಂಗಾರ್ಯರ ಅಡಾವುಡಿ

ತಿರುವೇಂಗಡಂ ಮೊದಲಿಯಾರರ ಗಾಡಿಯಲ್ಲಿ ಕೆಳಗೆರಡು ಮೇಲೆರಡು ಒಟ್ಟು ನಾಲ್ಕು ಬರ್ತುಗಳು. ಅದರಲ್ಲಿ ಕೆಳಗಿನ ಎರಡನ್ನು ತಿರುವೇಂಗಡಂ ಹೆಸರಿಗೂ ಅಯ್ಯಂಗಾರರ್ಯರ ಹೆಸರಿಗೂ ರಿಸರ್ವ್ ಮಾಡಿತ್ತು. ಮೇಲಿನ ಬರ್ತುಗಳನ್ನು ಸ್ನೇಹಿತರ ಹೆಸರಿನಲ್ಲಿ ರಿಸರ್ವ್ ಮಾಡಿಸಿದ್ದರು. ಆದರೆ ಆ ಇಬ್ಬರು ರೈಲು ಹೊರಡುವ ಹೊತ್ತಿಗೆ ಬಂದಿರಲಿಲ್ಲ. ತಿರುವೇಂಗಡಂ ಅವರು ತಮ್ಮ ಬರ್ತನ್ನು ರಾಯರಿಗೆ ಕೊಟ್ಟಿದ್ದರಿಂದ ತಾವು ಮೇಲಿನ ಬರ್ತನ್ನು ಉಪಯೋಗಿಸಿಕೊಳ್ಳಬೇಂದಿದ್ದರು.

ನಮ್ಮ ಅಯ್ಯಂಗಾರ್ಯರು ಕೊಂಚ ಅಡಾವುಡಿ ಸ್ವಭಾವದವರು. ರಭಸ, ಕೂಗಾಟ ಹೆಚ್ಚು. ಮನಸ್ಸು ತುಂಬ ಒಳ್ಳೆಯದು. ಸ್ನೇಹತತ್ಪರರು, ಕರುಣಾಳುಗಳು ಮತ್ತು ಮರ್ಯಾದೆವಂತರು. ಇದರ ಜೊತೆಗೆ ಕೊಂಚ ಹುಡುಗಾಟಿಕೆಯಲ್ಲಿ ಹೆಸರಾದವರು. ಅವರು ಕಂಪಾರ್ಟ್‌ಮೆಂಟಿನೊಳಕ್ಕೆ ಬಂದು ತಮ್ಮ ಬರ್ತಿನ ಮೇಲೆ ಕುಳಿತು ಕೋಟು ಷರಾಯಿಗಳನ್ನು ಬಿಚ್ಚಿದರು. ಅವರು ಕ್ರಿಕೆಟ್ ಆಟದಲ್ಲಿ ನಿಸ್ಸೀಮರು. ಆ ಆಟದ ಬ್ಯಾಟು, ಲೆಗ್ಗಿಂಗ್ಸ್ ಮೊದಲಾದ ಸಾಮಾನುಗಳನ್ನು ಕಿತ್ತು ಕಂಪಾರ್ಟ್‌ಮೆಂಟಿನಲ್ಲಿ ಟಿಪ್ಪೆಂದು ಬಿಸಾಡಿದರು. ಮನಸ್ಸು ಹಗುರವಾಯಿತು. ರೈಲು ಮೆಲ್ಲನೆ ಹೊರಟಿತು. ಆಗ ಅಯ್ಯಂಗಾರ್ಯರು ಸುತ್ತಮುತ್ತ ನೋಡಿಕೊಂಡರು. ಇನ್ನೊಬ್ಬರೇ ಕಂಪಾರ್ಟ್‌ಮೆಂಟಿನಲ್ಲಿದ್ದದ್ದು. ಎದುರಿನ ಬರ್ತಿನ ಮೇಲೆ ಆ ಇನ್ನೊಬ್ಬರು ಮಲಗಿದ್ದಾರೆ. ಅವರು ಬಹುಶಃ ತಮ್ಮ ಸ್ನೇಹಿತ ತಿರುವೇಂಗಡಂ ಅವರೇ ಆಗಿರಬೇಕು–ಎಂದು ತೀರ್ಮಾನ ಮಾಡಿ, ಮಲಗಿದ್ದ ರಾಯರ ಮೇಲೆ ತಾವೂ ಮಲಗಿ ಕೈಗಳನ್ನು ಎರಡೂ ಕಡೆಗಳಿಂದ ದೂರಿಸಿ ತಬ್ಬಿಕೊಂಡು ತಮಿಳಿನಲ್ಲಿ,

“ಆಪುಟಿಯೇಡೀ ಮುಂಡೇ!” (ಸಿಕ್ಕಿದಿಯೇನೇ ಮುಂಡೇ!) ಎಂದು ಅಟ್ಟಹಾಸ ಮಾಡಿದರು. ರಾಯರು ಗಾಬರಿಬಿದ್ದು,

“ಅಯ್ಯೋ ತಿರುವೇಂಗಡ ಮೊದಲಿಯಾರೇ, ಅಯ್ಯೋ ತಿರುವೇಂಗಡ ಮೊದಲಿಯಾರೇ!”

–ಎಂದು ಅರಚಿಕೊಂಡರು.

ತಿರುವೇಂಗಡಂ ಪಕ್ಕದ ಕಂಪಾರ್ಟ್‌ಮೆಂಟಿನ ಕಟಕಟೆಯಿಂದ ಇದನ್ನೆಲ್ಲ ಮೊದಲಿನಿಂದ ಕಡೆಯವರೆಗೂ ನೋಡಿದರು. ಅಲ್ಲಿಂದಲೇ ಕೋಪವನ್ನು ನಟಿಸಿ,

“ಅಡೇ... ಅವರ ಏ ಪುಡುಕಿರೇಡಾ!” ಎಂದರು. ನಮ್ಮ ಸ್ನೇಹಿತರು ಆಗ ಮುಖ ಮಾಡಿದ್ದನ್ನು ನೋಡಬೇಕೆ! ಸಪ್ಪಗಾದರು, ಮುಖ ಪೆಚ್ಚಾಯಿತು. ಕೂಡಲೆ ರಾಯರ ಎರಡು ಕಾಲುಗಳನ್ನೂ ಹಿಡಿದುಕೊಂಡರು; ಕೆನ್ನೆಗೆ ಬಿಗಿದುಕೊಂಡರು. ರಾಯರಿಗೆ ಎಲ್ಲ ಅರ್ಥವಾಯಿತು. “ಇದು ಹುಡುಗಾಟ.”

ಕುಪ್ಪುಸ್ವಾಮಿ ಮೊದಲಿಯಾರರು

ಕುಪ್ಪುಸ್ವಾಮಿ ಮೊದಲಿಯಾರರು ಆರ್ಮುಗಂ ಮೊದಲಿಯಾರರ ಅಣ್ಣಂದಿರು. ಅವರೂ ಡಾಕ್ಟರು, ಡಿಸ್ಟ್ರಿಕ್ಟ್ ಸರ್ಜನ್ ಹುದ್ದೆಯಿಂದ ನಿವೃತ್ತರಾದರು. ಅವರು ದಯಾಶೀಲರು ಮತ್ತು ಸಂತುಷ್ಟಚಿತ್ತರು. ಬಹುಮಂದಿಗೆ ಉಪಕಾರ ಮಾಡಿದವರೆಂದು ನಾನು ಕೇಳಿದ್ದೇನೆ.

ಕುಪ್ಪುಸ್ವಾಮಿ ಮೊದಲಿಯಾರರೂ ಕನ್ನಡ ಸಾಹಿತ್ಯ ವಿಷಯದಲ್ಲಿ ಉತ್ಸಾಹಿಗಳಾಗಿದ್ದರು. ಮಹಾಕವಿ ಬಸವಪ್ಪಶಾಸ್ತ್ರಿಗಳವರಿಗೂ ಕುಪ್ಪುಸ್ವಾಮಿ ಮೊದಲಿಯಾರರಿಗೂ ತುಂಬ ಸ್ನೇಹ ಬೆಳೆದಿತ್ತು. ಶಾಸ್ತ್ರಿಗಳವರು ಸಂಸ್ಕೃತ ಉತ್ತರ ರಾಮಚರಿತ್ರೆಯನ್ನು ಕನ್ನಡಕ್ಕೆ ಪರಿವರ್ತನೆಮಾಡಿದ್ದು ಕುಪ್ಪುಸ್ವಾಮಿ ಮೊದಲಿಯಾರರ ಪ್ರೋತ್ಸಾಹದಿಂದ ಎಂದು ಕೇಳಿದ್ದೇನೆ. ಆ ಕನ್ನಡ ಉತ್ತರ ರಾಮಚರಿತ್ರೆಯ ಲಿಖಿತ ಪತ್ರಗಳು ಬಹು ಕಾಲ ಕುಪ್ಪುಸ್ವಾಮಿ ಮೊದಲಿಯಾರರ ಮನೆಯಲ್ಲಿ ಇದ್ದವಂತೆ.

ನಾನು ಕುಪ್ಪುಸ್ವಾಮಿ ಮೊದಲಿಯಾರರನ್ನು ಎಷ್ಟೋ ಸಂದರ್ಭಗಳಲ್ಲಿ ಕಂಡಿದ್ದವನು. ಅವರದು ಮಾತು ಮಿತ. ಆದರೆ ಮನಃಪೂರ್ವಕವಾದ ಮಾತು. ನಾನು ತಿಳಿದಿರುವ ಸಾಧುಸಜ್ಜನರಲ್ಲಿ ಅವರ ಹೆಸರು ಮೊದಮೊದಲೇ ಬರುತ್ತದೆ.

೮

ಇಬ್ಬರು ಅವಧೂತರು

೧. ಮಹಾದೇವಶಾಸ್ತ್ರಿಗಳು

ಧರ್ಮಪ್ರಕಾಶ ಸಜ್ಜನರಾಯರ 'ಲಕ್ಷ್ಮೀನಿವಾಸ' ಮನೆ ಬೆಂಗಳೂರು ಕೋಟೆಯಲ್ಲಿ ಶ್ರೀ ವೆಂಕಟರಮಣಸ್ವಾಮಿಯ ದೇವಾಲಯದ ಈಶಾನ್ಯ ಮೂಲೆಗೆ ಎದುರಾಗಿದೆಯಷ್ಟೆ. ಆ ಮನೆಯ ಮೊಗಸಾಲೆಯಲ್ಲಿ ಕೆಲಮಂದಿ ಸಾಧುಸಂತರ ಛಾಯಾಚಿತ್ರ (ಫೋಟೋ)ಗಳಿದ್ದುವು. ಆ ಛಾಯಾಚಿತ್ರಗಳ ಪೈಕಿ ಒಂದು ಮಹಾದೇವಶಾಸ್ತ್ರಿಗಳೆಂಬ ಅವಧೂತರರು.

ಮಹಾದೇವಶಾಸ್ತ್ರಿಗಳವರನ್ನು ನಾನು ಕಂಡಿದ್ದೇನೆ. ಆದರೆ ಅವರ ಜೀವಿತ ವೃತ್ತಾಂತ ನನಗೆ ಹೆಚ್ಚಾಗಿ ತಿಳಿಯದು. ತಿಳಿದುಕೊಳ್ಳಬೇಕೆಂದು ಬಹು ಕಡೆ ವಿಚಾರಿಸಿದ್ದೇನೆ. ಹೇಳುವವರು ಯಾರೂ ನನಗೆ ದೊರೆಯಲಿಲ್ಲ. ಅವರು ತಮ್ಮ ವ್ಯಕ್ತಿಜೀವನದ ಸಂಗತಿಗಳನ್ನು ತಮ್ಮ ಸ್ವಂತಕ್ಕೆ ಇರಿಸಿಕೊಂಡಿದ್ದಂತೆ ಕಾಣುತ್ತದೆ. ಅವರು ಪತ್ರಿಕೆಗಳ ಬಾತ್ಮಿದಾರರ ಕೈಗಾಗಲಿ ಚುನಾವಣೆಯ ಏಜೆಂಟರ ಕೈಗಾಗಲಿ ಸಿಕ್ಕಿದವರಲ್ಲ. ಗೋಪ್ಯವಾಗಿ ಇದ್ದುಕೊಂಡು ಅದೇ ತಮಗೆ ಬೇಕಾದದ್ದೆಂದು ಬದುಕಿದವರು.

'ಪೆರಿಯವರ್'

೧೯೦೮-೯ರ ರ ಸುಮಾರಿನಲ್ಲಿ ವಿಕ್ಟೋರಿಯ ಆಸ್ಪತ್ರೆಯ ಪೂರ್ವದ ದೊಡ್ಡ ಗೇಟಿನ ಮುಂದುಗಡೆ ಇಬ್ಬರು ಮೂವರು ಕೊಳಕರು ಬೆಳಗಿನಿಂದ ಸಂಜೆಯವರೆಗೂ ನಿಂತಿರುತ್ತಿದ್ದರು. ಆ ಕೊಳಕರಲ್ಲಿ ಮಹಾದೇವಶಾಸ್ತ್ರಿಗಳೂ ಒಬ್ಬರು. ಕೆದರಿದ ತಲೆ, ಬೆಳೆದ ಗಡ್ಡ, ನೀರನ್ನೇ ಕಾಣದ ಬೊಂತೆ. ಇದು ಅವರ ಲಕ್ಷಣ. ಮಾತಿಲ್ಲ ಕಥೆಯಿಲ್ಲ. ಅವರನ್ನು ಯಾರೂ ಮಾತನಾಡಿಸುತ್ತಿರಲಿಲ್ಲ. ಅವರು ಯಾರ ಕಡೆಯೂ ದೃಷ್ಟಿಸಿ ನೋಡುತ್ತಿರಲಿಲ್ಲ. ಇವರನ್ನು ನಾನು ಮೊದಲು ನೋಡಿದಾಗ ಯಾರೋ ತಿರುಪೆಗಾರ ಎಂದುಕೊಂಡೆ. ವಿಕ್ಟೋರಿಯ ಆಸ್ಪತ್ರೆಯ ಕಾವಲುಗಾರನು ಗೇಟಿನ ಬಳಿಯ ಷೆಡ್ಡಿನಲ್ಲಿ ಯಾವಾಗಲೂ ಇರುತ್ತಿದ್ದ. ಅವನೂ ಇವರೊಡನೆ ಮಾತನಾಡಿದ್ದಿಲ್ಲ. ಆತನನ್ನು ಯಾರಾದರೂ "ಇವರು

ಯಾರು?" ಎಂದು ಕೇಳಿದರೆ, "ಹೋಗಿ ಹೋಗಿ" ಎನ್ನುತ್ತಿದ್ದ. ತುಂಬ ಒತ್ತಾಯ ಮಾಡಿ ಕೇಳಿದರೆ "ಪೆರಿಯವರ್" (ಅವರು ದೊಡ್ಡವರು, ಸಾಧುಗಳು). "ಅವರ ತಂಟೆಗೆ ನೀವು ಹೋಗಬೇಡಿ, ನಿಮ್ಮಷ್ಟಕ್ಕೆ ನೀವು ಹೋಗಿ" ಎಂದು ಗದ್ದರಿಸುವನು. ಹೀಗಾಗಿ ನನಗೆ ಆಗ ಅವರ ವಿಷಯವನ್ನು ಹೆಚ್ಚಾಗಿ ಕಂಡುಕೊಳ್ಳಲು ಆಗದೆ ಹೋಯಿತು.

ಇನ್ನೊಂದು ಸಂಗತಿ. ಶಾಸ್ತ್ರಿಗಳು ನಿಂತಿರುತ್ತಿದ್ದ ಜಾಗದಿಂದ ಮೂರು ನಾಲ್ಕು ಗಜದಷ್ಟು ಸಮೀಪದಲ್ಲಿ ಮ್ಯುನಿಸಿಪಾಲಿಟಿಯ ಕಸದ ತೊಟ್ಟಿ ಇರುತ್ತಿತ್ತು. ಆ ತೊಟ್ಟಿಯ ತುಂಬ ಕಸ ತುಂಬಿ ಎಂಜಲೆಲೆಯೂ ಕೊಳೆತ ಸಾಮಾನು ಒಂದೆರಡಡಿಯಷ್ಟು ಮೇಲಕ್ಕೆ ಕಾಣಿಸುತ್ತ ಚೆಲ್ಲಿರುತ್ತಿತ್ತು. ಈ ಕಶ್ಮಲದ ನಡುವೆ ಆ ನಾತದಲ್ಲಿ ಶಾಸ್ತ್ರಿಗಳು ಘಂಟೆಗಳ ಕಾಲ ನಿಂತಿರುತ್ತಾರಲ್ಲ–ಎಂದು ನನಗೆ ಆಶ್ಚರ್ಯವಾಯಿತು.

ಮುಕುಂದದಾಸರು

ಮತ್ತೊಂದು ಸ್ವಾರಸ್ಯ. ಆ ಕಾಲದ ಸುಮಾರಿನಲ್ಲಿ ಈಗ ಪುಟ್ಟಣ್ಣ ಶೆಟ್ಟಿ ಔಟ್ ಪೇಷೆಂಟ್ಸ್‌ವಾರ್ಡ್ ಇರುವ ಜಾಗದಲ್ಲಿ ಮುಕುಂದದಾಸರೆಂಬವರು ಹರಿಕಥೆ ಮಾಡುತ್ತಿದ್ದದ್ದನ್ನು ನಾನು ನೋಡಿದ್ದೇನೆ. ದಾಸರು ಆಕಾರದಲ್ಲಿ ಗಿಡ್ಡು. ಹಸಿರು ಶಾಲು ಹೊದ್ದಿರುತ್ತಿದ್ದರು. ಕೊರಳಿನಲ್ಲಿ ಯಾರೋ ಒಂದು ಹೂವಿನ ಹಾರ ಹಾಕಿರುತ್ತಿದ್ದರು. ಅವರ ಸ್ವರೂಪವ್ಯಕ್ತಿತ್ವ ಪ್ರಭಾವಶಾಲಿಯಾದದ್ದೆಂದು ನಾನು ಹೇಳಲಾರೆ. ಅವರು ಹರಿಕಥೆ ಮಾಡುತ್ತಿದ್ದ ಭಾಷೆ ತೆಲುಗು. ಜನದ ಗುಂಪು ತಕ್ಕಮಟ್ಟಿಗೆ ಇರುತ್ತಿತ್ತು. ಸಂಜೆ ಸಂಜೆಯೂ ಅವರು ಗೊತ್ತು ಮಾಡಿಕೊಂಡಿದ್ದ ಕಾಲಕ್ಕೆ ಅಲ್ಲಿಗೆ ಬಂದು ನಿಂತು ಹರಿಕಥೆ ಮಾಡುವರು. ಜನ ಅದನ್ನು ಕೇಳಿ ಸಂತೋಷಿಸಿ ಪುನಃ ಪುನಃ ಬರುವರು. ತಮ್ಮ ಕಾಣಿಕೆ ಸಲ್ಲಿಸುವರು.

ಈಗ ಮಹಾದೇವಶಾಸ್ತ್ರಿಗಳ ಮಾತು. ಇವರ ಕುಮಾರರೊಬ್ಬರು ನಾರಾಯಣಶಾಸ್ತ್ರಿಗಳೆಂಬವರು ವಿದ್ವಾಂಸರಾಗಿದ್ದರೆಂದೂ ಅವರು ಕೆಲವು ಕಾಲ ಧಾರವಾಡದ ಕರ್ನಾಟಕ ಕಾಲೇಜಿನಲ್ಲಿ ಕನ್ನಡ ಸಂಸ್ಕೃತ ಪಂಡಿತರಾಗಿದ್ದರೆಂದೂ ಕೇಳಿದ್ದೇನೆ.

ನಾನು ಈಗ ಹೇಳಲಿರುವ ಕಾಲದ ವೇಳೆಗೆ ಮಹಾದೇವಶಾಸ್ತ್ರಿಗಳು ವಿರಕ್ತರಾಗಿದ್ದರು. ಸಂನ್ಯಾಸಿಗಳಾಗಿರಲಿಲ್ಲ; ಸಂನ್ಯಾಸಿಯಂತೆ ಇದ್ದರು–ಮಗನ ಮನೆಯಲ್ಲಿದ್ದರು.

ಆ ಮನೆ ಅರಳೆಪೇಟೆಯ ಪಶ್ಚಿಮ ಕಡೆಯ ಬೀದಿಯಲ್ಲಿತ್ತಂತೆ–ಗುಡ್ಸ್ ಷೆಡ್ ರೋಡಿನ ಹತ್ತಿರ ಹತ್ತಿರ. ಅದನ್ನು ನಾನು ಕಂಡವನಲ್ಲ. ನಾನು ಕಂಡಿರುವುದನ್ನು ಈಗ ಹೇಳುತ್ತೇನೆ.

ಆ ಕಾಲದಲ್ಲಿ ನಾನು ಚಿಕ್ಕಪೇಟೆಯಲ್ಲಿ ಹೆಚ್ಚಾಗಿ ತಿರುಗಾಡುತ್ತಿದ್ದೆ. ನಿತ್ಯ ನಿತ್ಯವೂ ಬೆಳಗ್ಗೆ ಅಪ್ಪಣ್ಣನವರ ಕಾಫಿ ಕ್ಲಬ್ಬು, ಕೆ.ಎಸ್. ಕೃಷ್ಣಯ್ಯರ್ ಅವರ ಮನೆ-ಈ ಸ್ಥಳಗಳಲ್ಲಿ ಯಾವುದಾದರೊಂದು ಕಡೆ ಆ ಬೆಳಗ್ಗಿನ ವರ್ತಮಾನ ಪತ್ರಿಕೆಯನ್ನು ಓದುವುದು; ರಾಜಕೀಯವನ್ನೂ ಊರಿನ ವರ್ತಮಾನವನ್ನೂ ಹರಟುವುದು-ಇದು ವಾಡಿಕೆಯಾಗಿತ್ತು. ಇದಕ್ಕೆ ಪ್ರಾಸಂಗಿಕವಾಗಿ ಅಂಟಿಕೊಂಡು ಬಂದ ಲಾಭ ಮಹಾದೇವಶಾಸ್ತ್ರಿಗಳ ದರ್ಶನ.

ಗ್ರಾಮಪ್ರದಕ್ಷಿಣೆ

ಪ್ರತಿದಿವಸವೂ ಬೆಳಿಗ್ಗೆ ಸುಮಾರು ಆರುಘಂಟೆಯ ವೇಳೆಗೆ ಶಾಸ್ತ್ರಿಗಳು ಅರಳೆಪೇಟೆ ಚಿಕ್ಕಪೇಟೆ ಸೇರುವ ಚೌಕದಲ್ಲಿ ಕಾಣಿಸುತ್ತಿದ್ದರು. ಮೇಲೆ ನಾನು ಹೇಳಿದಂತೆ, ಅವರ ಮೈಮೇಲೆ ಬೊಂತೆ; ಮೊಣಕಾಲಿಂದ ಮೇಲಕ್ಕೆ ಪಂಚೆ; ಅದೇ ಜಡೆಗಟ್ಟಿದ ತಲೆ. ಆದರೆ ಆಗಾಗ ಕೊಂಚ ನಗುಮುಖ. ಆಗಾಗ ಕೊಂಚ ಮುನಿಸಿನ ಮುಖ. ಯಾವಾಗಲೂ ಅವರ ಸುತ್ತಮುತ್ತ ಬೀದಿ ಹುಡುಗರ ಗುಂಪು. ಅದರಲ್ಲಿ ಹಿಂದುಗಳು, ಮುಸಲ್ಮಾನರು ಎಲ್ಲರೂ ಇರುತ್ತಿದ್ದರು. ಈ ಪೋರ ಪರಿವಾರ ಅವರನ್ನು ಬಿಟ್ಟಿದ್ದದ್ದೇ ಇಲ್ಲ.

ಶಾಸ್ತ್ರಿಗಳನ್ನು ಪೇಟೆಯ ಜನ "ಸ್ವಾಮಿಗಳು" "ಸಾಧುಗಳು" ಎಂದು ಕರೆಯುತ್ತಿದ್ದರು. ಇನ್ನು ಮುಂದೆ ನಾನು ಅವರನ್ನು ಸ್ವಾಮಿಗಳು ಎಂದೇ ಕರೆಯುತ್ತೇನೆ.

ಸ್ವಾಮಿಗಳವರು ಚಿಕ್ಕಪೇಟೆಯಲ್ಲಿ ಬರುತ್ತಿದ್ದಾಗ ಅಲ್ಲಲ್ಲಿ ಈ ಪಕ್ಕದಿಂದಲೂ ಆ ಪಕ್ಕದಿಂದಲೂ ಯಾವ ಯಾವ ಜನವೋ ಬಂದು ಅವರ ಕೈಗೆ ಅನಂತನ ದಾರವನ್ನೋ ಕಾಶಿಯ ದಾರವನ್ನೋ ಇನ್ನೂ ಯಾವುದೋ ವ್ರತದ ದಾರವನ್ನೋ ಸುತ್ತುತ್ತಿದ್ದರು. ಅವರು ಮುಂಗೈಯಿಂದ ಮೊಳಕೈವರೆಗೂ ಈ ಕೆಂಪು ಬಿಳಿ ಕರಿಯ ದಾರಗಳನ್ನು ಯಾವಾಗಲೂ ಹೊತ್ತಿರುತ್ತಿದ್ದರು. ಬಹುಶಃ ಅವರು ಆ ದಾರಗಳನ್ನು ಕಿತ್ತುಹಾಕುತ್ತಿರಲಿಲ್ಲ. ಅದು ತಾನಾಗಿಯೇ ಕಳಚಿ ಹೋಗುವುದು. ಅದಕ್ಕೆ ಬದಲಾಗಿ ದಿನದಿನವೂ ಹೊಸ ಹೊಸದಾಗಿ ಬರುವುದು. ಯಾರಾದರೂ ಹೀಗೆ ದಾರ ಕಟ್ಟಲು ಬಂದಾಗ ಸ್ವಾಮಿಗಳು ಕೊಂಚ ನಕ್ಕಂತೆ ತೋರುವುದು.

ಸ್ವಾಮಿಗಳು ಅರಳೆಪೇಟೆಯ ಚೌಕದಲ್ಲಿ ಅಥವಾ ಅಲ್ಲಿಂದ ಮುಂದಕ್ಕೆ ಬಂದು ಮಸ್ತಾನ್‌ಸಾಬಿಯ ಗುಡಿಯ ಬಳಿ ಬರುವಾಗ್ಗೆ, ಚಿಕ್ಕಪೇಟೆಯಲ್ಲಿ ಅಂಗಡಿ ಮುಂಗಟ್ಟುಗಳನ್ನಿರಿಸಿಕೊಂಡಿದ್ದ ವರ್ತಕರು ತಮ್ಮ ಅಂಗಡಿಯ ಬೀಗಗಳನ್ನು ತೆಗೆದು, ಕದಗಳನ್ನು ತೆರೆಯದೆ, ಸ್ವಾಮಿಗಳ ದಾರಿಯನ್ನು ಎದುರು ನೋಡುತ್ತಿರುತ್ತಿದ್ದರು. ಸ್ವಾಮಿಗಳ ಸವಾರಿ ಕಾಲುನಡಿಗೆಯಲ್ಲೆಂದು ಹೇಳಬೇಕಾಗಿಲ್ಲ. ಸ್ವಾಮಿಗಳೂ ಪರಿವಾರವೂ ಅಂಗಡಿ ಅಂಗಡಿಯ ಮುಂದೆಯೂ ಒಂದೊಂದು ಸಾರಿ ಮನೆ ಮನೆಯ ಮುಂದೆಯೂ ನಿಲ್ಲಬೇಕಾಗುತ್ತಿತ್ತು.

ಕಾಣಿಕೆ

ಈ ಮೆರವಣಿಗೆ ತಮ್ಮ ತಮ್ಮ ಅಂಗಡಿಯ ಮುಂದೆ ಬಂದಾಗ ವರ್ತಕರು ಕದ ತೆಗೆದು ಗಲ್ಲಾಪೆಟ್ಟಿಯಿಂದ ಒಂದು ಕಾಣಿಕೆಯನ್ನು ತಂದು ಸ್ವಾಮಿಗಳ ಕೈಯಲ್ಲಿಟ್ಟು "ಕೃಷ್ಣಾರ್ಪಣ" "ಶಿವಾರ್ಪಣ" ಎನ್ನುವರು. ಹೀಗೆ ಮೆರವಣಿಗೆ ಸಾಗುವುದು ಬಹು ಸಾವಕಾಶವಾಗುತ್ತಿತ್ತು. ಕಾಣಿಕೆ ಕಾಲಾಣೆಯಿಂದ ಐದು ರೂಪಾಯಿ ಹತ್ತು ರೂಪಾಯಿ ನೋಟಿನವರೆಗೂ ಇರುತ್ತಿತ್ತು. ಅವರವರ ಶಕ್ತಿಗೆ ತಕ್ಕಂತೆ ಕೊಡುವರು. ಸ್ವಾಮಿಗಳ ಕೈಯಲ್ಲಿ ತಮ್ಮ ಕಾಣಿಕೆ ಮೊದಲು ಸೇರಿದ್ದಾದರೆ ಅಂದಿನ ತಮ್ಮ ವ್ಯಾಪಾರ ಒಳ್ಳೆಯದಾಗುವುದೆಂದು ವರ್ತಕರ ನಂಬಿಕೆ. ಸ್ವಾಮಿಗಳಿಗೆ ಮೊದಲು ಸಲ್ಲಿಸಬೇಕು, ಅದು ಲಾಭಕರ.

ವಿಲೇವಾರಿ

ಸ್ವಾಮಿಗಳಾದರೋ ಕಾಣಿಕೆಯನ್ನು ತಮ್ಮ ಕೈ ಮುಟ್ಟಿದ್ದೇ ತಡ; ಆ ಕ್ಷಣವೇ ಆ ನಾಣ್ಯವನ್ನೋ ನೋಟನ್ನೋ ತಮ್ಮ ಪರಿವಾರದ ಪೋರನಾವನ ಕೈಯಲ್ಲೋ ಇಡುವರು. ಇಡುತ್ತಾ "ಪ್ರಾರಬ್ಧಂ" "ಪ್ರಾರಬ್ಧಂ" ಎನ್ನುವರು. ಎಷ್ಟು ಸುಲಭವಾಗಿ ಹೇಳುತ್ತಿದ್ದಾರೆ ಎಂದು ನನಗೆ ಆಗಲೂ ಅಚ್ಚರಿ, ಈ ಹೊತ್ತಿಗೂ ಅಚ್ಚರಿ. ನಮ್ಮ ಲಾಭ ನಷ್ಟಗಳೆಲ್ಲ ಪ್ರಾರಬ್ಧವಶದಿಂದಲೇ ಅಲ್ಲವೆ?

ಆ ಹಣವನ್ನು ಸ್ಥಾನಾಂತರ ಮಾಡಿದ ಕೈ ಸ್ವಾಮಿಗಳದು, ಅ ಹಣ ಪ್ರಾರಬ್ಧದಿಂದ ಬಂದದ್ದು.

ಸ್ವಾಮಿಗಳ ಈ ಮೆರವಣಿಗೆ ಚಿಕ್ಕಪೇಟೆಯುದ್ದಕ್ಕೂ ಸಾಗಿ ಧರ್ಮರಾಯನ ದೇವಸ್ಥಾನದಿಂದಾಚೆಗೆ ಹೋಗುವ ವೇಳೆಗೆ ಮಧ್ಯಾಹ್ನ ಹನ್ನೊಂದು ಹನ್ನೆರಡು ಘಂಟೆಯೇ

ಆಗುತ್ತಿತ್ತು. ಕೊನೆಕೊನೆಗೆ ಹೋದಂತೆಲ್ಲ ಪರಿವಾರ ಕರಗುತ್ತಿತ್ತು. ಅಲ್ಲಿಂದ ಮುಂದಕ್ಕೆ ಅಂಗಡಿಗಳಿಲ್ಲವಲ್ಲ. ಸ್ವಾಮಿಗಳ ಕೈಬರಿಗೈ.

ಚೇತಲೊ ಬೆಲ್ಲಂ ಉಂಡೇವರಕೂ
ಕಾಕ ಬಳಗಮಂಟಾ
ಚೇತಲೊ ಬೆಲ್ಲಂ ತೀರಿನಪ್ಪುಡು
ಎವರು ರಾರು ವೆಂಟಾ!

ಸ್ವಾಮಿಗಳು ಅಲ್ಲಿಂದಾಚೆಗೆ ಆ ಪ್ರಾಂತದಲ್ಲಿ ದಕ್ಷಿಣ ಕಡೆ ಇದ್ದ ಒಂದಾನೊಂದು ಮನೆಗೆ ಹೋಗುತ್ತಿದ್ದದ್ದು ವಾಡಿಕೆ. ಆ ಮೆನೆಯವರು ಗಾಣಿಗರಂತೆ. ಅವರು ಸ್ವಾಮಿಗಳವರು ಅಲ್ಲಿಗೆ ಬಂದ ಕೂಡಲೆ ಒಂದು ತಂಬಿಗೆ ಹಾಲನ್ನು ಅವರಿಗೆ ಕೊಡುತ್ತಿದ್ದರಂತೆ. ಇದು ದಿನಂಪ್ರತಿಯ ಪದ್ಧತಿ. ಸ್ವಾಮಿಗಳು ಆ ಹಾಲನ್ನು ಸೇವಿಸಿ ಹೊರಟು ಹೋಗುತ್ತಿದ್ದರು. ಎಲ್ಲಿಗೆ ಹೋಗುತ್ತಿದ್ದರೋ ಯಾರಿಗೂ ತಿಳಿಯದು. ಮಾರನೆಯ ದಿನ ಬೆಳಗ್ಗೆ ಯಥಾಪ್ರಕಾರದ ಚಿಕ್ಕಪೇಟೆಯ ಮೆರವಣಿಗೆಯವರೆಗೂ ಅವರು ಯಾರ ಕೈಗೂ ದೊರಕುತ್ತಿರಲಿಲ್ಲ.

ನಾನು ಒಂದು ಊಹೆ ಮಾಡಿದ್ದೇನೆ.

ಗವಿಮಠ

ಬೆಂಗಳೂರು ರೈಲ್ವೆ ಸ್ಟೇಷನ್ನಿನ ವಾಯವ್ಯ ದಿಕ್ಕಿನಲ್ಲಿ ಒಂದು ನೀರಿನ ಹಳ್ಳವೂ ಒಂದು ಬಸವಣ್ಣನ ಗುಡಿಯೂ ಹಿಂದೆ ಇದ್ದವು. ನಾನೂ ಮೋಕ್ಷಗುಂಡಂ ಕೃಷ್ಣಮೂರ್ತಿಯೂ ಎಷ್ಟೋ ಸಾರಿ ಆ ಪ್ರಾಂತದಲ್ಲೆಲ್ಲ ಸುತ್ತಾಡಿದ್ದೇವೆ. ಆಗ್ಗೆ ಆ ಪ್ರಾಂತ ಬಯಲಾಗಿತ್ತು. ಮನೆಗಳಾಗಿರಲಿಲ್ಲ. ಅಲ್ಲೆಲ್ಲೋ ಒಂದು ಕಡೆ ಒಂದು ನೆಲಮಾಳಿಗೆ ಇತ್ತು. ಅದು ನೆಲಮಾಳಿಗೆಯೋ ಗವಿಯೋ ಈಗ ನನ್ನ ಜ್ಞಾಪಕ ಮಾಸಿಹೋಗಿದೆ. ಆ ಗವಿಯಲ್ಲಿ ಒಬ್ಬ ಶಿವಶರಣರು ಇದ್ದದ್ದನ್ನು ಕಂಡಿದ್ದೇನೆ. ಅವರ ಹೆಸರು ಬಹುಶಃ ಚಂದ್ರಶೇಖರ ಎಂದು. ಅವರೊಡನೆ ಮೋಕ್ಷಗುಂಡಂ ಕೃಷ್ಣಮೂರ್ತಿಯೂ ನಾನೂ ಮಾತನಾಡಿದ್ದು ನನಗೆ ಜ್ಞಾಪಕದಲ್ಲಿದೆ. ಯಾವುದೋ ಮೊಕದ್ದಮೆಯಲ್ಲಿ ಆ ಶಿವಶರಣರಿಗೆ ಏನೋ ಸಂಬಂಧವಿದ್ದಂತೆ ನನಗೆ ತೋರಿತು. ಆ ಗವಿಯಲ್ಲಿ ಭಂಗಿಯ ಚಿಲುಮೆ, ಏಕ್ ತಾರ್ ವಾದ್ಯ ಮೊದಲಾದ ಪರಿಕರಗಳನ್ನು ನೋಡಿದ್ದು ನೆನಪಿದೆ. ಆತ ಒಂದೆರಡು ತತ್ತ್ವಗಳನ್ನು

ಹೇಳಿದ್ದನ್ನೂ ಕೇಳಿದ ಜ್ಞಾಪಕವಿದೆ. ಆತ "ಇಲ್ಲಿಗೆ ಒಬ್ಬ ಸಾಧುಗಳು ದಯಮಾಡಿಸುತ್ತಾರೆ" ಎಂದು ಹೇಳುತ್ತಿದ್ದದ್ದೂ ಜ್ಞಾಪಕದಲ್ಲಿದೆ.

ಈಗ ನನಗನ್ನಿಸುತ್ತದೆ. ಆ ಗವಿಗೆ ಹೋಗುತ್ತಿದ್ದ ಸಾಧುಗಳು ನಮ್ಮ ಸ್ವಾಮಿಗಳೇ ಇದ್ದಿರಬಹುದೆಂದು. ಏಕೆಂದರೆ ಸ್ವಾಮಿಗಳು ಯೋಗಿಗಳು. ಅವರಿಗೆ ಯೋಗಾಭ್ಯಾಸ ಮಾಡುವುದಕ್ಕಾಗಿ ಒಂದು ಪ್ರಶಾಂತವಾದ ನಿರ್ಜನ ಸ್ಥಾನ ಬೇಕು. ಅಂಥ ಜಾಗ ಈ ಗವಿಮಠದಲ್ಲಿತ್ತೆಂದು ತೋರುತ್ತದೆ.

ಯೋಗಾಭ್ಯಾಸ

ಇನ್ನೊಂದು ಕಥೆಯನ್ನು ನಾನು ಕೇಳಿದ್ದೇನೆ. ಇದನ್ನು ನನಗೆ ಹೇಳಿದವರು ಬೆಂಗಳೂರು ಲಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಎಂ. ನಾರಾಯಣರಾಯರು. ಆ ಕಥೆಯ ಅಂಶ ಇಷ್ಟು: ಮಹಾದೇವಶಾಸ್ತ್ರಿಗಳವರು ಯೋಗದಲ್ಲಿ ಪಾರಂಗತರಾಗಿದ್ದರು. ಅವರ ಜೊತೆಗೆ ಯಾರೋ ಒಬ್ಬ ಮುಸಲ್ಮಾನ್ ಫಕೀರರು ಯೋಗಾಭ್ಯಾಸಮಾಡುತ್ತಿದ್ದರಂತೆ. ಆ ಫಕೀರರೂ ಶಾಸ್ತ್ರಿಗಳವರೂ ಆಗಾಗ ರಾಮನಗರದ ಬೆಟ್ಟಕ್ಕೆ ಹೋಗಿ ಅಲ್ಲಿ ಒಂದು ಗುಹೆಯಲ್ಲಿ ತಮ್ಮ ಅಭ್ಯಾಸಗಳನ್ನು ನಡಸುತ್ತಿದ್ದರಂತೆ. ಒಂದು ಸಾರಿ ಅವರಿಬ್ಬರೂ ತಮ್ಮ ದೇಹಗಳನ್ನು ಆ ಗುಹೆಯಲ್ಲಿ ಬಿಟ್ಟು ಜೀವಮಾತ್ರರಾಗಿ ಹೊರಕ್ಕೆ ಬಂದಿದ್ದರೆಂದೂ, ಇನ್ನೊಂದು ಸಾರಿ ಅವರು ದೇಹದಿಂದ ಹೊರಕ್ಕೆ ಬಂದು ದೇಹವನ್ನು ಛಿದ್ರವಾಗಿ ಕತ್ತರಿಸಿ ಬಳಿಕ ಯೋಗಶಕ್ತಿಯಿಂದ ಆ ಅವಯವಗಳನ್ನು ಒಟ್ಟುಗೂಡಿಸಿ ಅದರೊಳಕ್ಕೆ ಪುನಃಪ್ರವೇಶ ಮಾಡಿದರೆಂದೂ ಕಿಂವದಂತಿ ಇರುತ್ತದೆ. ನಾರಾಯಣರಾಯರು ಯಾರಿಂದಲೋ ತಾವು ಕೇಳಿದ್ದದ್ದನ್ನು ನನಗೆ ಹೇಳಿದರು. ಯಥಾರ್ಥವನ್ನು ಅವರೂ ಕಂಡವರಲ್ಲ, ನಾನೂ ಕಂಡವನಲ್ಲ.

ಸಜ್ಜನರಾಯರ ಸೇವೆ

ಸ್ವಾಮಿಗಳು ಮಹಾಮಹಿಮರೆಂಬ ಪ್ರಖ್ಯಾತಿ ಮಾತ್ರ ಹರಡಿತು. ಸಜ್ಜನರಾಯರು ಹೇಗೋ ಅದನ್ನು ತಿಳಿದುಕೊಂಡಿದ್ದರು. ಸಜ್ಜನರಾಯರಿಗೆ ಸಾಧುಗಳಲ್ಲಿ, ಸಂತರಲ್ಲಿ, ಯೋಗಿಗಳಲ್ಲಿ, ಬೈರಾಗಿಗಳಲ್ಲಿ, ಯತಿಗಳಲ್ಲಿ, ಭಗವದ್ಭಕ್ತರಲ್ಲಿ ಶ್ರದ್ಧೆ ವಿಶ್ವಾಸಗಳು ತುಂಬಿದ್ದವು. ಅವರು ಯಾವ ಸಾಧುವನ್ನು ಕಂಡರೂ ಸೇವೆ ಸಲ್ಲಿಸದಿರುತ್ತಿರಲಿಲ್ಲ; ಅಂಥ ಮಹನೀಯರನೇಕರ ಛಾಯಾಚಿತ್ರಗಳು ಅವರ ಮನೆಯಲ್ಲಿದ್ದವು.

ಸಜ್ಜನರಾಯರು ಮಹಾದೇವಶಾಸ್ತ್ರಿಗಳವರ ತಾಯಿತಂದೆಯರಿಬ್ಬರ ಮೃತ ತಿಥಿಗಳನ್ನು ತಿಳಿದುಕೊಂಡು ಜ್ಞಾಪಕದಲ್ಲಿರಿಸಿಕೊಂಡು, ಆ ಎರಡು ದಿನಗಳಲ್ಲೂ ಅಂದಂದಿನ ವೈದಿಕ ಕರ್ಮಕ್ಕೆ ಅವಶ್ಯವಾದ ಅಕ್ಕಿ ಬೇಳೆ ಮೊದಲಾದ ಸಾಮಾನುಗಳನ್ನೂ ಬ್ರಾಹ್ಮಣ ಮುತ್ತೈದೆಯರಿಗೆ ಕೊಡಬೇಕಾದ ಧೋತ್ರ ಸೀರೆಗಳನ್ನೂ ದಕ್ಷಿಣೆಯನ್ನೂ ತಾವಾಗಿ ಮೊದಲೇ ಶಾಸ್ತ್ರಿಗಳ ಮನೆಗೆ ಕಳುಹಿಸಿಬಿಡುತ್ತಿದ್ದರು. ಶಾಸ್ತ್ರಿಗಳು ವರ್ಷದಲ್ಲಿ ಆ ಎರಡು ದಿನ ತಪ್ಪದೆ ಸಕಾಲಕ್ಕೆ ಮನೆಗೆ ಬಂದು, ಬಾವಿಯಿಂದ ನೀರು ಸೇದಿಕೊಂಡು, ರುದ್ರಾಧ್ಯಾಯ ಮಂತ್ರಗಳನ್ನು ಹೇಳಿಕೊಳ್ಳುತ್ತ, ತಮಗೇ ಅಭಿಷೇಕ ಮಾಡಿಕೊಳ್ಳುತ್ತಿದ್ದರಂತೆ. ಅದಾದ ಬಳಿಕ ಸಾಂಗವಾಗಿ ಕರ್ಮಾಚರಣೆ, ಪಿತೃಶೇಷವನ್ನು ಸ್ವೀಕರಿಸಿದ್ದಾದ ಮೇಲೆ ಅಲ್ಲಿರುತ್ತಿರಲಿಲ್ಲ.

ಇಷ್ಟು ನಾನು ಕೇಳಿರುವ ಸಂಗತಿ. ಈ ಒಟ್ಟಿನ ಚಿತ್ರದಲ್ಲಿ ಸಣ್ಣ ಸಣ್ಣ ವಿವರಗಳು ಬೇರೆ ರೀತಿಯದಾಗಿದ್ದರೂ ಇರಬಹುದು. ಅದು ಮುಖ್ಯಚಿತ್ರವನ್ನು ಕೆಡಿಸಲಾರದು. ಆ ಚಿತ್ರ ಒಬ್ಬ ಜಗದ್ವಿರಕ್ತನಾದ, ಸ್ನೇಹಕಾರುಣ್ಯಮೂರ್ತಿಯಾದ, ಅಂತರ್ಮುಖಿಯಾದ ಪರಮಾತ್ಮನಿಷ್ಠನದು.

ಅವಧೂತಚರ್ಯೆ

ಮಹಾದೇವಶಾಸ್ತ್ರಿಗಳ ಯೋಗಸಿದ್ಧಿಯನ್ನು ಕುರಿತಾಗಲಿ ಶಾಸ್ತ್ರಪಾಂಡಿತ್ಯವನ್ನು ಕುರಿತಾಗಲಿ ನಾನು ಏನನ್ನೂ ಹೇಳಬಲ್ಲವನಾಗಿಲ್ಲವೆಂದು ಮನಸ್ಸಿಗೆ ಕೊರತೆಯಾಗಿದೆ. ನನಗೆ ಅವರೊಡನೆ ಮಾತನಾಡುವ ಅವಕಾಶ ಬರಲಿಲ್ಲ. ಆದರೆ ನಾನು ಪುಸ್ತಕಗಳಲ್ಲಿ ಓದಿದ್ದ ‘ಅವಧೂತ’ ಎಂಬ ಮಾತಿನ ಅಭಿಪ್ರಾಯ ನನ್ನ ಮನಸ್ಸಿಗೆ ಬಂದದ್ದು ಸ್ವಾಮಿಗಳನ್ನು ನೋಡಿದ ಮೇಲೆ. ನಾನು ಹೈಸ್ಕೂಲಿನ ತರಗತಿಗಳಲ್ಲಿದ್ದಾಗ ‘ಆತ್ಮ ವಿದ್ಯಾವಿಲಾಸ’ ಎಂಬ ಗ್ರಂಥ ಹೇಗೋ ನನ್ನ ಕೈಗೆ ಬಂದಿತು. ಅದರಲ್ಲಿ,

ಅವಧೂತ ಕರ್ಮಜಾಲಃ
ಜಡಬಧಿರಾಂಧೋಪಮಃ ಕೋಽಪಿ ।...
ಸಂತ್ಯಜ್ಯ ಶಾಸ್ತ್ರ ಜಾಲಂ
ಜಾತ್ಯಭಿಮಾನವಿಹೀನಃ
ಜಂತುಷು ಸರ್ವತ್ರ ಪೂರ್ಣತಾಂ ಪಶ್ಯನ್ ।

ಗೂಢಶ್ಚರತಿ ಯತೀಂದ್ರಃ
ಮೂಢವದಖಿಲಾಗಮಾರ್ಥತತ್ತ್ವಜ್ಞಃ ।

ಮನುಷ್ಯ ಈ ರೀತಿ ಬದುಕುವುದು ಸಾಧ್ಯವೆ? –ಎಂಬ ಪ್ರಶ್ನೆ ಪದೇ ಪದೇ ನನ್ನ ಮನಸ್ಸಿಗೆ ಬಂದಿದೆ. ವೇದಾಂತ ಗ್ರಂಥಗಳಲ್ಲಿ,

ಜಡವಲ್ಲೋಕಮಾಚರೇತ್ ।

–ಎಂದು ಉಪದೇಶ ಬರುತ್ತದೆ. ಅದು ಸಾಧ್ಯವೆ? ಕ್ಷಣಕ್ಷಣವೂ ಅಡಿಗಡಿಗೂ ಲೋಕವು ನಮ್ಮನ್ನು ಚುಚ್ಚಿಚುಚ್ಚಿ ಕೆರಳಿಸುತ್ತಿರುತ್ತದೆ. ಈ ಆವೇಶದ ನಡುವೆ ಜಡನಾಗಿ, ಮನಸ್ಸು ಕದಲದವನಾಗಿ ಇರುವುದು ಸಾಧ್ಯವೆ? ಈ ಪ್ರಶ್ನೆ ತೋರಿದಾಗ ನಾನು ಮಹಾದೇವ ಶಾಸ್ತ್ರಿಗಳನ್ನು ನೆನಪು ಮಾಡಿಕೊಳ್ಳುತ್ತೇನೆ.

೨. ರೋಣೂರು ವೀರಬ್ರಹ್ಮಂ

ನಾನು ರೋಣೂರು ವೀರಬ್ರಹ್ಮಂ ಎಂಬುವರ ವಿಷಯ ಕೇಳಿದ್ದೇನೆ. ಆದರೆ ರೋಣೂರು ಎಂಬ ಹೆಸರಿನ ಸ್ಥಳಗಳು ಅನೇಕ ಇರುವಂತೆ ಕಾಣುತ್ತದೆ. ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ರೋಣೂರು ಎಂಬ ಗ್ರಾಮವುಂಟು. ಆದರೆ ನಮ್ಮ ವೀರಬ್ರಹ್ಮರ ಊರು ಇದೇಯೊ ಬೇರೆಯೊ ನನಗೆ ತಿಳಿಯದು.

ವೀರಬ್ರಹ್ಮಂ ಎಂಬವರು ಒಬ್ಬ ವಿರಕ್ತರು. ಹುಟ್ಟಿನಿಂದ ಅವರು ಬ್ರಾಹ್ಮಣರು. ಅವರ ಹುಟ್ಟಿನ ಹೆಸರು ಯಾರಿಗೂ ತಿಳಿಯದು. ನಾನು ಅವರನ್ನು ಕಂಡದ್ದೇ ಇಲ್ಲ. ಅವರು ನನ್ನ ಕಾಲಕ್ಕಿಂತ ಬಹುವರ್ಷ ಹಿಂದಿನವರು. ಅವರನ್ನು ನೋಡಿದ್ದವರನೇಕರನ್ನು ನಾನು ನೋಡಿದ್ದೇನೆ.

ವೀರಬ್ರಹ್ಮಂ ಎಂಬ ಹೆಸರು ಅವರಿಗೆ ಅವರ ಶಿಷ್ಯರು ಕೊಟ್ಟದ್ದು. ಶಿಷ್ಯರು ತಮ್ಮತಮ್ಮಲ್ಲೋ ಅಥವಾ ಇತರರೊಡನೆಯೋ ಮಾತನಾಡುವಾಗ "ವೀರಬ್ರಹ್ಮಂಗಾರು" ಎಂದು ಹೇಳುತ್ತಿದ್ದರು. ಅದು ತೆಲುಗು ಸೀಮೆ. ವೀರಬ್ರಹ್ಮಂರವರಿಗೆ ಸ್ವಂತ ಮನೆಯೆಂಬುದಿರಲಿಲ್ಲ. ಅವರು ಒಂದು ಗುಡಿಯ ಪಕ್ಕದ ಒಂದು ಮಂಟಪದಲ್ಲಿ ಇರುತ್ತಿದ್ದರು. ಶಿಷ್ಯರು ಆ ಹಳೆಯ ಮಂಟಪಕ್ಕೆ ಗೋಡೆ ಕಟ್ಟಿ, ಗಾಳಿ ಮಳೆಗಳಿಂದ ವಸತಿ ಕೆಡದಂತೆ ಮಾಡಿದ್ದರು.

ವೀರಬ್ರಹ್ಮರು ತುಂಬ ಮಾತನಾಡುತ್ತಿರಲಿಲ್ಲ; ಬಹುಮಟ್ಟಿಗೆ ಮೌನವಾಗಿರುತ್ತಿದ್ದರು. ಯಾರಾದರೂ ಅವರನ್ನು ಮಾತನಾಡಿಸಿದಾಗ ಎಷ್ಟು ಅವಶ್ಯವೋ ಅಷ್ಟೇ ಉತ್ತರ ಹೇಳಿ, ತಮ್ಮ ಮಾತಿನ ಕಡೆಯಲ್ಲಿ "ಓಂ ಬ್ರಹ್ಮಂ" ಎನ್ನುತ್ತಿದ್ದರಂತೆ.

ಇಷ್ಟಾಗಿದ್ದರೂ ಕೋಪ ಅವರನ್ನು ಬಿಟ್ಟಿರಲಿಲ್ಲ. ಆ ಕೋಪವನ್ನು ಧ್ವನಿಯಿಂದಲೂ ಕಣ್ಣುಬಿಡುವುದರಿಂದಲೂ ತೋರಿಸುತ್ತಿದ್ದರು. ಕೆಟ್ಟಮಾತು, ಪೆಟ್ಟು-ಇಂಥದೇನೂ ಇರಲಿಲ್ಲ.

ಅವರ ಮುಪ್ಪಿನಲ್ಲಿ ಅವರಿಗೆ ಒಂದು ದಿನ ಜ್ವರ ಬಂದಿತಂತೆ. ಅದಕ್ಕೆ ಅವರು ತಾವೇ ಏನೋ ಔಷಧ ಮಾಡಿಕೊಂಡರಂತೆ: ಕಷಾಯ ಮತ್ತು ಉಪವಾಸ. ಶಿಷ್ಯರು ವೈದ್ಯರನ್ನು ಕರತರುತ್ತೇವೆಂದಾಗ,

“ಅದೆಲ್ಲ ಕೂಡದು. ಓಂ ಬ್ರಹ್ಮಂ” ಎಂದರಂತೆ. ಎರಡು ಮೂರು ದಿನ ಹೀಗೆ ಕಳೆಯಿತು. ಆಮೇಲೆ ಒಂದು ಮಧ್ಯಾಹ್ನ ಗುರುಗಳು ಶಿಷ್ಯರಿಬ್ಬರನ್ನು ಕರೆದು,

“ಈ ಘಟವನ್ನು ಹೊರಕ್ಕೆ ಸಾಗಿಸಿ. ಓಂ ಬ್ರಹ್ಮಂ” –ಎಂದರಂತೆ. ಶಿಷ್ಯರು ಮೂರು ನಾಲ್ಕು ಮಂದಿ, ಒಬ್ಬರು ತಲೆ ಭುಜಗಳನ್ನೂ ಇನ್ನೊಬ್ಬರು ಕಾಲುಗಳನ್ನೂ ಇನ್ನಿಬ್ಬರು ಎರಡು ಪಕ್ಕಗಳಿಂದ ಬೆನ್ನು ನಡುಗಳನ್ನೂ ಹಿಡಿದೆತ್ತಿ, ಹೊರಕ್ಕೆ ತರಲು ಹೊರಟರು. ಎತ್ತಿಕೊಂಡು ಹೊಸ್ತಿಲ ಬಳಿಗೆ ಬರುವಾಗ ಪಕ್ಕದಲ್ಲಿದ್ದ ಒಬ್ಬನು ತಾನೇ ಎಡವಿ ಕೈಬಿಟ್ಟನಂತೆ. ಆಗ ಗುರುಗಳು ಗಟ್ಟಿಯಾಗಿ,

“ಓಂ ಬ್ರಹ್ಮಂ, ಓಂ ಬ್ರಹ್ಮಂ, ಓಂ ಬ್ರಹ್ಮಂ” –ಎಂದು ಮೂರು ಸಾರಿ ಕೂಗಿದರಂತೆ. ಮಿಕ್ಕವರಿಗೆ ನಡುಕ ಬಂತು. ಹಾಗೆಯೇ ತಂದು ಜಗಲಿಯ ಮೇಲೆ ಮಲಗಿಸಿದರು. ಗುರುಗಳು ಗಟ್ಟಿಯಾಗಿ ನಗುತ್ತಿದ್ದರಂತೆ.

ಆ ಹೊತ್ತಿಗೆ ಬೇರೊಬ್ಬರು ಯಾರೋ ಅಲ್ಲಿಗೆ ಬಂದು ಗುರುಗಳನ್ನು ವಿಚಾರಿಸಿದರು. ಗುರುಗಳು ಹೇಳಿದರು:

“ಅಯ್ಯಾ, ಇವರೆಂಥ ಬೆಪ್ಪರು! ಒಂದು ಘಟವನ್ನು ಹೊರುವುದಕ್ಕೆ ತಕ್ಕಷ್ಟು ಮನೋದಾರ್ಢ್ಯವೇ ಇಲ್ಲವಲ್ಲ! ಇಂಥವರು ಸತ್ಯವನ್ನು ಹೇಗೆ ಕಂಡಾರು? ಸತ್ಯವನ್ನು ಕಾಣಬೇಕೆನ್ನುವವರಿಗೆ ಮೊದಲು ಇರಬೇಕಾದದ್ದು ಧೈರ್ಯ, ಎರಡನೆಯದು ಬಲ- ಮನಸ್ಸಿನ ಬಲ, ಕುಸ್ತಿ ಮಾಡುವ ಬಲವಲ್ಲ; ಮನಸ್ಸು ಬುದ್ಧಿಗಳ ಬಲ.

ನಾಯಮಾತ್ಮಾ ಬಲಹೀನೇನ ಲಭ್ಯಃ”

ಈ ಉಪನಿಷದ್ವಾಕ್ಯವನ್ನು ಹೇಳಿ ನಗುತ್ತಿದ್ದರಂತೆ. ಅದರ ಮಾರನೆಯ ದಿನವೇ ವೀರಬ್ರಹ್ಮರು ಬ್ರಹ್ಮೀಭೂತರಾದರು.

ಇವರ ವೃತ್ತಾಂತವನ್ನು ನನಗೆ ಹೇಳಿದವರು ಶ್ರೀನಿವಾಸಪುರದಲ್ಲಿ ಶಂಕರಮಠವನ್ನು ಸ್ಥಾಪಿಸಿರುವ ಶೇಷಪ್ಪನವರು.

೬

ಸೊಣ್ಣೇಗೌಡರ ಸಮಾರಾಧನೆ

ಸೊಣ್ಣವಾಡಿ ಎಂಬುದು ಸಣ್ಣ ಗ್ರಾಮ. ಮೂಲರೂಪದಲ್ಲಿ ಅದು ಬಹುಶಃ ಸ್ವರ್ಣವಾಡಿ ಎಂದಿದ್ದಿರಬಹುದು. ಆ ಗ್ರಾಮದ ಯಜಮಾನರು ಸೊಣ್ಣೇಗೌಡರು. ಅವರ ಪೂರ್ವಿಕರು ಭಿಸ್ಸೇಗೌಡರೆಂದು ಜನ ಹೇಳುತ್ತಿದ್ದರು. ಭಿಸ್ಸೇಗೌಡರು ಒಬ್ಬ ಸಣ್ಣ ಪಾಳೆಯಗಾರರು.

ನನ್ನ ಕಾಲಕ್ಕೆ ಸೊಣ್ಣೇಗೌಡರು ಭಾರಿ ರೈತರು. ಅವರಿಗೆ ಪಾಳೆಯಗಾರರೆಂಬ ಹೆಸರಿಲ್ಲದಿದ್ದರೂ ಅವರ ಕಾರ್ಯಕರ್ದುಗಳೆಲ್ಲ ಅವರು ಪಾಳೆಯಗಾರರೆಂಬಂತೆಯೇ ಇತ್ತು.

ಸೊಣ್ಣೇಗೌಡರು ವರ್ಷಕ್ಕೆ ಒಂದು ದಿನ ಪುಷ್ಯ ಮಾಘ ಮಾಸಗಳಲ್ಲಿ ಧಾತ್ರೀ ಹವನದ ಸುಮಾರಿನಲ್ಲಿ ಒಂದು ಬ್ರಾಹ್ಮಣ ಸಂತರ್ಪಣೆ ನಡಸುತ್ತಿದ್ದರು. ಅದಕ್ಕೆ ಮುಳಬಾಗಲಿನಿಂದ ಕಛೇರಿ ಜನಗಳೂ ಸ್ಕೂಲುಮೇಷ್ಟ್ರುಗಳೂ ಹೋಗುತ್ತಿದ್ದರು. ವೈದಿಕರು ಆ ಸುತ್ತಮುತ್ತಲ ಎಲ್ಲ ಪ್ರದೇಶಗಳಿಂದಲೂ ಬರುತ್ತಿದ್ದರು.

ನಾನು ಅಂಥ ಒಂದು ಸಂತರ್ಪಣೆಗೆ ಹೋಗಿದ್ದೆ. ಬಹುಶಃ ೧೯೦೦-೧೯೦೧ ನೆಯ ಇಸವಿಯಲ್ಲಿ ನನ್ನ ಬಾಲ್ಯದ ಕಾಲ ಪೂರ್ವಕಾಲ. ಅದು ಗತವೈಭವ. ಅದರ ಚಿತ್ರ ಈ ಕಾಲದ ಯುವಕರಿಗೆ ಇಷ್ಟವಾದೀತು–ತಮ್ಮ ಪೂರ್ವಿಕರು ಹೇಗೆ ಹೇಗೆ ಸಂತೋಷಪಟ್ಟರೆಂಬುದನ್ನು ತಿಳಿಸುವ ಕಾರಣದಿಂದ.

ಸೊಣ್ಣೇಗೌಡರು ಎತ್ತರವಾದ ಆಳು. ತೆಳುವಾದ ಮೈಕಟ್ಟು. ಬಣ್ಣ ಎಣ್ಣೆಗೆಂಪಿಗೂ ಕಪ್ಪಿಗೂ ನಡುವಣದು. ಎರಡು ಕೈಗಳಲ್ಲೂ ಚಿನ್ನದ ಕಪ್ಪಗಳು, ಉಂಗುರಗಳು. ಕಿವಿಯಲ್ಲಿ ಕೆಂಪು ಕಲ್ಲು ಹಾಕಿದ ಹತ್ತುಕಡಕು, ಮತ್ತು ಎಡಗಿವಿಯ ಮೇಲೆ ಮುರುವು ಎಂಬ ಆಭರಣ. ತಲೆಯ ಮೇಲೆ ಭಾರಿ ರುಮಾಲು, ಆ ವ್ಯಕ್ತಿಯಲ್ಲಿ ಎದ್ದು ಕಾಣುತ್ತಿದ್ದ ಅಂಗವೆಂದರೆ ಮೀಸೆಯ ಜೋಡಿ. ಮೀಸೆಯ ಪಸಂದು ನೋಡಬೇಕೆಂದರೆ ಸೊಣ್ಣೇಗೌಡರ ಮುಖ.

ಇವರ ಒಂದು ಮನೆ ಮುಳಬಾಗಲಿನಲ್ಲಿಯೂ ಉಂಟು. ಆ ಊರಿನಲ್ಲಿದ್ದ ಮೂರು ನಾಲ್ಕು ಭಾರಿ ಭಾರಿ ಮನೆಗಳಲ್ಲಿ ಇದು ತುಂಬ ಭಾರಿಯಾದದ್ದು. ಅದನ್ನು ನಾನು ನೋಡಿದ್ದು ನನ್ನ

ಚಿಕ್ಕಂದಿನಲ್ಲಿ. ಆ ಕಟ್ಟಡ ಪೂರ್ತಿಯಾಗಿದ್ದಾಗ ೩೦೦-೪೦೦ ಅಂಕಣವಿದ್ದಿರಬಹುದೆಂದು ಜನ ಹೇಳುತ್ತಿದ್ದರು. ಸೊಣ್ಣೇಗೌಡರು ಈ ಮನೆಯಲ್ಲಿ ವಾಸವಾಗಿರಲಿಲ್ಲ. ಅವರು ಮುಳಬಾಗಲಿಗೆ ಬಂದಾಗ ಆ ಮನೆಯ ಒಂದೆರಡು ಕೊಠಡಿಗಳಲ್ಲಿ ಬಿಡಾರ ಮಾಡುತ್ತಿದ್ದರು. ಅವರ ಖಾಯಂ ವಾಸಸ್ಥಾನ ಸೊಣ್ಣವಾಡಿ.

ಸ್ವಾಮಿಗಳ ಬಿಡಾರ

ಮುಳಬಾಗಲಿನ ದೊಡ್ಡ ಮನೆ ಒಂದು ಸತ್ರದಂತಿತ್ತು. ಆ ಊರಿಗೆ ಸ್ವಾಮಿಗಳು, ಗುರುಗಳು, ದೊಡ್ಡ ಪರಿವಾರವುಳ್ಳ ಇತರರು ಪದೇ ಪದೇ ಬರುತ್ತಿದ್ದರು. ನಾನು ಮೊದಲನೆಯ ಸಲ ಆ ಮನೆಗೆ ಹೋಗಿದ್ದದ್ದು ಅಲ್ಲಿ ಆವನಿ ಸ್ವಾಮಿಗಳು ಇಳಿದುಕೊಂಡಿದ್ದಾಗ–ಈಗ್ಗೆ ೭೫-೮೦ ವರ್ಷ ಹಿಂದಿನ ಸ್ವಾಮಿಗಳು. ಅವರ ಪರಿವಾರದಲ್ಲಿ ಆನೆ, ಕುದುರೆ, ಭಾಂಕಾ ಎಂಬ ನಗಾರಿ, ಕೊಂಬು ಕಹಳೆ ಊದುವವರು ಮೊದಲಾದ ಪರಿವಾರವಿತ್ತು. ಆ ಮನೆಗೆ ಸಮೀಪದಲ್ಲಿ ಹುಣುಸೆಮರ, ಗಂಗರೇಣಿ ಮರ ಇದ್ದವು. ಆನೆಯನ್ನೂ-ಆನೆಮರಿಯನ್ನೂ ಈ ಮರಗಳಿಗೆ ಕಟ್ಟಿಹಾಕಿದ್ದಾಗ ಅದನ್ನು ನೋಡಲು ಬೆಳಗಿನಿಂದ ಸಂಜೆಯವರೆಗೂ ಒಂದು ಬೀದಿಯ ಗುಂಪು ಸೇರಿರುತ್ತಿತ್ತು. ನನ್ನ ತಾತಂದಿರು ನನ್ನನ್ನು ಆ ಸ್ವಾಮಿಗಳ ಆಸ್ಥಾನಕ್ಕೆ ಕರೆದುಕೊಂಡು ಹೋಗಿ ನಮಸ್ಕಾರ ಮಾಡಿಸಿದ್ದೂ ಸ್ವಾಮಿಗಳು ಏನೋ ಒಂದು ಒಳ್ಳೆಯ ಮಾತನಾಡಿ ನನಗೆ ಪ್ರಸಾದ ಕೊಟ್ಟದ್ದೂ ನನ್ನ ನೆನಪಿನಲ್ಲಿ ನಿಂತಿದೆ. ಸ್ವಾಮಿಗಳು ಆ ಮನೆಯಲ್ಲಿದ್ದಷ್ಟು ದಿನ ಆ ಊರಿನ ಮತ್ತು ಹತ್ತಿರದ ಅಗ್ರಹಾರಗಳಲ್ಲಿಯ ಬ್ರಾಹ್ಮಣ ಬ್ರಾಹ್ಮಣತಿಯರಿಗೆ ಪ್ರತಿ ದಿನವೂ ಮಠದ ಸಮಾರಾಧನೆಯ ಊಟ. ನನ್ನ ಬಾಲ್ಯದ ಕಾಲ ಭೋಜನ ಸಮೃದ್ಧಿಯ ಕಾಲ.

ನಾನು ಆ ಮನೆಗೆ ಮತ್ತೊಂದು ಸಾರಿ ಹೋಗಿದ್ದದ್ದು ನಲ್ಲಾನ್ ಚಕ್ರವರ್ತಿಗಳೆಂಬ ಶ್ರೀವೈಷ್ಣವ ಆಚಾರ್ಯಪುರುಷರು ಅಲ್ಲಿದ್ದಾಗ. ನಲ್ಲಾನ್ ಎಂಬ ಹೆಸರನ್ನು 'ನಲ್ಲಾಲ್' ಎಂದು ಜನ ಹೇಳುತ್ತಿದ್ದದ್ದುಂಟು. ಈ ಶ್ರೀವೈಷ್ಣವ ಆಚಾರ್ಯರು ಮುಳಬಾಗಲಿನ ಖಾಯಂ ನಿವಾಸಿಗಳಲ್ಲ; ಆಗಾಗ ಬಂದು ಹೋಗುತ್ತಿದ್ದವರು. ಮುಳಬಾಗಲಿನ ಆಂಜನೇಯ ದೇವಾಲಯ ಮಹಾಪ್ರಖ್ಯಾತವಾದದ್ದಷ್ಟೆ!

ರಥೋತ್ಸವ

ಆ ದೇವಾಲಯದ ಶ್ರೀರಾಮರ ರಥೋತ್ಸವ ವೈಶಾಖ ಪೌರ್ಣಮಿಯಂದು ನಡೆಯುತ್ತಿತ್ತು. ಆ ಉತ್ಸವದಲ್ಲಿ ನಲ್ಲಾನ್ ಸ್ವಾಮಿಗಳಿಗೆ ಒಂದು ಮುಖ್ಯಸ್ಥಾನ. ರಥದಲ್ಲಿ ಸ್ವಾಮಿಯನ್ನು ಬಿಜಮಾಡಿಸುವ ಕಾಲದಲ್ಲಿ ನಲ್ಲಾನ್ ಸ್ವಾಮಿಗಳು ಅಲ್ಲಿರಬೇಕು. ದೇವರ ರಥಾರೋಹಣವಾದ ಬಳಿಕ ನಲ್ಲಾನ್ ಸ್ವಾಮಿಗಳು ಮಂಗಳಾರತಿ ಮಾಡಿ ರಥದಲ್ಲಿ ಕೂಡಬೇಕು. ಸುಮಾರು ಮೂರು ಮಾರಿನಷ್ಟು ದೂರ ರಥ ಮುಂದಕ್ಕೆ ಸಾಗಿದ ಮೇಲೆ, ನಲ್ಲಾನ್ ಸ್ವಾಮಿಗಳು ರಥದಿಂದಿಳಿದು ತಮ್ಮ ಬಿಡಾರಕ್ಕೆ ದಯಮಾಡಿಸುವರು. ನಲ್ಲಾನ್ ಸ್ವಾಮಿಗಳು ಮಂಗಳಾರತಿ ಮಾಡಿ ಆರತಿಯನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಮತ್ತಾರ ಸೇವೆಗೂ ಅವಕಾಶವಿಲ್ಲ. ಇದು ಮಾಮೂಲು.

ಈ ಸಂದರ್ಭದಲ್ಲಿ ಒಂದು ತಕರಾರು. ಮುಳಬಾಗಲಿನಲ್ಲಿ ಬೇರೆ ಮಠಗಳುಂಟು: ಸ್ಮಾರ್ತರವು, ಮಾಧ್ವರವು. ಮಾಧ್ವ ಮಠಗಳಲ್ಲಿ ಮುಖ್ಯವಾದದ್ದು ಶ್ರೀಪಾದರಾಯರ ಮಠ. ಈ ಮಠದ ಸ್ವಾಮಿಗಳು ರಥಸ್ಥನಾದ ದೇವರ ದರ್ಶನಕ್ಕೆ ಬರಬೇಕು ಎಂದರೆ, ಆಗ ನಲ್ಲಾನ್ ಸ್ವಾಮಿಗಳು ದೇವರ ಬಳಿ ಇರಲಾಗದು. ನಲ್ಲಾನ್ ಸ್ವಾಮಿಗಳು ಒಟ್ಟಿನ ಮೇಲೆ ಗೃಹಸ್ಥರು, ಮಠದ ಸ್ವಾಮಿಗಳು–ಯತಿಗಳು. ಗೃಹಸ್ಥರು ಮತ್ತು ಶ್ರೀವೈಷ್ಣವ ಮತಸ್ಥರೂ ಆದವರು ರಥದೊಳಗಡೆ ಇದ್ದಾಗ, ಮಾಧ್ವ ಯತಿಗಳು ನೆಲದ ಮೇಲೆ ನಿಂತು ಸೇವಿಸುವುದೊ?

ಈ ತಕರಾರನ್ನು ಪರಿಹಾರ ಮಾಡುವುದಕ್ಕಾಗಿ ಎರಡು ಉಪಾಯಗಳು:

1. ನಲ್ಲಾನ್ ಆಚಾರ್ಯರು ಮೂರು ವರ್ಷಕ್ಕೋ ನಾಲ್ಕು ವರ್ಷಕ್ಕೋ ಒಂದು ಸಲ ಬರತಕ್ಕದ್ದು. ವರ್ಷೇ ವರ್ಷೇ ರಥೋತ್ಸವಕಾಲದಲ್ಲಿ ಬೇರೆಲ್ಲಿಯೋ ಇರತಕ್ಕದ್ದು. ನಾಲ್ಕು ವರ್ಷಕ್ಕೊಂದು ಸಲ, ತಮ್ಮ ಬರುವಿಕೆಯನ್ನು ದೇವಸ್ಥಾನದವರಿಗೆ ತಿಳಿಸಿ ಆಮೇಲೆ ಬರುವುದು.
2. ಬಂದರೂ ಅವರು ರಥಾರೋಹಣ ಮಾಡಿ ಮಂಗಳಾರತಿ ತೆಗೆದುಕೊಂಡು ಹೋದ ಬಳಿಕ ದೇವಸ್ಥಾನದ ಹೆಡ್ ಅರ್ಚಕರು ಶ್ರೀಪಾದರಾಜ ಮಠಕ್ಕೆ ವರ್ತಮಾನ ಕಳುಹಿಸುವುದು. ಆ ಬಳಿಕ ಶ್ರೀಪಾದರಾಜ ಸ್ವಾಮಿಗಳು ರಥದರ್ಶನಕ್ಕಾಗಿ ಬರುವುದು.

ಈ ಏರ್ಪಾಟಿನಿಂದ ಎಲ್ಲ ಸಮಾಧಾನವಾಗಿ ನಡೆಯುತ್ತಿತ್ತು. ಇದರಲ್ಲಿ ಮುಖ್ಯವಾದ ಭಾಗ ಆಂಜನೇಯ ದೇವಾಲಯದ ಹೆಡ್ ಅರ್ಚಕರಾದ ಶ್ರೀನಿವಾಸಚಾರ್ಯರು, ರಾಮಾಚಾರ್ಯರು, ಅವರ ಉಪಾಯ ನಯ.

ಪೂಜೆಯ ವೈಖರಿ

ಒಂದು ಸಾರಿ ಸೊಣ್ಣೇಗೌಡರ ಮುಳಬಾಗಿಲು ಮನೆಯಲ್ಲಿ ಯಾರೋ ಶ್ರೀವೈಷ್ಣವ ಸ್ವಾಮಿಗಳು ಒಂದು ತಿಂಗಳು ಬಿಡಾರಮಾಡಿದ್ದರು. ಪ್ರತಿದಿನವೂ ಮಧ್ಯಹ್ನ ೧೧ ಘಂಟೆಯ ಸಮಯದಲ್ಲಿ ಕೊಂಬು ಊದಿದ ಶಬ್ದವೂ ಮೇಳದ ಶಬ್ದವೂ ನಗಾರಿಯ ಹೊಡೆತದ ಶಬ್ದವೂ ಅಲ್ಲಿಂದ ನಮ್ಮ ಮನೆಗೆ ಕೇಳಿಬರುತ್ತಿತ್ತು. ಒಂದು ದಿನ ನಾನು ಕುತೂಹಲಪಟ್ಟು ಅದೇನು ಶಬ್ದವೆಂದು ಯಾರೋ ಹಿರಿಯರನ್ನು ಕೇಳಿದೆ. ಅವರು "ಅದು ನಲ್ಲಾನ್ ಸ್ವಾಮಿಗಳ ದೇವತಾರ್ಚನೆ" ಎಂದರು. ನನ್ನ ಕುತೂಹಲ ಅದರಿಂದ ತೀವ್ರವಾಯಿತು. ದೇವತಾರ್ಚನೆ ಹೇಗೆ ನಡೆಯುತ್ತದೆಯೋ, ಅಲ್ಲಿ ಮಂತ್ರಪುಷ್ಪ ಹೇಗೆ ಹೇಳುತ್ತಾರೋ, ಏನೇನು ಸಂಭ್ರಮವಾಗುತ್ತದೆಯೋ, ಅದನ್ನೆಲ್ಲ ನೋಡಬೇಕೆಂದು ಆಸೆ ಹೆಚ್ಚಾಯಿತು. ಮಾರನೆಯ ದಿನ ನಗಾರಿಯ ಸದ್ದು ಕೇಳಿಸಿದ ಕೂಡಲೆ ಅಲ್ಲಿಗೆ ಹೋದೆ. ಮೇಳ ಆಗ ತಾನೆ ನಿಂತಿತ್ತು. ನಗಾರಿಯ ಸದ್ದು ನಡೆಯುತ್ತಿತ್ತು.

ನಾನು ಆ ಮನೆಯನ್ನು ಹೊಕ್ಕು ಅದರ ಹಜಾರಕ್ಕೆ ಹೋದೆ. ಅಲ್ಲಿ ಇಬ್ಬರು ಮೂವರಿದ್ದರು. "ನಾನು ದೇವರ ಪೂಜೆ ನೋಡಲು ಬಂದಿದ್ದೇನೆ. ಅದು ಎಲ್ಲಿ?" ಎಂದೆ. ಅವರು "ಒಳಗೆ ಹೋಗಿ–ಇನ್ನೊಂದು ಹಜಾರ" ಎಂದರು. ಎರಡನೆಯ ಹಜಾರಕ್ಕೆ ಹೋದೆ. ಅಲ್ಲಿ ಎರಡು ಚಾಪೆ ಹಾಸಿತ್ತು. ಯಾರೋ ಕುಳಿತುಕೊಂಡು ಮಾತನಾಡುತ್ತಿದ್ದರು. ಅವರು "ಇನ್ನೊಂದು ಹಜಾರ" ಎಂದು ಒಳಗಡೆಗೆ ಕೈ ತೋರಿಸಿದರು. ಮೂರನೆಯ ಹಜಾರಕ್ಕೂ ಹೋದೆ. ಅಲ್ಲಿ ಒಳ್ಳೆಯ ಜಮಖಾನೆ ಹಾಸಿತ್ತು. ಎರಡು ಮೂರು ಒರಗು ದಿಂಬುಗಳಿದ್ದವು. ಮೂರು ನಾಲ್ಕು ಮಂದಿ ಸೊಗಸಾಗಿ ಪಟ್ಟೆನಾಮಗಳನ್ನು ಧರಿಸಿ, ಒಬ್ಬಟ್ಟಂಚಿನ ಧೋತ್ರಗಳನ್ನುಟ್ಟು, ಜಮಖಾನದ ಮೇಲೆ ಕುಳಿತು ತಾಂಬೂಲಚರ್ವಣ ಮಾಡುತ್ತ ಮಾತನಾಡಿಕೊಂಡು ಕೇಕೆ ಹೊಡೆಯುತ್ತಿದ್ದರು. ನಾನು "ದೇವರ ಪೂಜೆ..." ಎಂದೆ. ಅವರಲ್ಲೊಬ್ಬರು "ಮುಗಿಯಿತಲ್ಲಾ? –ಈಗ ತಾನೆ ಮುಗಿದುಹೋಯಿತು" ಎಂದರು. ನಾನು ಬೆಪ್ಪನಾಗಿ ಹಿಂದಿರುಗಿದೆ.

ಮೇಳದವರು ಅವರ ಹೊತ್ತಿನಲ್ಲಿ ಮೇಳ ಊದಿದರು. ಕೊಂಬಿನವನು ಅವನ ಹೊತ್ತಿನಲ್ಲಿ ಕೊಂಬೆತ್ತಿದ. ನಗಾರಿಯವನು ಅವನ ಹೊತ್ತಿನಲ್ಲಿ ನಗಾರಿ ಬಾರಿಸಿದ. ಸ್ವಾಮಿಗಳು ಅವರ ಹೊತ್ತಿನಲ್ಲಿ ಅವರ ಪೂಜೆ ಮಾಡಿದರು. ಎಲ್ಲರೂ ಅವರವರಷ್ಟಕ್ಕೆ ಅವರವರು ಸ್ವತಂತ್ರರು.

ನಾನು ಇದನ್ನು ನನ್ನ ತಾತನಿಗೆ ಹೇಳಿದೆ. ಅವರು “ನೀನು ಯಾಕೆ ಹೋದೆ ಅಲ್ಲಿಗೆ? ನನಗೆ ಮೊದಲು ಹೇಳಾದರೂ ಹೇಳಬಾರದಾಗಿತ್ತೆ?” ಎಂದರು.

***

ಸೊಣ್ಣೇಗೌಡರ ಮನೆಯಲ್ಲಿ ವಾಸವಾಗಿದ್ದು ನನಗೆ ತಿಳಿದುಬಂದ ಮೂರನೆಯವರು ಅಮಲ್ದಾರ್ ಮೋಕ್ಷಗುಂಡಂ ವೆಂಕಟೇಶಯ್ಯನವರು. ಇವರು ಭಾರಿ ಕುಟುಂಬವಂತರು, ಮತ್ತು ದರ್ಪವಂತರು. ಆದದ್ದರಿಂದ ಅಷ್ಟು ದೊಡ್ಡ ಮನೆ ಅವರಿಗೆ ಅವಶ್ಯವಾಗಿತ್ತು.

ಸೊಣ್ಣೇಗೌಡರ ಕುಟುಂಬ

ವೆಂಕಟೇಶಯ್ಯನವರನ್ನು ಕುರಿತು ನನ್ನ ಜ್ಞಾಪಕವನ್ನು ಬೇರೆ ಕಡೆ ನಿರೂಪಿಸಿದ್ದೇನೆ. ನಾನು ಅವರಿಂದ ವಿಶ್ವಾಸ ಪಡೆದು ಉಪಕೃತನಾದವನು.

ಈಗ ಸೊಣ್ಣೇಗೌಡರ ವಿಚಾರಕ್ಕೆ ಹಿಂತಿರುಗುತ್ತೇನೆ.

ಅವರ ಸೊಣ್ಣವಾಡಿಯ ಮನೆಯನ್ನು ಮನೆ ಎನ್ನುವುದಕ್ಕಿಂತ ಕೋಟೆ ಎನ್ನುವುದು ಸಮಂಜಸ. ಅವರು ಆ ಕೋಟೆಯ ಎಲ್ಲ ಮನೆಗಳಲ್ಲೂ ವಾಸವಿದ್ದರು. ಪರ್ಯಾಯ ಪ್ರಕಾರದಿಂದ. ಮಧ್ಯದಲ್ಲಿ ಒಂದು ಮನೆ. ಅದರ ಸುತ್ತ ಒಂದು ಸಾಲು ಮನೆಗಳು. ಆ ಸಾಲಿನ ಸುತ್ತ ಮೂರನೆಯ ಸಾಲು. ಅದರ ಸುತ್ತ ನಾಲ್ಕನೆಯ ಸಾಲು. ಒಂದೊಂದು ಸಾಲಿನ ಒಂದೊಂದು ಮನೆಯಲ್ಲಿಯೂ ಸಂಸಾರಗಳು ಬೇರೆ ಬೇರೆ. ಸೊಣ್ಣೇಗೌಡರಿಗೆ ನಾಲ್ಕು ಮಂದಿ ಮಡದಿಯರಂತೆ. ಒಬ್ಬೊಬ್ಬಾಕೆಯ ಬೀದಿ ಒಂದೊಂದು. ಒಬ್ಬೊಬ್ಬಾಕೆಗೂ ಗಂಡುಮಕ್ಕಳೂ ಹೆಣ್ಣುಮಕ್ಕಳೂ ಇದ್ದರು. ಹಾಗೆಯೇ ಸೊಸೆಯರೂ ಅಳಿಯಂದಿರು ಇದ್ದರು. ಒಂದೊಂದು ಸಂಸಾರಕ್ಕೆ ಸೇರಿದಂತೆ ಹಸು, ಎಮ್ಮೆ, ಕರುಗಳು, ಅದರ ಜೊತೆಗೆ ಕೋಳಿ, ಬಹುಶಃ ಕುರಿ-ಇದೆಲ್ಲವೂ ಇದ್ದದ್ದನ್ನು ನಾನು ಹುಡುಗನಾಗಿದ್ದಾಗ ಸ್ವತಃ ಕಂಡಿದ್ದೆ. ಆಗ ನನಗುಂಟಾದ ಆಶ್ಚರ್ಯದಿಂದ ನನ್ನ ಕೂಡ ಇದ್ದ ಹಿರಿಯರನ್ನು ಕೇಳಿದ್ದೆ. ಅವರು ಹೇಳಿದ ಮಾತನ್ನು ಇಲ್ಲಿ ಬರೆದಿದ್ದೇನೆ.

ಧಾತ್ರೀಹವನ

ಸೊಣ್ಣವಾಡಿಯಲ್ಲಿ ಧಾತ್ರೀಹವನದ ಭೋಜನದ ದಿವಸ ಬೆಳಗಿನ ಜಾವದಲ್ಲಿಯೇ ಎದ್ದು ಸುಮಾರು ಏಳು ಘಂಟೆಯ ಹೊತ್ತಿಗೆ ಸೊಣ್ಣವಾಡಿ ಊರ ಮುಂದಿನ ಕೆರೆಯನ್ನು ಸೇರಿದೆವು. ದಾರಿ ನಡೆದಿದ್ದರಿಂದ ಮೈಗೆ ಚಳಿ ತೋರಲಿಲ್ಲ. ನೀರು ಬೇಕೆನಿಸಿತು. ಕೆರೆಯ ತುಂಬ ಸೊಗಸಾದ ತಿಳಿನೀರು. ಮುಖ ತೊಳೆದು ಸ್ನಾನಮಾಡಿದೆವು. ಒಗೆದ ಬಟ್ಟೆ ಧರಿಸಿ ಒಂದಿಪ್ಪತ್ತು ಗಜ ನಡೆದಾಗ ಅಲ್ಲಿ ತೋಟ. ಬಹಳ ಸೊಗಸಾದ ತೋಟವೆಂದು ನನಗೆ ಈಗ ಅನ್ನಿಸುತ್ತದೆ. ಬಾಳೆಯ ಕಾಡು ಎನ್ನಬಹುದು ಅದನ್ನು. ತೆಂಗೂ ಹಾಗೆಯೇ, ಅಲ್ಲಲ್ಲಿ ಮಾವಿನ ಗಿಡ, ನಡುನಡುವೆ ಚೆಂಡುಮಲ್ಲಿಗೆ ಹೂವಿನ ಪಾತಿಗಳು, ಮಲ್ಲಿಗೆಯ ಹಬ್ಬು–ಈ ನಾನಾ ಜಾತಿಯ ಗಿಡಗಳು ತಾವಾಗಿ ಬೆಳೆದಿದ್ದವೆಂಬಂತೆ ತೋರುತ್ತಿತ್ತು. ಲಾಲ್‌ಬಾಗಿನಲ್ಲಿ ಕಾಣುವ ಕ್ರಮ, ನಿಯಮ ಏನೂ ಅಲ್ಲಿರಲಿಲ್ಲ. ಗಿಡವಿಲ್ಲದೆ ಬಿಟ್ಟಿದ್ದ ನೆಲವೇ ರಸ್ತೆ. ಆದರೆ ಎಲ್ಲಿ ನೋಡಿದರೂ ಚೊಕ್ಕಟವಾಗಿತ್ತು, ತಂಪಾಗಿತ್ತು.

ಅದು ಅವರೆಕಾಯಿ ಕಾಲ. ಒಂದು ಕಡೆ ಅವರೆಕಾಯಿ ರಾಶಿ ಬಿದ್ದಿತ್ತು, ಇನ್ನೊಂದು ಕಡೆ ಬಾಳೆಯ ಸುಳಿಗಳು. ಅಲ್ಲಿಗೆ ಬಂದಿದ್ದ ಸ್ಕೂಲುಮೇಷ್ಟರುಗಳೂ ಶಾನುಭೋಗರುಗಳೂ ಒಬ್ಬರಿಬ್ಬರು ವೈದಿಕರೂ ಸೇರಿ ಅವರೆಕಾಯಿ ಬಿಡಿಸಿ, ಅಡಿಗೆಗೆ ಅಣಿಮಾಡುತ್ತಿದ್ದರು. ಇನ್ನು ಕೆಲವರು ಇಂಥವರು ಹರಿವೊಲೆಯ (ಸಾಲು ಒಲೆಗಳ) ಮುಂದೆ ಪಾಕಕಾರ್ಯದಲ್ಲಿದ್ದರು. ಅವರೆಕಾಯಿ, ಬಾಳೆಯೆಲೆ, ಅಕ್ಕಿ, ಬೇಳೆ ಮೊದಲಾದ ಸಮಸ್ತವನ್ನೂ ಸೊಣ್ಣೇಗೌಡರು ಸರಬರಾಜು ಮಾಡಿದ್ದರು. ಆ ಸರಬರಾಜಿನಲ್ಲಿ ನಾನು ಈಗ ವಿಶೇಷವಾಗಿ ಹೇಳಬೇಕಾಗಿರುವುದು ತುಪ್ಪವೆಂಬ ಪದಾರ್ಥ. ಅದು ಈಗಿನವರಿಗೆ ಅಪರೂಪವಾದದ್ದರಿಂದ ಒಂದು ಮಾತು ಹೆಚ್ಚಾಗಿ ಹೇಳುತ್ತೇನೆ. ತುಪ್ಪವೆಂಬ ಪದಾರ್ಥ ಕುಂಬಾರನ ಗಡಿಗೆಗಳಲ್ಲಿ ಬಂದಿತ್ತು. ಐದಾರು ಗಡಿಗೆಗಳು. ಒಂದೊಂದು ಗಡಿಗೆಯಲ್ಲೂ, ತೆಳುವಾದ ಅರಿಸಿನಕೇಸರಿ ಬಣ್ಣದ ತುಪ್ಪ. ಮರಳುಮರಳಾದದ್ದು. ನಮ್ಮ ಊರಿನ ರಸಿಕರು ಸಣ್ಣ ಪುಟ್ಟ ವಯಸ್ಸಿನ ನನ್ನಂಥ ಹುಡುಗರು ತುಪ್ಪದಲ್ಲಿ ಬೆಟ್ಟಿಟ್ಟದ್ದನ್ನು ನೋಡಿ ಆಗ ಸ್ವಾಭಾವಿಕವಾಗಿದ್ದ ತೆಲುಗು ಮಾತಿನಲ್ಲಿ, “ಅಯ್ಯಯ್ಯಾ–ಈ ಐವಾರು ಆಜ್ಯಂಲೋ ಯೇಲುಪೆಟ್ಟಿ ಮೂಶಿಚೂಸ್ತಾಡೇ!” ಎನ್ನುತ್ತಿದ್ದರು. ಇದು ಅವರ ಹಾಸ್ಯದ ದಾರಿ. ಆಜ್ಯವೆಂದರೆ ತುಪ್ಪವೆಂದು ನಮಗೆ ಗೊತ್ತಿರಲಿಲ್ಲ. ಆದದ್ದರಿಂದ ಏನೋ ಕೊಳಕು ಸಾಮಾನು ಎಂದು ಅವರು ಭಾವಿಸಿದಂತೆ ಧ್ವನಿಕೊಟ್ಟು ಮಾತನಾಡಿದ್ದೆವು. ತುಪ್ಪವನ್ನು

ಪರೀಕ್ಷಿಸುವಾಗ ಒಂದು ಸಣ್ಣ ಹಂಚಿಕಡ್ಡಿಯಿಂದ ಒಂದು ಕಣವನ್ನೆತ್ತಿ ಅದನ್ನು ಎಡಗೈ ತರ್ಜನಿಯಿಂದ (ತೋರುಬೆರಳು) ಮೆದುವಾಗಿ ಮೇಲೆ ಮೇಲೆ ಒಂದೆರಡು ಸಲ ಸವರಿ, ಅದರ ವಾಸನೆಯಿಂದ ಅದು ಆಕಳ ತುಪ್ಪ ಹೌದೇ ಅಲ್ಲವೆ, ಚೆನ್ನಾಗಿದೆಯೇ ಇಲ್ಲವೆ ಎಂಬುದನ್ನು ಗೊತ್ತು ಮಾಡುವರು. ಸೊಣ್ಣೇಗೌಡರ ಔತಣದ ತುಪ್ಪ ಉತ್ತಮದಲ್ಲಿ ಉತ್ತಮ ದರ್ಜೆಯದು. ಎಂದರೆ ಆ ಕಾಲದಲ್ಲಿ ಗೋಸಮೃದ್ಧಿ ಹಾಗಿತ್ತು. ಮತ್ತು ಅಂಗಡಿಗೆ ಹಾಕುವ ಪದ್ಧತಿ ಇರಲಿಲ್ಲ. ಎಷ್ಟೋ ಮಂದಿ ರೈತರು ತುಪ್ಪವನ್ನು ಮಾರುವುದು ಹೀನಕಾರ್ಯವೆಂದು ತಿಳಿದಿದ್ದರು. ಹೀಗೆ ಬ್ರಾಹ್ಮಣರಿಗೆ ಭೋಜನ ಸಮೃದ್ಧವಾಯಿತು.

> ಭೋಜನಂ ದೇಹಿ ರಾಜೇಂದ್ರ
> ಘೃತಸೂಪಸಮನ್ವಿತಮ್ ।
> ಮಾಹಿಷಂ ಚ ಶರಚ್ಚಂದ್ರ
> ಚಂದ್ರಿಕಾಧವಳಂ ದಧಿ ॥

ಇಷ್ಟನ್ನೇ ಅಲ್ಲವೆ ಕಾಳಿದಾಸಾದಿಕವಿಗಳೆಲ್ಲ ಬೇಡಿದ್ದು? ಅದು ನಮಗೆ ಸಿದ್ಧವಾಗಿತ್ತು.

ಸಮೃದ್ಧಿ

ನಾವು ಸೊಣ್ಣೇಗೌಡರ ಅತಿಥಿಗಳಾಗಿದ್ದ ದಿವಸ ನಮಗೆ ದೇವಲೋಕದ ಭೋಜನ. ಅವರೆ ಬೀಜದ ಹಿದುಕುಬೇಳೆ ತೊವ್ವೆ, ಯಥೇಷ್ಟವಾಗಿ ಘೃತ, ಅವರೆಕಾಯಿ ಹುಳಿ, ಹಾಗಲಕಾಯಿ ಗೊಜ್ಜು, ಆಂಬೊಡೆ, ಶಾವಿಗೆ ಪಾಯಸ, ಚಾಕುವಿನಿಂದ ಕಡಿಯುವಷ್ಟು ಗಡ್ಡೆಕಟ್ಟಿದ ಮೊಸರು, ಹಪ್ಪಳ ಸಂಡಿಗೆ, ಪಲ್ಯಗಳು. ಇನ್ನೇನು ಬೇಕು ಭೋಗಕ್ಕೆ?

ಆ ಪ್ರಾಂತದಲ್ಲಿ ಆ ಕಾಲದಲ್ಲಿ ಆಲೂಗಡ್ಡೆ, ಕೋಸುಗಡ್ಡೆ, ಹುರುಳಿಕಾಯಿ ಮೊದಲಾದ ಹೊಸ ನಮೂನೆಯ ತರಕಾರಿಗಳಿರಲಿಲ್ಲ. ಅಲ್ಲಿ ನಮಗೆ ನಿಂಬೆಕಾಯಿ ಯಥೇಷ್ಟವಾಗಿತ್ತು. ಊಟದ ಜೊತೆಗೆ, ಹಸಿ ಮೆಣಸಿನ ಕಾಯಿಯೂ ಹಾಗೆಯೇ.

ಸಂತೋಷವಾಗಿ ಹರಟಿಕೊಂಡು ಪದಾರ್ಥಗಳನ್ನು ಮತ್ತೆ ಮತ್ತೆ ಕೇಳಿ ಬಡಿಸಿಕೊಂಡು ಎಲ್ಲರೂ ಹೊಟ್ಟೆ ಬಿರಿಯ ಉಂಡೆವು. ಸಂಜೆ ೫ ಘಂಟೆಯ ಮೇಲೆ ತಂಪುಹೊತ್ತಿನಲ್ಲಿ ಹಿಂತಿರುಗಿದೆವು. ನಮಗೆ ಆ ತೃಪ್ತಿಯನ್ನುಂಟುಮಾಡಿದ ಸೊಣ್ಣೇಗೌಡರಂಥ ಅಕೃತ್ರಿಮವಾದ ಉದಾರಿಗಳು ನಮ್ಮ ದೇಶದಲ್ಲಿ ಸಂತತವಾಗಿ ಅಭಿವೃದ್ಧಿಯಾಗಲಿ.

> ಸ್ವೇ ಸ್ವೇ ಕರ್ಮಣ್ಯಭಿರತಃ
> ಸಂಸಿದ್ಧಿಂ ಲಭತೇ ನರಃ ॥

೧೦

ಬೆಂಗಳೂರಿನಲ್ಲಿ ಹೋಟೆಲ್ ಉದ್ಯಮದ ಪ್ರಾರಂಭ

ಬೆಂಗಳೂರಿನಲ್ಲಿ ಮೊದಲನೆಯ ಹೋಟೆಲನ್ನು ಸ್ಥಾಪಿಸಿದವರು ಬ್ರಾಹ್ಮಣರು, ಅವರು ಮುಳಬಾಗಲಿನವರು, ಅವರ ಹೆಸರು ಆವನಿ ನರಸಿಂಗರಾಯರೆಂದು. ಆವನಿ ಮುಳಬಾಗಲಿನಿಂದ ಐದಾರು ಮೈಲಿ ದೂರದಲ್ಲಿರುವ ಹಳ್ಳಿ. ಆವನಿಗೆ ಅವಂತೀ ಕ್ಷೇತ್ರವೆಂದೂ ಹೆಸರುಂಟು. ಅದನ್ನು ವಾಲ್ಮೀಕಿಗಳ ಆಶ್ರಮವೆಂದೂ ಹೇಳುತ್ತಾರೆ. ಸೀತಾದೇವಿ ಕುಶಲವರನ್ನು ಪ್ರಸವಿಸಿದ್ದು ಅಲ್ಲೇ ಎಂದೂ, ಆಕೆ ಮಕ್ಕಳ ಕೊಳೆಬಟ್ಟೆಗಳನ್ನು ಒಗೆದ ಕೊಳದಲ್ಲಿಯ ಬೆಟ್ಟದ ಹೊಂಡಗಳೆಂದೂ ತೋರಿಸುತ್ತಾರೆ. ಬೆಟ್ಟದ ಮೇಲೆ ಸೀತಾದೇವಿಯ ಗುಡಿ ಇದೆ. ಆ ದೇವಿಯನ್ನು ಸೀತಾಲಕ್ಷ್ಮಿಯೆಂದು ಕೆಲವರೂ ಸೀತಾಗೌರಿ ಎಂದು ಕೆಲವರೂ ಕರೆಯುತ್ತಾರೆ. ಆವನಿಯ ಬೆಟ್ಟದಡಿಯಲ್ಲಿ ರಾಮಲಿಂಗೇಶ್ವರ, ಲಕ್ಷ್ಮಣಲಿಂಗೇಶ್ವರ, ಭರತೇಶ್ವರ, ಶತ್ರುಘ್ನೇಶ್ವರ, ಆಂಜನೇಯೇಶ್ವರ–ಈ ಐದು ಶಿವಲಿಂಗಗಳ ಗುಡಿಗಳು ಆಕರ್ಷಕವಾಗಿವೆ. ಚೊಕ್ಕಟವಾದ, ವಿಸ್ತಾರವಾದ ಕಟ್ಟಡಗಳು. ಗುಡಿಯ ಆವರಣದಲ್ಲಿ ಗರಿಕೆಹುಲ್ಲು ರಮಣೀಯವಾಗಿದೆ. ಐದು ಗುಡಿಗಳಲ್ಲಿಯೂ ಮೇಲೆ ಅಮ್ಮನವರ ಗುಡಿಗಳಲ್ಲಿಯೂ ಪ್ರತಿನಿತ್ಯ ಕ್ರಮವಾಗಿ ಅರ್ಚನೆ ನಡೆಯುತ್ತಿದೆ. ತಪಸ್ಸು ಯೋಗಾಭ್ಯಾಸಗಳನ್ನು ಮಾಡಬೇಕೆನ್ನುವವರಿಗೆ ಇದು ಪ್ರಶಸ್ತವಾದ ಸ್ಥಳ.

ಬಹುಶಃ ಇದನ್ನು ಆಲೋಚಿಸಿಯೇ ಅಲ್ಲಿ ಮಠಸ್ಥಾಪನೆ ಮಾಡಿಸಿರಬಹುದು. ಆ ಮಠ ವಿದ್ಯಾರಣ್ಯಸ್ವಾಮಿಗಳವರಿಂದ ಸ್ಥಾಪಿತವಾದದ್ದೆಂದು ನನ್ನ ಭಾವನೆ. ಆ ಮಠದ ಸ್ವಾಮಿಗಳ ಹೆಸರಿನಲ್ಲಿ 'ವಿದ್ಯಾರಣ್ಯ' ಎಂಬುದು ಕಾಣುಬರುತ್ತದೆ.

> ಗರಲಾಖ್ಯಪುರೇ ಶಂಭೋಃ
> ಸುರಲಾಲಿತ ಗೋಪುರೇ ।
> ಕಲಶೌಘಂ ಪ್ರತಿಷ್ಠಾಪ್ಯ
> ವಿದ್ಯಾರಣ್ಯೋ ಮಹಾಮುನೇ ॥...

–ಇದು ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ನಂಜನಗೂಡಿನಲ್ಲಿ ಗೋಪುರಕ್ಕೆ ಕಲಶಸ್ಥಾಪನೆ ಮಾಡಿದ್ದರ ಸ್ಮರಣೆ.

ನರಸಿಂಗರಾಯರ ಗಣ್ಯತೆ

ಇಂಥ ಊರಿನವರು ನರಸಿಂಗರಾಯರು. ಅವರ ಹೆಸರನ್ನು ನಾನು ಕೇಳಿದ್ದೇನೆಯೇ ಹೊರತು ಅವರನ್ನು ನಾನು ಕಂಡವನಲ್ಲ. ನರಸಿಂಗರಾಯರು ವರ್ಷಕ್ಕೆ ಒಂದೆರಡು ಸಾರಿ ಮುಳಬಾಗಲಿಗೆ ಹೋಗಿಬರುತ್ತಿದ್ದದ್ದುಂಟು. ಆಗ ನನಗೆ ಐದಾರು ವರ್ಷ ಇದ್ದಿರಬಹುದು. ನರಸಿಂಗರಾಯರು ಊರಿಗೆ ಬರುವ ದಿವಸ ಊರಿನ ಕೆಲವರು ಗಣ್ಯರಿಗೆ ಗೊತ್ತಾಗುತ್ತಿತ್ತು. ಅವರು “ನಾಳೆ ಬಂದಾನು ನರಸಿಂಗರಾಯ” ; “ಬಹುಶಃ ನಾಳಿದ್ದು ಬಂದಾರು ನರಸಿಂಗರಾಯರು” –ಎಂದು ಮಾತನಾಡಿಕೊಳ್ಳುತ್ತಿದ್ದರು. ಕೆಲವರು ಆತನನ್ನು ಏಕವಚನದಲ್ಲಿಯೂ ಕೆಲವರು ಬಹುವಚನದಲ್ಲಿಯೂ ಕರೆಯುತ್ತಿದ್ದರು. ಈ ಮಾತುಕತೆ ನಡೆಯುತ್ತಿದ್ದಾಗ ಒಂದು ಸಾರಿ ನಾನು ನನ್ನ ಚಿಕ್ಕತಾತಂದಿರನ್ನು ವಿಚಾರಿಸಿದೆ. ಅವರು ಹೇಳಿದರು: “ನರಸಿಂಗರಾಯ ಆವನಿಯವನು. ಬೆಂಗಳೂರಿನಲ್ಲಿ ಹೋಟಲಿಟ್ಟು ಮಸ್ತಾಗಿ ಹಣ ಸಂಪಾದಿಸಿದ್ದಾನೆ. ಈಗ ಹಣವಂತನಾದದ್ದರಿಂದ ಅವನನ್ನು ‘ರಾಯರು’ ಎಂದು ಕರೆಯುತ್ತಾರೆ” ಎಂದು.

ನರಸಿಂಗರಾಯರು ಕೋಲಾರದಿಂದಲೋ, ಬೌರಿಂಗ್‌ಪೇಟೆಯಿಂದಲೋ ಒಂದು ಸ್ಪೆಷಲ್ ಜಟಕಾ ಮಾಡಿಕೊಂಡು ಬರುತ್ತಿದ್ದರು. ಅವರನ್ನು ಎದುರುಗೊಳ್ಳಲು ಎಂಟು ಹತ್ತು ಮಂದಿಯ ಗುಂಪು ಸೇರಿರುತ್ತಿತ್ತು. ಆತ ಗಾಡಿಯಿಂದ ಇಳಿದ ಕೂಡಲೆ ಒಬ್ಬಿಬ್ಬರು ನಿಂಬೆಹಣ್ಣನ್ನು ಕೊಟ್ಟು ಕುಶಲಪ್ರಶ್ನೆ ಮಾಡುವರು. ಒಬ್ಬಿಬ್ಬರು ಆತನ ಮೂಟೆಗಳನ್ನು ಹೊತ್ತು ಆತನ ಬಿಡಾರದಲ್ಲಿಡಿಸುವರು. ಈ ಸಂಭ್ರಮವನ್ನು ನೋಡಿದ್ದು ನನಗೆ ಜ್ಞಾಪಕವಿದೆ.

‘ಆವನಿಯವರ ಹೋಟಲು’

ಆವನಿ ನರಸಿಂಗರಾಯರ ಹೋಟಲಿದ್ದದ್ದು ಬೆಂಗಳೂರಿನಲ್ಲಿ ದೊಡ್ಡ ಪೇಟೆ, ಚಿಕ್ಕಪೇಟೆ ಸೇರುವ ಮೂಲೆಯಿಂದ ಚಿಕ್ಕಪೇಟೆಯ ಎಡಗಡೆಯ ಸಾಲಿನಲ್ಲಿ ಎಂಟುಹತ್ತು ಮನೆಗಳಿಂದೀಚೆಗೆ–ದಿವಂಗತ ರಾಜಸೇವಾಸಕ್ತ ಪಾಮಡಿ ಸುಬ್ಬರಾಮಶೆಟ್ಟರ ಅಂಗಡಿಯ ಸಮೀಪದಲ್ಲಿ. ಆ ಕಟ್ಟಡವೇ ‘ಆವನಿಯವರ ಹೋಟಲು’ ಎಂದು ಮುದುಕರು ಹೇಳಿದ್ದನ್ನು ನಾನು ಕೇಳಿದ್ದೇನೆ.

ಆವನಿ ನರಸಿಂಗರಾಯರು ರಸಿಕರೆಂದು ತೋರುತ್ತದೆ. ಕೊಂಚ ಪರಿವಾರವನ್ನಿಟ್ಟುಕೊಂಡಿದ್ದರು. ಅವರು ಉದಾರಿಗಳೂ ಹೌದು. ಮುಳಬಾಗಲಿಗೆ ಬಂದಾಗ ಗುಡಿಗಳಲ್ಲಿ ಪೂಜೆಗಳನ್ನು ನಡಸುತ್ತಿದ್ದರು. ಬ್ರಾಹ್ಮಣರಿಗೆ ಸಂಭಾವನೆ ಕೊಡುತ್ತಿದ್ದರು. ಅವರ ಕಾಲ ಯಾವಾಗ ಮುಗಿಯಿತೋ ಹೇಳಲಾರೆ. ಬಹುಶಃ ಬೆಂಗಳೂರಿಗೆ ಮೊದಲನೆಯ ಪ್ಲೇಗ್ ಬಂದಾಗ: ೧೮೯೮-೯೯ ಆಗಿರಬೇಕೆಂದು ಊಹಿಸಿದ್ದೇನೆ.

ಬೆಂಗಳೂರಿನಲ್ಲಿ ನಾನು ನೋಡಿದ ಎರಡನೆಯ ಹೋಟಲು ವೆಂಕಣ್ಣನವರದು. ಇವರೂ ಬ್ರಾಹ್ಮಣರು. ಇವರ ಹೋಟಲಿದ್ದದ್ದು ಚಿಕ್ಕಪೇಟೆಯಿಂದ ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯೊಳಕ್ಕೆ ತಿರುಗಿದರೆ ಎಡಪಕ್ಕದ ನಾಲ್ಕನೆಯದೋ ಐದನೆಯದೋ ಮನೆ: ಅಲ್ಲಿ ಗೌರ್ನಮೆಂಟ್ ಅಡ್ವೊಕೇಟ್ ಎಸ್. ನಾರಾಯಣರಾಯರ ಮನೆಯಿತ್ತು. ಅದು ಗಾರೆಯ ಮನೆ, ಆ ಕಾಲಕ್ಕೆ ಭಾರಿ ಮನೆ. ಈ ಮನೆಯಲ್ಲಿ ಪಶುಪತಿ ಅಯ್ಯರ್ ಎಂಬ ಪ್ರಸಿದ್ಧರು ಕೆಲವು ಕಾಲ ಮಿಲ್ಲಿನ ನೂಲು ವ್ಯಾಪಾರವನ್ನೂ ಲೇವಾದೇವಿಯನ್ನೂ ನಡೆಸುತ್ತಿದ್ದರು. ಪಶುಪತಿ ಅಯ್ಯರ್ ಅವರು ಮದರಾಸಿನವರು. ಅವರು ಆ ಕಾಲದ ರಾಜಕಾರಣಿಗಳಿಗೆ ಸಹಾಯವಾಗಿದ್ದರು. ವಿ.ವಿ.ಎಸ್. ಅಯ್ಯರ್, ಸುಬ್ರಹ್ಮಣ್ಯ ಭಾರತಿಯಾರ್, ಇ.ಎಲ್. ಅಯ್ಯರ್ ಮೊದಲಾದ ಕಿಂಚಿತ್ಕ್ರಾಂತಿಕಾರಕ ದೇಶಭಕ್ತರು ಆ ಗುಂಪಿಗೆ ಸೇರಿದವರು. ಪಶುಪತಿ ಅಯ್ಯರ್ ಇದ್ದ ಮನೆಯ ದಕ್ಷಿಣ ಪಾರ್ಶ್ವದಲ್ಲಿ ಅದಕ್ಕೆ ಅಂಟಿಕೊಂಡಂತೆ ಇದ್ದದ್ದು ವೆಂಕಣ್ಣನ ಹೋಟಲುಮನೆ. ಈಗ ನಾನು ಹೇಳುತ್ತಿರುವುದು ೧೯೦೫-೬ರ ಮಾತನ್ನು.

ರಿಜಿಸ್ಟ್ರೇಷನ್

ಆಗ ನಾನು ವಾಸವಿದ್ದದ್ದು ಚಾಮರಾಜಪೇಟೆಯಲ್ಲಿ. ಅಕ್ಕಪಕ್ಕದ ಮನೆಗಳಲ್ಲಿ ಆಗಾಗ ವೆಂಕಣ್ಣನವರ ಪ್ರಶಂಸೆ ಬರುತ್ತಿತ್ತು. ಮನೆಗೆ ಹೊತ್ತಾಗಿ ಬಂದರೆ "ಹೋಗಿದ್ದೇನೋ ವೆಂಕಣ್ಣನ ಹೋಟಲಿಗೆ?" ಎನ್ನುವರು. "ಏನೋ ಹೊಡೆದು ಬಂದಿದ್ದೀ ವೆಂಕಣ್ಣನ ಹೋಟಲಿನಲ್ಲಿ; ಅದಕ್ಕೇ ಹಸಿವಿಲ್ಲ." ಹೀಗೆ ಪದೇ ಪದೇ ವೆಂಕಣ್ಣನವರ ಸ್ಮರಣೆ. ನನಗೆ ಅದರಿಂದ ಕುತೂಹಲ ಕೆರಳಿ ಒಬ್ಬ ಸ್ನೇಹಿತನನ್ನು ಕೇಳಿದೆ, ಅಲ್ಲಿಗೆ ಕರೆದುಕೊಂಡು ಹೋಗೆಂದು. ಆತ ಹೇಳಿದ; "ಮುಂದಿನ ಭಾನುವಾರ ಕರೆದುಕೊಂಡು ಹೋಗುತ್ತೇನೆ."

ನಾನು "ಅಷ್ಟು ತಡ ಏಕೆ?"

ಆತ: "ವೆಂಕಣ್ಣನ ಹೋಟಲಿನಲ್ಲಿ ಯಾವಾಗೆಂದರೆ ಆಗ ಹೋದರೆ ಜಾಗ ಸಿಕ್ಕುವುದಿಲ್ಲ. ಮೊದಲೇ ಹಣ ಕೊಟ್ಟು ಹೆಸರನ್ನು ರಿಜಿಸ್ಟರ್ ಮಾಡಿಸಿರಬೇಕು."

ಅದರಂತೆ ಆಯಿತು. ಶನಿವಾರ ಮಧ್ಯಾಹ್ನ ೪ ಘಂಟೆಯೊಳಗಾಗಿ ಎಷ್ಟು ಜನ ಹೋಗುತ್ತೇವೆಂದು ನಿಷ್ಕರ್ಷೆಯಾಗಿ ಹೇಳಿ, ನಾಲ್ಕಾಣೆ ಅಥವಾ ಎಂಟಾಣೆ ಮುಂಗಡ ಕೊಟ್ಟು ಲೆಕ್ಕದಲ್ಲಿ ಹೆಸರು ಬರೆಯಿಸಿರಬೇಕು.

ನನ್ನ ಮೊದಲ ಭೇಟಿ

ಹೀಗೆ ಒಂದು ಭಾನುವಾರ ನನ್ನ ಸ್ನೇಹಿತ ಶೇಷಗಿರಿ ಏರ್ಪಾಟು ಮಾಡಿ ನನ್ನನ್ನು ಕರೆದುಕೊಂಡು ಹೋದ. ಬೆಳಗ್ಗೆ ಏಳೂವರೆ ಘಂಟೆಯಿರಬಹುದು. ವೆಂಕಣ್ಣನವರು ಯಾವ ಸಿಬ್ಬಂದಿಯನ್ನೂ ಇಟ್ಟುಕೊಂಡಿರಲಿಲ್ಲ. ನಮ್ಮನ್ನು ನೋಡಿದ ಕ್ಷಣವೇ ಕೇಳಿದರು:

“ನೀವು ಬ್ರಾಹ್ಮಣರೋ?”

“ಹೌದು.”

“ಸ್ನಾನವಾಗಿದೆಯೋ?”

“ಆಗಿದೆ.”

“ಹಣೆಯ ಮೇಲೆ ವಿಭೂತಿ ಯಾಕಿಲ್ಲ? ಅಲ್ಲಿ ಡಬ್ಬಿಯಲ್ಲಿದೆ, ಹಚ್ಚಿಕೊಳ್ಳಿ.”

ನಾನು ವಿಭೂತಿ ಹಚ್ಚಿಕೊಂಡೆ. ಈ ವೇಳೆಗೆ ನಮಗೆ ಹಿಂದೆಯೇ ಬಂದವರು ಮೂರು ಮಂದಿ ಗೋಡೆಗೆ ಒರಗಿಕೊಂಡು ನೆಲದ ಮೇಲೆ ಕುಳಿತಿದ್ದರು. ನಾವಿಬ್ಬರು ಅವರ ಜೊತೆಗೆ ಸೇರಿದೆವು. ವೆಂಕಣ್ಣನವರು ಒಬ್ಬೊಬ್ಬರಿಗೂ ಒಂದೊಂದು ಚೂರು ಬಾಳೆಯೆಲೆಯನ್ನು ಕೊಟ್ಟರು. ಅಡಿಗೆಕೋಣೆಯಿಂದ ಬಿಸಿ ಬಿಸಿ ದೋಸೆ ತಂದು ನಮಗಿಂತ ಹಿಂದೆ ಬಂದಿದ್ದ ಮೂವರಿಗೂ ಕ್ರಮವಾಗಿ ಎರಡೆರಡು ದೋಸೆ ಬಡಿಸಿದರು. ಜೊತೆಯಲ್ಲಿ ಚಟ್ನಿ. ಆಮೇಲೆ ನಮ್ಮ ಸರದಿ.

ಪಲಾಯನ

ಈ ಸರದಿಗೆ ಸಾಮಾನು ಬರುವಷ್ಟರೊಳಗಾಗಿ ಮತ್ತೊಬ್ಬರು ಅಲ್ಲಿಗೆ ಬಂದರು. ನನ್ನ ಸ್ನೇಹಿತ ಮೊಣಕೈಯನ್ನು ತಿವಿದು “ನಿಮ್ಮ ದೊಡ್ಡಪ್ಪ ಬರುತ್ತಿದ್ದಾನೆ” ಎಂದ. ನಾನು ಆ ಮಾತನ್ನು ಕೇಳಿದ ಕೂಡಲೆ ಚೇಳು ಕಡಿದಂತೆ ಎದ್ದು ಓಡಿದೆ, ನನ್ನ ಸ್ನೇಹಿತನೂ ಬಂದ.

‘ದೊಡ್ಡಪ್ಪ’ ಎಂಬುವರು ನನ್ನ ತಂದೆಯ ಜ್ಞಾತಿ-ಅವರಿಗೆ ಅಣ್ಣನ ವರಸೆ. ಆತನ ಹೆಸರು ಶೀನಪ್ಪ. ಸೋಮತ್ತನ ಹಳ್ಳಿಯವರು. ಶೀನಪ್ಪನವರನ್ನು ನಾನು ಅದುವರೆಗೆ ನೋಡಿರಲಿಲ್ಲ. ಅವರ ಹೆಸರನ್ನು ಕೇಳಿದ್ದೆ. ಶೀನಪ್ಪನವರು ಸ್ನಾನ ಮಾಡಿ ಆಹ್ನಿಕ ಮುಗಿಸಿಕೊಂಡು ಬಂದಿದ್ದವರು. ಹಣೆಯ ತುಂಬ ವಿಭೂತಿ. ಸ್ನಾನಮಾಡಿ ನೀರುಗಂಟು ಹಾಕಿ ಇಳಿಬಿಟ್ಟಿದ್ದ ತಲೆಗೂದಲು. ತಲೆಯಮೇಲೆ ರುಮಾಲು. ಮೈಗೆ ಕೋಟು, ರೇಷ್ಮೆಯ ವಸ್ತ್ರ. ಎರಡು ಕೈಗಳಲ್ಲಿಯೂ ಉಂಗುರ. ಅವರಿಗಿದ್ದ ಹುದ್ದೆಯಾದರೋ ಮಂಡಿಯ ಗುಮಾಸ್ತಗಿರಿ. ಅದು ಭಾರಿ ಮಂಡಿ: ಶೀನಪ್ಪನವರು ತಕ್ಕ ಮಾತ್ರ ಉಪಪನ್ನರು, ಮನೆ ಜಮೀನು ಇದ್ದವರು; ಜರ್ಬುದಾರಿ ಸ್ವಭಾವದವರು. ಸಂಪ್ರದಾಯ ನಿಷ್ಠರು; ಭಾನುವಾರ ಭಾನುವಾರ ಸೂರ್ಯನಮಸ್ಕಾರ ಮಾಡುತ್ತಿದ್ದರು. ಈ ವಿಷಯವೆಲ್ಲ ನನಗೆ ಅನಂತರ ತಿಳಿದುಬಂದದ್ದು.

ಅವರು ಹೋಟಲಿನೊಳಕ್ಕೆ ಕಾಲಿಡುತ್ತಲೇ ನಾನು ಹೊರಕ್ಕೆ ಓಡಿದ್ದರ ಕಾರಣ ಹಿರಿಯರಿಗೆ ಹೋಟೆಲಿನಲ್ಲಿ ಕಾಣಿಸಿಕೊಳ್ಳಬಾರದೆಂಬುದು. ಇದು ಆ ಕಾಲದ ಸಾಮಾಜಿಕ ಚರ್ಯೆ. ಹೋಟಲಿಗೆ ಹೋಗಿ ತಿಂಡಿ ತಿನ್ನುವುದು ಉತ್ತಮದರ್ಜೆಯಲ್ಲ; ಅದು ಅಷ್ಟು ಶ್ಲಾಘ್ಯವಲ್ಲ-ಎಂದು ಆಗಿನ ಜನಕ್ಕಿದ್ದ ಅಭಿಪ್ರಾಯ. ಹೋಟಲಿಗೆ ಹೋಗಬೇಕಾದವರು ಪರಸ್ಥಳದಿಂದ ಬೆಂಗಳೂರಿಗೆ ಬಂದು ಬೇರೆಲ್ಲಿಯೂ ಆಶ್ರಯ ಕಾಣದವರು ಮತ್ತು ಶೀನಪ್ಪನವರಂತೆ ವಿಧುರರು. ಹೋಟಲು ಊಟ ಸದಾಚಾರಕ್ಕೆ ಸಲ್ಲದು. ಇದು ಆಗ ಇದ್ದ ಅಭಿಪ್ರಾಯ. ನಾನು ಅದರಂತೆ ನಡೆದೆ.

ವೆಂಕಣ್ಣನವರ ಹೋಟಲಿನಿಂದ ಹೊರಕ್ಕೆ ಬಂದ ನಾವಿಬ್ಬರು ಬಹುದೂರ ಹೋಗದೆ ಅಲ್ಲಿ ಇಲ್ಲಿ ನಿಂತಿದ್ದೆವು, ಹದಿನೈದಿಪ್ಪತ್ತು ನಿಮಿಷ. ನಮ್ಮ ಶೀನಪ್ಪನವರು ಅಲ್ಲಿಂದ ಹೊರಟುಹೋದದ್ದನ್ನು ನೋಡಿ ಮತ್ತೆ ಒಳಕ್ಕೆ ಹೋದೆವು. ವೆಂಕಣ್ಣನವರು ನಮ್ಮನ್ನು ಕೇಳಿದರು:

“ಅದೇಕೆ ಕಳ್ಳರ ಹಾಗೆ ಓಡಿಹೋದಿರಿ?”

ಇದ್ದ ಸಂಗತಿಯನ್ನು ಹೇಳಿದೆವು. ವೆಂಕಣ್ಣನವರು “ಓಹೋ–ಹಾಗೇ! ಶೀನಪ್ಪನವರಿಗೆ ಹೇಳಲೋ?” –ಎಂದರು. ನಾವು ನಗುತ್ತಿದ್ದೆವು. ಆಮೇಲೆ ನಮ್ಮ ದೋಸೆಯ ಸರದಿಯೂ ನಡೆಯಿತು. ಪಕ್ವ ಬಹು ಸೊಗಸಾಗಿತ್ತು. ಪಕ್ವ, ಶುಚಿ-ಇವೆರಡೂ ದೊಡ್ಡ ಗುಣಗಳಲ್ಲವೆ?

ವ್ಯವಸ್ಥೆ

ವೆಂಕಣ್ಣನವರ ಹೋಟಲಿನಲ್ಲಿ ಸಣ್ಣ ಸಣ್ಣ ಮರದ ಹಲಗೆಯ ತಡಕೆಗಳಿಂದ ಮೂರು ಭಾಗ ಮಾಡಿದ್ದರು:

1. ಅಡಿಗೆ ಕೋಣೆಯ ಬಾಗಿಲ ಮುಂದಿನದು ಮೊದಲ ವಿಭಾಗ, ಅದಕ್ಕೆ "ಬ್ರಾಹ್ಮಣರಿಗೆ" ಎಂದು ಚೀಟಿ ತಗಲಿಹಾಕಿದ್ದರು.
2. ಎರಡನೆಯ ಕಂಪಾರ್ಟ್‌ಮೆಂಟು "ಲೌಕಿಕ ಬ್ರಾಹ್ಮಣರಿಗೆ."
3. ಮೂರನೆಯದು "ಬ್ರಾಹ್ಮಣೇತರರಿಗೆ,"

ಮೂರನೆಯದರಿಂದ ಆಚೆಗೆ ಒಂದು ಸ್ಟೂಲಿನ ಮೇಲೆ ದೊಡ್ಡ ನೀರಿನ ಡಬ್ಬ, ಅದರ ಪಕ್ಕದಲ್ಲಿ ಒಂದು ದೊಡ್ಡ ಬಕೆಟ್ಟು. ಇನ್ನೊಂದು ಸ್ಟೂಲಿನ ಮೇಲೆ ಕಾಗದದಲ್ಲಿ ಒಂದಷ್ಟು ಸೀಗೆಪುಡಿ, ಒಂದು ಚೂರು ಹಳೆಯ ಪಂಚೆ, ದೋಸೆ ತಿಂದವರು ತಮ್ಮ ಎಲೆಯನ್ನು ತಂದು ಆ ಬಕೆಟ್ಟಿನಲ್ಲಿ ಹಾಕತಕ್ಕದ್ದು. ಅನಂತರ ಆ ಸೀಗೆಪುಡಿ ಕೊಂಚ ತೆಗೆದು ಡಬ್ಬಕ್ಕಿಟ್ಟಿದ್ದ ನಲ್ಲಿ ತಿರುಗಿಸಿ ಕೈತೊಳೆದುಕೊಂಡು, ಇಷ್ಟವಿದ್ದರೆ ಆ ಪಂಚೆ ಚೂರಿನಲ್ಲಿ ಒರಸಿಕೊಂಡು, ಮತ್ತೆ ತಾವಿದ್ದ ಜಾಗದಲ್ಲಿ ಕೂಡತಕ್ಕದ್ದು. ಈಗ ಕಾಫಿ, ಲೋಟಗಳಲ್ಲಿ. ಕಾಫಿ ಸೇವಿಸುವಾಗ ತುಟಿ ಅಂಟಬಾರದು, ಮೇಲಕ್ಕೆತ್ತಿ ಕುಡಿಯತಕ್ಕದ್ದು.

ನಾನು ಕೊಂಚವೂ ಉತ್ಪ್ರೇಕ್ಷೆ ಮಾಡುತ್ತಿಲ್ಲ. ವೆಂಕಣ್ಣನವರು ಬಹಳ ಕಟ್ಟುನಿಟ್ಟಿನ ಆಸಾಮಿ. ಯಾರಾದರೂ ಈ ನಿಯಮವನ್ನು ಸಡಲಿಸಿಯಾನೆಂದು ತೋರಿದರೆ ಅವರು ನಿರ್ದಾಕ್ಷಿಣ್ಯವಾಗಿ "ಇದನ್ನು ತೆಗೆದುಕೊಂಡು ಹೋಗಿ ಅಲ್ಲಿ ಹಾಕಿಬನ್ನಿ" ಎನ್ನುವರು. ಆದದ್ದರಿಂದ ಆ ಹೋಟಲಿಗೆ ಹೋಗುತ್ತಿದ್ದವರು ರುಚಿಯ ಜೊತೆಗೆ ಶುಚಿಯನ್ನೂ ನೋಡುತ್ತಿದ್ದ ಜನ. ಅದೇನೂ ಜನತಾ ಹೋಟಲಾಗಿರಲಿಲ್ಲ.

‘ಮೆನು’

ವೆಂಕಣ್ಣನವರಿಗೆ ‘ಜನತಾ’ ಬೇಕಾಗಿಯೂ ಇರಲಿಲ್ಲ. ಭಾನುವಾರ ಬಿಟ್ಟು ಮಿಕ್ಕ ದಿನಗಳಲ್ಲಿ ನಾಲ್ಕು ಮಂದಿಯೋ ಐದು ಮಂದಿಯೋ ಊಟಕ್ಕೆ ಬರುತ್ತಿದ್ದರು. ಆರನೆಯವರನ್ನು ವೆಂಕಣ್ಣನವರು ಸೇರಿಸುತ್ತಲೇ ಇರಲಿಲ್ಲ. ಶನಿವಾರ ಮಧ್ಯಾಹ್ನ ಚಿರುತಿಂಡಿಗಾಗಿ ಬರುವವರಿಗೆ ಸಾಮಾನ್ಯವಾಗಿ ಎರಡು ತಿಂಡಿ, ರವೆ ಉಂಡೆ ಮತ್ತು ಕೋಡುಬಳೆ; ಅಥವಾ ಹೆಸರುಂಡೆ, ಓಮಪುಡಿ; ಅಥವಾ ಸಜ್ಜಿಗೆ ಮತ್ತು ಖಾರದವಲಕ್ಕಿ. ಈ ತಿಂಡಿಗಳು ೫ ಘಂಟೆಯ ವೇಳೆಗೆ ಮುಗಿದು ಹೋಗಿರುತ್ತಿದ್ದವು. ನಾನೇ ಐದೂಕಾಲರ ಸುಮಾರಿಗೆ ಹೋಗಿ ಬರಿಗೈ ಆಡಿಸಿದ್ದನ್ನು ನೋಡಿಕೊಂಡು ಬಂದೆ. ಭಾನುವಾರವಂತೂ ಮೇಲೆ ಹೇಳಿರುವ ಹಾಗೆ, ಒಂದು ಮಿತವಾದ ಸಂಖ್ಯೆಗೆ ದೋಸೆ, ಚಟ್ನಿ, ಕಾಫಿ ಇದಿಷ್ಟೇ ಅಲ್ಲಿಯ ವಿತರಣೆ.

ವೆಂಕಣ್ಣನವರನ್ನು ಅವರ ಸ್ನೇಹಿತರು ಕೇಳಿದ್ದುಂಟು: “ಊರಿನಲ್ಲಿ ಹೋಟಲುಗಳು ಹೊಸಹೊಸದಾಗಿ ಬರುತ್ತಿವೆ. ನೀವು ವ್ಯಾಪಾರವನ್ನು ಬಡಾವಣೆ ಮಾಡಬಾರದೆ?” ವೆಂಕಣ್ಣನವರ ಉತ್ತರವನ್ನೂ ನಾನು ಕೇಳಿದ್ದೇನೆ: “ಸಾಕು ಸ್ವಾಮಿ ನನ್ನ ಹೊಟ್ಟೆಗೆ ಇಷ್ಟು ಸಂಪಾದನೆ. ಹೆಚ್ಚು ಸಂಪಾದನೆಗೆ ಹೊರಟು ಆಚಾರ ನಿಯಮ ಕಳೆದುಕೋ ಎನ್ನುತ್ತೀರಾ? ದೇವರು ಕೊಟ್ಟಷ್ಟು ಸಾಕು.”

ದೋಸೆಗಳ ಪೈಪೋಟಿ

ನಾನು ಮೇಲೆ ಹೇಳಿದ ಕಾಲದಿಂದ ಎರಡು ಮೂರು ವರ್ಷ ಕಳೆದ ಮೇಲೆ ಹೋಟಲು ವ್ಯಾಪಾರದಲ್ಲಿ ಒಂದು ಸ್ಪರ್ಧೆಯುಂಟಾಯಿತು. ಕಾಳಮ್ಮನ ಗುಡಿಯ ಹತ್ತಿರದ ಒಂದು ಅಂಗಡಿಗೂ ಚಿಕ್ಕಪೇಟೆಯ ಒಂದು ಅಂಗಡಿಗೂ ಕ್ರಯದ ವಿಷಯದಲ್ಲಿ ತಕರಾರು ನಡೆಯಿತು. "ಆರು ಕಾಸಿಗೆ ಒಂದು ದೋಸೆ, ಪಲ್ಯ" –ಒಂದು ಕಡೆ. "ಐದು ಕಾಸಿಗೆ ದೋಸೆ, ಪಲ್ಯ" ಇನ್ನೊಂದು ಕಡೆ, ಆರು ಕಾಸಿನವನು ನಾಲ್ಕು ಕಾಸಿಗೆ ಇಳಿಸಿದ. ಐದು ಕಾಸಿನವನು ಮೂರು ಕಾಸಿಗೆ ಇಳಿಸಿದ. ಒಂದೆರಡು ತಿಂಗಳು ಇದು ನಡೆಯಿತು. ಆಮೇಲೆ ಒಂದು ಸುದ್ದಿ ಹುಟ್ಟಿತು: "ಅವನ ಅಂಗಡಿಯಲ್ಲಿ ದೋಸೆ ರುಚಿ ಎನ್ನುತ್ತೀರಿ, ಹೇಗೆ ಗೊತ್ತಿದೆಯೆ? ಅದಕ್ಕೆ ಮೊಟ್ಟೆ ಬಿದ್ದಿರುತ್ತದೆ." ಹೀಗೆ ಸುದ್ದಿ ಹಬ್ಬಿದ ಮೇಲೆ ವ್ಯಾಪಾರ ಎರಡು ಕಡೆಯೂ ಇಳಿದುಹೋಯಿತು. ಒಂದೆರಡು ತಿಂಗಳ ಕೋಲಾಹಲ ಇದು.

***

ಅನಂತರ ಹೋಟಲು ವ್ಯಾಪಾರದಲ್ಲಿ ಹೆಸರಿಗೆ ಬಂದದ್ದು ಕೆ. ಟಿ. ಅಪ್ಪಣ್ಣನವರ "ಹಿಂದೂ ಕಾಫಿ ಕ್ಲಬ್".

೧೧

ಕೆ. ಟಿ. ಅಪ್ಪಣ್ಣನವರು

ಕೆ. ಟಿ. ಅಪ್ಪಣ್ಣನವರು ಆರುವೇಲು ಬ್ರಾಹ್ಮಣರು. ಅವರ ಮೊದಲ ಸ್ಥಳ ಕೊಳ್ಳೆಗಾಲ. ಅಪ್ಪಣ್ಣನವರ ತಂದೆ ತಿರುಮಲಸ್ವಾಮಯ್ಯನವರು. ಅವರು ಬೆಂಗಳೂರು ಜನರಲ್ ಪೋಸ್ಟ್ ಆಫೀಸಿನಲ್ಲಿ ಮೇಲ್ದರ್ಜೆಯ ಗುಮಾಸ್ತರಾಗಿದ್ದರು. ಸಂಬಳ ತಿಂಗಳಿಗೆ ೭೦–೮೦ ರೂಪಾಯಿ. ಇದು ಆ ಕಾಲಕ್ಕೆ ಭಾರಿ ತಲಬು. ತಲಬಿನಂತೆಯೇ ಕುಟುಂಬವೂ ಭಾರಿಯದಾಗಿತ್ತು. ತಿರುಮಲ ಸ್ವಾಮಯ್ಯನವರ ಹೆಂಡತಿಯ ಅಣ್ಣಂದಿರು ರಾಮಸ್ವಾಮಯ್ಯನವರು, ಅವರ ಹೆಂಡಿರು ಮಕ್ಕಳು, ತಿರುಮಲಸ್ವಾಮಯ್ಯನವರ ಅತ್ತಿಗೆ (ಆಕೆ ಮಡಿಹೆಂಗಸು), ನಾದಿನಿಯರು ಮಡಿಯುಟ್ಟವರು ಇಬ್ಬರು ಮೂವರು, ಅವರ ಮಕ್ಕಳು–ಹೀಗೆ ಸಂಸಾರ ದೊಡ್ಡದಾಗಿತ್ತು. ಇದರ ಜೊತೆಗೆ ಅತಿಥಿ ಅಭ್ಯಾಗತರು.

ತಿರುಮಲಸ್ವಾಮಯ್ಯನವರು

ಅವರು ವಾಸವಿದ್ದದ್ದು ಬೆಂಗಳೂರು ಚಿಕ್ಕಪೇಟೆಯ ಸ್ನಾನಘಟ್ಟದ ಸಂದಿಯಲ್ಲಿ. ಅದು ವಿಶಾಲವಾಗಿದ್ದ ಮನೆ. ಅದರ ಒಂದು ಭಾಗದಲ್ಲಿ ತಿರುಮಲಸ್ವಾಮಯ್ಯನವರು, ಇನ್ನೊಂದು ಭಾಗದಲ್ಲಿ ಬಿ.ಎಸ್. ರಾಮಯ್ಯನವರು. ಇವರು ಬೃಹಚ್ಚರಣ ಬ್ರಾಹ್ಮಣರು. ರಾಮಯ್ಯನವರು ಬಾರ್ಟನ್ ಕಂಪೆನಿಯಲ್ಲಿ ಹೆಡ್ ಅಕೌಂಟೆಂಟ್. ಇವರ ಸಂಸಾರವೂ ಚಿಕ್ಕದೇನೂ ಅಲ್ಲ. ರಾಮಯ್ಯನವರ ಅಣ್ಣಂದಿರ ಅಳಿಯಂದಿರು ಶೇಷಗಿರಿ ಎಂಬುವರು ತಿರುಮಲಸ್ವಾಮಯ್ಯನವರಂತೆಯೇ ಜನರಲ್ ಪೋಸ್ಟ್ ಆಫೀಸಿನಲ್ಲಿದ್ದವರು. ಹೀಗೆ ತಿರುಮಲಸ್ವಾಮಯ್ಯನವರ ಕುಟುಂಬಕ್ಕೂ ರಾಮಯ್ಯನವರ ಕುಟುಂಬಕ್ಕೂ ಇಬ್ಬರೂ ಒಂದೇ ಜನವೆನ್ನಿಸುವಷ್ಟು ಸ್ನೇಹವೂ ಸಲಿಗೆಯೂ ಬೆಳೆದಿತ್ತು.

ಹೀಗೆ ಆ ದೊಡ್ಡ ಮನೆಯಲ್ಲಿ ಎರಡು ಬೇರೆಬೇರೆ ಕುಟುಂಬಗಳು ಅತ್ಯಂತ ಅನ್ಯೋನ್ಯತೆಯಿಂದ ಬಾಳಿಕೊಂಡು ನೆಮ್ಮದಿಯಾಗಿ ಇದ್ದರು. ಆಗ ಬಂತು ಬೆಂಗಳೂರಿಗೆ ಪ್ಲೇಗ್‌ವ್ಯಾಧಿ. ಇದು ಬಹುಶಃ ೧೮೯೮ರಲ್ಲಿ. ಆ ಮೊದಲನೆಯ ಪ್ಲೇಗಿನಲ್ಲಿ ಸಾವಿರಾರು

ಮಂದಿ ಸತ್ತರು. ಸಾವಿರಾರು ಮನೆಗಳು ಹಾಳಾದವು. ಹಾಗೆ ಸತ್ತವರಲ್ಲಿ ತಿರುಮಲಸ್ವಾಮಯ್ಯನವರು ಒಬ್ಬರು.

ಅವರ ಸಹೋದ್ಯೋಗಿಗಳಾಗಿದ್ದ ಶೇಷಗಿರಿಯವರೂ ಕೊಂಚ ಕಾಲದ ಮೇಲೆ ಪ್ಲೇಗಿನಿಂದಲೇ ಸತ್ತರು.

ತಿರುಮಲಸ್ವಾಮಯ್ಯನವರ ಹಿರಿಯ ಮಗ ಅಪ್ಪಣ್ಣ, ವಯಸ್ಸು ಏಳೋ ಎಂಟೋ ಇರಬಹುದು. ಇನ್ನೂ ಮುಂಜಿಯಾಗಿರಲಿಲ್ಲ. ಆ ಸಂಸಾರಕ್ಕೆ ಗತಿಯೇನು? ಆಗ ತಿರುಮಲಸ್ವಾಮಯ್ಯನವರ ಸ್ನೇಹಿತ ಬಿ.ಎಸ್. ರಾಮಯ್ಯನವರು ಆಲೋಚನೆ ಮಾಡಿ, ಅಪ್ಪಣ್ಣನು ಒಂದು ಹೋಟಲು ವ್ಯಾಪಾರವನ್ನು ನಡಸತಕ್ಕದ್ದೆಂದು ತೀರ್ಮಾನಿಸಿದರು.

ವ್ಯಾಪಾರದ ಆರಂಭ

ಅದಕ್ಕಾಗಿ ತಾವು ೩೦೦ ರೂಪಾಯಿ ಸಾಲ ತೆಗೆದು, ಬೇಕಾದ ಪಾತ್ರೆ, ಪದಾರ್ಥಗಳನ್ನು ಕೊಂಡರು. ಆ ಸಂಸಾರದಲ್ಲಿದ್ದ ಮಡಿಹೆಂಗಸರು ಅಡಿಗೆ ಮಾಡತಕ್ಕದ್ದು. ಮಜಬೂತ್ ಆಳಾಗಿದ್ದ ರಾಮಸ್ವಾಮಯ್ಯನವರು ಬಡಿಸುವುದು. ಮೇಲ್ವಿಚಾರಣೆ ನೋಡುವುದು; ಲೆಕ್ಕಾಚಾರವೆಲ್ಲ ಅಪ್ಪಣ್ಣನದಾಗಿ ನಡೆಯುವುದು.

ಈ ಏರ್ಪಾಟಿಗಾಗಿ ಆರ್ಕಾಟ್ ಶ್ರೀನಿವಾಸಾಚಾರ್ಲು ರಸ್ತೆಯಲ್ಲಿ ಹಳೆಯ ತರಗು ಪೇಟೆಗೆ ತಿರುಗುವ ಕಡೆ, ಡಾ ॥ ಗುಂಡಣ್ಣನವರ [1] ರಿಲೈಯನ್ಸ್ ಮೆಡಿಕಲ್ ಷಾಪಿನ ಪೂರ್ವದಿಕ್ಕಿನ ಭಾಗವನ್ನು ಗೊತ್ತುಮಾಡಿದರು. ಅದು ಪ್ಲೇಗಿನ ಕಾಲವಾದದ್ದರಿಂದ ಬಹುಮಂದಿ ಸರಕಾರಿ ಚಾಕರಿಯಲ್ಲಿದ್ದ ಬ್ರಾಹ್ಮಣರು ತಮ್ಮ ಹೆಂಡಿರು ಮಕ್ಕಳನ್ನು ಬೇರೆ ಊರುಗಳಿಗೆ ಕಳುಹಿಸಿ ಬೆಂಗಳೂರಿನಲ್ಲಿ ಒಬ್ಬೊಬ್ಬರಾಗಿರುತ್ತಿದ್ದರು. ಅಂಥವರ ಉಪಯೋಗಕ್ಕಾಗಿ ಈ ಅಪ್ಪಣ್ಣನವರ ಹೋಟಲು. ಆಗಿನ ಊಟದ ಬೆಲೆ ಹೊತ್ತಿಗೆ ಎರಡಾಣೆ; ದಿನಕ್ಕೆ ನಾಲ್ಕಾಣೆ. ಖಾಯಂ ಆಗಿದ್ದವರು ತಿಂಗಳಿಗೆ ಏಳು ರೂಪಾಯಿ ಕೊಡುತ್ತಿದ್ದರು. ಹೀಗೆ ತಕ್ಕಷ್ಟು ಮಂದಿ ಗಿರಾಕಿಗಳು ದೊರೆತರು. ಮನೆಯ ಅಡಿಗೆಯಾದದ್ದರಿಂದ ಎಲ್ಲ ಶುಚಿಯಾಗಿರುತ್ತಿತ್ತು. ಆ ಹೋಟೆಲಿನಲ್ಲಿ ಪ್ರತಿದಿನವೂ ಸಂಜೆ ಅಂಗಡಿ ಮುಂದಿನ ವರಾಂಡದಲ್ಲಿ ಅಪ್ಪಣ್ಣನು ಕುಳಿತು ಎರಡು ಕಾಸಿಗೆ ಒಂದರಂತೆ ಬಾಳೆಕಾಯಿ ಬೋಂಡವನ್ನೂ ಮಾರಿದ್ದನ್ನೂ ಎಷ್ಟೋ ಸಾರಿ ಕೇಳಿದ್ದೇನೆ. ಒಳ್ಳೆಯ ಬೋಂಡವಂತೆ, ದೊಡ್ಡದಾಗಿರುತ್ತಿತ್ತಂತೆ. ಅಂಥ ಕಾಲ ಹೋಯಿತೆಂದು ಅಪ್ಪಣ್ಣ ಮರುಗುತ್ತಿದ್ದ.

‘ಹಿಂದೂ ಕಾಫಿ ಕ್ಲಬ್’

ವ್ಯಾಪಾರ ಬೆಳೆಯಿತು. ಒಂದೆರಡು ವರ್ಷ ಕಳೆದ ಬಳಿಕ ಅಪ್ಪಣ್ಣನ ವ್ಯಾಪಾರ ಅಲ್ಲಿಂದ ಚಿಕ್ಕಪೇಟೆಗೆ ವರ್ಗಗೊಂಡಿತು. ಚಿಕ್ಕಪೇಟೆಯಲ್ಲಿ ಪ್ರಸಿದ್ಧವಾಗಿದ್ದದ್ದು ಅರವಮುನಿಷಿ ಕೃಷ್ಣಯ್ಯರ ಮನೆ. ಅದರ ಮುಂಭಾಗದಲ್ಲಿಯೇ ಸ್ನಾನಘಟ್ಟದ ಸಂದು. ಕೃಷ್ಣಯ್ಯರ ಮನೆಯ ಎದುರುಗಡೆ ಎರಡು ಮೂರಂಗಡಿ ಬಿಟ್ಟು ಅಪ್ಪಣ್ಣನವರ “ಹಿಂದೂ ಕಾಫಿ ಕ್ಲಬ್.”

ಅಪ್ಪಣ್ಣನವರಿಗೆ ಪ್ರಸಿದ್ಧಿ ಹೆಚ್ಚಿದ್ದು ಅವರು ಇಲ್ಲಿ ವ್ಯಾಪಾರ ನಡಸುತ್ತಿದ್ದಾಗ. ಅವರ ಪ್ರಾಮಾಣಿಕತೆಯಿಂದಲೂ, ಸೌಜನ್ಯದಿಂದಲೂ, ಮರ್ಯಾದೆಯಿಂದಲೂ ಜನರಿಗೆ ಅವರಲ್ಲಿ ಪ್ರೀತಿ ಗೌರವಗಳು ಬೆಳೆದಿದ್ದವು. ೧೯೦೮ರ ಸುಮಾರಿನಲ್ಲಿ ಅಪ್ಪಣ್ಣನವರ ಹೋಟಲು ಒಂದು ಸಂಸ್ಕೃತಿಕೇಂದ್ರವಾಗಿತ್ತು. ಅಲ್ಲಿಗೆ ವಿದ್ವಾಂಸರು, ಸಂಗೀತಗಾರರು, ಕಾರ್ಯವಂತ ಜನರು ಎಲ್ಲರೂ ಬರುತ್ತಿದ್ದರು. ಪ್ರತಿ ಸಂಜೆಯೂ ಸುಮಾರು ಆರರಿಂದ ಏಳು-ಏಳೂವರೆಯವರೆಗೆ ಒಂದು ಮಿತ್ರಗೋಷ್ಠಿ ಸೇರುತ್ತಿತ್ತು. ಅವರಲ್ಲೊಬ್ಬರಾದ ಸಂಗೀತ ವಿದ್ವಾನ್ ದಕ್ಷಿಣಾಮೂರ್ತಿಶಾಸ್ತ್ರಿಗಳು. [2] ಆ ಗೋಷ್ಠಿಗೆ ‘ಇಂಡಿಪೆಂಡೆಂಟ್ ಬೋರ್ಡ್’ ಎಂದು ಹೆಸರಿಟ್ಟಿದ್ದರು. ಹಾಗೆಂದರೆ ಏನೆಂದು ನಾನು ಕೇಳಿದೆ. ಅವರು ಹೇಳಿದರು: “ಸ್ವತಂತ್ರವಯ್ಯ! ನಿಮ್ಮ ಬಾಯಿಗಳಿಗೆ ಲಂಗಿಲ್ಲ ಲಗಾಮಿಲ್ಲ. ಆಡಿದ್ದೇ ಮಾತು. ಕೂಗಿದ್ದೇ ನಾದ.” ಅವರೂ ಅದರಲ್ಲಿ ಸೇರಿದ್ದವರೇ.

ನಮ್ಮ ಜೊತೆಗೆ ಪ್ರತಿದಿನವೂ ಬರುತ್ತಿದ್ದವರು ಕೆಲವು ಕಾಲ ಮೇಷ್ಟರು ಎಂ. ವೆಂಕಟಪ್ಪಯ್ಯನವರು, ಮೇಷ್ಟರು ಎ. ನಾರಣಯ್ಯಂಗಾರ್ಯರು, ಕೆಲವು ಕಾಲ ವಿದ್ವಾನ್ ಬಾಲಸರಸ್ವತಿಗಳು, ವಿದ್ವಾನ್ ವೆಂಕಟಾಚಾರ್ಯರು, ಮಲ್ಲೇಶ್ವರದ ಪಟ್ಟಾಭಿರಾಮಯ್ಯರ್– ಹೀಗೆ ಹದಿನೈದು ಮಂದಿ ಇರಬಹುದು. ನಾವು ಅಲ್ಲಿ ಚರ್ಚಿಸದೆ ಬಿಟ್ಟ ವಿಷಯವಿಲ್ಲ. ಅದು ಸ್ವದೇಶಿ ಸ್ವರಾಜ್ಯಗಳ ಚಳವಳಿ ಪ್ರಾರಂಭದ ಕಾಲ. ೧೯೦೭ರಲ್ಲಿ ಸೂರತ್ ಪಟ್ಟಣದಲ್ಲಿ ಕಾಂಗ್ರೆಸ್ ಅಧಿವೇಶನ ನಡೆದು ಅದು ‘ಮಾಡರೇಟ್ಸ್’ ‘ಎಕ್ಸ್‌ಟ್ರಿಮಿಸ್ಟ್ಸ್’ ಎಂದು ಎರಡು ಪಕ್ಷಗಳಾಗಿ ಒಡೆಯಿತಷ್ಟೆ. ಪತ್ರಿಕೆಗಳಲ್ಲಿ ಈ ಒಳಕಲಹದ ಚರ್ಚೆ ಪುಂಖಾನುಪುಂಖವಾಗಿ ನಡೆಯುತ್ತಿತ್ತು. ಅದರಿಂದ ನಮ್ಮ ಇಂಡಿಪೆಂಡೆಂಡ್ ಬೋರ್ಡಿಗೆ ಮೊದಲು ಕೊನೆಯಿಲ್ಲದ ಸಾಮಾಗ್ರಿ. ಅದರ ಜೊತೆಗೆ ಮೈಸೂರಿನ ಅಧಿಕಾರ ಪ್ರಪಂಚದ ವಾರ್ತೆಗಳು, ಊರಿನಲ್ಲಿ

ನಡೆದ ಮಾರಾಮಾರಿ, ಸಂಗೀತದ ತರ್ಕ, ಶಾಸ್ತ್ರವಿಚಾರದ ತರ್ಕ–ಇವೆಲ್ಲ, ಏನೆಂದರೆ ಅದು-ಒದಗಿಬಂತು.

ಗುರುಸ್ವಾಮಯ್ಯರ್

ಒಂದು ದಿನ ನಮ್ಮ ಬೋರ್ಡಿನ ಸದಸ್ಯರೊಬ್ಬರು ಗುರುಸ್ವಾಮಯ್ಯರ್ ಎಂಬುವರು ಇಂಗ್ಲಿಷಿನಲ್ಲಿ ಏನೋ ಹೇಳಿದರು. ಅವರು ಮದರಾಸಿನವರು, ಕನ್ನಡ ಚೆನ್ನಾಗಿ ಬಾರದು. ತುಂಬ ಒಳ್ಳೆಯವರು, ಸಾಧುಗಳು ಮತ್ತು ಸರಸವಾಗಿಯೂ ಹಾಸ್ಯಸಹಿತವಾಗಿಯೂ ಮಾತನಾಡುವರು. ಆದದ್ದರಿಂದ ಅವರು ಎಲ್ಲರಿಗೂ ಇಷ್ಟರಾಗಿದ್ದವರು. ಅವರು ಹೇಳಿದ ಒಂದಾನೊಂದು ಇಂಗ್ಲಿಷ್ ವಾಕ್ಯದಲ್ಲಿ ಬಂದ ಪ್ರಯೋಗವನ್ನು ಕೊಂಚ ತಿದ್ದಬಹುದೆಂದು ಸೂಚಿಸಿದೆ. ಆಗ ನಾನು ಹುಡುಗ, ೨೦ರ ಕೆಳಗೆ ಇದ್ದವನು. ಗುರುಸ್ವಾಮಯ್ಯರ್ ೫೦ರ ಸುಮಾರಿನಲ್ಲಿದ್ದವರು. ಅವರಿಗೆ ಕೊಂಚ ಅಸಮಾಧಾನವಾದದ್ದು ಸ್ವಾಭಾವಿಕ. ನಾನು ದುಡುಕಬಾರದಾಗಿತ್ತು. ಆದರೆ ಗುರುಸ್ವಾಮಯ್ಯರ್ ಕೋಪ ತೋರಿಸಲಿಲ್ಲ; ಅಸಮಾಧಾನ ತೋರಿಸಲಿಲ್ಲ. ನಾನು ಆ ಮಾತನಾಡಿದ ಮೇಲೆ ಅವರು ತಮ್ಮ ತುಟಿಗಳ ಮೇಲೆ ತಾವು ಹೊದ್ದಿದ್ದ ಉತ್ತರೀಯದ ಅಂಚನ್ನು ಸೆಳೆದುಕೊಂಡರು. ಅನಂತರ ಆ ಸಂಜೆ ಅವರು ಮಾತನಾಡಲಿಲ್ಲ.

ಮಾರನೆಯ ದಿನ ಎಂದಿನಂತೆ ನಮ್ಮ ಗೋಷ್ಠಿಗೆ ಬಂದರು. ನಗುಮುಖದಿಂದ ಕುಳಿತು ಉಪಾಹಾರ ಸೇವಿಸಿ ನಮ್ಮೊಡನೆ ಕುಳಿತಿದ್ದರು. ಮಾತನಾಡಿಸಿದ್ದಕ್ಕೆ ಬಾಯಿಂದ ಜವಾಬಿಲ್ಲ; ಕೈಬೆರಳಿನಿಂದ, ಕಣ್ಣಸನ್ನೆಯಿಂದ, ತುಟಿಯ ತಿರುಚಿನಿಂದ ಉತ್ತರ ಹೇಳುತ್ತಿದ್ದರು. ಇದರ ತಾತ್ಪರ್ಯವೇನೆಂದು ಅಪ್ಪಣ್ಣನವರಿಗೆ ಮಾತ್ರ ತಿಳಿದಿತ್ತು. ಅವರು ನಗುತ್ತಿದ್ದರು. ಇನ್ನೆರಡು ದಿವಸ ಹೀಗೆಯೇ ನಡೆಯಿತು. ನಾಲ್ಕನೆಯ ದಿವಸ ಅದರ ಅರ್ಥವೇನೆಂದು ನಾನು ಅಪ್ಪಣ್ಣನನ್ನು ಕೇಳಿದೆ. ಆತ ಜವಾಬು ಹೇಳುವಷ್ಟರೊಳಗಾಗಿ ಗುರುಸ್ವಾಮಯ್ಯರೇ ಅಲ್ಲಿಗೆ ಬಂದರು.

ಅಪ್ಪಣ್ಣ: "ಎನ್ನ ಗುರುಸ್ವಾಮಯ್ಯರ್ವಾಳ್?"

ಗು: (ತುಟಿಯ ಮೇಲೆ ಎರಡು ಬಲ ಬೆರಳುಗಳನ್ನಿಟ್ಟು 'ಮಾತನಾಡಿಸಬೇಡಿ' ಎಂದು ಸೂಚನೆ ನೀಡಿದರು.)

ಅ: "ಅದು ಏ?"

ಗು: (ಬಲಗೈಯನ್ನು ತುಟಿಗೆ ಅಡ್ಡವಾಗಿರಿಸಿಕೊಂಡು) "ಗ್ರಮೇರಿಯನ್ (Grammarian) ವಂದುಟ್ಟಾರಯ್ಯ! ಇನ್ನು ನಾಮ್ ಮೂಚ್ಚು ವುಡಕ್ಕುಡಾದು" (ವ್ಯಾಕರಣದವರು ಬಂದು ಬಿಟ್ಟರಯ್ಯ! ಇನ್ನು ನಾವು ಉಸಿರುಬಿಡಕೂಡದು.)"

ಇದನ್ನು ಕೇಳಿ ಎಲ್ಲರೂ ನಕ್ಕರು. ನನಗೆ ಕೊಂಚ ಮನಸ್ಸು ಅಳುಕಿತು. ನಾನು ದುಡುಕಿದ್ದರಿಂದ ತಾನೆ ಈ ಅನರ್ಥ?

ಆ ರಾತ್ರಿ ನಾನು ಅಪ್ಪಣ್ಣನನ್ನು ಕರೆದುಕೊಂಡು ಗುರುಸ್ವಾಮಯ್ಯರವರ ಮನೆಗೆ ಹೋದೆ. ಅವರು ಆಗತಾನೆ ಮಡಿಯುಟ್ಟು ಆಹ್ನಿಕದಲ್ಲಿದ್ದರು. ನಾನು ಅವರ ಎರಡು ಪಾದಗಳನ್ನೂ ಹಿಡಿದು ನಮಸ್ಕಾರಮಾಡಿ ಕ್ಷಮೆ ಬೇಡಿದೆ. ಅವರು ನಸುನಕ್ಕು "ಇದಕ್ಕೇನಯ್ಯ? ಹುಡುಗಾಟ–ನೀನು ಹುಡುಗ. ನಿನ್ನ ಮಾತನ್ನು ಹುಡುಗನ ಮಾತೆಂದು ತಿಳಿದು ಸಂತೋಷಪಡುವುದು ನನಗೆ ಗೊತ್ತಿಲ್ಲವೆ? ನನ್ನ ಮನೆಯಲ್ಲಿ ಹುಡುಗರಿಲ್ಲವೆ?" ಎಂದರು. ನನಗೆ ಮನಸ್ಸು ಹಗುರವಾಯಿತು. ಅಂದಿನಿಂದ ಮುಂದೆ ಗುರುಸ್ವಾಮಯ್ಯರ್ ಬೆಂಗಳೂರಿನಲ್ಲಿ ಇದ್ದಷ್ಟು ದಿವಸವೂ ನನ್ನನ್ನು ಆತ್ಮೀಯನನ್ನಾಗೆಣಿಸಿ ಪ್ರೀತಿ ತೋರಿಸಿದರು.

ಎಸ್. ಜಿ. ಶಾಸ್ತ್ರಿ

ನಮ್ಮ ಇಂಡಿಪೆಂಡೆಂಟ್ ಬೋರ್ಡು ಒಂದೊಂದು ಸಾರಿ ರಾತ್ರಿ ೮ ಘಂಟೆಯವರೆಗೂ ನಡೆಯುವುದು. ಅಂಥ ಒಂದು ದಿನ ನನ್ನ ಮೈಸೂರು ಸ್ನೇಹಿತರಾದ ಎಸ್.ಜಿ. ಶಾಸ್ತ್ರಿಗಳು ಹಿಂದೂ ಕಾಫಿ ಕ್ಲಬ್ಬಿಗೆ ಬಂದು ಅಲ್ಲಿ ಗೋಡೆಯ ಅಂಚಿನಲ್ಲಿ ಬೆಂಚಿನ ಮೇಲೆ ಕುಳಿತರು. ನಾನು ಅದನ್ನು ನೋಡಲಿಲ್ಲ. ಆಗ ಶಾಸ್ತ್ರಿಗಳು ಇನ್ನೂ ವಿದ್ಯಾರ್ಥಿ. ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸಯನ್ಸಿನಲ್ಲಿ ಪ್ರೌಢ ವ್ಯಾಸಂಗ ಮಾಡುತ್ತಿದ್ದರು. ಆಗ ಬೇಸಗೆಯ ಕಾಲ. ಬೆಂಗಳೂರಿನಲ್ಲಿ ಆ ಸಾರಿ ಮಳೆ ಬಾರದೆ ಹಾಹಾಕಾರವೆದ್ದಿತ್ತು.ಆಗ ನಮ್ಮ ಗೋಷ್ಠಿಯಲ್ಲೊಬ್ಬರು "ಚಾಮರಾಜಪೇಟೆಯಲ್ಲಿ ರಾಮೇಶ್ವರ ದೇವಸ್ಥಾನದಲ್ಲಿ ಎಚ್. ರಾಮಯ್ಯನವರು ಪರ್ಜನ್ಯಜಪಕ್ಕೆ ಏರ್ಪಟು ಮಾಡಿದ್ದಾರೆ" ಎಂದರು. ನಾನು ಹುಡುಗುಬುದ್ಧಿಯಿಂದ "ಮಂತ್ರಕ್ಕೆ ಮಾವಿನಕಾಯಿ ಉದುರುತ್ತದೆಯೆ?" ಎಂದೆ. ಇದು ಎಸ್.ಜಿ. ಶಾಸ್ತ್ರಿಗಳ ಕಿವಿಗೆ ಕೇಳಿಸಿತು. ಅವರು ಕೇಳಿದರು, ಎದ್ದು ನಿಂತು, "ಹಾಗೆಂದರೆ ಏನು? ನಿಮಗೇನು ತಿಳಿದಿದೆ?" ಎಂದು ಮೊದಲಾಗಿ ಆರ್ಭಟಿಸಿದರು. ಅಷ್ಟು ಹೊತ್ತಿಗೆ ನನಗೆ ಜ್ಞಾನೋದಯವಾಯಿತು, ಆ ಆಸಾಮಿ ಯಾರೆಂಬ ವಿಷಯದಲ್ಲಿ. ನಾನು ಶಾಸ್ತ್ರಿಯ ಹತ್ತಿರ ಹೋಗಿ "ಏನು ಶಾಸ್ತ್ರಿಗಳೆ? ಎಂದಿನಿಂದ ಈ ಮಂತ್ರಾಭಿಮಾನ?" ಎಂದೆ. ಶಾಸ್ತ್ರಿಗಳು "ಲೇ, ಹೀಗೆಲ್ಲ ಪಬ್ಲಿಕ್ ಜಾಗದಲ್ಲಿ ಹರಟಿದರೆ ಒದೆ ತಿನ್ನುತೀ" ಎಂದರು. ನಗುವಿನಲ್ಲಿ ಆ ಮೀಟಿಂಗು ಮುಗಿಯಿತು.

‘ಮಾಡರ್ನ್ ಹಿಂದೂ ರೆಸ್ಟುರಾಂಟ್’

ಹಿಂದೂ ಕಾಫಿ ಕ್ಲಬ್ಬಿನಿಂದ ಅಪ್ಪಣ್ಣನವರು ದೊಡ್ಡಪೇಟೆಯ ಕಡೆ–ಅಹಮದ್ ಬಿಲ್ಡಿಂಗ್ಸ್ ಕಟ್ಟಡ ಸಿದ್ಧವಾದ ಕೂಡಲೆ ಅಲ್ಲಿಗೆ ತಮ್ಮ ವ್ಯಾಪಾರಸ್ಥಾನವನ್ನು ಬದಲಾಯಿಸಿದರು. ಅಲ್ಲಿಯ ಹೆಸರು “ಮಾಡರ್ನ್ ಹಿಂದೂ ರೆಸ್ಟುರಾಂಟ್” ಎಂದು. ಇಲ್ಲಿ ಮೂರು ನಾಲ್ಕು ವರ್ಷ ಕಳೆದ ಮೇಲೆ ಕೊಂಚ ಕಾಲ ಸುಮ್ಮನಿರಬೇಕಾಯಿತು. ಅವರ ಕ್ಲಬ್ಬಿನಲ್ಲಿ ಸಾಲವಾಗಿ ತಿಂದು ಹೋದ ನೂರಾರು ಮಂದಿ ಹಣ ಕೊಡಲು ಮರೆತು ಅಪ್ಪಣ್ಣನವರಿಗೆ ಹತ್ತಾರು ಸಾವಿರ ರೂಪಾಯಿ ನಷ್ಟವಾಯಿತು. ಅವರ ಬಾಕಿದಾರರಿಗೆ ಜ್ಞಾಪಕಪತ್ರಗಳನ್ನು ನನ್ನ ಕೈಯಿಂದ ನಾನೇ ಬರೆದೆ. ಈಗಿನ ಮಂತ್ರಿಗಳಲ್ಲಿ ಎಷ್ಟೋ ಮಂದಿಗೆ ತೆರಿಗೆ ಲೆಕ್ಕ ಮರೆತುಹೋಗುವುದೆಂದು ನಾವು ಓದಿದ್ದೇವೆ. ಅಪ್ಪಣ್ಣನವರ ಗಿರಾಕಿಗಳು ಅಂಥ ಮರವಿನವರು. ಆಮೇಲೆ, ವಿಶ್ವೇಶ್ವರಯ್ಯನವರು ದಿವಾನರಾಗಿದ್ದಾಗ ಬಳೆಪೇಟೆಯ ಉತ್ತರದ ಕೊನೆಯೂ ಶೇಷಾದ್ರಿ ರಸ್ತೆಯೂ ಸೇರುವ ಕಡೆ “ಮಾಡರ್ನ್ ಹಿಂದೂ ಹೋಟಲನ್ನು” ಪ್ರಾರಂಭಿಸಿದರು. ಈ ಉದ್ಯಮಕ್ಕೆ ವಿಶ್ವೇಶ್ವರಯ್ಯನವರ ಪ್ರೋತ್ಸಾಹವೂ ಸರಕಾರದ ಸಹಾಯವೂ ಧಾರಾಳವಾಗಿ ದೊರೆತವು. “ನಮ್ಮ ದೇಶದಲ್ಲಿ ಪಟ್ಟಣಗಳು ಬೆಳೆಯುತ್ತಿವೆ, ಕೈಗಾರಿಕೆಗಳೂ ವ್ಯಾಪಾರವೂ ಹೆಚ್ಚುತ್ತಿವೆ. ಈಗ ಬೆಂಗಳೂರಿಗೆ ಬರುವ ಜನಸಂಖ್ಯೆ ಹೆಚ್ಚಾಗುತ್ತಿದೆ. ಇಂಥ ಪಟ್ಟಣದಲ್ಲಿ ಪ್ರಯಾಣಿಕರ ಸೌಕರ್ಯಕ್ಕಾಗಿ ಚೊಕ್ಕಟವಾಗಿ ಚೆನ್ನಾಗಿರುವ ಹೋಟಲುಗಳು ತುಂಬ ಅವಶ್ಯ. ಅವಕ್ಕೆ ಸರಕಾರವು ಪ್ರೋತ್ಸಾಹ ಕೊಡಬೇಕು” –ಎಂದು ವಿಶ್ವೇಶ್ವರಯ್ಯನವರು ಸಂಕಲ್ಪಿಸಿದರು. ಮಾಡರ್ನ್ ಹಿಂದೂ ಹೋಟಲಿರುವ ಮನೆ ಕೌನ್ಸಿಲರ್ ಶ್ರೀನಿವಾಸಯ್ಯಂಗಾರ್ಯರ ಮನೆ. ಅವರು ಕೆಲವು ಕಾಲ ಅಲ್ಲಿ ವಾಸವಾಗಿದ್ದರು. ಆಗ್ಗೆ ಆ ಪ್ರದೇಶದಲ್ಲಿ ಜನಸಂದಣಿ ಕಡಮೆಯಿತ್ತು. ರೈಲಿಗೆ ಸಮೀಪವಾದ ಜಾಗ: ಇಂಥ ಕಡೆ ಪ್ರಾರಂಭದ ದಿವಸದಿಂದ ಅಪ್ಪಣ್ಣನವರ ಸಂಸ್ಥೆ ದಿನೇ ದಿನೇ ಬೆಳೆದು ಯಶಸ್ವಿಯಾಯಿತು. ೧೯೫೮ರಲ್ಲಿ ಅದರ ೬೦ನೆಯ ವರ್ಷವರ್ಧಂತಿಯ (೧೮೯೮-೧೯೫೮) ಸಂದರ್ಭದಲ್ಲಿ ಒಂದು ಭೋಜನಕೂಟವನ್ನೇರ್ಪಡಿಸಲಾಗಿತ್ತು. ಅಂದು ವಿಶ್ವೇಶ್ವರಯ್ಯನವರು ಮುಖ್ಯ ಅತಿಥಿಯಾಗಿ ಬಂದಿದ್ದು ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಭಜನೆ ಸಂಸ್ಥೆ

ಅಪ್ಪಣ್ಣನವರು ತಮ್ಮ ವ್ಯಾಪಾರದಲ್ಲಿ ಹೇಗೆ ಪ್ರಾಮಾಣಿಕರೂ ಸಮರ್ಥರೂ ಆಗಿ ಯಶಸ್ವಿಯಾದರೋ ಹಾಗೆಯೇ ಸದಾಚಾರದಲ್ಲಿಯೂ ಭಗವದ್ಭಕ್ತಿಯಲ್ಲಿಯೂ ಸಂತುಷ್ಟರಾಗಿದ್ದವರು. ಆತ ದೊಡ್ಡ ಧರ್ಮಿಷ್ಠ, ಉದಾರಿ; ಭಜನೆ, ಪೂಜೆ, ಹರಿಕಥೆ–ಇಂಥ ಸಮಾರಂಭ ನಡೆಯದ ದಿನವಿರಲಿಲ್ಲ ಆತನ ಕುಟುಂಬದಲ್ಲಿ. ಕೂಡಲಿಮಠದ ಸ್ವಾಮಿಗಳೊಬ್ಬರು ಆಗಾಗ ಬಂದು ಅಪ್ಪಣ್ಣನವರ ಆಶ್ರಯದಲ್ಲಿ ಬಿಡಾರಮಾಡುತ್ತಿದ್ದರು. ಆ ಸ್ವಾಮಿಗಳ ದರ್ಶನಕ್ಕಾಗಿಯೂ ಉಪದೇಶಕ್ಕಾಗಿಯೂ ಭಜನೆ ಮೊದಲಾದ ಉಪಾಸನಾಕಾರ್ಯಕ್ಕಾಗಿಯೂ ಜನ ಅಪ್ಪಣ್ಣನವರ ಮನೆಗೆ ತಂಡೋಪತಂಡವಾಗಿ ಬರುತ್ತಿದ್ದರು. ಆ ಸ್ವಾಮಿಗಳ ಭಜನೆಯ ಕಾಲದಲ್ಲಿ ಹೇಳುತ್ತಿದ್ದ ಒಂದೆರಡು ಹಾಡುಗಳು ನನ್ನ ನೆನಪಿನಲ್ಲಿ ನಿಂತಿವೆ.

> ದತ್ತಾತ್ರೇಯ ಶ್ರೀಪದಪದ್ಮಂ ಪ್ರಣತೋಽಸ್ಮಿ॥
> ಆರತಿ ಬೆಳಗುವೆ ಸದ್ಗುರು ಶ್ರೀ ಬ್ರಹ್ಮಚೈತನ್ಯ॥
> ನಾರಾಯಣ ನಾರಾಯಣ
> ಜಯಗೋವಿಂದ ಹರೇ ॥
> ಅದ್ಭುತ ವಿಗ್ರಹ ಅಮರಾಧೀಶ್ವರ
> ಅಗಣಿತ ಗುಣಗಣ ಅಮೃತ ಶಿವ ॥

ಹೀಗೆ ಬೆಂಗಳೂರಿನಲ್ಲಿ ಭಜನೆ ಸಂಪ್ರದಾಯವನ್ನು ಹರಡಿದ್ದಕ್ಕೆ ಸಾಧಕವಾದ ಸಂಸ್ಥೆಗಳಲ್ಲಿ ಅಪ್ಪಣ್ಣನವರ ಆಶ್ರಯದಲ್ಲಿ ನಡೆದ ಶ್ರೀ ಕೂಡಲಿ ಸ್ವಾಮಿಗಳ ಸಂಸ್ಥೆಯೂ ಒಂದು.

ಅಪ್ಪಣ್ಣನವರಲ್ಲಿಗೆ ವಿದ್ಯಾರ್ಥಿಯಾಗಿಯೋ ಯಾಚಕನಾಗಿಯೋ ಬಂದು ಬರಿಗೈಯಾಗಿ ಹೋದವನಿಲ್ಲ. ಅಪ್ಪಣ್ಣನವರು ಹತ್ತಾರು ಮಂದಿಗೆ ಅನ್ನವಸ್ತ್ರಗಳನ್ನು ದಾನ ಮಾಡಿದರು.

ಇನ್ನು ಕೆಲವು ಫಲಾಹಾರದಂಗಡಿಗಳು

ನಲವತ್ತೈವತ್ತು ವರ್ಷಗಳ ಹಿಂದೆ ಹೋಟಲು ಉದ್ಯಮದಲ್ಲಿ ಹೆಸರಾಗಿದ್ದ ಇನ್ನೊಂದು ಸ್ಥಳ ಬಳೆಪೇಟೆಯಲ್ಲಿದ್ದ ಅಣ್ಣಯ್ಯಪ್ಪನವರ ಫಲಾಹಾರದಂಗಡಿ. ಅಣ್ಣಯ್ಯಪ್ಪನವರು ಕೋಲಾರ ಜಿಲ್ಲೆಯ ದೇವರಾಯಸಮುದ್ರ ಪ್ರಾಂತದವರು. ಅವರ ಅಂಗಡಿಯ ವಿಶೇಷವೇನೆಂದರೆ ಬೆಳಗ್ಗೆ ಹೊತ್ತಿನ ಪೂರಿ, ಸಂಜೆಯ ಖಾರದ ಅವಲಕ್ಕಿ. ಈ ಖಾರದವಲಕ್ಕಿಯ ಪ್ರಸಿದ್ಧಿ ಎಷ್ಟುಮಟ್ಟಿನದೆಂದರೆ, ಬೆಂಗಳೂರಿನಿಂದ ಪರಸ್ಥಳ ಹೋಗುವವರು ಸಂಜೆ ಅಣ್ಣಯ್ಯಪ್ಪನವರ ಅಂಗಡಿಯ ಮುಂದೆಯೇ ಹೋಗಬೇಕು. ಅಲ್ಲಿ ಒಂದು ರೂಪಾಯಿ ಕೊಟ್ಟರೆ ಒಂದು ಪೊಟ್ಟಣ ಗೋಪುರಾಕಾರದ್ದು (Cone). ನಾಲ್ಕಾಣೆಗೆ ಒಂದು ಚಿಕ್ಕಪೊಟ್ಟಣ. ದೊಡ್ಡದನ್ನು ಟ್ರಂಕಿನಲ್ಲಿ ಹಾಕಿಕೊಳ್ಳತಕ್ಕದ್ದು–ಊರಿಗೆ ತೆಗೆದುಕೊಂಡು ಹೋಗುವುದಕ್ಕೆ. ಸಣ್ಣದು ಆಗಲೆ ತಿನ್ನುವುದಕ್ಕೆ. ಇನ್ನೂ ಕೆಲಮಂದಿ ರಸಿಕರು ಅವಲಕ್ಕಿಯಲ್ಲಿ ಹಾಕಿದ್ದ ಕರೆದ ಕರಿಬೇವು ಎರಡಾಣೆಗೆ ಕರೆದ ಗೋಡಂಬಿ ಎರಡಾಣೆಗೆ. ಈ ವ್ಯಾಪಾರ ಸರಾಸರಿ ದಿನಕ್ಕೆ ನೂರೈವತ್ತು ರೂಪಾಯಿವರೆಗೂ ಆಗುತ್ತಿತ್ತಂತೆ.

ಅಲ್ಲಿಂದೀಚೆಗೆ ಬಂದದ್ದು ಚಿಕ್ಕಪೇಟೆಯ ಉಡುಪಿ ಹೋಟಲು. ಈ ಮನೆ ದಿವಾನ್ ಕೃಷ್ಣಮೂರ್ತಿಗಳದು. ದಿವಾನರು ಮನೆಯನ್ನು ಹೋಟಲಿಗೆ ಕೊಟ್ಟರೆಂಬ ಬೀದಿಯ ಆಕ್ಷೇಪಣೆಯನ್ನೂ ನಾನು ಕೇಳಿದ್ದೇನೆ, ಆದರೆ ಬಹುಮಂದಿಗೆ ಅದೊಂದು ದೊಡ್ಡ ಅನುಕೂಲವಾಯಿತು. ಒಬ್ಬಂಟಿಯಾಗಿದ್ದವರಿಗೆ ಅದು ಮನೆಯಂತಾಯಿತು. ಈ ಹೋಟಲೇ ನಮ್ಮ ಸಂಗೀತವಿದ್ವಾನ್ ಅನಂತಶಾಸ್ತ್ರಿಗಳ ನೆಲೆಮನೆ. [1]

ಬಹುಶಃ ಈ ಎಲ್ಲ ಸಂಸ್ಥೆಗಳಿಗಿಂತ ಪುರಾತನವಾದದ್ದು ಮಾಂಧಾತನ ಮಿಠಾಯಿ ಅಂಗಡಿ. ಇವರು ಉತ್ತರಪ್ರದೇಶದ ಬ್ರಾಹ್ಮಣರೆಂದು ಕೇಳಿದ್ದೇನೆ. ಯಾವುದೋ ಒಂದು ಕಾಲದಲ್ಲಿ ಪ್ರಯಾಗ ಪ್ರಾಂತದಿಂದ ಬೆಂಗಳೂರು–ಮೈಸೂರುಗಳಿಗೆ ಜನ ಬಂದಿರಬೇಕು. ಹಾಗೆ ಬಂದ ಬ್ರಾಹ್ಮಣರಲ್ಲಿ ಹರಿರಾಮ ಮಿಶ್ರ [*] ಎಂಬ ಹಳೆಯ ಅಚ್ಚಿನ ಕಾರ್ಖಾನೆಯವರೂ (ಟೌನ್‌ಪ್ರೆಸ್) ಒಬ್ಬರು.

ಸಾಂಪ್ರತ ದಶೆ

ಈಚೀಚೆಗೆ ಹೋಟೆಲು ಉದ್ಯೋಗ ನಮ್ಮ ದೇಶದಲ್ಲಿ ದೊಡ್ಡದಾಗಿ ಬೆಳೆದಿದೆ. ಭಾರಿ ಭಾರಿ ಕಾರ್ಖಾನೆಗಳು ಹುಟ್ಟಿಕೊಳ್ಳುತ್ತಿವೆ. ಇದು ಕಾಲವೇಗದಿಂದ ಆಗಿರುವ ಕೆಲಸ.

ಅದಕ್ಕಿಂತ ಹೆಚ್ಚಿನದೇನೆಂದರೆ, ಸರಕಾರ ತಾನೇ ಹೋಟಲುಗಾರನಾಗಿರುವುದು. ಸ್ವಿಟ್ಸರ್ಲೆಂಡ್ ಮೊದಲಾದ ದೇಶಗಳಲ್ಲಿ ಸರಕಾರದ ಹೋಟಲುಗಳಿವೆಯಂತೆ. ಅದರಿಂದ ಸರಕಾರಕ್ಕೆ ವರಮಾನವುಂಟಂತೆ. ನಮ್ಮಲ್ಲಿಯೂ ಯಾಕೆ ಹಾಗಾಗಬಾರದು? ಎಂದು ಕೇಳುವವರು ನಮ್ಮ ರಾಜಕೀಯದಲ್ಲಿ ಪ್ರಬಲರಾಗಿದ್ದಾರೆ. ಅಂಥವರ ಪ್ರೇರಣೆಯಿಂದ ಸರಕಾರ ಈ ವ್ಯಾಪಾರಕ್ಕೆ ಇಳಿಯುತ್ತಿದೆ. ಇದು ಗುಣವೋ ಅವಗುಣವೋ ಅನುಭವದಿಂದ ತಿಳಿಯಬೇಕು. ಇಷ್ಟು ಮಾತ್ರ ನಾವು ಈಗ ಗುರುತಿಟ್ಟುಕೊಳ್ಳಬೇಕು. ಪಾಶ್ಚಾತ್ಯ ರಾಜ್ಯಗಳಲ್ಲಿ ಹೋಟಲು ವ್ಯಾಪಾರವೂ ಟೂರಿಸ್ಟ್ ಎಂಬ ಪ್ರವಾಸೋದ್ಯಮವೂ ರಾಜ್ಯಕ್ಕೆ ಅಥವಾ ಸರಕಾರಕ್ಕೆ ತಕ್ಕದ್ದೇ ಎಂದು ಈಗ ಪ್ರಶ್ನೆಯೆದ್ದಿದೆ. ರಾಜ್ಯದ ಆದಾಯಕ್ಕೆ ಅದರಿಂದ ಅನುಕೂಲವಿರಬಹುದು. ಸಮಾಜದ ಸುಸ್ಥಿಗೆ ಅದರಿಂದ ಎಷ್ಟು ಪ್ರತಿಕೂಲ ಎಂದು ಈಗ ಅಲ್ಲಿ ಚರ್ಚೆ ನಡೆಯುತ್ತಿದೆ.

ಯಾವುದು ಒಂದು ಮಿತಿಯಲ್ಲಿ ಅಥವಾ ಹಿತದಲ್ಲಿ ನಡೆದರೆ ಅಷ್ಟಿಷ್ಟು ಒಳ್ಳೆಯದಾದೀತೋ ಅದೇ ವ್ಯಾಪಾರ ಮಿತಿಮೀರಿದರೆ, ಸರಕಾರದ ಕೈಗೆ ಹೋದರೆ ಆ ಅಷ್ಟಿಷ್ಟು ಒಳ್ಳೆಯದೂ ತಪ್ಪಿಹೋಗಿ ಅದಕ್ಕೆ ಪ್ರತಿಯಾಗಿ ಕೇಡೇ ಆದರೂ ಆಗಬಹುದು.

೧೨

ಬಳ್ಳಾರಿಯ ನಾಟಕದ ಕಂಪನಿಗಳು

೧೯೦೯ರ ಸುಮಾರಿನಲ್ಲಿ ಬಳ್ಳಾರಿಯ 'ಸುಮನೋರಮ ಸಭಾ' (ಅಥವಾ 'ಸುಗುಣ ವಿಲಾಸ ಸಭಾ')-ಎಂಬ ನಾಟಕದ ಕಂಪನಿ ಬೆಂಗಳೂರಿಗೆ ಬಂದಿತ್ತು. ಆ ಕಂಪೆನಿಯ ವ್ಯವಸ್ಥಾಪಕರು ಕೋಲಾಚಲಂ ಶ್ರೀನಿವಾಸರಾಯರು. ಇವರು ವಕೀಲರು. ಈ ಕಂಪನಿಗೆ ಬೆಂಗಳೂರಿನಲ್ಲಿ ಅನುಕೂಲಗಳನ್ನು ಕಲ್ಪಿಸಿದವರು ಸಾಹುಕಾರ್ ನೆಟ್ಟಕಲ್ಲಪ್ಪನವರು.

ಚಿತ್ರನಳೀಯಮು

ಆ ಕಾಲದಲ್ಲಿ ಬಳ್ಳಾರಿಯಲ್ಲಿ ನಾಟಕದ ಉತ್ಸಾಹ ಪ್ರಬಲವಾಗಿತ್ತು. ಅನೇಕ ಮಂದಿ ವಿದ್ಯಾವಂತರಾದ ತರುಣರು ನಾಟಕ ಸಮಾರಂಭಗಳಲ್ಲಿ ಸೇರಿರುತ್ತಿದ್ದರು. ಈಗ ನಾನು ಹೇಳಿದ ಸುಮನೋರಮ ಸಭೆಗಿಂತ ಕೊಂಚ ಮೊದಲು ಹುಟ್ಟಿದ್ದದ್ದು 'ಸರಸ ವಿನೋದಿನೀ ಸಭಾ.' ನಾನು ಸಭೆಗಳ ಹೆಸರುಗಳನ್ನು ಜ್ಞಾಪಕದಿಂದ ಹೇಳುತ್ತಿದ್ದೇನೆ; ಹೆಸರುಗಳ ರೂಪದಲ್ಲಿ ವ್ಯತ್ಯಾಸವಿದ್ದರೂ ಇರಬಹುದು.

ಸರಸವಿನೋದಿನೀ ಸಭೆಯನ್ನು ಸ್ಥಾಪಿಸಿದವರು ಸನ್ಮಾನ್ಯ ಧರ್ಮವರಂ ಕೃಷ್ಣಮಾಚಾರ್ಯರು. ಇವರೂ ವಕೀಲರು, ಸಂಸ್ಕೃತಾಂಧ್ರಗಳಲ್ಲಿ ಪಾಂಡಿತ್ಯದಿಂದ ಪ್ರಸಿದ್ಧರಾದವರು. ಇವರು ರಚಿಸಿದ ನಾಟಕ ಗ್ರಂಥಗಳಲ್ಲಿ ಬಹುಪ್ರಸಿದ್ಧವಾದದ್ದು 'ಚಿತ್ರನಳೀಯಮು' ಎಂಬುದು. ಇದು ನಳ-ದಮಯಂತಿಯರ ಚರಿತ್ರೆ. ಈ ನಾಟಕದಲ್ಲಿ ಕೃಷ್ಣಮಾಚಾರ್ಯರು ಬಗೆಬಗೆಯ ಕಂದವೃತ್ತಗಳನ್ನೂ ಹಾಡುಗಳನ್ನೂ ಬಳಸಿ ತಮ್ಮ ಕಾವ್ಯ ಚಾತುರ್ಯವನ್ನು ಜನಕ್ಕೆ ಒಪ್ಪಿಸಿದ್ದಾರೆ. ಅದು ಬಹು ಸುಂದರವಾದ ನಾಟಕ. ಅದರ ಶೈಲಿ ಮನೋಹರವಾದದ್ದು. ಈ ನಾಟಕವನ್ನು ಅಭಿನಯಿಸುವುದರಲ್ಲಿ ಕೃಷ್ಣಮಾಚಾರ್ಯರು ಸ್ವತಃ ಪಾತ್ರ ಧರಿಸುತ್ತಿದ್ದರು. ಬಹುಶಃ ಬಾಹುಕನೆಂಬ ಹೆಸರಿನಲ್ಲಿ ಮರೆಮಾಚಿಕೊಂಡಿದ್ದ ನಳಚಕ್ರವರ್ತಿಯ ಪಾತ್ರವನ್ನು ಕೃಷ್ಣಮಾಚಾರ್ಯರು ಒದಗಿಸುತ್ತಿದ್ದರು. ಅವರ ಪಾತ್ರ ನಿರ್ವಹಣ ಜನಕ್ಕೆ ತುಂಬ ಮೆಚ್ಚಾದದ್ದು. ಚಿತ್ರನಳೀಯದ ಕೆಲವು ಪದ್ಯಗಳಲ್ಲಿ ರಸಭಾವಕ್ಕೆ ತಕ್ಕ ರಾಗಗಳ ಹೆಸರನ್ನೂ ಸೇರಿಸಿ ರಚನೆ ಮಾಡಿದ್ದಾರೆ. ಇಂಥ ಸೊಗಸಾದ ನಾಟಕವನ್ನು

ಅಲ್ಲಿಂದ ಐವತ್ತು ವರ್ಷ ಈಚಿನವರು ಪ್ರಚಾರದಲ್ಲಿರಿಸಿಕೊಂಡಿದ್ದಾರೋ ಇಲ್ಲವೋ ನಾನರಿಯೆ. ಆದರೆ ಅದು ಸರ್ವಕಾಲದಲ್ಲೂ ಪ್ರಚಾರದಲ್ಲಿರಲರ್ಹವಾದ ನಾಟಕವೆಂದು ನಾನು ತಿಳಿದುಕೊಂಡಿದ್ದೇನೆ.

ರಾಘವಾಚಾರ್ಯರು

ಈ ಧರ್ಮವರಂ ಕೃಷ್ಣಮಾಚಾರ್ಯರ ಸೋದರಳಿಯಂದಿರು ಪ್ರಸಿದ್ಧರಾದ ಟಿ. ರಾಘವಾಚಾರ್ಯರು. ಇವರು ಬಿ.ಎ., ಬಿ.ಎಲ್. ಪದವೀಧರರಾಗಿ ಅಡ್ವೋಕೇಟರಾಗಿ, ಹೀಗೂ ಕೀರ್ತಿವಂತರಾದರು. ಈ ಕಸಬಿನ ಜೊತೆಗೆ ಅವರು ನಾಟಕಾಭಿನಯವನ್ನು ವಿನೋದಾರ್ಥವಾಗಿ ಬೆಳಸಿಕೊಂಡಿದ್ದರು. ಷೇಕ್ಸ್ಪಿಯರ್ ಮೊದಲಾದ ಇಂಗ್ಲಿಷ್ ಕವಿಗಳ ನಾಟಕಗಳನ್ನು ಇಂಗ್ಲಿಷ್ ಭಾಷೆಯಲ್ಲಿ ಅಭಿನಯಿಸಿದ ವಿದ್ವದಭಿನಯಕುಶಲರಲ್ಲಿ ಬಳ್ಳಾರಿಯ ಟಿ. ರಾಘವಾಚಾರ್ಯರು ಅಗ್ರಗಣ್ಯರಾಗಿದ್ದರು.

ರಾಘವಾಚಾರ್ಯರು ಮೇಲೆ ಹೇಳಿದ ಸುಮನೋರಮೆ ಸಭೆಯ ಮುಖ್ಯ ಅಭಿನೇತರು. ಇವರು ತಮ್ಮ ಸ್ವಂತ ಸೋದರಮಾವಂದಿರ ಕಂಪನಿಗೆ ಸೇರದೆ ಕೋಲಾಚಲಂ ಶ್ರೀನಿವಾಸರಾಯರ ಕಂಪನಿಗೆ ಸೇರಿದ್ದು ಕೆಲವರಿಗೆ ಚೋದ್ಯವೆನಿಸಿತು. ಆದರೆ ಅಂಥ ಟೀಕೆಗೆ ವಾಸ್ತವವಾದ ಕಾರಣವೇನೂ ಇದ್ದಂತೆ ನನಗೆ ತೋರಲಿಲ್ಲ.

ಕೋಲಾಚಲಂ ಶ್ರೀನಿವಾಸರಾಯರು

ಕೋಲಾಚಲಂ ಶ್ರೀನಿವಾಸರಾಯರು ಆಂಧ್ರ ಸಂಸ್ಕೃತ ಸಾಹಿತ್ಯಗಳೆರಡರಲ್ಲಿಯೂ ನಿಷ್ಣಾತರಾದವರು. ಅವರು, ಕಾಳಿದಾಸನ ಕಾವ್ಯಗಳ ಮೇಲೆ ವ್ಯಾಖ್ಯಾನ ಬರೆದು 'ವ್ಯಾಖ್ಯಾತ ಶಿರೋಮಣಿ' ಎಂದು ಪ್ರಖ್ಯಾತನಾದ ಕೋಲಾಚಲಂ ಮಲ್ಲಿನಾಥಸೂರಿಯ ವಂಶದವರು. ಶ್ರೀನಿವಾಸರಾಯರ ಅಣ್ಣಂದಿರು ಕೋಲಾಚಲಂ ವೆಂಕಟರಾಯರು ಇಂಗ್ಲೆಂಡಿಗೆ ಹೋಗಿ ಬ್ಯಾರಿಸ್ಟರಾಗಿ ಬಂದರು. ಅವರ ಮಕ್ಕಳೂ ಹಾಗೆಯೇ ಎಂದು ಕೇಳಿದ್ದೇನೆ. ವೆಂಕಟರಾಯರು ವಿಪುಲವಾಗಿ ಧನಸಂಪಾದನೆ ಮಾಡಿ ಅದರಿಂದ ತಮ್ಮ ಊರಿಗೆ ಒಂದು ಪೌರಭವನ (ಟೌನ್‌ಹಾಲ್), ಒಂದು ಸಾರ್ವಜನಿಕ ಗ್ರಂಥಾಲಯ (ಪಬ್ಲಿಕ್ ಲೈಬ್ರರಿ), ಮೊದಲಾದ ಅನೇಕ ಧರ್ಮಗಳನ್ನು ಮಾಡಿದರು.

ಶ್ರೀನಿವಾಸರಾಯರಾದರೋ ಸಂಗೀತ ಸಾಹಿತ್ಯಗಳಿಂದ ಮೋಹಿತರಾದವರು. ಅವರು ಸ್ವತಃ ಗ್ರಂಥರಚನೆ ಮಾಡಿದ್ದಾರೆ. ಇಂಗ್ಲಿಷಿನಲ್ಲಿ 'ಹಿಸ್ಟರಿ ಆಫ್ ದಿ ಡ್ರಾಮಾ' (History of the Drama) ಎಂಬ ದೊಡ್ಡ ಗ್ರಂಥವನ್ನು ರಚಿಸಿದ್ದಾರೆ. ತೆಲುಗಿನಲ್ಲಿ ('ದಿ ಫಾಲ್ ಆಫ್ ವಿಜಯನಗರ್') 'ವಿಜಯನಗರ ಪತನಮು' ಎಂಬುದು ಪ್ರಸಿದ್ಧವಾದ ಕೃತಿ. ಅದರ ವಾಕ್ಯಬಂಧದಲ್ಲಿ ಅವರ ಪಾಂಡಿತ್ಯ ಎದ್ದು ಕಾಣುತ್ತದೆ. ಅವರು ಪಂಡಿತರಾಗಿದ್ದದ್ದು ಮಾತ್ರವಲ್ಲದೆ ಮಹಾ ಉದಾರಿಗಳಾಗಿದ್ದರು. ಹಣವೆಂದರೆ ಆತನಿಗೆ ಲಕ್ಷ್ಯವಿರಲಿಲ್ಲ. ಬೇಡಿದವರಿಗೆ ಅವರ ಮನಸ್ಸಿಗೆ ಸಂಕೋಚವುಂಟುಮಾಡದ ರೀತಿಯಲ್ಲಿ ಸಹಾಯ ಕೊಡುತ್ತಿದ್ದರು. ಯಾರಿಂದಲೂ ಕೇಳಿಸಿಕೊಳ್ಳದೆಯೇ ಕರುಣೆ ತೋರುತ್ತಿದ್ದರು. ಅಷ್ಟು ಒಳ್ಳೆಯವರು ಶ್ರೀನಿವಾಸರಾಯರು.

ಅವರ ಕಂಪೆನಿಯಲ್ಲಿ ಅಭಿನಯಕರ್ತರು ಇಪ್ಪತ್ತು ಮಂದಿ ಇದ್ದರೆಂದರೆ ಅವರ ಜೊತೆಗೆ ಸೇರಿದ ಸ್ನೇಹಿತರು ನಲವತ್ತು ಮಂದಿ ಇರುತ್ತಿದ್ದರು. ಇಷ್ಟೊಂದು ಮಂದಿಗೂ ಪುಷ್ಕಳವಾದ ಭೋಜನ, ಉಪಾಹಾರ, ಹಾಸಿಗೆ ಹೊದಿಕೆಗಳು–ಈ ಎಲ್ಲ ಏರ್ಪಾಟನ್ನೂ ಸಾಹುಕಾರ್ ನೆಟ್ಟಕಲ್ಲಪ್ಪನವರು ನಡಸಿಕೊಟ್ಟರು.

ಬೆಂಗಳೂರು ಬಿಡಾರ

ಕಂಪನಿಯ ಮುಖ್ಯ ಬಿಡಾರಸ್ಥಳ ಬೆಂಗಳೂರು ಕೋಟೆಯಲ್ಲಿ ಕಣ್ಣಾಸ್ಪತ್ರೆಯ ಆಂಜನೇಯ ದೇವಾಲಯದ ಪೂರ್ವಕ್ಕೆ ಟಿಪ್ಪು ಸುಲ್ತಾನ್ ಅರಮನೆಯಿಂದ ಪಶ್ಚಿಮಕ್ಕೆ ಕೊಂಚದೂರದಲ್ಲಿದ್ದ ಸೀತಾರಾಮಮಂದಿರಂ ಎಂಬ ಕಟ್ಟಡ. ಇದರ ಜೊತೆಗೆ ಸುಲ್ತಾನ್ ಪೇಟೆಯಲ್ಲಿ ಒಂದು ದೊಡ್ಡ ಕಟ್ಟಡ. ಹೀಗೆ ಮೂರು ಕಡೆ ಏರ್ಪಾಡು ಮಾಡಿದ್ದರು. ಆಗಿನ ಆ ಕಂಪೆನಿಯ ಪ್ರಮುಖರಲ್ಲಿ ಶ್ರೀನಿವಾಸರಾಯರೂ ರಾಘವಾಚಾರ್ಯರೂ ಮಾತ್ರವಲ್ಲದೆ ಕರ್ನೂಲು ರಾಮರಾಯರು, ವಟ್ಟಂ ಶಾಮರಾಯರು, ವಟ್ಟಂ ಶ್ರೀನಿವಾಸರಾಯರು, ಚಿದಂಬರರಾಯರು ಮೊದಲಾದ ರಸಿಕರು ಸೇರಿದ್ದರು. ಒಂದು ಪ್ರಸಂಗ ನೆನಪಿಗೆ ಬರುತ್ತದೆ.

ಒಂದು ರಾತ್ರಿ ಪ್ರಹ್ಲಾದ ನಾಟಕ ನಡೆಯಿತು. ಅದರಲ್ಲಿ ಹಿರಣ್ಯಕಶಿಪುವಿನ ಹೆಂಡತಿ ಕಯಾದು ಎಂದೋ ಏನೋ-ಪ್ರಹ್ಲಾದಶಿಶುವನ್ನು ತೊಟ್ಟಲಿನಲ್ಲಿ ತೂಗುತ್ತಿದ್ದಾಳೆ. ಆಕೆ ಆಗ ಒಂದು ಹಾಡು ಹೇಳುತ್ತಾಳೆ:

ಸುಕುಮಾರಾ-ಗುಣಶಾಲೀ
ಅಕಲಂಕಾ ನಯಶಾಲೀ ॥

ಇದನ್ನು (ಬಹುಶಃ ಆನಂದಭೈರವಿ ರಾಗದಲ್ಲಿ) ಹಾಡಿದ್ದು ಬಹು ಮನೋಹರವಾಗಿತ್ತು. ಆ ಪಾತ್ರವನ್ನು ಧರಿಸಿದ್ದವರು ಕರ್ನೂಲು ರಾಮರಾಯರು.

ಮಾರನೆಯ ದಿನ ಬೆಳಿಗ್ಗೆ ಸುಮಾರು ೯-೧೦ ಘಂಟೆಯ ಸಮಯದಲ್ಲಿ ಎಂಟು ಹತ್ತು ಮಂದಿ ಸ್ನೇಹಿತರು ಸುಲ್ತಾನ್ ಪೇಟೆಯಲ್ಲಿ ನೆಟ್ಟಕಲ್ಲಪ್ಪನವರ ಮನೆಯ ಎದುರು ಸಾಲಿನ ಅಂಚಿನಲ್ಲಿ (ಎಸ್.ಆರ್. ನಂಜುಂಡಯ್ಯನವರ ಶಾಲೆಯಿದ್ದ ಜಾಗದ ಸಮೀಪದಲ್ಲಿ) ಸಾಲಾಗಿ ನಿಂತು ತಮ್ಮೆದುರಿಗೆ ದೃಷ್ಟಿಯನ್ನು ನೆಟ್ಟು ನಿಂತಿದ್ದರು. ಎದುರುಗಡೆ ಕಟ್ಟಡದ ಮಹಡಿಯ ಮೇಲೆ ವರಾಂಡದಲ್ಲಿ ಕೈಪಿಡಿದ ಕಟಕಟೆಯನ್ನು ಹಿಡಿದು ಕರ್ನೂಲು ರಾಮರಾಯರು ಒಬ್ಬರೇ ನಿಂತಿದ್ದರು. ಅವರು ತಮ್ಮ ಕಟಕಟೆಯ ಮೇಲೆ ಮೊಳಕೈಯೂರಿ ಒಂದು ಸಾರಿ ಬಲಗೈ, ಒಂದು ಸಾರಿ ಎಡಗೈ-ಅಂಗೈಯಲ್ಲಿ ಮುಖದ ಗಡ್ಡವನ್ನು ಹಿಡಿದು ಒಂದೆರಡು ನಿಮಿಷ ಎಡಕ್ಕೂ ಒಂದೆರಡು ನಿಮಿಷ ಬಲಕ್ಕೂ ಮುಖ

ತಿರುಗಿಸಿಕೊಳ್ಳುತ್ತಿದ್ದರು. ರಾಮರಾಯರು ಎದುರುಸಾಲಿನಲ್ಲಿ ನಿಂತಿದ್ದ ಎಂಟುಹತ್ತು ಮಂದಿಯ ಸಾಲನ್ನು ಗಮನಿಸಿದಂತೆ ಕಾಣಲಿಲ್ಲ. ಈ ಎಂಟು ಹತ್ತು ಮಂದಿಯಾದರೋ ರಾಮರಾಯರ ಮುಖವನ್ನು ಹೊರತು ಬೇರೆ ಯಾವುದನ್ನೂ ಗಮನಿಸಲಿಲ್ಲ. ಹೀಗೆ ಒಂದೈದು ನಿಮಿಷ ಕಳೆದಿರಬಹುದು. ಇದನ್ನು ಕೊಂಚ ದೂರದಿಂದ ಮತ್ತೊಬ್ಬ ಸ್ನೇಹಿತರು ನೋಡಿಕೊಂಡಿದ್ದರು. ಕೆಲವು ನಿಮಿಷಗಳಾದ ಮೇಲೆ ಈ ಬೇರೆ ನಿಂತಿದ್ದ ಸ್ನೇಹಿತರು ಬಂದು ಕೇಳಿದರು:

“ಏನಯ್ಯಾ–ಬೆಪ್ಪು ಬಡಿದುಹೋಯಿತೆ? ರಾಮರಾಯ ಗಂಡಸು. ಆತನ ಮುಖ ವಿಲಾಸಕ್ಕೆ ನೀವು ಹೀಗೆ ಮನಸೋಲುವುದುಂಟೆ?”

ಬೆಪ್ಪರಾಗಿ ನಿಂತಿದ್ದ ಈ ಎಂಟುಹತ್ತು ಮಂದಿ ಮತ್ತಷ್ಟು ಬೆಪ್ಪರಾಗಿ ನಾಚಿಕೆ ಪಟ್ಟುಕೊಂಡು ತೆರಳಿದರು.

ಬಳ್ಳಾರಿಯ ಮತ್ತೊಂದು ನಾಟಕ ಸಂಸ್ಥೆ ಅಲ್ಲಿಯ ‘ಸ್ಟೂಡೆಂಟ್ಸ್ ಎಜುಕೇಷನ್ ಸೊಸೈಟಿ’ ಎಂಬ ಒಂದು ತಂಡ. ಈ ಗುಂಪಿನ ಪ್ರಮುಖರಲ್ಲಿ ವಟ್ಟಂ ಶಾಮರಾಯರು ಗಣ್ಯರು.

ವಟ್ಟಂ ಶಾಮರಾಯರು

ವಟ್ಟಂ ಶಾಮರಾಯರು ಒಳ್ಳೆಯ ರಸಿಕರು. ಅವರ ಇಂಗ್ಲಿಷ್ ಮಾತಿನ ಉಚ್ಚಾರಣೆಯೂ ಇಂಗ್ಲಿಷ್ ವಾಕ್ಯಶೈಲಿಯೂ ಮುಚ್ಚಟೆಯಾಗಿದ್ದವು. ಅವರು ಹಾಸ್ಯಪ್ರಿಯರು. ಆತ ಒಂದು ಸಾರಿ ಒಂದು ಇಂಗ್ಲಿಷ್ ಹಾಸ್ಯಪದವನ್ನು ಹೇಳಿ ವ್ಯಾಖ್ಯಾನ ಮಾಡಿದ್ದು ನನಗೆ ಚೆನ್ನಾಗಿ ಜ್ಞಾಪಕವಿದೆ.

Old mother Hubbard
Went to a cupboard
To fetch her poor doggie a bone.
But when she went there
The cupboard was bare
So the poor doggie had none.

ಇದರ ಮೇಲೆ ವ್ಯಾಖ್ಯಾನ– "Old mother, – and note, she was a mother, and not a father nor a brother.. And she was old, not young and youthful, How pathetic!"… ಹೀಗೆಲ್ಲ ಹೇಳಿ ವ್ಯಾಖ್ಯಾನಕಾರರ ಅತಿ ವಿವರಗಳನ್ನು ಹಾಸ್ಯ ಮಾಡಿ ನಮ್ಮನ್ನು ನಗಿಸುತ್ತಿದ್ದರು. ಈ ವ್ಯಾಖ್ಯಾನವನ್ನು ಮಾಡುವುದರಲ್ಲಿ ಧ್ವನಿಯ ಬದಲಾವಣೆ, ಕೊಂಕು, ಮುದಿಯಂತೆ ತುಟಿಗಳನ್ನು ಬಿಗಿಯೋಣ, ಹೆಣ್ಣು ಧ್ವನಿಯ ಅನುಕರಣೆ–ಇದನ್ನೆಲ್ಲ ನೋಡಿ ತಡೆಯಲಾರದಷ್ಟು ನಗು ಬರುತ್ತಿತ್ತು.

ಕೋಲಾಚಲಂ ಅವರ ನಾಟಕದ ಕಂಪೆನಿ ಬೆಂಗಳೂರಿನಲ್ಲಿ ಸುಮಾರು ಒಂದು ತಿಂಗಳ ಕಾಲ ಅನೇಕ ನಾಟಕಗಳನ್ನು ಪ್ರದರ್ಶನಮಾಡಿತು. 'ವಿಜಯನಗರ ಪತನ' ನಾಟಕ ಐದಾರು ಸಲ ನಡೆಯಿತು. ಅದರಲ್ಲಿ ರಾಘವಾಚಾರ್ಯರು ರುಸ್ತುಂ ಪಾರ್ಟನ್ನು ಧರಿಸಿದ್ದರು. ಅದು ಜನಕ್ಕೆ ಬಹುದೊಡ್ಡ ಆಕರ್ಷಣೆ. ರಾಘವಾಚಾರ್ಯರ ಮುಖಾಭಿನಯ ನೇತ್ರಾಭಿನಯಗಳು ಎಲ್ಲರಿಗೂ ಹೃದಯಸ್ಪರ್ಶಿಯಾಗುವಂಥದು. ಅವರು ವೀರಪಾತ್ರ ರುದ್ರಪಾತ್ರಗಳನ್ನು ಮಾತ್ರವಲ್ಲದೆ ಹಾಸ್ಯದ ಪಾತ್ರಗಳನ್ನೂ ನಿರ್ವಹಿಸುತ್ತಿದ್ದರು. ನೈಜವಾಗಿ ಅವರು ಹಾಸ್ಯಪ್ರಿಯರು, ಮತ್ತು ಸಂತೋಷಚಿತ್ತರು.

‘ಕುಂಬಾರ ಗುಂಡಯ್ಯ’

ಯಾವುದೋ ಒಂದು ನಾಟಕದಲ್ಲಿ–ಬಹುಶಃ ‘ವಿಜಯನಗರ ಪತನ’ ದಲ್ಲಿ -ಒಬ್ಬ ಕುಂಬಾರನ ಪಾತ್ರ ಬರುತ್ತದೆ. ಆ ದಿನ ರಾಘವಾಚಾರ್ಯರು ನನ್ನನ್ನು ಕರೆದು, ವೇದಿಕೆಯ ಎದುರಾಗಿ, ಮೊದಲ ಸಾಲಿನಲ್ಲಿ ಕೂಡಬೇಕೆಂದು ಹೇಳಿದರು. ನಾನು ಒಲ್ಲೆನೆಂದೆ. ಅವರು ಕಡ್ಡಾಯವಾಗಿ ನಾನು ಆ ಜಾಗದಲ್ಲಿಯೇ ಕೂಡಬೇಕೆಂದರು. “ನೀನು ಅಲ್ಲಿ ಕೂಡದಿದ್ದರೆ ನಾನು ನಿನ್ನ ಹೆಸರನ್ನು ಕೂಗಿ ಅಲ್ಲಿಗೆ ಬರುವಂತೆ ಗಟ್ಟಿಯಾಗಿ ಹೇಳಬೇಕಾಗುತ್ತದೆ. ವೃಥಾ Fuss ಆಗುತ್ತದೆ” ಎಂದು ಹೆದರಿಸಿದರು. ನಾನು ಅವರ ಮಾತಿನಂತೆ ಕುಳಿತೆ.

ಸ್ವಲ್ಪ ಹೊತ್ತಾದ ಮೇಲೆ ರಾಘವಾಚಾರ್ಯರು ಕುಂಬಾರ ಗುಂಡಯ್ಯನ ವೇಷಧರಿಸಿ ವೇದಿಕೆಯ ಮೇಲೆ ಬಂದರು. ಆ ಕುಂಬಾರನ ಹೆಸರು ನನಗಿದ್ದದ್ದರಿಂದ ಆದರಣೆ. ಆಗ ರಾಘವಾಚಾರ್ಯರ ಹಾಡು,

ಇದ್ದರು ಆಡೋಳ್ಳ ಪೆಂಡ್ಲಾಲ ಸೇಸ್ಕೊಂಟಿ
ಹಗಸಾಟ್ಲು ಪಡಲೇನು ಹಯಬಸವಾ

ಇದನ್ನು ಹೇಳುತ್ತ ಹೇಳುತ್ತ ನನ್ನ ಕಡೆ ಬೆರಳು ತಿರುಗಿಸಿ “ಕುಂಬಾರ ಗುಂಡಯ್ಯ” ಎನ್ನುತ್ತಿದ್ದರು.

ರಾಘವಾಚಾರ್ಯರಿಗೆ ಸಂಗೀತ ಅಭ್ಯಾಸವಿರಲಿಲ್ಲ. ಅವರ ರಾಗಕ್ಕೆ ಯಾವ ಲಕ್ಷಣವೂ ಇರಲಿಲ್ಲ. ಗಂಟಲು ಕಿರಿಚಿದಂತೆ, ಮನಸ್ಸಿಗೆ ತೋರಿದಂತೆ ರಾಗ. ಕೈ ಬೆರಳುಗಳ ಸನ್ನೆಯಿಂದ ರಾಗದ ಉಚ್ಚಗತಿಯನ್ನು ನಾವು ಊಹಿಸಿಕೊಳ್ಳಬೇಕಾಗಿತ್ತು. ಆದರೆ ಅವರ ಪಾತ್ರಗಳಲ್ಲಿ ಸಂಗೀತದ ಪ್ರವೇಶ ಅಷ್ಟಾಗಿರುತ್ತಿರಲಿಲ್ಲ. ತಮಾಷೆಗೆ ಒಂದೊಂದು ಸಲ ಈ ಮೇಲಿನಂಥ ವಾಕ್ಯಗಳನ್ನುನುಡಿಯುತ್ತ, ಸಭೆಯ ಜನ ನಕ್ಕರೆ ಅವರಿಗೂ ಸಂತೋಷ.

ರಾಘವಾಚಾರ್ಯರ ಉಡುಪೂ ಹಾಗೆಯೇ. ಸಾಮಾನ್ಯವಾಗಿ ಒಳ್ಳೆ ಫ್ಯಾಷನ್ನಿನ ಕೋಟು, ಷರಾಯಿ, ನೆಕ್‌ಟೈ ಧರಿಸುತ್ತಿದ್ದರು. ತಲೆಯಮೇಲೆ ಮಾತ್ರ ಒಂದೊಂದು ಸಲ ಮುಸಲ್ಮಾನರ ತರಹದ ಟೋಪಿ, ಒಂದೊಂದು ಸಾರಿ ಪಂಜಾಬಿ ಚುಂಗಿನ ರುಮಾಲು, ಹೀಗೆ ಯಾವ ವೇಷ ಹಾಕಿದರೂ ಅದು ಅವರಿಗೆ ಸ್ವಾಭಾವಿಕವಾದದ್ದೇ ಎನ್ನಿಸುವಂತಿತ್ತು.

ಒಂದು ಸಾರಿ ಅದೇ ಪಠಾಣ್ ರುಸ್ತುಂ ವೇಷ ಹಾಕಿದ್ದಾಗ ಮೀಸೆ ಹುರಿ ಮಾಡುವ ರಭಸದಲ್ಲಿ ಒಂದು ಮೀಶೆ ಕಿತ್ತು ಕೈಗೆ ಬಂತು. ಕೂಡಲೆ ರಾಘವಾಚಾರ್ಯರು ಅದನ್ನು ಎದುರಿಗೆ ಹಿಡಿದುಕೊಂಡು ಸಂಬೋಧಿಸಿ ಹೇಳಿದರು: “ಎಲೈ ಹಾಳು ಮೀಸೆಯೆ, ನೀನಿದ್ದು ಏನು ಪ್ರಯೋಜನ? ಕೆಲಸಕ್ಕೆ ಬಾರದ ಈ ವಸ್ತುವಿನಿಂದ ಕೇಡು...” ಎಂದು ಹೇಳುತ್ತ ಇನ್ನೊಂದು ಮೀಸೆಯನ್ನೂ ಕಿತ್ತು ಹಾಕಿದರು. ಇಂಥ ಚಮತ್ಕಾರ ಅವರಲ್ಲಿ ತುಂಬಿತ್ತು.

ಬೀಳ್ಕೊಡುಗೆ

ಬೆಂಗಳೂರಿನ ಕಡೆಕಡೆಯ ನಾಟಕ ನಡೆಯುತ್ತಿದ್ದಾಗ ಕೋಲಾಚಲಂ ನನ್ನನ್ನು ಕರೆದು ಕೇಳಿದರು:

“ರಾಘವಾಚಾರಿ ಇನ್ನು ಒಂದು ಘಂಟೆಯೊಳಗಾಗಿ ರೈಲು ಹತ್ತಿ ತಾಡಪತ್ರಿಗೆ ಹೋಗುತ್ತಾರೆ. ಆತನ ತಾಯಿಗೆ ಕಾಯಿಲೆಯೆಂದು ಈಗ ತಾನೆ ತಂತಿ ಬಂದಿದೆ. ನೀವು ಆತ ಹೊರಡುವುದಕ್ಕೆ ಮುಂಚೆ ಒಂದೆರಡು ಮಾತು ಆತನ ವಿಷಯ ಹೇಳೀರ?”

ನಾನು ಸಂತೋಷದಿಂದ ಒಪ್ಪಿ ಒಂದೆರಡು ಮಾತು ಹೇಳಿದೆ. ರಾಘವಾಚಾರ್ಯರು ತಮ್ಮ ಊರಿಗೆ ಹೋಗಿ ಒಂದು ಕೃತಜ್ಞತೆಯ ಪತ್ರ ಬರೆದರು. ಅದರಲ್ಲಿ ತಮ್ಮ ಅಂತ ರಂಗವನ್ನು ಬಿಚ್ಚಿ ತೋರಿದರು. ಅಂದಿನಿಂದ ಅವರಿಗೂ ನನಗೂ ಆಪ್ತತೆ ಹೆಚ್ಚಾಯಿತು.

ರಾಘವಾಚಾರ್ಯರ ತಂಗಿ ನನ್ನ ಕೋಲಾರದ ಪರಮ ಸ್ನೇಹಿತ ಆನೂರು ವೆಂಕಟಾಚಾರ್ಯನ ಹೆಂಡತಿ. ಈ ಕಾರಣದಿಂದಲೂ ಅವರಿಗೂ ನನಗೂ ಮೈತ್ರಿ ಬೆಳೆಯಿತು.

ಕೋಲಾಚಲಂ ಕಂಪೆನಿ ಬೆಂಗಳೂರಿನಿಂದ ಹೋಗುವುದಕ್ಕೆ ಎರಡು ದಿನ ಮುಂಚೆ ನಾಟಕಮಂದಿರದಲ್ಲಿ ದೊಡ್ಡ ಸಭೆ ಸೇರಿತ್ತು. ಆಗ ಬೆಂಗಳೂರು ಮಹಾಜನರ ಪರವಾಗಿ ಒಂದು ಪ್ರಶಂಸಾಪತ್ರಿಕೆಯನ್ನು ಅವರಿಗೆ ಅರ್ಪಿಸಿದ್ದಾಯಿತು. ಅದು ಅಚ್ಚಾದ ಪತ್ರಿಕೆ. ಅದರಲ್ಲಿ ಕೋಲಾಚಲಂ ಶ್ರೀನಿವಾಸರಾಯರ ನಾಟಕ ಕೃತಿಗಳ ರಸಪುಷ್ಟಿಯನ್ನೂ ನಟವರ್ಗದವರ ನಟನಕೌಶಲವನ್ನೂ ಪ್ರಶಂಸೆಮಾಡಿತ್ತು. ಹಾಗೆಯೇ ಆ ನಾಟಕಮಂಡಲಿಗೆ ಸಾಹುಕಾರ್ ನೆಟ್ಟಕಲ್ಲಪ್ಪನವರು ಕೊಟ್ಟ ಆಶ್ರಯದ ಪ್ರಸ್ತಾವವೂ ಇತ್ತು. ಆ ಉತ್ಸವ ನಮಗೆಲ್ಲ ತುಂಬ ಸಂಭ್ರಮದ್ದಾಗಿತ್ತು.

ಎಸ್. ಡಿ. ಎ.

೧೯೦೦ರ ಸುಮಾರಿನಲ್ಲಿ ಮೈಸೂರು ಸಂಸ್ಥಾನದ ಅಂಚಿಗೆ ಅಂಟಿಕೊಂಡಿದ್ದ ತೆಲುಗು ಸೀಮೆಯ ಜನ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬರುತ್ತಿದ್ದರು. ಬಳ್ಳಾರಿ, ಅನಂತಪುರ, ಕರ್ನೂಲು ಮೊದಲಾದ ಜಿಲ್ಲೆಗಳವರು ಆ ಆಂಧ್ರರು. ಆ ವಿದ್ಯಾರ್ಥಿಗಳು ಬೆಂಗಳೂರಿನಲ್ಲಿ 'ಸೀಡಡ್ ಡಿಸ್ಟ್ರಿಕ್ಟ್ಸ್ ಅಸೋಸಿಯೇಷನ್' (ಎಸ್.ಡಿ.ಎ.) ಎಂಬ ಸಂಘವನ್ನ ಮಾಡಿಕೊಂಡಿದ್ದರು. ಅವರಲ್ಲಿ ಬಹು ಪ್ರಸಿದ್ಧರಾದವರಲ್ಲಿ ಬೆಲ್ಲೋಣಿ ಭೀಮರಾಯರೂ ಒಬ್ಬರು. ಇವರು ಉತ್ತರೋತ್ತರ ಪ್ರಸಿದ್ಧ ವಕೀಲರಾಗಿ, ಜನನಾಯಕರಾಗಿ, ಮದರಾಸಿನ ಶಾಸನಸಭಾ ಸದಸ್ಯರಾಗಿ, ಕರ್ಣಾಟಕದ ಚಳವಳಿಗೆ ಒಬ್ಬ ಮುಖಂಡರಾಗಿದ್ದರು. ಈ ಸಂಘದವರು ಬೆಂಗಳೂರಿನಲ್ಲಿ ಆಗಾಗ ನಾಟಕಗಳನ್ನು ಅಭಿನಯಿಸುತ್ತಿದ್ದರು. ಬಹುವಾಗಿ ಇಂಗ್ಲಿಷ್ ನಾಟಕಗಳು, ಬಳ್ಳಾರಿಯ ರಾಘವಾಚಾರ್ಯರಿಗೂ ಅವರ ಸ್ನೇಹಿತರಿಗೂ ಬೆಂಗಳೂರಿನ ಸಂಪರ್ಕವುಂಟಾದದ್ದು ಹೀಗೆ-ಇದೇ ಮೊದಲು ಎಂದು ನನ್ನ ತಿಳಿವಳಿಕೆ.

ಆ ಸಂಘದವರು ಒಂದು ಗ್ರಂಥಭಂಡಾರವನ್ನೂ ಏರ್ಪಡಿಸಿಕೊಂಡಿದ್ದರು. ನಾನು ಅದರ ಕೆಲವು ಗ್ರಂಥಗಳನ್ನು ನೋಡಿದ್ದೇನೆ.

ಆ ಸಂಘ ಬೆಂಗಳೂರಿನ ಹೊರಗಿನಿಂದ ಬಂದ ಆಂಧ್ರ ವಿದ್ಯಾರ್ಥಿಗಳದು. ಆದರೆ ಅದರಲ್ಲಿ ಬೆಂಗಳೂರಿನವರೇ ಆದ ಕೆಲವರೂ ಸೇರಿದ್ದರು. ಅಂಥವರ ಪೈಕಿ ಒಬ್ಬರು ಅಗ್ರಿಕಲ್ಚರಲ್ ಇಲಾಖೆಯಲ್ಲಿ ಕೆಮಿಸ್ಟ್ ಆಗಿದ್ದ ಕೆ. ಭೀಮರಾಯರು. ಇವರು ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು; ತೆಲಗು ಮನೆಮಾತು. ಸಾತ್ತ್ವಿಕರು; ನಮ್ಮಲ್ಲಿ ಅನೇಕ ಮಂದಿಗೆ ಪ್ರಿಯರಾಗಿದ್ದ ಸ್ನೇಹಿತರು. ಇವರಿಗೂ ಬಳ್ಳಾರಿ ರಾಘವಾಚಾರ್ಯರಿಗೂ ಗಾಢವಾದ ಸ್ನೇಹವಿತ್ತು.

ಎ. ಡಿ. ಎ.

ಕಾಲಕ್ರಮದಲ್ಲಿ ಸೀಡಡ್ ಡಿಸ್ಟ್ರಿಕ್ಟುಗಳ ಸಂಖ್ಯೆ ಬೆಂಗಳೂರಿನಲ್ಲಿ ಕಡಮೆಯಾಯಿತು. ಆ ಸಮಯದಲ್ಲಿ ಆ ಅಸೋಸಿಯೇಷನ್ನಿನ ಸ್ಥಾನವನ್ನು ಭರ್ತಿಮಾಡಲು ಹುಟ್ಟಿದ್ದು ಅಮೆಚ್ಯೂರ್ ಡ್ರಾಮಟಿಕ್ ಅಸೋಷಿಯೇಷನ್ (ಎ. ಡಿ. ಎ.). ಈ ಸಂಘವು ಇಂಗ್ಲಿಷ್ ನಾಟಕಗಳನ್ನೂ ತೆಲುಗು ಕನ್ನಡ ನಾಟಕಗಳನ್ನೂ ಅಭಿನಯಿಸಿ ಜನರನ್ನು ಸಂತೋಷಪಡಿಸಿತು–ಸುಮಾರು ೧೯೨೦-೨೫ರ ವರೆಗೆ.

ಈ ಸಂಸ್ಥೆ ನಡಸಿದ ಮುಖ್ಯ ಕಾರ್ಯಗಳಲ್ಲಿ ಕೆಲವದರ ಹೆಸರನ್ನು ಸೂಚಿಸುತ್ತೇನೆ:

1. ಲಲಿತ ಕಲಾ ಮಹೋತ್ಸವ. ಇದಕ್ಕಾಗಿ ರವೀಂದ್ರನಾಥ ಠಾಕೂರರನ್ನು ಕರಸಿದ್ದೆವು.
2. ಎರಡನೆಯ ಸಮ್ಮೇಳನಕ್ಕಾಗಿ ಶ್ರೀಮತಿ ಸರೋಜಿನಿ ನಾಯಿಡು ಅವರನ್ನು ಕರಸಿದ್ದೆವು.
3. ಮೂರನೆಯ ಸಾರಿ ಕಟ್ಟಿಮಂಚಿ ರಾಮಲಿಂಗರೆಡ್ಡಿ ಅವರನ್ನು ಕರಸಿದ್ದೆವು.
4. ೧೯೧೮ರ ಸುಮಾರಿನಲ್ಲಿ ಇನ್‌ಫ್ಲುಯೆಂಜಾ ಹರಡಿದ್ದಾಗ ಕಷ್ಟನಿವಾರಣೆಗಾಗಿ ಕೆಲಸಮಾಡಿದ್ದು.
5. ಮೈಸೂರು ಪಟ್ಟಣಕ್ಕೆ ಹೋಗಿ ನಾಟಕಗಳನ್ನಾಡಿದ್ದು.
6. ಕೆಲವು ಕನ್ನಡ ಪ್ರಕಟನೆಗಳು (ಕೈಲಾಸಂ ಅವರ ‘ಟೊಳ್ಳು ಗಟ್ಟಿ’ ಇಂಥವುಗಳಲ್ಲೊಂದೆಂದು ಜ್ಞಾಪಕ)
7. ಸಂಗೀತ ಕಚೇರಿಗಳನ್ನು ನಡಸಿದ್ದು.
8. ಕಾಳಿದಾಸ ಜಯಂತಿ ಮೊದಲಾದ ಉತ್ಸವಗಳು.

ಈ ಎಲ್ಲ ಚಟುವಟಿಕೆಗಳಲ್ಲಿ ಮುಖ್ಯ ಭಾಗವಹಿಸಿದ್ದವರು ಬಳ್ಳಾರಿ ರಾಘವಾಚಾರ್ಯರು, ಕೆ. ಭೀಮರಾವ್– ಇವರ ಜೊತೆಗೆ ಮೋಟಾರ್ ರಾಘವಾಚಾರ್, ಬಿಂಡಿಗನವಲೆ ರಾಘವಾಚಾರ್, ವಾಸು ಎಂಬುವರು, ವೆಂಕಟಸುಬ್ಬಯ್ಯ, ಅಗ್ರಿಕಲ್ಚರಲ್ ಇಲಾಖೆಯ ವೆಂಕೋಬರಾವ್ ಎಂಬುವರು, ಶ್ರೀಮಾನ್ ಪಿ. ಕೋದಂಡರಾಯರು, ಹಿಮಾಂಶು ಶ್ರೀನಿವಾಸಶಾಸ್ತ್ರಿಗಳು, ಇನ್ನೂ ಅನೇಕ ಮಂದಿ ಸಭ್ಯಪುರುಷರು. ಅವರೆಲ್ಲ ಅಭಿನಯ ಮಾಡುತ್ತಿದ್ದವರಲ್ಲ. ಕೆಲವರು ಮಾತ್ರ ವೇಷ ಹಾಕುತ್ತಿದ್ದರು. ಉಳಿದವರು ಸಾಹಿತ್ಯ ಸಮಾಜ ಕಾರ್ಯದಲ್ಲಿ ಭಾಗವಹಿಸುತ್ತಿದ್ದರು.

ಮೋಟಾರ್ ರಾಘವಾಚಾರ್ ಎಂಬವರು ಆಂಧ್ರ ಶ್ರೀವೈಷ್ಣವರು. ಅವರಿಗೆ 'ಮೋಟಾರ್' ಎಂಬ ಉಪನಾಮದ ಅರ್ಥ ಎರಡು. ಒಂದು ಪ್ರಕಾಶವಾದದ್ದು, ಅವರು ಮೋಟಾರ್ ಸರ್ವಿಸ್ ನಡಸುತ್ತಿದ್ದರು. ಎರಡನೆಯದು ರಹಸ್ಯವಾದದ್ದು, ಅವರ ಕಂಠ ಧ್ವನಿ ಮೋಟಾರಿನದರಂತೆ ಎಂದು ಕುಚೋದ್ಯ. ಅವರು ಒಳ್ಳೆ ವಿನಯಪರರು.

ಬಿಂಡಿಗನವಲೆ ರಾಘವಾಚಾರ್ಯರು ಹೆಬ್ಬಾರ್ ಶ್ರೀವೈಷ್ಣವರು. ಹುಲುಸಾದ ಮೀಸೆ ಧರಿಸಿದ್ದರು. ಇವರೂ ಸ್ನೇಹತತ್ಪರರು.

ಕೋದಂಡರಾಯರು

ಕೋದಂಡರಾಯರನ್ನು ಕುರಿತು ಒಂದು ಮಾತನ್ನು ವಿಶೇಷವಾಗಿ ಹೇಳಬೇಕೆನಿಸುತ್ತದೆ. ೧೯೧೭-೧೮ರ ಸಮಯದಲ್ಲಿ ಅವರು ಸೆಂಟ್ರಲ್ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದರು. ಆದರೂ ಅವರ ನೈಜ ಕುತೂಹಲ ದೇಶಸೇವೆಯ ವಿಷಯದಲ್ಲಿ ಮತ್ತು ಸಮಾಜೋಪಕಾರದ ವಿಷಯದಲ್ಲಿ. ಇನ್‌ಫ್ಲುಯೆಂಜಾ ವ್ಯಾಧಿಯ ಕಾಲದಲ್ಲಿ ಅವರು ವಹಿಸಿದ ಶ್ರಮವನ್ನು ನಾನು ಕಣ್ಣಾರೆ ಕಂಡವನು. ರೋಗಿಷ್ಠರಿಗಾಗಿ ಥೈಮಾಲ್ ಔಷಧ ದ್ರಾವಕವನ್ನು ಸಣ್ಣ ಸಣ್ಣ ಸೀಸೆಗಳಲ್ಲಿ ಭರ್ತಿಮಾಡಿ ಕಾರ್ಕ್ ಬಿರಡೆ ಹಾಕುವುದು, ಅದರ ಮೇಲೆ ಚೀಟಿ ಅಂಟಿಸುವುದು, ಅನಂತರ ರವೆಗಂಜಿ ಮಾಡಿಸುವುದು, ಅದನ್ನು ಸರಿಯಾದ ಪ್ರಮಾಣಗಳಲ್ಲಿ ಸೀಸೆಗಳಲ್ಲಿ ಭರ್ತಿಮಾಡುವುದು, ಆ ಸೀಸೆಗಳಿಗೆ ಮುಚ್ಚಳ ಹಾಕುವುದು; ಆಮೇಲೆ ಈ ಔಷಧದ ಸೀಸೆಗಳನ್ನೂ ಗಂಜಿಯ ಸೀಸೆಗಳನ್ನೂ ಬೇರೆ ಬೇರೆ ಬಕೆಟ್ಟುಗಳಲ್ಲಿ ತುಂಬಿಕೊಂಡು ಎರಡು ಕೈಗಳಲ್ಲೂ ಎರಡು ಬಕೆಟ್ಟುಗಳನ್ನು ಹಿಡಿದು, ಅಕ್ಕಿಪೇಟೆ, ಬಳೆಪೇಟೆ, ರಾಣಾಸಿಂಗ್ ಪೇಟೆ ಈ ನಾನಾ ಪ್ರದೇಶಗಳಿಗೆ ಹೋಗಿ ಅಲ್ಲಿ ರೋಗಿಗಳೆಷ್ಟು ಮಂದಿ, ಯಾವ ಯಾವ ವಯಸ್ಸಿನವರು, ಅವರಿಗೆ ಏನೇನು ಆವಶ್ಯಕತೆಗಳಿವೆ, ಅವರ ನೋವು ನಿಷ್ಠುರಗಳೇನು–ಇವನ್ನೆಲ್ಲ ವಿಚಾರಿಸಿ ಪ್ರತಿಯೊಬ್ಬರಿಗೂ ಸಮಾಧಾನ ಹೇಳಿ, ಧೈರ್ಯ ಹೇಳಿ, ಔಷಧ ಗಂಜಿಗಳನ್ನು ಕೊಡುವುದು; ಅವಶ್ಯ ತೋರಿದರೆ ಕೈಕಾಲುಗಳನ್ನು ಸವರಿ ಹಿಸುಕಿ, ಬಟ್ಟೆಗಳನ್ನು ಕೊಡವಿ ಉಪಚಾರ ನಡಸುವುದು, ವೈದ್ಯರನ್ನು ಕರೆತರುವುದು–ಈ ಬಗೆಯ ನಾನಾ ಸೇವಾಕಾರ್ಯಗಳನ್ನು ಕಾಲಕಾಲಕ್ಕೆ ನಡಸಿ ಅದೊಂದು ವ್ರತವೆಂಬಂತೆ ಸಾಗಿಸಿ ಕೃತಕೃತ್ಯರಾದವರು ಕೋದಂಡರಾಯರು. ಅವರು ಹಾಗೆ ಶ್ರಮಪಟ್ಟದ್ದು ಹೆಸರಿಗೋಸ್ಕರವಲ್ಲ, ಚುನಾವಣೆಗೋಸ್ಕರವಲ್ಲ, ಪತ್ರಿಕೆಗಳಲ್ಲಿ ಪ್ರಸಿದ್ಧಿಗೋಸ್ಕರವಲ್ಲ. ಅದು ಕೇವಲ ಆತ್ಮಸಂತುಷ್ಟಿಗಾಗಿ, ಕೇವಲ ದೇಶಹಿತನಿಷ್ಠೆಯಿಂದ. ಹಿತನಿಷ್ಠೆಗೆ ಫಲ ಹೃದಯದ ಒಳಗಿನದು; ಮಾಡಬೇಕಾದದ್ದನ್ನು ಮಾಡಿದೆನೆಂಬ ಕೃತಕೃತ್ಯತಾಭಾವನೆ. ಈ ಪಾಠವನ್ನು ಕಲಿಯಬಹುದಾಗಿತ್ತು ಕೋದಂಡರಾಯರ ಆಗಿನ ಸಹೋದ್ಯೋಗಿಗಳು.

ರಾಮಪ್ರಸಾದ್

ಆಗಿನ ಜನಸೇವಾಕಾರ್ಯದಲ್ಲಿ ದುಡಿದ ಇನ್ನೊಬ್ಬ ಯುವಕರ ಹೆಸರನ್ನು ನಾನು ಸ್ಮರಿಸಲೇಬೇಕೆನಿಸುತ್ತದೆ. ಅವರು ಎಲೆಕ್ಟ್ರಿಕಲ್ ಇಂಜಿನಿಯರ್ ಬಿ.ಕೆ. ರಾಮಪ್ರಸಾದ್ ಎಂಬುವರು. ಇವರು ಈ ಕಾಲದಲ್ಲಿ ಸೆಂಟ್ರಲ್ ಕಾಲೇಜಿನಲ್ಲಿ ಎಂ.ಎಸ್‌ಸಿ. ವಿದ್ಯಾರ್ಥಿ. ಒಂದು ದಿನ ಚಿಕ್ಕ ಲಾಲ್‌ಬಾಗಿನಲ್ಲಿದ್ದ ರೋಗಿಗಳ ಶಿಬಿರದಲ್ಲಿ ಇವರಿಗೆ ಉದ್ಯೋಗ ಏರ್ಪಾಟಾಗಿತ್ತು. ಕಾವಲುಗಾರನ ಉದ್ಯೋಗ. ಎಲ್ಲ ರೋಗಿಗಳನ್ನೂ ಆಗಾಗ ವಿಚಾರಿಸುವುದು, ತುರ್ತು ಸಂದರ್ಭವೇನಾದರೂ ತೋರಿದರೆ ಆಗ ವೈದ್ಯರ ಸಹಾಯವನ್ನು ತರಿಸಿಕೊಡುವುದು, ಆಹಾರ ಪಾನೀಯಗಳನ್ನೊದಗಿಸುವುದು. ಹೀಗಿದ್ದಾಗ ಒಬ್ಬ ರೋಗಿ ನರಳುತ್ತಿದ್ದ. ನಮ್ಮ ರಾಮಪ್ರಸಾದ್ ಕಾಗದವಿರಿಸಿಕೊಂಡು ಲೆಕ್ಕದ ಕೆಲಸ ಮಾಡುತ್ತಿದ್ದ. ನರಳುತ್ತಿದ್ದ ರೋಗಿ ಮೃತನಾದ. ರಾಮಪ್ರಸಾದ್‌ಗೆ ಅದು ತಿಳಿಯಲೇ ಇಲ್ಲ. ಆತ ತನ್ನ ಲೆಕ್ಕದಲ್ಲಿ ಮಗ್ನನಾಗಿದ್ದ. ಒಂದೆರಡು ನಿಮಿಷ ನರಳಿಕೆ ನಿಂತು ಹೋದ ಮೇಲೆ ರಾಮಪ್ರಸಾದ್ ಹೋಗಿ ನೋಡಿ ಗಾಬರಿಪಟ್ಟ. ಆತನಿಗೆ ಆ ವೇಳೆಗೆ ಸಾವಿನ ಅನುಭವ ಆಗಿರಲಿಲ್ಲ. ಅಷ್ಟು ಕಿರಿಯ ವಯಸ್ಸಿನವ. ತಿಳಿದ ಮೇಲೆ ಆತ ಪಟ್ಟ ಸಂತಾಪವನ್ನು ಅಷ್ಟಿಷ್ಟೆಂದು ಹೇಳಲಾಗದು. ಅಂಥ ಒಳ್ಳೆಯ ಮನುಷ್ಯ ಆತ. ಉತ್ತರೋತ್ತರ ಮಹಾ ವಿದ್ವಾಂಸರಾಗಿ ದೇಶಕ್ಕೆ ಕೀರ್ತಿ ತಂದ ಯುವಕರಲ್ಲಿ ರಾಮಪ್ರಸಾದ್ ಒಬ್ಬ.

ಅಮೆಚ್ಯೂರ್ ನಾಟಕ ಸಂಘ ಅಲ್ಲಿಂದೀಚೆಗೂ ನಾಲ್ಕಾರು ಒಳ್ಳೆಯ ಕೆಲಸಗಳನ್ನು ಮಾಡಿತು. ಬಳಿಕ ಕೆಲವು ವರ್ಷಗಳ ಕಾಲ ಅದು ನಿದ್ದೆ ಹೋದಂತಿತ್ತು. ಈಚೀಚೆಗೆ ಪುನಃ ಅದನ್ನು ಉಜ್ಜೀವನ ಪಡಿಸುವ ಪ್ರಯತ್ನಗಳು ನಡೆದಿವೆಯೆಂದು ಕೇಳಿ ನನಗೆ ತುಂಬ ಸಂತೋಷವಾಗಿದೆ.

೧೩

ನಮ್ಮ ಊರಿನ ಗ್ರಾಮದೇವತೆಗಳು

ಮುಳುಬಾಗಲಿನ ವೈದಿಕ ಮಂಡಲಿಯನ್ನೂ ವಿದ್ವದ್ಗೋಷ್ಠಿಯನ್ನೂ ರಸಿಕ ವರ್ಗವನ್ನೂ ಹಲವು ಲೇಖನಮಾಲೆಗಳಲ್ಲಿ ಇಷ್ಟಿಷ್ಟು ತೋರಿಸಿದ್ದೇನೆ. ಪ್ರಕೃತ ಲೇಖನದಲ್ಲಿ ಸಾಮಾನ್ಯವಾದ ಪೌರ ಜೀವನವನ್ನು ಪ್ರಸ್ತಾವಿಸುತ್ತೇನೆ. ಲೇಖನ ವಸ್ತುವನ್ನು ಮುಳುಬಾಗಲು ಪ್ರಾಂತದಿಂದ ಆರಿಸಿಕೊಂಡಿರುವುದರಲ್ಲಿ ಆ ಊರು ವಿಶೇಷವಾದದ್ದೆಂಬ ಭಾವವೇನೂ ಇಲ್ಲ. ಆ ಊರಿನಲ್ಲಿ ಆ ಕಾಲದಲ್ಲಿ ಇದ್ದಂತೆ ವಿದ್ವಜ್ಜನರೂ ಇತರರೂ ಸಾಮಾನ್ಯವಾಗಿ ಎಲ್ಲ ಊರುಗಳಲ್ಲಿಯೂ ಇರುತ್ತಿದ್ದರು. ನನಗೆ ವಿಶೇಷವಾಗಿ ತಿಳಿದಿರುವುದು ಆ ಊರಾದದ್ದರಿಂದ ಅಲ್ಲಿಯ ಸಾಮಾಜಿಕ ವಾತಾವರಣವನ್ನು ಯಥಾಶಕ್ತಿ ಚಿತ್ರಿಸಿದ್ದೇನೆ. ಅಂಥ ಸಾಮಾಜಿಕ ಸಂದರ್ಭಗಳೂ ಸಾಮಾಜಿಕ ಪ್ರಶ್ನೆಗಳೂ ಈ ದೇಶಭಾಗಕ್ಕೆ ಸರ್ವ ಸಾಮಾನ್ಯವಾದವೆಂದು ಹೇಳಬಹುದು.

ಆ ಕಾಲದ ಬೆಲೆಗಳಿಗೆ ಒಂದು ಉದಾಹರಣೆ. ಒಳ್ಳೆಯ ಕೆಂಪು ಸಣ್ಣ ನೆಲ್ಲು ಅಕ್ಕಿ ರೂಪಾಯಿಗೆ ಹನ್ನೆರಡು ಸೇರು. ತೆಂಗಿನಕಾಯಿ ಆಣೆಗೆ ಆರು.

ನನ್ನ ತಂದೆ ಈ ರೀತಿ ವ್ಯಾಪಾರ ಮಾಡಿಕೊಂಡು ಬಂದರೆ ಅವರ ಚಿಕ್ಕ ತಂದೆ ರಾಮಣ್ಣನವರು “ವೆಂಕಟರಮಣ, ನಿನಗೆ ಎಂದಿಗೆ ಬುದ್ಧಿ ಬರುವುದು? ರೂಪಾಯಿಗೆ ಹದಿನಾರು ಸೇರಾದರೂ ಅಕ್ಕಿ ಬರಬೇಕು. ತೆಂಗಿನಕಾಯಿ ಆಣೆಗೆ ಎಂಟಾದರೂ ಬರಬೇಕು. ನೀನು ದುಬಾರಿ ಮಾಡಿದೆ!” –ಹೀಗೆ ಆಕ್ಷೇಪಿಸುತ್ತಿದ್ದರು.

ಇದು ಆ ಕಾಲದ ಸ್ಥಿತಿ.

ಆ ಊರಿನ ಜನದಲ್ಲಿ ಬಹು ದೊಡ್ಡ ಗುಂಪು ಬೇಸಾಯಗಾರರದು. ಅವರಲ್ಲಿ ಒಕ್ಕಲಿಗರು (‘ಕಾಪವಾಂಡ್ಲು’), ರೆಡ್ಡಿಗಳು, ಕುರುಬರು, ಬಣಜಿಗರು ಮುಂತಾದವರೆಲ್ಲ ಇದ್ದರು. ಅವರೆಲ್ಲರೂ ಅಷ್ಟಿಷ್ಟು ಜಮೀನಿದ್ದವರು. ಮನೆಯಲ್ಲಿ ಆಕಳು, ಎತ್ತು, ಎಮ್ಮೆ ಇಟ್ಟಿದ್ದವರು, ಕುರಿ ಕೋಳಿ ಸಾಕುವವರೂ ಕೆಲವರಿದ್ದರು. ಆ ಊರಿನ ಜನದಲ್ಲಿ ಪ್ರತಿಯೊಬ್ಬರೂ ಬೆಳಗಿನಿಂದ ಸಂಜೆಯವರೆಗೂ ತಮ್ಮ ತಮ್ಮ ಆರಂಬದ ಕೆಲಸದಲ್ಲಿರುತ್ತಿದ್ದರು. ತಮ್ಮ ತಮ್ಮ

ಹೊಲ ಗದ್ದೆಗಳಿಗೆ ಹೋಗುವುದು, ಉಳುಮೆ ಮಾಡುವುದು, ಕಳೆ ತೆಗೆಯುವುದು, ಬಾವಿಯಿಂದ ನೀರು ಎತ್ತುವುದು ಇವೇ ಮೊದಲಾದ ಕೆಲಸ ಆ ಜನಕ್ಕೆ ದಿವಸವೆಲ್ಲ ಇರುತ್ತಿತ್ತು. ಹಾಗಿದ್ದದ್ದರಿಂದ ತಂಟೆ ತಕರಾರುಗಳಿಗೆ ಹೊತ್ತಿಲ್ಲದೆ ಅವರವರ ಕೆಲಸದಲ್ಲಿ ಅವರವರಿರುತ್ತಿದ್ದರು. ಹೀಗೆ ಸಾಮಾನ್ಯ ಜನದ ಜೀವನ ಒಟ್ಟಿನ ಮೇಲೆ ನೆಮ್ಮದಿಯಾಗಿತ್ತು.

ವ್ಯವಸಾಯಗಾರರನ್ನು ಬಿಟ್ಟರೆ ಗಣ್ಯವಾದ ಗುಂಪು ವೈಶ್ಯರದು. ಇವರ ಸಂಖ್ಯೆ ಗಣ್ಯವಾಗುವಷ್ಟು ದೊಡ್ಡದಾಗಿತ್ತು. ಅವರಲ್ಲಿ ಅನೇಕರು ಹಣವಂತರು. ಕೊಪ್ಪರದವರು, ಕಜ್ಜಾಯದವರು, ಪಚ್ಚಿನವರು, ಬಲಸಾ ಅವರು, ತವ್ವಾ ಅವರು, ನಂಬೂರಿಯವರು ಇವು ಪ್ರಸಿದ್ಧವಾದ ಕೋಮಟಿ ಮನೆತನಗಳು.

ಇವರಲ್ಲಿ ಅನೇಕ ಮಂದಿ ಧರ್ಮಿಷ್ಠರು. ಕೊಪ್ಪರದ ವರದಯ್ಯ ಎಂಬುವರು ದೊಡ್ಡ ಗಾರೆಮನೆ ಕಟ್ಟಿಸಿ ಗೃಹಪ್ರವೇಶದ ದಿನ ಆ ಮನೆಯಲ್ಲಿ ಬ್ರಾಹ್ಮಣ ಸಮಾರಾಧನೆ ಮಾಡಿಸಿದರು. ನಾನೂ ಊಟಕ್ಕೆ ಹೋಗಿದ್ದೆ.

ರಾಮಸ್ವಾಮಿ ಶೆಟ್ಟರು

ಮುಳುಬಾಗಲಿನಿಂದ ಐದಾರು ಮೈಲಿ ದೂರದಲ್ಲಿ ಕಪ್ಪಲಮಡುಗು ಎಂಬ ಹಳ್ಳಿಯಲ್ಲಿ ಕಾಪರ್ತಿ ರಾಮಸ್ವಾಮಿಶೆಟ್ಟರಿದ್ದರು. ಅವರು ಭಾರಿ ಸಾಹುಕಾರರು. ಅವರು ಮುಳುಬಾಗಲಿನ ಶ್ರೀಮದಾಂಜನೇಯ ದೇವಾಲಯದ ಪ್ರಾಕಾರದಲ್ಲಿರುವ ಶ್ರೀವೆಂಕಟರಮಣ ಸ್ವಾಮಿಯ ಗುಡಿಯಲ್ಲಿ ಆಜಾನುಬಾಹುವಾಗಿ ನಿಂತಿರುವ ಬೃಹತ್ ದೇವಮೂರ್ತಿಗೆ ಸೊಗಸಾದ ಕವಚವನ್ನು ಮಾಡಿಸಿಕೊಟ್ಟಿದ್ದಲ್ಲದೆ, ಆ ದೇವರ ಸಮೀಪದಲ್ಲಿ ಶ್ರೀ ಪದ್ಮಾವತಿ ದೇವಿಯ ವಿಗ್ರಹವಿರಬೇಕಾದದ್ದೆಂದು ಸಂಕಲ್ಪಿಸಿ, ದೇವಿಯ ಶಿಲಾ ವಿಗ್ರಹವನ್ನು ತಯಾರುಮಾಡಿಸಿ ಪ್ರತಿಷ್ಠೆ ಮಾಡಿಸಿದರು. ಕವಚ ಕಾರ್ಯವು ನಡೆಯುತ್ತಿದ್ದ ಕಾಲದಲ್ಲಿ ರಾಮಸ್ವಾಮಿ ಶೆಟ್ಟರು ಮುಳುಬಾಗಲಿನಲ್ಲಿಯೇ ತಂಗಿದ್ದು ಅಷ್ಟು ದಿನವೂ ಖುದ್ದಾಗಿ ಆ ಕಾರ್ಯಗಳು ನಡೆಯುತ್ತಿದ್ದದ್ದನ್ನು ತನಿಖೆ ಮಾಡಿದರು. ಅವರು ಅಲ್ಲಿದ್ದ ಕಾಲದಲ್ಲಿ ಸಂಜೆ ಸಂಜೆಯೂ ದೇವಸ್ಥಾನದಲ್ಲಿ ವಿದ್ವಾಂಸರ ಮಾತುಕತೆಯೋ ಸಂಗೀತವೋ ಭಜನೆಯೋ ನಡೆಯುತ್ತಿತ್ತು.

ಅಲ್ಲಿಂದ ಮೂರು ನಾಲ್ಕು ವರ್ಷಗಳ ತರುವಾಯ ರಾಮಸ್ವಾಮಿ ಶೆಟ್ಟರು ಕಪ್ಪಲ ಮಡುಗಿನಲ್ಲಿ ಸ್ವಗೃಹದಲ್ಲಿ ದೈವಾಧೀನರಾದರು. ಅವರ ವೈಕುಂಠದ ದಿವಸ ಭೋಜನ

ದಕ್ಷಿಣೆಗಳಿಗಾಗಿ ಮುಳುಬಾಗಲಿನಿಂದ ಬ್ರಾಹ್ಮಣರ ಗುಂಪು ಹೋಗಿತ್ತು. ನಾನು ಅದರಲ್ಲಿದ್ದೆ. ಒಂದು ದೊಡ್ಡಾಣೆ (ಎರಡಾಣೆಯ ಬೆಳ್ಳಿಯನಾಣ್ಯ) ಗಿಟ್ಟಿಸಿಕೊಂಡು ಬಂದದ್ದು ಚೆನ್ನಾಗಿ ಜ್ಞಾಪಕದಲ್ಲಿದೆ. ಅಮೇಲೆ ಮನೆಯಲ್ಲಿ ಒದೆಗಳನ್ನು ತಿಂದದ್ದೂ ಜ್ಞಾಪಕವಿದೆ. ಒದೆಗಳಿಗೆ ಕಾರಣ ನಾವು ವೈದಿಕರಲ್ಲವೆಂಬುದು. ವೈದಿಕರಿಗೆ ಸಲ್ಲಬೇಕಾದದ್ದಕ್ಕೆ ಲೌಕಿಕನು ಕೈಯೊಡ್ಡತಕ್ಕದ್ದಲ್ಲ. ನಾನು ಲೌಕಿಕ.

ಕೊಪ್ಪರದವರು ಕಟ್ಟಿಸಿದ ಒಂದು ದೊಡ್ಡ ಸತ್ರ ಊರಿನಲ್ಲಿ ಮಧ್ಯದಲ್ಲಿತ್ತು. ತವ್ವಾ ಅವರ ಸತ್ರ ಗುಡಿಯ ಬಳಿ ಉಂಟು. ತವ್ವಾ ಅವರು ಕಟ್ಟಿಸಿದ ಕಲ್ಲು ಕಟ್ಟಡದ ಬಾವಿಯೂ ಅವರು ಹಾಕಿಸಿದ ತೋಪೂ ಊರಿನಲ್ಲಿ ಎಲ್ಲರಿಗೂ ತಿಳಿದದ್ದು. ಬಲಸಾ ಅವರು ಕೋದಂಡರಾಮಸ್ವಾಮಿ ದೇವಸ್ಥಾನದ ಭಕ್ತರಾಗಿದ್ದರು.

ಕೋಮಟಿ ಪೇಟೆಯಲ್ಲಿ ಆಗಾಗ ಪುರಾಣ, ಹರಿಕಥೆಗಳು ನಡೆಯುತ್ತಿದ್ದವು. ಹೀಗೆ ಊರು ಶೋಭಾಯಮಾನವಾಗಿತ್ತು.

ಕೋಮಟಿಪೇಟೆಯ ಪೂರ್ವಕ್ಕೆ ಜ್ಯೋತಿನಗರದ ವೈಶ್ಯರ ಮನೆಗಳು. ಅವರಲ್ಲಿಯೂ ಧನಿಕರೂ ಧರ್ಮಿಷ್ಠರೂ ಇದ್ದರು. ಊರಿನ ಸಾಮಾಜಿಕ ಜೀವನದಲ್ಲಿ ಇವರೂ ಪ್ರಬಲರು.

ಮಾರಿಯ ಪೂಜೆ

ಒಂದಾನೊಂದು ವರ್ಷ ಊರಿನಲ್ಲಿ ಗ್ರಾಮದೇವತೆಯ ಉತ್ಸವ ಬಹು ಅಟ್ಟಹಾಸದಿಂದ ನಡೆಯಿತು. ಅದು ನಡೆದ ಸ್ಥಳ ಪೇಟೆಯ ಚೌಕ. ಅದು ನಡೆದ ಕಾಲದಲ್ಲಿ ನಾನು ಆಂಗ್ಲೊ ವೆರ್ನಾಕುಲರ್ ಸ್ಕೂಲಿನ ಒಂದು ಕೆಳತರಗತಿಯ ವಿದ್ಯಾರ್ಥಿ. ಸಣ್ಣವನಾಗಿದ್ದದ್ದರಿಂದ ನನ್ನನ್ನು ಉತ್ಸವ ಸ್ಥಳದ ಹತ್ತಿರಕ್ಕೆ ಹೋಗಗೊಡುತ್ತಿರಲಿಲ್ಲ. ಆದರೆ ಹದಿನೈದು ದಿನದಿಂದ ಊರಿನಲ್ಲಿ ಮನೆ ಮನೆಯಲ್ಲಿಯೂ ಅದರ ಮಾತು; ಬೀದಿ ಬೀದಿಯಲ್ಲಿಯೂ ಅದರ ಸಂಭ್ರಮ. ಉತ್ಸವದ ದಿವಸ ನಾನು ನನ್ನ ವಯಸ್ಸಿನ ಹುಡುಗರೊಡನೆ ಪೇಟೆ ಚೌಕದ ಚಾವಡಿಯ ಮಾಳಿಗೆಯ ಮೇಲೆಯೋ ಅಥವಾ ಆ ಪ್ರದೇಶದ ಯಾವುದೋ ಮನೆಯ ಮಾಳಿಗೆಯ ಮೇಲೆಯೋ ನೋಟಕ್ಕಾಗಿ ನಿಂತಿದ್ದೆ. ಬೆಳಗ್ಗೆ ಸುಮಾರು ಹನ್ನೊಂದು ಘಂಟೆ. ನಾಲ್ಕು ಬೀದಿಗಳಲ್ಲಿಯೂ ಸಾಸಿವೆಗೆ ಜಾಗವಿಲ್ಲದಂತೆ ಭರ್ತಿ ಜನ ಸೇರಿತ್ತು. ಗಂಡಸರೂ ಹೆಂಗಸರೂ ಇದ್ದರು, ಹಳ್ಳಿ ಹಳ್ಳಿಗಳಿಂದ ಬಂದಿದ್ದವರು. ನಾನಾ ಜಾತಿಗಳವರು. ಅನೇಕರು ಬೇವಿನ ಸೊಪ್ಪನ್ನು ಮೈಗೆ ಕಟ್ಟಿಕೊಂಡು ಕೈಯಲ್ಲಿ ತಂಬಿಟ್ಟು ದೀಪ ತೆಂಗಿನಕಾಯಿ ಹಣ್ಣುಗಳನ್ನೂ ಅರಿಶಿನ ಕುಂಕುಮಗಳನ್ನೂ ತಂದಿದ್ದರು. ಕೆಲವರು ಕೋಳಿ ಕುರಿಗಳನ್ನೂ ತಂದಿದ್ದರು. ಆ ದಿನ ಹತ್ತಿಪ್ಪತ್ತು ತಪಟೆಗಳೂ ತುತೂರಿಗಳೂ ಏಕಕಾಲದಲ್ಲಿ ಭೋರ್ಗರೆಯುತ್ತಿದ್ದವು. ಅದೆಷ್ಟು ತಪಟೆಗಳು! ಅದೇನು ಶಬ್ದ! ನಮ್ಮ ಎದೆಗಳಲ್ಲೆಲ್ಲ ಏನೋ ಭಯ ತುಂಬಿಕೊಂಡಿತ್ತು. ಏನೋ ಭಾರಿ ಅದ್ಭುತ ಭಯಂಕರಗಳು ನಡೆಯುತ್ತವೆಂದು ಎಲ್ಲರಿಗೂ ಎದೆ ಡವ ಡವಗುಟ್ಟತ್ತಿತ್ತು.

ರಣಬಲಿ

ಸುಮಾರು ಹನ್ನೆರಡು ಘಂಟೆಗೆ ರಣಬಲಿ. ಪೇಟೆಯ ಚೌಕದಲ್ಲಿ ಕಟ್ಟಿದ್ದ ವಿಶಾಲವಾದ ಹಸಿರುವಾಣಿ ಚಪ್ಪರದ ಕೆಳಗೆ ಮರದ ದಿಮ್ಮಿಯ ಯೂಪಸ್ತಂಭವನ್ನು ನೆಟ್ಟಿದ್ದರು. ಅಲ್ಲಿಗೆ ಬಲಿಪಶುವನ್ನು ಮೆರವಣಿಗೆಯಿಂದ ಕರೆತಂದರು. ಆ ಪಶು ಒಂದು ದೊಡ್ಡ ಕೋಣ. (ಎಮ್ಮೆ ಇದ್ದರೂ ಇರಬಹುದು.) ಆ ಕೋಣಕ್ಕೆ ಅರಿಶಿನ ಕುಂಕುಮಗಳೂ ದೊಡ್ಡ ದೊಡ್ಡ ಹೂವಿನ ಹಾರಗಳೂ ಒಂದು ವಿಶೇಷ ಕಳೆಯನ್ನು ತಂದಿದ್ದವು. ತಾಳಮೇಳಗಳ ಸಂಭ್ರಮವೂ ಸೇರಿತ್ತು. ಪಶುವನ್ನು ಗೊತ್ತಾಗಿದ್ದ ಸ್ಥಳಕ್ಕೆ ತಂದ ಮೇಲೆ ಏನಾಯಿತೆಂಬುದನ್ನು ನಾವು ಕಣ್ಣಿನಿಂದ ಕಾಣಲಾಗಲಿಲ್ಲ. ಕಿವಿಯಿಂದ ಕೇಳಿ ಊಹಿಸುವಂತಾಯಿತು. ಸ್ವಲ್ಪ ಘಂಟಾನಾದವೂ ಏನೇನೋ ಕೂಗುಗಳೂ ಆದ ಬಳಿಕ ಮಾಳಿಗೆಯ ಮೇಲಿದ್ದ ನಮಗೆ ಕೇಳಿಬಂದದ್ದು ಒಂದು ಅರಚಲು ಶಬ್ದ. “ಹೋ ಕಿಲ್ಲಲ್ಲಲ್ಲಲ್ಲೋ!” ಎಂದು. ಆ ಧ್ವನಿಯನ್ನು ಮಾರಿಯ ಭಕ್ತರು ಎತ್ತಿದಾಗ ಕೋಣವನ್ನು ಕಡಿಯುವವರು ಮಚ್ಚು ಕತ್ತಿಯನ್ನು ಮೇಲಕ್ಕೆತ್ತಿ ಯೂಪಸ್ತಂಭದ ಮೇಲಿಟ್ಟಿದ್ದ ಕೋಣನ ಕೊರಳನ್ನು ಹೊಡೆದು ಕತ್ತರಿಸಿದರು. ಹೀಗೆಂದು ನಮಗೆ ದೊಡ್ಡವರು ಹೇಳಿದರು. ಇನ್ನೂ ಏನೇನನ್ನೋ ಬಲಿಕೊಟ್ಟರು. ಮಾರಮ್ಮನಿಗೆ ತೃಪ್ತಿಯಾಯಿತು. ಊರಿಗೆ ಶಾಂತಿಯಾಯಿತು.

ಆಮೇಲೆ ಮೂರು ನಾಲ್ಕು ದಿನ, ಹುಡುಗರಾದ ನಾವು ಆ ಕಡೆ ಹೋಗಲಿಲ್ಲ. ಹೆದರಿ ಪುಕ್ಕಲುಬಿದ್ದು ಮನೆಗಳಲ್ಲಿ ಅಡಗಿಕೊಂಡಿದ್ದೆವು. ಬಳಿಕ ಕುತೂಹಲ ನಮ್ಮನ್ನು ಆ ಕಡೆಗೆಳೆಯಿತು. ರಕ್ತದ ಕಲೆಗಳ ಗಟ್ಟಿಕಟ್ಟಿ ಕಾಣುತ್ತಿದ್ದವು. ಬಹುಶಃ ಅದೇ ಕಡೆಯ ಸಾರಿಯ ‘ಊರ ದೇವರು’ ಎಂದು ತೋರುತ್ತದೆ.

ಪುರಂದರದಾಸರ ಹಾಡನ್ನು ಜ್ಞಾಪಕ ಮಾಡಿಕೊಳ್ಳಬಹುದು:

> ಊರ ದೇವರ ಮಾಡಬೇಕಣ್ಣಾ...

‘ಚಲ್ಲಮುದ್ದ’

ನಮ್ಮ ಊರಿನಲ್ಲಿ ಮಾರಿಯ ಗುಡಿಗಳು ನಾಲ್ಕೈದಿದ್ದವು. ನಮ್ಮ ಮನೆಗೆ ಸಮೀಪವಾಗಿ ಕೆರೆಗೆ ಹೋಗುವ ದಾರಿಯಲ್ಲಿ ಒಂದು ಮಾರಮ್ಮನ ಗುಡಿ ಇತ್ತು. ಮನೆಯಲ್ಲಿ ಮಕ್ಕಳಿಗೆ ಸಿಡುಬು ಬಂದಾಗ, ಯಾರಿಗಾದರೂ ಕಾಯಿಲೆ ಬಂದಾಗ, “ಚಲ್ಲಮುದ್ದ” ಇಟ್ಟು ಆ ಸಂಜೆ ಅದನ್ನು ತೆಗೆದುಕೊಂಡು ಹೋಗಿ ಮಾರಮ್ಮನ ಮುಂದೆ ಇರಿಸಿ ಬರುತ್ತಿದ್ದೆವು.

“ಚಲ್ಲಮುದ್ದ” ಎಂಬುದು ತೆಲುಗು ಮಾತು. ಅದನ್ನು ಕನ್ನಡದಲ್ಲಿ ತಂಪುಗೂಳು ಅಥವಾ ತಂಗೂಳು ಎಂದು ಹೇಳಬಹುದು. ಅದರ ವಿಧಾನ ಹೀಗೆ: ಮಡಿ ಉಟ್ಟು ಒಂದು ತಪ್ಪಲೆಯಲ್ಲಿ ಅನ್ನ ಮಾಡುವುದು, ನಡುಮನೆಯಲ್ಲಿ ಸಾರಿಸಿ ರಂಗವಲ್ಲಿ ಇಟ್ಟ ಕಡೆ ಒಂದು ಬಾಳೆ ಎಲೆ ಹರಡುವುದು, ಅದರ ಮೇಲೆ ಮಡಿ ಅನ್ನವನ್ನು ಹಾಕಿ ಕಟ್ಟೆ ಕಟ್ಟುವುದು. ಆ ಕಟ್ಟೆಯ ಒಳಗೆ ಈ ಪೂಜೆಗಾಗಿಯೇ ತೆಗೆದಿಟ್ಟ ಮೊಸರನ್ನು ಸುರಿಯುವುದು. ಇದಾದ ಮೇಲೆ ಈ ಕೂಳಿನ ಮುಂದೆ ಎರಡು ದೀಪ ಹೊತ್ತಿಸಿಡುವುದು. ಕೂಳಿನ ಕಟ್ಟೆಗೆ ಅರಿಶಿನ ಕುಂಕುಮ ಹಚ್ಚಿ ಪುಷ್ಪಾಕ್ಷತೆಗಳಿಂದ ಪೂಜೆಮಾಡುವುದು, ಧೂಪ ಹಾಕುವುದು. ನಮಸ್ಕಾರ ಮಾಡಿ ಅದನ್ನು ದೇವತೆಗೆ ಅರ್ಪಿಸುವುದು. ಹೀಗೆ ತಯಾರಾದದ್ದು ತಂಪುಗೂಳು. ಅದನ್ನು ಕೊಂಚ ಹೊತ್ತು ಹಾಗೆಯೇ ಬಿಟ್ಟಿದ್ದು ಬಳಿಕ ಅದನ್ನು ಗುಡಿಯ ಮಾರಮ್ಮನಿಗೆ ಒಪ್ಪಿಸಿ ಬರುವುದು. ಇದರಿಂದ ಮಾರಿಕಾದೇವಿ ಪ್ರಸನ್ನಳಾಗುತ್ತಾಳೆ. ಎಲ್ಲ ಕಾಯಿಲೆಗಳೂ, ಎಲ್ಲ ಉಪದ್ರವಗಳೂ, ಎಲ್ಲ ಅಶುಭಗಳೂ ತೊಲಗಿ ಮನೆಗೆ ಕ್ಷೇಮ ಉಂಟಾಗುತ್ತದೆ. ಹೀಗೆಂದು ಆ ಕಾಲದವರ ನಂಬಿಕೆ.

ರೋಣೂರು ವೆಂಕಟರಾಮ ಶಾಸ್ತ್ರಿಗಳು

ವೆಂಕಟರಾಮ ಶಾಸ್ತ್ರಿಗಳ ಸ್ಥಳ ಕೋಲಾರ ಜಿಲ್ಲೆಯ ಶ್ರೀನಿವಾಸಪುರ ತಾಲ್ಲೂಕಿನ ರೋಣೂರು. ವಯಸ್ಸಿನಲ್ಲಿ ಅವರು ನನಗಿಂತ ಐದಾರು ವರ್ಷ ದೊಡ್ಡವರು. ಸುಮಾರು ೧೮೯೭-೯೮ರಲ್ಲಿ ನನ್ನೊಡನೆ ಅವರು ಲೋವರ್ ಸೆಕಂಡರಿ ಪರೀಕ್ಷೆಗೆ ಬಂದಿದ್ದರು. ನಮ್ಮ ಪ್ರಾಂತಕ್ಕೆ ಲೋವರ್ ಸೆಕೆಂಡರಿ ಪರೀಕ್ಷೆಗೆ ಕೇಂದ್ರಸ್ಥಾನ ಕೋಲಾರ ಟೌನ್. ಮುಳುಬಾಗಲಿನಿಂದ ನಾನೂ ನನ್ನ ಸಹಾಧ್ಯಾಯಿಗಳು ಏಳೆಂಟು ಮಂದಿಯೂ, ಬಹುಶಃ ಮೇಷ್ಟರು ಸುಬ್ಬರಾಯರೂ ಕೋಲಾರಕ್ಕೆ ಬಂದು ನನ್ನ ತಾತನ ಮನೆಯಲ್ಲಿ ಬಿಡಾರ ಮಾಡಿದೆವು. ನನ್ನ ತಾತ ಲಾಯರು, ಮನೆ ವಿಶಾಲವಾಗಿತ್ತು. ಅಡಿಗೆ ಮಾಡಿ ಬಡಿಸಲು ಪರಮ ಪರಿಶುದ್ಧರಾದ ಹುದುಕಲು ದಾಸಂಭಟ್ಟರು ಸಿದ್ಧರಾಗಿದ್ದರು. ಯಾವ ಕೊರತೆಯೂ ಇರಲಿಲ್ಲ.

ನಾವು ಹೋಗಿ ಅಲ್ಲಿ ಸೇರಿದ ಮಾರನೆಯ ದಿನ ರಾತ್ರಿ ಎಂಟು ಘಂಟೆಯ ವೇಳೆಗೆ ರೋಣೂರು ವೆಂಕಟರಾಮ ಶಾಸ್ತ್ರಿಗಳೂ ಅಲ್ಲಿಗೆ ಬಂದರು. ವಿದ್ಯಾರ್ಥಿಗಳಾದ ನಾವೆಲ್ಲ ಹೊಗೆ ದೀಪದ ಸುತ್ತ ಕುಳಿತು ಪ್ರಶ್ನೋತ್ತರ ನಡಸುತ್ತಿದ್ದೆವು. ಆ ವೇಳೆಗೆ ಒಬ್ಬ ಹಿರಿಯರು ಅಲ್ಲಿಗೆ ದಯಮಾಡಿಸಿದರು. ನಮ್ಮ ತಾತನ ಕಕ್ಷಿಗಾರರಾದ ಚೇಳೂರು ರಾಮಸ್ವಾಮಯ್ಯಂಗಾರ್ಯರು.

ರುದ್ರಾಕ್ಷಿಯ ಮಹಿಮೆ

ರಾಮಸ್ವಾಮಯ್ಯಂಗಾರ್ಯರದು ಕೊಂಚ ಕುಚೋದ್ಯದ ಸ್ವಭಾವ. ನನಗೆ ಅವರ ಪರಿಚಯವಿತ್ತು, ಮತ್ತು ಅವರ ಹಾಸ್ಯದ ಮಾತಿನಲ್ಲಿ ಒಲವೂ ಇತ್ತು. ಅವರು ಬಂದು ನಮ್ಮಗಳ ನಡುವೆ ಕುಳಿತು ವೆಂಕಟರಾಮ ಶಾಸ್ತ್ರಿಗಳ ಕಡೆ ನೋಡಿದರು. ಶಾಸ್ತ್ರಿಗಳು ಕೊರಳಿನಲ್ಲಿ ಒಂದು ಗಜ್ಜಿಗದ ಕಾಯಿಗಿಂತ ದಪ್ಪವಾದ ರುದ್ರಾಕ್ಷಿಯನ್ನು ಧರಿಸಿದ್ದರು. ರಾಮಸ್ವಾಮಯ್ಯಂಗಾರ್ಯರು ರುದ್ರಾಕ್ಷಿಯನ್ನು ದಿಟ್ಟಿಸಿ ನೋಡಿ ಹೇಳಿದರು,

ರಾ: "ಇದೇನಯ್ಯ–ನಾಳೆ ಪರೀಕ್ಷೆಗೆ ಬರುತ್ತದೋ?"

ವೆಂ: (ಕಾಲು ಕ್ಷಣ ಕೂಡ ತಡ ಮಾಡದೆ) "ಓಹೋ: ಅದಿಲ್ಲದೆ ಏನು ನಡೆಯುತ್ತದೆ?"

ರಾ: "ಇದರಿಂದ ಏನಾಗುತ್ತದಯ್ಯ?"

ವೆಂ: "ಸ್ವಾಮಿ, ಇದರಿಂದ ನಿರ್ಭೀತಿ –ಏನು ಬೇಕಾದರೂ ಮಾಡಬಹುದು, ಇದರ ರಕ್ಷಣೆ ಇದ್ದರೆ."

ರಾ: "ಹಾಗಾದರೆ ನಾನು ಹೇಳುವುದನ್ನು ಮಾಡೀಯಾ?"

ವೆಂ: ಓಹೋ! ಏನು ಹೇಳಿದರೆ ಅದು."

ರಾ: "ಈಗ ಅಂತರಗಂಗೆಗೆ ಹೋಗಿ ಒಂದು ಪಂಚಪಾತ್ರೆ ನೀರನ್ನು ತಂದೀಯಾ?"

ವೆಂ: "ಅದೇನು ಕಷ್ಟ? ಈಗಲೇ ಹೊರಟೆ. ಬರುತ್ತೀರೋ ಜೊತೆಯಲ್ಲಿ? ನಾನೇನೋ ಹೋಗಿ ತಂದೇನು. ನೀವು 'ಇದು ಯಾರ ಮನೆಯ ನೀರೋ' ಎಂದರೆ ಸಾಕ್ಷಿ ಬೇಕಲ್ಲ? ನೀವು ಸಾಕ್ಷಿ ಬೇಡವೆಂದರೆ ನಾನು ಸಿದ್ಧ."

ರಾ: "ಏನಯ್ಯಾ ಪೀಕಲಾಟಕ್ಕೆ ಸಿಕ್ಕಿಸಿದೆ? ನೀನು ಒಬ್ಬನೇ ಹೋಗಿ ಬರಬೇಕೆಂದಲ್ಲವೆ ನಾನು ಹೇಳಿದ್ದು?"

ವೆಂ: "ನಾನು ಅದಕ್ಕೆ ಸಿದ್ಧ. ಒಬ್ಬನೇ ಹೋಗಿ ಬರುತ್ತೇನೆ. ನೀವು ಅದನ್ನು ಒಪ್ಪಿಕೊಳ್ಳುತ್ತೀರೋ, ಸುಳ್ಳು ಎನ್ನುತ್ತೀರೋ!"

ಈ ವಾಗ್ವಾದದಿಂದ ನಮಗೆಲ್ಲ ತುಂಬ ನಗು. ಶಾಸ್ತ್ರಿಗಳು ಎಂಥ ಧೈರ್ಯಶಾಲಿಗಳೆಂದು ಮೆಚ್ಚಿಕೆ. ರಾಮಸ್ವಾಮಯ್ಯಂಗಾರ್ಯರೇ ಅದನ್ನು ಮೆಚ್ಚಿಕೊಂಡು ಶಾಸ್ತ್ರಿಗಳಿಗೆ ಒಂದು ಪಾವಲಿ ದಕ್ಷಿಣೆ ಕೊಟ್ಟರು.

ವೆಂಕಟರಾಮ ಶಾಸ್ತ್ರಿಗಳು ಅಧ್ಯಯನ ಮಾಡಿದ್ದವರು. ಸಂಸ್ಕೃತ ಸಾಹಿತ್ಯವನ್ನು ಕಲಿತಿದ್ದವರು. ಬೆಂಗಳೂರಿನಲ್ಲಿ ಯಾವುದೋ ಹೈಸ್ಕೂಲಿನಲ್ಲಿ ಪಂಡಿತರಾಗಿದ್ದವರು. ಅವರ ಮನೆ ಶಂಕರಪುರದ ಮೂರನೆಯ ಅಡ್ಡರಸ್ತೆಯಲ್ಲಿ ಇತ್ತು.

‘ಟರ‍್ರಾವು’

ಶಾಸ್ತ್ರಿಗಳು ಹಾಸ್ಯಶೀಲರು. ೧೯೨೩ರ ಸುಮಾರಿನಲ್ಲಿ ಶಂಕರಮಠದಲ್ಲಿ ಒಂದು ದೊಡ್ಡ ಸಭೆ ಸೇರಿತ್ತು. ಕರ್ಪೂರ ಶ್ರೀನಿವಾಸರಾಯರು ಅಧ್ಯಕ್ಷರಾಗಿದ್ದರು. ಬಿ. ವೆಂಕಟನಾರಣಪ್ಪನವರೇ ಮೊದಲಾದ ಪ್ರಮುಖರು ಆ ಸಭೆಯನ್ನು ಸೇರಿಸಿದ್ದರು. ಹಿಂದೂ ಮಠಗಳ ನಿರ್ವಾಹ ವ್ಯವಸ್ಥೆಯಲ್ಲಿ ಆಗಬೇಕಾಗಿದ್ದ ಸುಧಾರಣೆಗಳನ್ನ ಕುರಿತು ಪರ್ಯಾಲೋಚಿಸುವುದು ಆ ಸಭೆಯ ಉದ್ದೇಶ. ಅಲ್ಲಿ ಭಾಷಣಗಳಾದುವು. ನಿರ್ಣಯಗಳಾದವು. ಆ ನಿರ್ಣಯಗಳನ್ನು ಸೂಚಿಸುವವರೂ ಅನುಮೋದಿಸುವವರೂ ತಮ್ಮ ಮಾತಿನಲ್ಲಿ ‘ಠರಾವು’ ಎಂಬ ಮಾತನ್ನು ಪದೇ ಪದೇ ಉಪಯೋಗಿಸಿದ್ದರು. ಠರಾವು ಎಂದರೆ ತೀರ್ಮಾನ, ನಿರ್ಣಯ ಸಭೆ ಮುಗಿವಿಗೆ ಬರುತ್ತಿದ್ದಾಗ ವೆಂಕಟರಾಮಶಾಸ್ತ್ರಿಗಳೆದ್ದು ನಿಂತು ಹೇಳಿದರು:

“ಸ್ವಾಮಿ, ನಿಮ್ಮ ಟರ‍್ರಾವುಗಳಿವೆಯಲ್ಲ, ಒಳ್ಳೊಳ್ಳೆಯ ಟರ‍್ರಾವುಗಳನ್ನು ಮಾಡಿದ್ದೀರಿ. ಈ ಟರ‍್ರಾವುಗಳಿಂದ ಏನಾಗುತ್ತದೆ ಸ್ವಾಮಿ?....”

ಅವರು ಕೈಗಳನ್ನು ಅಲ್ಲಾಡಿಸುತ್ತ ಆಭಾಸಗಂಭೀರವನ್ನಭಿನಯಿಸಿ ‘ಟರ‍್ರಾವು’ ಎಂದು ಹೇಳಿದ ರೀತಿಯನ್ನೂ ಅವರ ಮುಖಭಾವವನ್ನೂ ನೋಡಿ ನಗು ತಡೆಯಲಾಗಲಿಲ್ಲ. ಕರ್ಪೂರ ಶ್ರೀನಿವಾಸರಾಯರು ಮೊದಲಾಗಿ ಎಲ್ಲರೂ ಬಾಯಿಗೆ ಬಟ್ಟೆ ಮುಚ್ಚಿಕೊಂಡು ನಗುತ್ತಿದ್ದರು.

ಶಾಸ್ತ್ರಿಗಳು ಸಾತ್ತ್ವಿಕರು. ಸತ್ಕರ್ಮದಲ್ಲಿ ಶ್ರದ್ಧೆಯುಳ್ಳವರು. ಅಂಥವರು ಸಮಾಜದಲ್ಲಿದ್ದರೆ ಅದರಿಂದ ಸಮಾಜಕ್ಕೆ ಒಂದು ಕಳೆ.

ಪ್ಲೇಗ್ ಉಪದ್ರವ

ಮುಳುಬಾಗಲಿಗೆ ಪ್ಲೇಗ್ ವ್ಯಾಧಿ ಬಂದದ್ದು ಬಹುಶಃ ಮಿಕ್ಕೆಲ್ಲ ಊರುಗಳಿಗೂ ಬಂದಾದ ಮೇಲೆ ಕೋಲಾರಕ್ಕೆ ಬಂತು. ಬೌರಿಂಗ್‌ಪೇಟೆಗೆ ಬಂತು–ಎಂದು ತಿಳಿದಾಗ ಮುಳುಬಾಗಲು ಮಹಾಜನರು "ನಮ್ಮ ಊರಿನ ಪಶ್ಚಿಮಕ್ಕೆ ವಿರೂಪಾಕ್ಷ ಮಾರಮ್ಮನಿದ್ದಾಳೆ. ಬೆಟ್ಟದಲ್ಲಿ ನಾಚಾರಮ್ಮನಿದ್ದಾಳೆ. ಊರ ಮಧ್ಯದಲ್ಲಿ ರಣಬೇರಮ್ಮನಿದ್ದಾಳೆ. ಮೂಡಲ ಭಾಗದಲ್ಲಾದರೋ ಮಹಾನುಭಾವನಾದ ಆಂಜನೇಯಸ್ವಾಮಿ ಬಾಹುವನ್ನೆತ್ತಿ ನಿಂತಿದ್ದಾನೆ ಕಾವಲಾಗಿ. ಇಷ್ಟು ಮಂದಿಯ ರಕ್ಷಣೆ ನಮಗಿರುವಾಗ ನಮ್ಮನ್ನು ಯಾರು ಮುಟ್ಟಿಯಾರು?" –ಎಂದು ತಮಗೆ ತಾವೇ ಧೈರ್ಯ ಹೇಳಿಕೊಳ್ಳುತ್ತಿದ್ದರು.

ನಿವಾರೋಣೋಪಾಯಗಳು

ಆದರೆ ಮನುಷ್ಯನು ಹೊರಗಡೆ ಧೈರ್ಯದ ಧೋರಣೆಯನ್ನು ಎಷ್ಟು ಹೆಚ್ಚಾಗಿ ತೋರಿಸಿಕೊಳ್ಳುತ್ತಾನೋ ಅಷ್ಟು ಹೆಚ್ಚಾಗಿ ಅವನೊಳಗೇ ಅಧೈರ್ಯ ತುಂಬಿರುತ್ತದೆ. ಈ ಅಳುಕು ನಮ್ಮ ಹಿರಿಯರನ್ನೂ ಬಿಟ್ಟದ್ದಲ್ಲ.

ಕೆಲವು ಉಪಾಯಗಳನ್ನು ಚಿಂತಿಸಿದರು:

1. ಮನೆಮನೆಯ ಹೊರಬಾಗಿಲಮೇಲೂ, ದೇವರಮನೆ ಅಡಿಗೆಮನೆ ನಡುಮನೆಗಳ ಬಾಗಿಲುಗಳ ಮೇಲೂ ದೊಡ್ಡ ದೊಡ್ಡ ಮೂರು ನಾಮಗಳನ್ನು ತಿದ್ದತಕ್ಕದ್ದು. ಸುಣ್ಣದಿಂದ ಬಿಳಿಯ ಪಟ್ಟೆ, ಕೆಮ್ಮಣ್ಣಿನಿಂದ ಕೆಂಪು ಪಟ್ಟೆ. ಅದರ ಸುತ್ತಲೂ ಅರಿಶಿನ ಕುಂಕುಮ. ಇದನ್ನು ಕಂಡ ಕೂಡಲೆ ಪ್ಲೇಗ್ ಮಾರಿಯ ಪಲಾಯನ.
2. ಬಾಗಿಲು ಬಾಗಿಲ ಮೇಲೂ “ಆಸ್ತಿಕ” ಎಂದು ಬರೆಯತಕ್ಕದ್ದು. ಆಸ್ತಿಕ ಮಹರ್ಷಿಯ ಹೆಸರನ್ನು ನೋಡುತ್ತಲೇ ಪ್ಲೇಗ್ ಮಾರಿ ಓಟ ಕೀಳುತ್ತಾಳೆ.
3. ಮನೆ ಮನೆಯಲ್ಲಿಯೂ ಭಜನೆ. ಆದರೆ ಪ್ರತಿಯೊಂದು ಮನೆಯಲ್ಲಿಯೂ ಪ್ರತಿದಿನವೂ ಭಜನೆಯಾಗುವುದು ಕಷ್ಟ. ಆದದ್ದರಿಂದ ಬೀದಿಗೆ ಒಬ್ಬರ ಮನೆಯಲ್ಲಿ, ಒಂದೊಂದು ದಿನ ಒಬ್ಬಬ್ಬರ ಮನೆಯಲ್ಲಿ.
4. ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ದೀಪಾರಾಧನೆ, ಭಜನೆ ಮಾಡಿಕೊಂಡು ಹೋಗುವುದು.

ಸಾಹಿತ್ಯ ರಚನೆ

ಈ ಭಜನೆಯ ಸಂಭ್ರಮದಲ್ಲಿ ಅನೇಕ ಕೃತಿಗಳು ತಯಾರಾದವು. ಅದರಲ್ಲಿಯೂ ವೈಶ್ಯ ಸಮಾಜದಲ್ಲಿ ಈ ಭಜನೆಯ ಕೋಲಾಹಲ ವಿಶೇಷವಾಗಿತ್ತು. ಅವರ ಪೇಟೆಯ ಭಜನೆ ಮಂಡಲಿಯೇ ಬೇರೆ. ಅದು ಹಾಡುತ್ತಿದ್ದ ಹಾಡುಗಳಲ್ಲಿ ಮುಖ್ಯವಾದದ್ದು,

> ಕೋದಂಡರಾಮ ಕೋದಂಡರಾಮ
> ಕೋದಂಡರಾಮ ಪಾಹಿ ಕೋದಂಡರಾಮ
> ಮಾ ದಂಡಂ ಮೀಕು ಮೀ ದಂಡಂ ಮಾಕು
> ಕೋದಂಡರಾಮ ಪಾಹಿ ಕೋದಂಡರಾಮ
> ಪಟ್ಟಾಭಿರಾಮ ಪಟ್ಟಾಭಿರಾಮ
> ಘಟ್ಟೀಗಾ ಪಾದಂ ಪಟ್ಟೀತಿರಾ

ಇದನ್ನು ನೋಡಿ ಇನ್ನೊಂದು ಗುಂಪಿನವರು ಪ್ರತಿಹಾಡು ಕಟ್ಟಿದರು:

> ಶೇರು ಪಾಲುಕು ಶೇರು ನೀಳ್ಳು ಕಲಿಶೇನಮ್ಮ
> ರೂಪಾಯ್ಕು ರೂಪಾಯಿ ದೊರಿಕಾನಮ್ಮ

ಹೀಗೆ ಭಯದ ನಡುವೆ ಹಾಸ್ಯಕಲ್ಪನೆ ಮಾಡಿಕೊಂಡು ಜನ ಬದುಕಿದರು.

ಈ ಭಜನೆ ಗುಂಪುಗಳು ಊರಿನಿಂದ ಎರಡು ಮೂರು ಮೈಲಿ ದೂರದಲ್ಲಿದ್ದ ವಿರೂಪಾಕ್ಷಿಹಳ್ಳಿಗೆ ಮಂಗಳವಾರ ಮಂಗಳವಾರವೂ ಹೋಗುತ್ತಿದ್ದವು. ಆ ಮಾರೆಮ್ಮನ ಗುಡಿ ಎಲ್ಲ ಮಾರೆಮ್ಮನ ಗುಡಿಗಳಂತೆಯೇ ಒಂದು ಸಾಮಾನ್ಯ ಮಂಟಪ. ಆದರೆ ಹಳೆಯದು. ನಾಲ್ಕು ಕಡೆಯೂ ಗೋಡೆ, ಮುಂದುಗಡೆ ಬಾಗಿಲು ಎಲ್ಲ ಇದ್ದವು. ಮಾರೆಮ್ಮನ ಮೂರ್ತಿಯಾದರೋ ಒಂದು ಕಲ್ಲು ದಿಮ್ಮಿಯ ಕಂಬ. ಅದಕ್ಕೆ ಪಳಪಳನೆ ಹೊಳೆಯುವ ಹಿತ್ತಾಳೆಯ ಮುಖವಾಡ. ರಾಶಿ ರಾಶಿ ಹೂವು, ಅರಿಶಿನ ಕುಂಕುಮ, ಇದು ನಮ್ಮ ದೇಶದಲ್ಲಿ ಸಾಮಾನ್ಯವಾಗಿ ಎಲ್ಲ ಕಡೆಯೂ ಇರತಕ್ಕದ್ದೇ. ವಿರೂಪಾಕ್ಷಿಯಲ್ಲಿ ವಿಶೇಷವೇನೆಂದರೆ "ಉಟ್ಮೆ ಹೊಡೆಯುವುದು." ಇದು ಅಲ್ಲಿಯ ರಥೋತ್ಸವದ ಜಾತ್ರೆಯಲ್ಲಿ ಆಕರ್ಷಕವಾದ ಸಂಗತಿ.

ಉಟ್ಟು

ಉಟ್ಟು ಎಂದರೆ ಹೀಗೆ: ಒಂದು ಎತ್ತರವಾದ ಕಲ್ಲುಕಂಬ. ಅದರ ಮೇಲುಗಡೆ ಒಂದು ಮರದ ಚೌಕಟ್ಟು, ಕಬ್ಬಿಣದ ಗೂಟ. ಆ ಗೂಟದ ಕೆಳಗೆ, ಆ ಚೌಕಟ್ಟಿನ ಕೆಳತಳದ ಮಧ್ಯೆ ಒಂದು ರಂಧ್ರವನ್ನು ಕೊರೆದಿರುತ್ತದೆ. ಕಲ್ಲು ಕಂಬದ ಮೇಲುಗಡೆ ಒಂದು ಕಬ್ಬಿಣದ ಗಡಾರಿಗೆ ಆ ರಂಧ್ರದ ಮೂಲಕ ಚೌಕಟ್ಟನ್ನು ಸಿಕ್ಕಿಸಿರುತ್ತದೆ. ಚೌಕಟ್ಟಿನಿಂದ ನಾಲ್ಕು ಹಗ್ಗಗಳನ್ನು ಇಳಿಬಿಟ್ಟಿರುತ್ತದೆ. ಚೌಕಟ್ಟಿನ ಒಂದು ಮೂಲೆಗೆ ಒಂದು ದೊಡ್ಡ ಹಗ್ಗವನ್ನು ಕಟ್ಟಿ ನೆಲದ ಮೇಲಿರುವ ಒಬ್ಬ ಮನುಷ್ಯ ಹಗ್ಗವನ್ನು ಹಿಡಿದು ಕಂಬದಿಂದ ಹದಿನೈದಿಪ್ಪತ್ತು ಅಡಿ ದೂರದಲ್ಲಿ ಸುತ್ತೂರ ಸುತ್ತುತ್ತಾನೆ. ಅವನು ಸುತ್ತಿದಂತೆ ಆ ಮೇಲಣ ಚೌಕಟ್ಟು ಸುತ್ತುತ್ತದೆ. ಅವನು ಎಷ್ಟೆಷ್ಟು ಬೇಗ ಬೇಗ ಸುತ್ತಿದರೆ ಆ ಚೌಕಟ್ಟು ಅಷ್ಟಷ್ಟು ಬೇಗ ಬೇಗ ಸುತ್ತುತ್ತದೆ. ಹಾಗೆ ತಿರುಗುವಾಗ ಆ ಚೌಕಟ್ಟಿನಿಂದ ಇಳಿಬಿಟ್ಟ ನಾಲ್ಕು ಹಗ್ಗಗಳೂ ಸುತ್ತೂರ ತಿರುಗುತ್ತವೆ. ಈ ನಾಲ್ಕು ಹಗ್ಗಗಳ ಕೆಳ ಕೊನೆಯಲ್ಲಿ ತೆಂಗಿನಕಾಯಿಗಳನ್ನು ಕಟ್ಟಿರುತ್ತದೆ. ಈ ತೆಂಗಿನಕಾಯಿಗಳನ್ನು ಕಟ್ಟಿರುವವರು ಭಕ್ತರುಗಳು. ಕಾಯಿಗಳು ಹಾಗೆ ಪ್ರದಕ್ಷಿಣಾಕಾರವಾಗಿ ಹೋಗುತ್ತಿರುವಾಗ ಕೆಳಗಡೆ ಮೂರು ನಾಲ್ಕು ಮಂದಿ ಭಾರಿ ದೊಣ್ಣೆಗಳನ್ನೆತ್ತಿ ನಿಂತಿರುತ್ತಾರೆ. ಈ ದೊಣ್ಣೆಗೂ ಮೇಲೆ ಸುತ್ತುತ್ತಿರುವ ತೆಂಗಿನಕಾಯಿಗಳಿಗೂ ಲಟಾಪಟಿ ಆಗಬೇಕು. ಆಗ ತೆಂಗಿನಕಾಯಿ ಚೂರುಚೂರಾಗಿ ಒಡೆದು ಚೂರುಗಳು ಕೆಳಕ್ಕೆ ಬೀಳುತ್ತವೆ. ಅದೇ ಭಕ್ತರಿಗೆ ವರಪ್ರಸಾದ.

ಹಳ್ಳಿಯ ಜನಕ್ಕೆ ಇದೊಂದು ದೊಡ್ಡ ವಿನೋದ. ತೆಂಗಿನಕಾಯಿ ಒಡೆದದ್ದರ ಚೂರನ್ನು ನೋಡಿ ಗಾದೆ ಹುಟ್ಟಿಕೊಂಡಿತು: “ತಂಟೆ ಮಾಡಿದರೆ ತಲೆ ಉಟ್ಟು ಹೊಡಿಸಿ ಬಿಟ್ಟೇನು” ಎಂದು. ಈ ಉಟ್ಟಿನ ಉತ್ಸವದ ಜೊತೆಗೆ ತಂಬಿಟ್ಟಿನ ದೀಪಗಳು, ತಮಟೆಯ ವಾದ್ಯ ಮೇಳ–ಎಲ್ಲವೂ ಇತ್ತು. ಇದರ ಜೊತೆಗೆ ಹಿಂದೆ ಹೇಳಿದ ‘ಚಲ್ಲಮದ್ದ’ ಒಂದು ವಿಶೇಷ. ಕಾಯಿಲೆಯವರಿರುವ ಮನೆಯಲ್ಲಿಯೂ ಮಕ್ಕಳಿರುವ ಮನೆಯಲ್ಲಿಯೂ ಮಂಗಳವಾರ ಶುಕ್ರವಾರಗಳಲ್ಲಿ ಈ ಪೂಜೆ. ಬಿಸಿಬಿಸಿ ಅನ್ನ ಮಾಡುವುದು, ದೊಡ್ಡ ದೊಡ್ಡ ಎಲೆಗಳಲ್ಲಿ ಆ ಅನ್ನದಿಂದ ಕಟ್ಟೆ ಮಾಡುವುದು, ನಡುವೆ ಮೊಸರು ಸುರಿಯುವುದು. ಇದಕ್ಕೆ ಅರಿಶಿನ ಕುಂಕುಮದ ಪೂಜೆ. ಇದೇ ಗಂಗಮ್ಮನ ಅಥವಾ ಮಾರೆಮ್ಮನ ಪ್ರತೀಕ. ಕೊಂಚ ಹೊತ್ತಾದ ಮೇಲೆ ಈ ಕೂಳನ್ನು ಮಾರೆಮ್ಮನ ಗುಡಿಯಲ್ಲಿ ಸಮರ್ಪಣೆಮಾಡಿ ಕೈಮುಗಿದು ಬರುವುದು.

ಇಂಥ ಕೂಳಿನ ರಾಶಿ ವಿರೂಪಾಕ್ಷಪುರದಲ್ಲಿ ಸಣ್ಣ ಬೆಟ್ಟದಂತೆ ಬೀಳುತ್ತಿತ್ತು. ಇದು ಐವತ್ತು ಅರವತ್ತು ವರ್ಷಗಳ ಹಿಂದಿನ ಮಾತು.

ನಾಚಾರಮ್ಮ

ನಾಚಾರಮ್ಮ ಎಂಬುದು ಮಹಾಲಕ್ಷ್ಮಿಯ ತಮಿಳು ಹೆಸರೆಂದು ತೋರುತ್ತದೆ: ನಾಚ್ಚಿಯಾರ್. ನಾಚಾರಮ್ಮ ಗುಡಿ ಇರುವುದು ಒಂದು ಗವಿಯಲ್ಲಿ. ಮುಳಬಾಗಲು ಬೆಟ್ಟದ ತಳಭಾಗದಲ್ಲಿ ಆಗ್ನೇಯ ಪ್ರದೇಶದಲ್ಲಿ ಒಂದು ಗುಹೆಯುಂಟು. ಅದರಲ್ಲಿ ತುಂಬ ಕತ್ತಲು. ಅದರಲ್ಲಿ ಹಿಂದುಗಡೆ ಗೋಡೆಯ ಮೇಲೆ ನಾಚಾರಮ್ಮನ ಮೂರ್ತಿ, ಗುಹೆಯ ಮುಂದುಗಡೆ ಒಂದೆರಡು ಮಂಟಪಗಳುಂಟು. ನಾಚಾರಮ್ಮನ ಸನ್ನಿಧಿಗೆ ತಂಬಿಟ್ಟಿನ ದೀಪಗಳನ್ನು ಹೊತ್ತು ಹೋಗುವುದುಂಟು. ಅಲ್ಲಿಯೂ ಆಗಾಗ ಪೂಜೆ ಉತ್ಸವಗಳು ನಡೆಯುವುವು.

ರಣಭೇರಮ್ಮ

ಇದು ಊರ ನಡುವೆ ಇರುವ ಒಂದು ಸಾಮಾನ್ಯವಾದ ಗುಡಿ. ಅಲ್ಲಿಯ ಪೂಜಾ ಮೂರ್ತಿ ಏಳೆಂಟು ಅಡಿ ಎತ್ತರದ ಕಲ್ಲುಕಂಬ-ಮೂಲೆಮೂಲೆಯದು. ಕಂಬದ ಮೇಲುಗಡೆ ಚಚ್ಚೌಕವಾದ ನಾಲ್ಕು ಪಕ್ಕಗಳು. ಆ ಚಚ್ಚೌಕವಾದ ಮೇಲೆ ಒಂದು ಗುಂಡಾದ ಗುಪ್ಪೆ. ಭಕ್ತರು ಯಾರೋ ರಣಭೇರಮ್ಮನಿಗೆ ಒಂದು ಮುಖವಾಡ ಮಾಡಿಸಿ ಕೊಟ್ಟಿದ್ದರು.

ಈ ದೇವತೆಯ ಮಹಿಮೆ ಬಹಳ ದೊಡ್ಡದು. ಆಕೆಗೆ ಪ್ರತಿ ಶುಕ್ರವಾರವೂ ಪ್ರತಿ ಮಂಗಳವಾರವೂ ಹರಿದ್ರಾಭಿಷೇಕ. ಸ್ಕೂಲುಗಳಿಗೆ ಸಮೀಪದಲ್ಲಿದ್ದದ್ದರಿಂದ ನಾವು ಕ್ಲಾಸುಗಳನ್ನು ಮೇಷ್ಟರಿಗೆ ಬಿಟ್ಟು ರಣಭೇರಮ್ಮನ ವೈಭವವನ್ನು ನೋಡುತ್ತಿದ್ದೆವು. ಪೂಜಾಕಾಲದಲ್ಲಿ ಓಲಗ ನಡೆಯುತ್ತಿತ್ತು. ಆ ಓಲಗಕ್ಕೆ ಅನುಸಾರವಾಗಿ ನಮ್ಮ ಹಾಡು,

ಹಾಹಾ ಹೂಹೂ ರಣಭೇರಿ
ಹೂಹೂ ಹಾಹಾ ರಣಭೇರಿ
ಹೋ ಹೋ ಹೂಹೂ ರಣಭೇರಿ
ಹೂ ಹೂ ಹೋ ಹೋ ರಣಭೇರಿ
ರಣಭೇರೀ ರಣಭೇರೀ

ಇಷ್ಟೇ. ಇದನ್ನು ಮೇಳಗಾನ ಊದಿದ್ದೂ ಊದಿದ್ದೇ, ನಾವು ಹಾಡಿದ್ದೂ ಹಾಡಿದ್ದೇ. ಗೋಡೆಗಳ ಮೇಲೂ ಕುಳಿತು ನೋಡುತ್ತಿದ್ದೆವು.

ದೈವಾವೇಶ

ನಮ್ಮ ಉತ್ಸಾಹ ಸಂಭ್ರಮದ ಅತ್ಯುನ್ನತಿಯೆಂದರೆ “ಅಮ್ಮನವರು ಮೈ ಮೇಲೆ ಬರುವುದು.” ಗುಂಪಿನಲ್ಲಿದ್ದ ಒಬ್ಬನು ಮೊದಲು ಕೈಸೆಳೆದುಕೊಳ್ಳುವನು. ಆಮೇಲೆ ಕೈಕಾಲುಗಳಲ್ಲಿ ಅದಿರು ತೋರುವುದು. ಅನಂತರ ಅವನು ನೆಲದ ಮೇಲೆ ಧೊಪ್ಪನೆ ಬೀಳುವನು. ಪಕ್ಕದಲ್ಲಿದ್ದವರು ಅವನನ್ನು ಎತ್ತಿ ನಿಲ್ಲಿಸುವರು. ಆ ವೇಳೆಗೆ ಅರ್ಚಕನು ತೀರ್ಥವನ್ನು ತಂದು ಅವನ ತಲೆಯ ಮೇಲೆ ಪ್ರೋಕ್ಷಿಸಿ ಹೂವಿನ ಹಾರವನ್ನು ಅವನ ಕೊರಳಿಗೆ ಹಾಕಿ, ಅರಿಶಿನ ಕುಂಕುಮಗಳನ್ನು ಅವನ ತಲೆಯ ಮೇಲೆ ಎರಚುವನು. ಆಗ ಮೈಮೇಲೆ ಬಂದವನು ಕೈಕಾಲುಗಳನ್ನು ಈ ಕಡೆಗೂ ಆ ಕಡೆಗೂ ಝಾಡಿಸುತ್ತ ದೇವರ ಮುಂದೆ ನಿಲ್ಲುವನು. ಮಂಗಳಾರತಿ ಕರ್ಪೂರಾರತಿಗಳು ಬೇಕಾದಷ್ಟು ನಡೆಯುವುವು. ಭಕ್ತರು ಪಾನಕವನ್ನೂ ನೀರುಮಜ್ಜಿಗೆಯನ್ನೂ ಕೊಡುವರು. ಅವನು ಅವನ್ನು ಕೊಂಚ ಕೊಂಚ ಸೇವಿಸುವನು. ಎಲ್ಲರಿಗೂ ಹೆದರಿಕೆ. ಏನೋ ಭಯ. ಧೈರ್ಯಸ್ಥರಾದ ಒಬ್ಬಿಬ್ಬರು ಅವನೆದುರಿಗೆ ನಿಂತು ಕೇಳುವರು:

ಅವರು: “ನೀನು ಯಾರು? ನಿನಗೆ ಏನು ಬೇಕು?”

ಆತ: “ನಾನು ಯಾರು ತಿಳಿಯದೆ? ನಿಮಗೆಲ್ಲ ತಾಯಿ ನಾನು. ನಿಮ್ಮನ್ನು ಕಾಪಾಡುವವಳು. ಎಲ್ಲಿ ನನ್ನ ಶೂಲ?”

ಅಕ್ಕ-ತಂಗಿ

ಆಗ ಅರ್ಚಕನು ಅಮ್ಮನವರ ಹತ್ತಿರ ಇದ್ದ ಕಬ್ಬಿಣದ ತ್ರಿಶೂಲವನ್ನು ತಂದು ಅವನಿಗೆ ಕೊಡುವನು. ಆವೇಶ ಬಂದವನು ಆ ಶೂಲವನ್ನು ಹಿಡಿದು ಅಲ್ಲಿಂದ ತೆರಳುವನು. ಅವನ ಹಿಂದೆ ಗುಂಪು. ವಾಲಗದವರ ಓಟ. ಹೀಗೆ ಅವನು ಊರ ನಡುವೆ ಹೊರಟು ಬೆಟ್ಟದ ಕಡೆಗೆ ನುಗ್ಗುವನು. ನಾಚಾರಮ್ಮನ ಗುಡಿಯನ್ನು ಸೇರುವ ವೇಳೆಗೆ ಕೈಕಾಲು ಕುಸಿದುಹೋಗುತ್ತಿತ್ತೆಂದು ತೋರುತ್ತದೆ. ಅಲ್ಲಿ ಅವನು ನೆಲದ ಮೇಲೆ ಬಿದ್ದುಬಿಡುವನು. ಅದೇ ನಮಸ್ಕಾರ ರಣಭೇರಮ್ಮ. ಈಗ ತನ್ನ ಅಕ್ಕ ನಾಚಾರಮ್ಮನೊಡನೆ ಸೇರಿಕೊಂಡಳು. “ತಂಗಿ ಅಕ್ಕನೊಡನೆ ಸೇರಿದಳು.”

ಶೂಲ

ಶೂಲದ ಒಂದೊಂದು ಅಗ್ರಕ್ಕೂ ಒಂದೊಂದು ನಿಂಬೆಹಣ್ಣು; ಅರಿಶಿನ ಕುಂಕುಮ ಹೂವು. ಆ ಶೂಲವನ್ನು ನಾನು ಚೆನ್ನಾಗಿ ನೋಡಿದ್ದೇನೆ. ಅದು ಸಾಮಾನ್ಯವಾದ ಶೂಲವಾಗಿದ್ದದ್ದು ಭೂತಾಕಾರವಾಗಿ ಬೆಳೆಯಿತು. ನನಗೆ ತೋರುತ್ತದೆ, ಸುಮಾರು ನಾಲ್ಕೈದಡಿ ಅಗಲ, ಐದಾರಡಿ ಎತ್ತರ. ಆ ತ್ರಿಶೂಲಗಳಲ್ಲಿ ಒಂದೊಂದು ಶೂಲವೂ ಮೂರು ಮೂರು ಶಾಖೆಗಳನ್ನು ತಳೆದು, ಆ ಮೂರರಲ್ಲಿ ಒಂದೊಂದು ಮೂರು ಮೂರಾಗಿ ಬೆಳೆದು ಹಬ್ಬಿಕೊಂಡಿತ್ತು; ಒಂದು ದೊಡ್ಡ ಬಳ್ಳಿಗಳ ಸ್ಕ್ರೀನಿನಂತಾಗಿತ್ತು. ಎಲ್ಲ ಕಬ್ಬಿಣ. ಅದೇ ಊರಿನ ರಾಯಪ್ಪಾಚಾರ್ರೋ ಪುಟ್ರಸ್ವಾಮಾಚಾರ್ರೋ ಮಾಡಿದ್ದು. ಕಟ್ಟುಮಸ್ತಾದ ಆಳು ಎರಡು ಕೈಯಿಂದಲೂ ಎತ್ತಿದರೆ ನೆಲದಿಂದ ಮೇಲಕ್ಕೆ ಎತ್ತಬಹುದಾಗಿತ್ತು. ಇಷ್ಟು ಭಾರವಾದ ಆ ಕಬ್ಬಿಣದ ಆಯುಧವನ್ನು ಆವೇಶಪುರುಷನು ರಣಭೇರಮ್ಮನ ಆಯುಧವೆಂದೂ ಲಾಂಛನವೆಂದೂ ನಂಬಿ ಎತ್ತಿ ಓಡುತ್ತಿದ್ದದ್ದು ನಮಗೆ ಆಶ್ಚರ್ಯವನ್ನುಂಟುಮಾಡುತ್ತಿತ್ತು.

ಇಂಥಾದ್ದು ನಮ್ಮ ಊರಿನಲ್ಲಿ ಮೊದಲನೆಯ ಪ್ಲೇಗಿನ ಕಾಲ.

ರಥೋತ್ಸವಗಳು

ಮುಳಬಾಗಲಿನಲ್ಲಿ ವೈಶಾಖಮಾಸದಲ್ಲಿ ಆಂಜನೇಯ ದೇವಾಲಯದಲ್ಲಿ ಶ್ರೀರಾಮ ರಥೋತ್ಸವ. ಫಾಲ್ಗುಣದಲ್ಲಿ ಕೋದಂಡರಾಮರ ರಥೋತ್ಸವ. ಮತ್ತೆ ಯಾವಾಗಲೋ ವಿಠ್ಠಲೇಶ್ವರ ರಥೋತ್ಸವ. ಇವು ಸಂಭ್ರಮಕ್ಕೆ ಕಾರಣವಾಗಿದ್ದವು. ಆಂಜನೇಯ ರಥೋತ್ಸವ ಇದರಲ್ಲೆಲ್ಲ ದೊಡ್ಡದು. ದೊಡ್ಡ ಪರಿಷೆ ಸೇರುತ್ತಿತ್ತು. ಹಳ್ಳಿಗಳಿಂದ ಕೋಲಾಟದವರ ತಂಡಗಳು ಬಂದು ಕೋಲಾಟವಾಡಿದ್ದನ್ನು ನಾನು ನೋಡಿದ್ದೇನೆ. ಅದು ಬೆಳದಿಂಗಳ ರಾತ್ರಿ. ಆ ಕೋಲಾಟವನ್ನು ನೋಡಿದರೆ ಜನತೆಯಲ್ಲಿ ಸಮಾಧಾನವೂ ಉತ್ಸಾಹವೂ ತುಳುಕಾಡುತ್ತಿದ್ದದ್ದು ಸ್ಪಷ್ಟವಾಗುತ್ತಿತ್ತು. ಕೆಲವು ಕಾಲ ಸೋಮೇಶ್ವರ ಸ್ವಾಮಿಯ ರಥೋತ್ಸವವೂ ಬಹು ವಿಜೃಂಭಣೆಯಿಂದ ನಡೆಯಿತು. ಮೋಕ್ಷಗುಂಡಂ ವೆಂಕಟೇಶಯ್ಯನವರು ಅಮಲ್ದಾರರಾಗಿದ್ದಾಗ ಅವರ ಪ್ರಯತ್ನದಿಂದ ಈ ಪುರಾತನ ಶಿವಾಲಯವು ಜೀರ್ಣೋದ್ಧಾರ ಪಡೆಯಿತು. ಅವರು ಅಲ್ಲಿಯ ಪುಷ್ಕರಿಣಿಯನ್ನು ದುರಸ್ತು ಮಾಡಿಸಲು ಪ್ರೋತ್ಸಾಹ ಕೊಟ್ಟರು.

ವೆಂಕಟೇಶಯ್ಯನವರು

ಮೋಕ್ಷಗುಂಡಂ ವೆಂಕಟೇಶಯ್ಯನವರು ದಿವಾನ್ ವಿಶ್ವೇಶ್ವರಯ್ಯನವರ ಜ್ಞಾತಿ ಸಹೋದರರು. ದರ್ಶನೀಯವಾದ ಆಕಾರ. ಆಳು ಎತ್ತರ, ಮುಖದ ಮೇಲೆ ಸೊಗಸಾದ ಗಿರಿಜಾ ಮೀಸೆ. ಬಣ್ಣ ಸುಮಾರು ಕಪ್ಪು. ಒಳ್ಳೆಯ ಠೀವಿಯ ಮನುಷ್ಯ; ಸರಸಿ.

ಅವರನ್ನು ನಾನು ಕೃತಜ್ಞತೆಯಿಂದ ಸ್ಮರಿಸಬೇಕಾದ ಕಾರಣ ಒಂದಿದೆ. ನಾನು ಹೈಸ್ಕೂಲು ತರಗತಿಯ ವಿದ್ಯಾರ್ಥಿಯಾಗಿದ್ದಾಗ ಅವರು ನನ್ನನ್ನು ಬಳಿಗೆ ಕರೆದು ಪ್ರೀತಿಯಿಂದ ಮಾತನಾಡಿಸಿದರು. ಕೊಂಚ ಮಾತುಕಥೆ ನಡೆದ ಬಳಿಕ ಅವರು ಹೇಳಿದರು:

"ನೀನು ಅವಶ್ಯವಾಗಿ ಓದಬೇಕಾದ ಗ್ರಂಥ ಒಂದಿದೆ. ಅದನ್ನು ನಾನು ನಿನಗೆ ಕೊಡುತ್ತೇನೆ. ಓದಿ ನನಗೆ ಹೇಳು."

ಹೀಗೆನ್ನುತ್ತಾ ಒಂದು ಪುಸ್ತಕವನ್ನು ನನ್ನ ಕೈಗೆ ಕೊಟ್ಟರು. ಅದು 'The Trial and Death of Socrates' ಎಂಬ ಪ್ಲೇಟೋ ತತ್ತ್ವಜ್ಞನ ಕೃತಿ. ಅದನ್ನು ಗ್ರೀಕ್ ಭಾಷೆಯಿಂದ ಇಂಗ್ಲಿಷಿಗೆ ಪರಿವರ್ತನೆ ಮಾಡಿದ್ದವನು ಬಹುಶಃ ಚರ್ಚ್ ಎಂಬಾತ. ಆಗ್ಗೆ ಅದು ಕನ್ನಡಕ್ಕೆ ಬಂದಿರಲಿಲ್ಲ. ವೆಂಕಟೇಶಯ್ಯನವರು ಕೊಟ್ಟ ಗ್ರಂಥವನ್ನು ಓದಿದೆ. ಅಂದಿನಿಂದ ಈ ಹೊತ್ತಿನವರೆಗೂ ನಾನು ಆ ಗ್ರಂಥವನ್ನು ಆಗಾಗ ಓದುತ್ತಲೇ ಬಂದಿದ್ದೇನೆ. ಅದನ್ನು 'ಓದು' ಎನ್ನುವುದಕ್ಕಿಂತ 'ಪಾರಾಯಣ' ಎನ್ನುವುದೇ ಯುಕ್ತವೆಂದು ನನಗನ್ನಿಸುತ್ತದೆ. ಅದು ಮನುಷ್ಯನ ಅಂತರ್ಜ್ಯೋತಿಗೆ ತೈಲಪ್ರಾಯವಾದ ಗ್ರಂಥ. ಇಂಥ ಗ್ರಂಥದ ಮಹಿಮೆಯನ್ನು ಕಂಡಿದ್ದವರು ಮೋಕ್ಷಗುಂಡಂ ವೆಂಕಟೇಶ್ಯನವರು.

ರಾವಣ ವಾಹನ

ರಾವಣ ವಾಹನೋತ್ಸವವನ್ನು ಅವರು ಸ್ವಂತ ಶ್ರದ್ಧೆಯಿಂದ ಉಪಕ್ರಮ ಮಾಡಿಸಿದರು. ಆ ರಾವಣ ವಿಗ್ರಹವು ಒಬ್ಬ ಆಳಿನ ಪ್ರಮಾಣಕ್ಕಿಂತ ಬಹು ದೊಡ್ಡದು. ಇಷ್ಟರ ಮೇಲೆ ಹತ್ತು ಮುಖ: ಹತ್ತು ಕಿರೀಟಗಳು, ಇಪ್ಪತ್ತು ಭುಜಬಾಹುಗಳು, ಇಪ್ಪತ್ತು ಭುಜಕೀರ್ತಿಗಳು. ಇವುಗಳ ಜೊತೆಗೆ ಇತರ ಅಂಗಗಳು, ಅವುಗಳ ಆಭರಣಗಳು. ಈ ಮೃಣ್ಮಯ ಪ್ರತಿಮೆಯ ಹಿಂದುಗಡೆ ಮರದ ಕಟ್ಟಡ. ಇದಕ್ಕೆಲ್ಲ ಆಧಾರವಾಗಿ ಮರದ ಪೀಠ, ಬಹುಶಃ ಆರೆಂಟಡಿ ಅಗಲ, ಹತ್ತು ಹನ್ನೆರಡಡಿ ಉದ್ದದ ಹಲಗೆಗಳ ಜೋಡಣೆ. ಈ ಮಣ್ಣು ಮರಗಳ ಭಾರ ಎಷ್ಟಿರಬಹುದು! ಇದನ್ನು ಹೊರುವುದಕ್ಕಾಗಿ ಸುಮಾರು ನೂರು ಮಂದಿ. ಈ ವಾಹನದ ಮೇಲುಗಡೆ–ಎಂದರೆ ಒಂದು ಮನೆಯಷ್ಟು ಎತ್ತರದ ಮೇಲೆ ಶ್ರೀಪಾರ್ವತೀ ಸೋಮೇಶ್ವರರ ಉತ್ಸವ ಮೂರ್ತಿ. ನೂರು ನೂರಿಪ್ಪತ್ತು ಮಂದಿ ಈ ಉತ್ಸವವನ್ನು ಭುಜಗಳ ಮೇಲೆ ಹೊತ್ತು ಕೂರಿಗೆ ಕಟ್ಟಿಗೆಗಳ ಮೇಲೆ ಹೊರಿಸಿ ಇಕ್ಕಟ್ಟಾದ ರಸ್ತೆಗಳಲ್ಲಿ ಮೆರವಣಿಗೆ ತರುವುದರ ಕಷ್ಟವನ್ನೂ ಕೋಲಾಹಲವನ್ನೂ ವಾಚಕರು ಊಹಿಸಿಕೊಳ್ಳಬೇಕು. ಕಷ್ಟ. ಅಷ್ಟಾದರೂ ಅದನ್ನು ಮರೆಯಿಸಿ ಮುಳುಗಿಸುವಷ್ಟು ಹೆಚ್ಚಿನದು ಉತ್ಸಾಹ ಕೋಲಾಹಲ. ವೆಂಕಟೇಶಯ್ಯನವರು ಮಹಾದರ್ಪವಂತರೂ ಸಾಹಸಿಗಳೂ ಸಮರ್ಥರೂ ಆಗಿದ್ದದ್ದರಿಂದ ಆ ರಾವಣ ವಾಹನೋತ್ಸವವು ಯಶಸ್ವಿಯಾಗಿ ನಡೆದು ಬಹು ಕಾಲವೂ ಬಹುದೂರವೂ ಪ್ರಸಿದ್ಧಿ ಸಂಪಾದಿಸಿತು.

೧೪

ಇಬ್ಬರು ಮುಸಲ್ಮಾನ್ ಬಂಧುಗಳು

ನನ್ನ ತಂದೆ ಕಾಯಿಲೆ ಮಲಗಿದ್ದರು. ಮಾತನಾಡುವ ಸ್ಥಿತಿಯಲ್ಲಿರಲಿಲ್ಲ. ಮೈ ಕೈಗಳ ಚಲನೆಯೂ ಮಿತವಾಗಿತ್ತು. ಅಂಥ ಸಂದರ್ಭದಲ್ಲಿ ಒಂದು ದಿನ ಬೆಳಗ್ಗೆ ಸುಮಾರು ಒಂಭತ್ತು ಘಂಟೆಯ ವೇಳೆಗೆ ಮೂರು ನಾಲ್ಕು ಮಂದಿ ಮುಸಲ್ಮಾನ್ ಜನರು ನಮ್ಮ ಮನೆಗೆ ಬಂದು "ನಾವು ಮೇಷ್ಟರನ್ನು ನೋಡುವುದಕ್ಕೆ ಬಂದಿದ್ದೇವೆ" ಎಂದು ನನ್ನೊಡನೆ ಹೇಳಿದರು.

ನಾನು: "ಅವರು ತುಂಬ ನಿಶ್ಶಕ್ತಿಯಲ್ಲಿದ್ದಾರೆ, ಮಾತನಾಡಲಾರರು."

ಅವರು: "ಅವರನ್ನು ನಾವು ಮಾತನಾಡಿಸುವುದಿಲ್ಲ. ಸುಮ್ಮನೆ ಕಣ್ಣಿನಿಂದ ನೋಡಿ ಸಲಾಂ ಹಾಕಿ ಹೊರಟುಹೋಗುತ್ತೇವೆ, ಮುಳಬಾಗಲಿನವರು, ಕಾಸಿಂ, ಹೈದರ್ ಸಾಬಿ ಬಂದಿದ್ದಾರೆ ಎಂದು ಹೇಳಿ."

ನಾನು ಕೋಣೆಯೊಳಕ್ಕೆ ಹೋಗಿ "ಮುಳಬಾಗಿಲಿನಿಂದ ಹೈದರ್-" ಎಂದೊಡನೆಯೇ ನನ್ನ ತಂದೆಯವರು ಗೆಲುವಾಗಿ "ಬರುವಂತೆ ಹೇಳು" ಎಂದರು.

ಸಾಹೇಬರುಗಳು ಕೋಣೆಯೊಳಕ್ಕೆ ಬಂದು ನಿಂತು ಬಗ್ಗಿ ನೆಲ ಮುಟ್ಟಿ ಸಲಾಂ ಮಾಡಿದರು. ನನ್ನ ತಂದೆ ನಗುಮುಖದಿಂದ ಸಣ್ಣ ದನಿಯಲ್ಲಿ ಕೇಳಿದರು:

"ಯಾವಾಗ ಬಂದಿರಿ? ಚೆನ್ನಾಗಿದ್ದೀರಾ?"

"ಚೆನ್ನಾಗಿದ್ದೀವಿ ಸ್ವಾಮಿ, ನಿಮ್ಮ ಆಶೀರ್ವಾದ."

ಹೀಗೆ ಹೇಳಿ ಸಾಹೇಬರುಗಳು ತಾವು ತಂದಿದ್ದ ಹೂವು ಹಣ್ಣುಗಳನ್ನು ಅಲ್ಲಿರಿಸಿದರು. ನನ್ನ ತಂದೆ ನಗುತ್ತ ತಮ್ಮ ಬಲ ಮೊಣಕಾಲನ್ನು ಮೇಲಕ್ಕೆ ಎಳೆದುಕೊಂಡು ಮೊಣಕಾಲಿನಿಂದ ಮೂರು ನಾಲ್ಕಂಗುಲ ಕೆಳಗೆ ಬೆಟ್ಟಿಟ್ಟು "ಹೇಗಿದೆ?" ಎಂಬಂತೆ ಕೈಯಿಂದ ಪ್ರಶ್ನೆ ತೋರಿಸಿದರು.

ಆಗ ಕಾಸಿಂ ಸಾಹೇಬರು ತಮ್ಮ ಬಲಗಾಲ ಷರಾಯನ್ನು ಕೊಂಚ ಮೇಲಕ್ಕೆ ಎತ್ತಿ ಬಲ ಮೊಣಕಾಲಿನಿಂದ ಮೂರು ನಾಲ್ಕು ಬೆಟ್ಟಿನಷ್ಟು ಕೆಳಗಡೆಯ ಭಾಗವನ್ನು ನನ್ನ ತಂದೆಗೆ ತೋರಿಸಿದರು. ಇಬ್ಬರೂ ನಕ್ಕರು. ಇನ್ನೊಬ್ಬರು "ಅದರಿಂದ ಬುದ್ಧಿ ಬಂತು" ಎಂದರು. ಇನ್ನೊಂದೆರಡು ನಿಮಿಷವಾದ ಮೇಲೆ ಅವರೆಲ್ಲ ಸಲಾಂ ಹೇಳಿ ಹೊರಕ್ಕೆ ಬಂದರು. ಅವರು ನಡುಮನೆಯಲ್ಲಿದ್ದಾಗ ನಾನು ಕೇಳಿದೆ: "ಸಾಹೇಬರೆ, ಏನು ಆ ಸಂಜ್ಞೆ?"

ಪೂರ್ವಕಥೆ

"ಸ್ವಾಮಿ, ಮೇಷ್ಟರು ಪಾಠ ಹೇಳುತ್ತಿದ್ದಾಗ ಒಂದು ದಿನ ಏನೋ ಪ್ರಶ್ನೆ ಕೇಳಿದರು. ನನ್ನದು ಹುಡುಗು ಸ್ವಭಾವ. ಓದಿನಲ್ಲಿ ನಾನೇನು ಜಾಣನಲ್ಲ. ಇವರು ಥಟ್ಟನೆ ಪ್ರಶ್ನೆ ಕೇಳಿದರು. ಕೈಯಲ್ಲಿ ಚಾಕು ಹಿಡಿದು ಪೆನ್ಸಿಲ್ ಜೀವುತ್ತಿದ್ದರು. ನಾನು 'ಯೇಳ್ತೀನಿ ಸಾರ್' 'ಯೇಳ್ತೀನಿ ಸಾರ್' ಎಂದೆ. ಮೇಷ್ಟರು 'ಹೇಲು ತಿನ್ನಿ ಅಂತಿಯಾ ಸೂ-ನೆ' ಎನ್ನುತ್ತಾ ಚಾಕುವನ್ನು ನನ್ನ ಮೇಲೆ ಎಸೆದರು. ಅದು ಈ ಜಾಗದಲ್ಲಿ ಬಿದ್ದು ಗಾಯವಾಗಿ, ಕಲೆ ಈಗಲೂ ನಿಂತಿದೆ."

ಹೀಗೆ ಹೇಳಿ ಅದನ್ನು ತೋರಿಸಿದರು. ಮತ್ತೆ ಹೇಳಿದರು:

"ಸ್ವಾಮಿ, ಆ ಹೊತ್ತು ಅವರು ಹಾಗೆ ಮಾಡಿದ್ದರಿಂದ ನನ್ನ ಪುಂಡಾಟ ನಿಂತು ಹೋಯಿತು. ಎಷ್ಟು ಒಳ್ಳೆಯವರು! ಆಮೇಲೆ ಎಷ್ಟು ಪ್ರೀತಿ ತೋರಿಸಿದರು! ಅವರು ನೋಡಿಕೊಂಡು ಬುದ್ಧಿ ಕಲಿಸಿದ್ದರಿಂದ ನಾನು ಇಷ್ಟು ಮಾತ್ರ ಇದ್ದೇನೆ."

ಹೀಗೆ ಹೇಳಿ ಸಲಾಂ ಕೊಟ್ಟು ಹೊರಟುಹೋದರು. ಅವರೆಲ್ಲ ನನ್ನ ತಂದೆಯ ಶಿಷ್ಯರಂತೆ. ಇನ್ನೂ ಒಂದೆರಡು ಇಂಥ ವಿನೋದದ ಸಂದರ್ಭಗಳನ್ನು ಹೇಳಿದರು.

ಕಾಷ್ಠಿ ಹೈದರ್ ಸಾಹೇಬರು

ಮುಳಬಾಗಲ ಬಳಿ ಕಾಷ್ಠಿ, ಪದಕಾಷ್ಠಿ ಎಂಬ ಎರಡು ಹಳ್ಳಿಗಳು. ಕಾಷ್ಠಿ ಗ್ರಾಮವು ಹಾಜಿ ಮದಾರ್ ಸಾಹೇಬ್, ಹೈದರ್ ಸಾಹೇಬ್ ಎಂಬ ಇಬ್ಬರು ಮಹನೀಯರಿಂದ ಪ್ರಸಿದ್ಧವಾದದ್ದು. ಮದಾರ್ ಸಾಹೇಬರ ತಮ್ಮಂದಿರು ಹೈದರ್ ಸಾಹೇಬರು. ಇವರು ನ್ಯಾಯಶೀಲರೆಂದೂ ಲೌಕಿಕದಕ್ಷರೆಂದೂ ಗಣ್ಯರಾಗಿದ್ದರು. ಊರಿನಲ್ಲಿ ಯಾವ ವಿವಾದವೆದ್ದರೂ ಕಾಷ್ಠಿ ಹೈದರ್ ಸಾಹೇಬರು ಕೊಟ್ಟ ತೀರ್ಮಾನವನ್ನು ಎಲ್ಲ ಪಕ್ಷಗಳವರೂ ಅಂಗೀಕರಿಸುತ್ತಿದ್ದರು.

ಹೈದರ್ ಸಾಹೇಬರು ಕನ್ನಡ ತೆಲಗುಗಳನ್ನು ಚೆನ್ನಾಗಿ ಮಾತನಾಡುತ್ತಿದ್ದರು. ನೋಡಲರ್ಹವಾದ ಆಕಾರ. ತುಂಬ ಎತ್ತರವಲ್ಲ, ಗಿಡ್ಡಲ್ಲ; ದಪ್ಪವೂ ಅಲ್ಲ. ಚಾಕಚಕ್ಯವುಳ್ಳ ಮೈ. ಬಣ್ಣ ಮಾಸಲುಬಿಳುಪು. ವಸ್ತ್ರ ತಲೆಯಿಂದ ಕಾಲಿನವರೆಗೂ ಶುಭ್ರವಾದದ್ದು. ಬೆಳ್ಳನೆಯ ಷರಾಯಿ. ಆ ಕಾಲದಲ್ಲಿ ಮಾನ್ಯವಾಗಿದ್ದ ಕೋಟು. ಜೇಬಿನಲ್ಲಿ ಗಡಿಯಾರ. ಅವರ ರುಮಾಲು ಭಾರಿಯಾದದ್ದು. ಕೊಂಚ ಸರಿಗೆ. ಒಂದು ಕಲೆಯೂ ಇಲ್ಲದ ಶುದ್ಧ ಬಿಳಿಯ ರುಮಾಲು: ಹಳೆಯ ಮೈಸೂರು ಸ್ಟೈಲಿನಲ್ಲಿ ಕಟ್ಟಿದ್ದದ್ದು. ಮಾತು ಗಂಭೀರವಾದದ್ದು. ಎಲ್ಲರೊಡನೆಯೂ ಸಾವಕಾಶವಾಗಿ, ಮೃದುವಾಗಿ, ಮರ್ಯಾದೆಯಿಂದ ಮಾತನಾಡುವರು. ಅವರು ಊರಿನ ಜನಕ್ಕೆಲ್ಲ ಅಚ್ಚುಮೆಚ್ಚು.

ಹೈದರ್ ಸಾಹೇಬರು ನನ್ನ ತಾತಂದಿರಿಗೆ ಸ್ನೇಹಿತರು. ನನ್ನ ತಾತಂದಿರು ಊರಿಗೆ ಬಂದಾಗಲೆಲ್ಲ ಹೈದರ್ ಸಾಹೇಬರು ನಮ್ಮ ಮನೆಗೆ ಬರುವರು. ಒಂದೊಂದು ಸಾರಿ ಯಾವುದೋ ಹಬ್ಬದ ದಿವಸ ಮನೆಯಲ್ಲಿ ಮಾಡಿದ್ದ ಒಬ್ಬಟ್ಟು ಕಾಯಿಕಡಬು ಮೊದಲಾದ ಭೋಜ್ಯ ವಸ್ತುಗಳನ್ನು ಹೈದರ್ ಸಾಹೇಬರಿಗೆ ಬೇರೆಯಾಗಿ ತಂದು ಕೊಡುವರು. ಅವರು ಅದನ್ನು ಭುಜಿಸಿ ಆ ಎಲೆಯನ್ನು ತಾವೇ ತೆಗೆದು ಹೊರಗೆ ಹಾಕಿ ಬರುವರು. ಆ ಜಾಗದಲ್ಲಿ ನೀರು ಹಾಕಿ ಸಾರಿಸುವರು. ಹೀಗೆ ಅವರು ಹಿಂದೂ ಜನದ ಆಚಾರವನ್ನೂ ಪದ್ಧತಿಯನ್ನೂ ನಡಸಿಕೊಂಡು ಬರುತ್ತಿದ್ದರು. ತಮ್ಮನ್ನು ದೂರ ಹಾಕಿದರು, ಬೇರೆ ಹಾಕಿದರು, ಎಂದು ಯಾವತ್ತೂ ಅಸಮಾಧಾನ ಪಟ್ಟವರಲ್ಲ. ಮತ್ತು ಅಂಥ ದಿನಗಳಲ್ಲಿ ನಮ್ಮ ಮನೆಯಲ್ಲಿ ನಡೆಯುತ್ತಿದ್ದ ಪುರಾಣವನ್ನೋ ಕಾವ್ಯವಾಚನವನ್ನೋ ಮಿಕ್ಕವರಂತೆ ಕುತೂಹಲದಿಂದ ಕೇಳಿ ಸಂತೋಷಪಡುತ್ತಿದ್ದರು.

ನನಗೆ ಚೆನ್ನಾಗಿ ಜ್ಞಾಪಕವಿರುವ ಒಂದು ಸಂಗತಿ. ಒಂದು ಗಣೇಶನ ಹಬ್ಬದ ದಿನ ಮಧ್ಯಾಹ್ನ ಸುಮಾರು ನಾಲ್ಕು ಘಂಟೆಯ ಹೊತ್ತಿಗೆ ಹೈದರ್ ಸಾಹೇಬರು ನನ್ನ ತಂದೆಯನ್ನು ಹರಿಶ್ಚಂದ್ರ ಕಥೆ ಓದುವಂತೆ ಕೇಳಿದರು. ಆ ಹೊತ್ತು ಹದಿನೈದಿಪ್ಪತ್ತು ಮಂದಿ ಸೇರಿದರು. ನನ್ನ ತಂದೆ ಚಂಪೂಶೈಲಿಯಲ್ಲಿ ರಚಿತವಾಗಿದ್ದ ಹರಿಶ್ಚಂದ್ರ ಕಥೆಯನ್ನು ಓದಿದರು. ನನ್ನ ತಾತಂದಿರೂ ಚಿಕ್ಕತಾತಂದಿರೂ ನನ್ನನ್ನು ಹತ್ತಿರ ಕೂಡಿಸಿಕೊಂಡಿದ್ದರು. ನನ್ನ ತಂದೆ ಆಗಾಗ ರಾಗಗಳನ್ನು ಬದಲಾಯಿಸಿಕೊಂಡು ಓದುತ್ತಿದ್ದರು. ರೋಹಿತಾಶ್ವನ ಪ್ರಕರಣ ಬಂದಾಗ ನನಗೆ ತಡೆಯಲಾರದಷ್ಟು ಅಳು ಬಂತು. ಬಿಕ್ಕಿ ಬಿಕ್ಕಿ ಅತ್ತೆನೆಂದು ತೋರುತ್ತದೆ. ನನ್ನ ತಾತಂದಿರು ನನ್ನನ್ನು ಸಮಾಧಾನಪಡಿಸಲು ಯತ್ನ ಮಾಡಿದರು. ಆಗ ಕಾಷ್ಠಿ ಹೈದರ್ ಸಾಹೇಬರು ಹೀಗೆ ಹೇಳಿದರು:

“ನನಗೇ ಅಳು ಬರುತ್ತಿದೆ. ಇನ್ನು ಮಗು ಅಳುವುದೇನು ಹೆಚ್ಚು!”

ಹೀಗೆ ಹೇಳಿ ನನ್ನನ್ನು ತಾವೇ ಎತ್ತಿಕೊಂಡು ಹೊರಗೆ ಹೋಗಿ ಕೊಂಚ ಹೊತ್ತು ಬೀದಿಯ ನೋಟ ತೋರಿಸುತ್ತಿದ್ದು ಒಳಕ್ಕೆ ಕರೆದುಕೊಂಡು ಬಂದರು.

ಒಂದು ಮೊಕದ್ದಮೆ

ಇನ್ನೊಂದು ಪ್ರಕರಣ. ಇದು ಬೇರೆ ಜಾತಿಯದು.

ಆ ಊರಿನಲ್ಲಿದ್ದ ಆಸ್ಪತ್ರೆಯ ಡಾಕ್ಟರಿಗೆ ವರ್ಗವಾಯಿತು. ಅವರ ಹೆಸರು ಬಹುಶಃ ವೆಂಕಟಾಚಾರ್ಯರೆಂದು. ಅವರ ಹಸ್ತಗುಣ ತುಂಬ ಒಳ್ಳೆಯದೆಂದೂ, ಅವರು ದಯಾವಂತರೆಂದೂ ಹೆಸರಾಗಿತ್ತು. ಆಳು ಎತ್ತರವಾಗಿ ಅಪರಂಜಿಯ ಬಣ್ಣದಿಂದ ಸ್ಫುರದ್ರೂಪಿಯಾಗಿದ್ದರು. ಅವರ ಸ್ವಭಾವವೂ ಒಳ್ಳೆಯದು. ನಾನು ಸ್ವಾಮಿ ವಿವೇಕಾನಂದರ ಚಿಕಾಗೊ ಉಪನ್ಯಾಸದ ಪುಸ್ತಕವನ್ನು ಮೊದಲು ಕಂಡದ್ದು ಅವರ ಮೇಜಿನ ಮೇಲೆ. ಅವರಿಂದ ಅದನ್ನು ತೆಗೆದುಕೊಂಡು ಬಂದು ಓದಿದೆ. ಪುಸ್ತಕ ತರಿಸಿಕೊಳ್ಳಲು ನನಗೆ ಹಣವಿಲ್ಲ; ತಿಳಿವಳಿಕೆಯೂ ಇಲ್ಲ. ಆದದ್ದರಿಂದ ಆ ಉಪನ್ಯಾಸವನ್ನು ಮೊದಲಿನಿಂದ ಕಡೆಯವರೆಗೂ ನನ್ನ ಎಕ್ಸರ್ ಸೈಸ್ ಪುಸ್ತಕದಲ್ಲಿ ನಕಲು (ಕಾಪಿ) ಮಾಡಿಟ್ಟುಕೊಂಡೆ. ಅವರ ಸೋದರಳಿಯ ಶ್ರೀನಿವಾಸಯ್ಯಂಗಾರ್ ಎಂಬಾತ ನನ್ನ ವಯಸ್ಸಿನವನು; ನನ್ನ ಅತ್ಯಂತ ಪ್ರಿಯ ಸ್ನೇಹಿತ. ಆ ಮಾತು ಹಾಗಿರಲಿ.

ಡಾ ॥ ವೆಂಕಟಾಚಾರ್ಯರವರ ಸಂಸಾರ ದೊಡ್ಡದು. ಅವರು ಖರ್ಚುದಾರರು, ಆದಕಾರಣ ಅಲ್ಲಲ್ಲಿ ಕೊಂಚ ಕೈಬದಲು ತೆಗೆದುಕೊಳ್ಳಬೇಕಾಗುತ್ತಿತ್ತು. ಅವರ ಆಸ್ಪತ್ರೆಯಲ್ಲಿ ಸೂಲಗಿತ್ತಿಯಾಗಿದ್ದ ರಾಜಮ್ಮನೆಂಬ ಒಬ್ಬಾಕೆ ಕ್ರೈಸ್ತ ಹೆಂಗಸು ತನಗೂ ಅವರಿಂದ ಐದುನೂರು ರೂಪಾಯಿ ಬರಬೇಕಾದದ್ದುಂಟೆಂದು ಅವರೊಡನೆ ತನ್ನ ದೂರು ಹೇಳಿಕೊಂಡಳು. ತಾನು ಕೊಟ್ಟಿದ್ದ ಸಾಲವನ್ನು ಸ್ಥಿರಪಡಿಸಲು ಪತ್ರವಿರುವುದಾಗಿ ಹೇಳಿಕೊಂಡಳು–ವೆಂಕಟಾಚಾರ್ಯರಿಗೆ ವರ್ಗವಾದ ಕಾಲದಲ್ಲಿ. ಊರಿನ ನಾಲ್ಕು ಮಂದಿ ಈ ವ್ಯವಹಾರವನ್ನು ಪಂಚಾಯತಿಯಲ್ಲಿ ಫೈಸಲು ಮಾಡಿಸಬಹುದೆಂದು ಸೂಚನೆ ಕೊಟ್ಟರು.

ನ್ಯಾಯ ನಿರ್ಣಯ

ಅದರಂತೆ ಮೊಕದ್ದಮೆ ಪಂಚಾಯಿತಿಯಲ್ಲಿ ವಿಚಾರಣೆಗೆ ಬಂತು. ಪಂಚಾಯತಿದಾರರಲ್ಲಿ ಮುಖ್ಯರು ಕಾಷ್ಮಿ ಹೈದರ್ ಸಾಹೇಬರು. ಸಾಹೇಬರು ರಾಜಮ್ಮನನ್ನು ಕೇಳಿದರು:

"ಎಲ್ಲಮ್ಮ ನಿನ್ನ ಪತ್ರ?"

ರಾಜಮ್ಮ ಒಂದು ಕಾಗದವನ್ನು ಅವರ ಕೈಗೆ ಕೊಟ್ಟಳು. ಸಾಹೇಬರು ಅದನ್ನು ನೋಡಿ ತಮ್ಮ ಪಕ್ಕದಲ್ಲಿದ್ದ ಇನ್ನೊಬ್ಬ ಪಂಚಾಯತಿದಾರ ಶ್ರೀನಿವಾಸರಾಯರ ಕೈಗೆ ಅದನ್ನು ಕೊಟ್ಟು "ನೋಡು" ಎಂದರು. ಅದು ಛಾಪಾಕಾಗದವಾಗಿರಲಿಲ್ಲ; ಬರಿಯ ಕಾಗದದ ಮೇಲೆ ಬರೆದದ್ದು. ರಾಯರು ಅದನ್ನು ತಮ್ಮ ಪಕ್ಕದಲ್ಲಿದ್ದ ಮುನಿಯಪ್ಪನವರಿಗೆ ಕೊಟ್ಟರು. ಆ ಮೂವರೂ ಕೇಳಿದರು:

"ಏನಮ್ಮ–ಇದಕ್ಕೆ ಸಾಕ್ಷಿಯೇ ಹಾಕಿಲ್ಲವಲ್ಲ? ಇದಕ್ಕೆ ರುಜು ಮಾಡಿರುವವರು ಡಾಕ್ಟರೇ ಎಂದು ಹೇಗೆ ಗೊತ್ತು? ಈ ಕಾಗದದ ಮೇಲೆ ಸರಕಾರದ ಭಾಷೆಯೂ ಇಲ್ಲ. ರುಜು ಇಂಗ್ಲಿಷ್ ಭಾಷೆಯಲ್ಲಿದೆ. ಅದು ಯಾರ ರುಜುವೋ!"

ರಾ: "ಇದಕ್ಕೆ ಸಾಕ್ಷಿ ಹೇಗೆ ಹಾಕಿಸುವುದು? ಇದು ಅಂತರಂಗದಲ್ಲಿ ನಡೆದ ವ್ಯವಹಾರ."

ಮೂವರೂ ಕೊಂಚ ಮಾತನಾಡಿಕೊಂಡರು.

"ಅಂತರಂಗದ ವಿಷಯವನ್ನು ಅಂತರಂಗದಲ್ಲಿಯೇ ಫೈಸಲು ಮಾಡಿಕೊಳ್ಳಬೇಕು. ಹೊರಕ್ಕೆ ತರಬಾರದು."

–ಎಂದು ಹೇಳಿ ಸಾಹೇಬರು ಆ ಕಾಗದವನ್ನು ಪರಪರ ಹರಿದುಹಾಕಿದರು. ಆಕೆ "ಅಯ್ಯೋ! ಹೀಗೆ ಮಾಡಿದಿರಲ್ಲ!" ಎಂದಳು.

ಸಾಹೇಬರು ಹೇಳಿದರು: "ನಿನಗೆ ತಿಳಿವಳಿಕೆ ಸಾಲದಮ್ಮ. ಸರಕಾರಿ ಕೆಲಸದಲ್ಲಿರುವವರ ಮೇಲೆ ಹೀಗೆಲ್ಲ ಆಪಾದನೆ ಮಾಡಿ ಅವರ ಕೆಲಸಕ್ಕೆ ಊನ ತರಬಾರದು. ನೀನು ಅವರಿಗೆ ಹಣ ಕೊಟ್ಟಿದ್ದೆಯಾ? ಎಷ್ಟು ಹಣ ಕೊಟ್ಟಿದ್ದೆ? ನಿನ್ನಲ್ಲಿ ಅಷ್ಟು ಹಣ ಹೇಗೆ ಸೇರಿತ್ತು." ?

ಆಕೆ ಬೆಪ್ಪು ಬೆಪ್ಪಾದಳು.

ಸಾಹೇಬರು: “ಒಳ್ಳೆಯದು. ನೀನು ಏನೋ ಆಶೆಪಟ್ಟುಕೊಂಡು ಬಂದೆ. ಈ ಹಣವನ್ನು ತೆಗೆದುಕೋ. ಇದು ನಿನಗೆ ಮುಫತ್ತು” ಎಂದು ಹೇಳಿ ಆಕೆಯ ಕೈಗೆ ರೂಪಾಯಿಗಳ ಒಂದು ಪೊಟ್ಟಣವನ್ನು ಕೊಟ್ಟರು. ಅದರಲ್ಲಿ ಇಪ್ಪತ್ತೈದೋ ಮುವತ್ತೋ ರೂಪಾಯಿ ಇತ್ತಂತೆ.

ಲೋಕಜ್ಞಾನ

ತಕರಾರು ಅಲ್ಲಿಗೆ ಮುಗಿಯಿತು. ಆಕೆ ಒಪ್ಪಿಕೊಂಡಳು. ನಿಜವಾದ ಸಂದರ್ಭ ಏನೆಂಬುದು ಇತರ ಜನಕ್ಕೆ ತಿಳಿಯದು. ಡಾಕ್ಟರು ಮೋಹವಾದ ಒಂದು ಕ್ಷಣ ಆ ಪತ್ರಕ್ಕೆ ರುಜು ಹಾಕಿರಬೇಕೆಂದು ಕೆಲವರು ಊಹಿಸಿದರು. ಇನ್ನು ಕೆಲವರು "ಅದು ಸೃಷ್ಟನೆಯ ಪತ್ರ. ಆ ಹೆಂಗಸಿನ ಒಬ್ಬ ಬಂಧು ಮಾಡಿದ ಕೆಲಸ" ಎಂದುಕೊಂಡರು. ಕಾಷ್ಠಿ ಹೈದರ್ ಸಾಹೇಬರು "ಆ ಡಾಕ್ಟರಿಗೆ ಐದುನೂರು ರೂಪಾಯಿ ಸಾಲ ಬೇಕಿದ್ದಿದ್ದರೆ ಆಕೆಯನ್ನು ಕೇಳುತ್ತಿದ್ದದ್ದು ಅಸಂಭವ. ಆಕೆಯಲ್ಲಿ ಅಷ್ಟು ಹಣ ಇರುತ್ತಿದ್ದದ್ದೂ ಅಸಂಭವ. ಇದು ಶುದ್ಧ ಕೃತ್ರಿಮ" ಎಂದು ತಮ್ಮ ಮನಸ್ಸಿನಲ್ಲಿ ತೀರ್ಮಾನಿಸಿಕೊಂಡಿದ್ದರು.

ಇದು ಮನುಷ್ಯಸ್ವಭಾವವನ್ನು ಬಲ್ಲವರ ದಾರಿ.

೧೫

ನನ್ನ 'ಮಹಸೂಲಿ' ಉದ್ಯೋಗ

ಕೋಲಾರದಿಂದ ಮದರಾಸಿಗೆ ಹೋಗುವ ರಸ್ತೆಯಲ್ಲಿ ಹದಿನೆಂಟನೆಯ ಮೈಲಿಯಲ್ಲಿ ಮುಳಬಾಗಿಲು. ಆ ರಸ್ತೆಯಲ್ಲಿ ಸೋಮೇಶ್ವರ ಪಾಳ್ಯದಿಂದ ಎರಡು ಮೂರು ಫರ್ಲಾಂಗು ಮುಂದೆ ಹೋದ ಮೇಲೆ ಅಲ್ಲಿದ್ದ ಸಾಲು ಮರದ ಫಸಲಿನ ಹಕ್ಕುದಾರಿ ನಮ್ಮ ಅಜ್ಜನದು.

ಈ ಸಾಲುಮರಗಳ ಏರ್ಪಾಟನ್ನು ಆ ಪ್ರದೇಶದಲ್ಲಿ ಮಾಡಿಸಿದವರು ಬ್ರಿಟಿಷ್ ಕಮಿಷನರುಗಳು. ಪ್ರಯಾಣಿಕರ ಸೌಕರ್ಯಕ್ಕಾಗಿ ರಸ್ತೆಯ ಎರಡು ಪಕ್ಕಗಳಲ್ಲಿಯೂ ಮರ ಬೆಳಸುವುದು ಒಂದು ಪುಣ್ಯಕಾರ್ಯವೆಂದು ನಮ್ಮ ಪೂರ್ವಿಕರು ತಿಳಿದಿದ್ದರೇನೋ ಸರಿ. ಆದರೆ ಹಿಂದೂ ರಾಜರ ಅವನತಿ ಕಾಲದಲ್ಲಿ ಆ ಪುಣ್ಯ ಸಂಪ್ರದಾಯಕ್ಕೆ ಲೋಪ ಬಂದಿತ್ತೆಂದು ತೋರುತ್ತದೆ. ಆದದ್ದರಿಂದ ಕೋಲಾರ ಮುಳಬಾಗಿಲು ಪ್ರಾಂತಗಳಲ್ಲಿ ಸಾಲು ಮರಗಳ ಅನುಕೂಲ ಇರಲಿಲ್ಲವಂತೆ. ಬ್ರಿಟಿಷರ ಸೈನ್ಯವು ತಿಂಗಳಿಗೆ ಒಂದೆರಡು ಸಲ ಬೆಂಗಳೂರು–ಕೋಲಾರ–ಮದರಾಸು ರಸ್ತೆಯನ್ನು ತುಳಿಯುವುದು ಆಗ್ಗೆ ಬೇಕಾಗಿತ್ತು. ಆ ಸೈನ್ಯದ ಅನುಕೂಲಕ್ಕಾಗಿಯಾದರೂ ಮರದ ನೆರಳು ಅವಶ್ಯವಾಯಿತು. ಆದದ್ದರಿಂದ ಬ್ರಿಟಿಷ್ ಕಮಿಷನರುಗಳು ಒಂದು ಯೋಜನೆ ನಡಸಿದರು. ರಸ್ತೆಯ ಎರಡು ಪಕ್ಕಗಳಲ್ಲಿಯೂ ಊರುಗಳಿರುತ್ತವಷ್ಟೆ. ಒಂದೊಂದು ಊರಿನಲ್ಲಿಯೂ ಕೆಲಮಂದಿ ಪ್ರಶಸ್ತರಾದವರಿಗೆ ಈ ಕೆಲಸವನ್ನು ಒಪ್ಪಿಸತಕ್ಕದ್ದು. ಒಬ್ಬೊಬ್ಬರಿಗೆ ಎರಡು ಫರ್ಲಾಂಗು ಮೂರು ಫರ್ಲಾಂಗುಗಳಷ್ಟು ಜವಾಬ್ದಾರಿಯನ್ನು ಒಪ್ಪಿಸತಕ್ಕದ್ದು. ಆ ಗೃಹಸ್ಥರು ತಮ್ಮ ಪಾಲಿಗೆ ಬಂದ ರಸ್ತೆಯ ಭಾಗದಲ್ಲಿ ಎರಡು ಪಕ್ಕಗಳಲ್ಲಿಯೂ ಮರಗಳನ್ನು ನೆಟ್ಟು ಅದಕ್ಕೆ ನೀರು ಹಾಕಿ ಬೇಲಿ ಕಟ್ಟಿ ಕಾಪಾಡತಕ್ಕದ್ದು. ಮರ ಬೆಳೆದ ಮೇಲೆ ಅದು ಸರಕಾರದ ಸ್ವತ್ತಾಗುತ್ತದೆ. ಅದರಲ್ಲಿ ಬಿಟ್ಟ ಫಲವು ಬೆಳಸಿದ ಗೃಹಸ್ಥನದಾಗುತ್ತದೆ. ಇದು ಒಡಂಬಡಿಕೆ.

'ದಾಡೀಪಸಂದ್'

ಇದರಂತೆ ನನ್ನ ತಾತನಿಗೆ ಬಂದಿದ್ದದ್ದು ಸುಮಾರು ಎರಡು ಫರ್ಲಾಂಗಿನಷ್ಟು ಸಾಲು ಮರ. ಅದರಲ್ಲಿದ್ದ ಮರಗಳು ಮುಖ್ಯವಾಗಿ ಹೊಂಗೆ, ಹುಣಿಸೆ, ಮಾವು, ನೇರಳೆ. ಇಷ್ಟರಲ್ಲಿ ನೇರಳೆ

ಹಣ್ಣನ್ನು ದಾರಿಹೋಕರು ಕಿತ್ತು ತಿನ್ನುತ್ತಿದ್ದರು. ಮಾವಿನಕಾಯಾದರೋ ದಾಡೀಪಸಂದ್ ಎಂಬ ಜಾತಿ; ನಾರುನಾರಾದ ನಾಟುಕಾಯಿ. ಅದು ನಮ್ಮ ಮನೆಗೆ ಬರುತ್ತಿತ್ತು. ಅದರಲ್ಲಿ ಅರ್ಧ ಉಪ್ಪಿನಕಾಯಿಗೆ: ಇನ್ನರ್ಧ ಹುಲ್ಲಿನಲ್ಲಿ ಮಾಗಹಾಕಿ ಹಣ್ಣಾದ ಮೇಲೆ ತಿನ್ನುವುದಕ್ಕಾಗಿ. ಅದನ್ನು ತಿನ್ನುವಾಗ ಜುರ್ರುತ್ತಿದ್ದದ್ದೂ ಅದರ ರಸದ ತೊಟ್ಟುಗಳು ಬಟ್ಟೆಯ ಮೇಲೆ ಬೀಳುತ್ತಿದ್ದದ್ದೂ ಕೈಮೈ ಎಲ್ಲ ಕೊಳೆ ಕೊಳೆಯಾಗುತ್ತಿದ್ದದ್ದೂ ನನಗೆ ಜ್ಞಾಪಕವಿದೆ. ದಾಡೀಪಸಂದ್ ಹಣ್ಣು ಈಗ ಇರುವಂತಿಲ್ಲ. ಪಟ್ಟಣಗಳಲ್ಲಂತೂ ಇಲ್ಲ. ಹೆಚ್ಚು ಉಪಯೋಗಕ್ಕೆ ಬರುತ್ತಿದ್ದವು ಹುಣಿಸೆಕಾಯಿ ಹೊಂಗೆಕಾಯಿಗಳು. ಇವುಗಳನ್ನು ಫಲದ ಕಾಲದಲ್ಲಿ ಉದುರಿಸಿ ರಾಶಿಮಾಡಿ ತಂದುಕೊಳ್ಳುವುದು ನಮ್ಮ ಹಕ್ಕುದಾರಿ.

ಈ ಕೆಲಸಕ್ಕಾಗಿ ಮಾದಯ್ಯ (ರೂಢಿಯಾಗಿ 'ಮಾದ'), ಆತನ ಮಗ ರಾಮಯ್ಯ (ರೂಢಿಯಾ 'ರಾಮ')–ಇವರು ಗೊತ್ತಾಗಿದ್ದರು. ಇವರು ಈಗ ಹರಿಜನರೆಂದೂ ಅದಕ್ಕೆ ಹಿಂದೆ ಪಂಚಮರೆಂದೂ ಅದಕ್ಕೂ ಹಿಂದೆ ಹೊಲೆಯರೆಂದೂ ಕರೆಯಿಸಿಕೊಳ್ಳುತ್ತಿದ್ದ ಜನಾಂಗ. ಮಾದನಿಗೆ ಸರಕಾರಿ ಹುದ್ದೆಯೂ ಇತ್ತು. ಅದು ಕೊಂಬೂದುವುದು. ಆದದ್ದರಿಂದ ಅವನು 'ಕೊಂಬಿನ ಮಾದ'. ಅವನು ಮುದುಕನಾಗಿದ್ದದ್ದರಿಂದ ರಾಮನೇ ಕೊಂಬಿನವನು.

ರಾಮನ ಜ್ಞಾಪಕ ನನಗೆ ಚೆನ್ನಾಗಿದೆ. ನೋಟಕ್ಕೆ ಲಕ್ಷಣವಾದ ಆಳು. ಬಣ್ಣ ಮಾಸಲು-ಕಪ್ಪೆಂದರೂ ಆಗಬಹುದು, ಮಾಸಲು ಕೆಂಪೆಂದರೂ ಆಗಬಹುದು. ಅವನ ತಂದೆ ಮಾದಯ್ಯನ ಬಣ್ಣ ಬಹುಮಟ್ಟಿಗೆ ಬಿಳುಪು. ತಂದೆ ಮಕ್ಕಳಿಬ್ಬರೂ ಮರ್ಯಾದೆವಂತರು. ಅವರ ಬಾಯಿಂದ ಕೆಟ್ಟಮಾತು ಬಂದದ್ದನ್ನು ನಾನು ಒಂದು ಸಾರಿಯೂ ಕೇಳಿಲ್ಲ.

ಮೇಲುಸ್ತುವಾರಿ

ಈ ಕಥೆಯಲ್ಲಿ ನನ್ನ ಪಾತ್ರವೇನು? ನಾನು ಐದಾರು ವರ್ಷದವನಿರಬಹುದು. ನನ್ನನ್ನು ನನ್ನ ತಾತಂದಿರು ಮಹಸೂಲಿ ಕೆಲಸಕ್ಕೆ ಕಳುಹಿಸುವರು. 'ಮಹಸೂಲಿ' ಎಂದರೆ ಹುಣಿಸೆಮರ ಹೊಂಗೆಮರಗಳ ಉತ್ಪತ್ತಿಯ ಕೆಲಸವನ್ನು ನಿಗಾ ಇಟ್ಟು ನೋಡುವುದು. ಇದು ಐದು ವರ್ಷದವನಿಂದ ಆಗುವ ಕೆಲಸವೆ? ಅಲ್ಲವೆಂದು ನನ್ನ ತಾತನಿಗೆ ಗೊತ್ತಿತ್ತು. ಆದರೂ ಅವರ ಮನಸ್ಸಿನಲ್ಲಿ ಎರಡು ಅಭಿಪ್ರಾಯ: ಮೊದಲನೆಯದು "ಇವನು ತಂಟೆಕೋರ. ಸ್ಕೂಲಿಗೆ ಬೇಸಗೆ ರಜ ಬಂದಿರುವುದರಿಂದ ಮನೆಯಲ್ಲಿದ್ದರೆ ತುಂಟಾಟ ಅತಿಯಾಗುತ್ತದೆ. ಕೊಂಚ ಹೊತ್ತಾದರೂ ಹೊರಗಿನ ಪ್ರಪಂಚ ನೋಡಿಕೊಂಡುಬರಲಿ" ಎಂಬುದು. ಎರಡನೆಯ ಉದ್ದೇಶವೇನೆಂದರೆ– "ಮಾಲಿಕರು ತಮ್ಮ ಅಧಿಕಾರವನ್ನು ತೊರೆದುಹಾಕಿಲ್ಲ, ಅವರ ಪ್ರತಿನಿಧಿ ಒಬ್ಬ ಸಾಕ್ಷಿಯಾಗಿರುತ್ತಾನೆ" ಎಂಬುದು. ಇನ್ನೊಂದು ಸಂಗತಿ ಹೇಳಬೇಕಾದದ್ದಿದೆ. ಮಾದನು,

"ಏನು ಸ್ವಾಮಿ ಮಗುವನ್ನು ಕಳಿಸುತ್ತೀರಾ?" –ಎಂದು ಕೇಳಿದರೆ ನಮ್ಮ ತಾತ,

"ಏನೋ ಮಾದ? ನಿನ್ನಲ್ಲಿ ನನಗೆ ಅಪನಂಬಿಕೆಯೆ? ನಾವೇಕೆ ಬರಬೇಕೊ ಅಲ್ಲಿಗೆ? ನೀನು ಮೋಸ ಮಾಡುವುದಾದರೆ ನಾವು ಅದನ್ನು ತಡೆಯುವುದಕ್ಕಾಗುತ್ತೇನು? ನೀನು ಹುಚ್ಚ. ಮಗು ಮನೆಯಲ್ಲಿ ತಂಟೆ ಮಾಡುತ್ತದೆ; ಸ್ವಲ್ಪ ಹೊರಗೆ ಸಾಗಿಹೋಗಲಿ" ಎನ್ನುವರು. ಮಾದನು ನಗುವನು.

ನನ್ನ ಕರ್ತವ್ಯಭಾರ

ಆದರೆ ನನ್ನನ್ನು ಮಾದನು ಮುಟ್ಟಕೂಡದು, ರಾಮನು ಮುಟ್ಟಕೂಡದು. ಆದದ್ದರಿಂದ ಯಾರೋ ಇನ್ನೊಬ್ಬರು ನನ್ನನ್ನು ಎತ್ತಿಕೊಂಡು ಹೋಗುವರು, –ಮಾದನ ಹಿಂದೆ ಜಾಗ ಸೇರಿದ ಮೇಲೆ ರಾಮನು ಮರದ ಕೆಳಗಡೆ ತಂಪಾಗಿರುವ ಜಾಗದಲ್ಲಿ ಗೋಣಿಚೀಲ ಹಾಸುವನು. ನಾನು ಅದರ ಮೇಲೆ ಕುಳಿತಿರತಕ್ಕದ್ದು. ನನ್ನ ಮುಂದೆ ಒಂದು ಸಣ್ಣ ಗುಡ್ಡೆ ನೇರಳೆ ಹಣ್ಣು, ಒಂದುಷ್ಟು ಮಾವಿನ ಕಾಯಿ, ಸೀತಾಫಲ–ಇಂಥ ಫಲಾಹಾರ ಸಾಮಾಗ್ರಿ. ಇದು ಬೆಳಗ್ಗೆ ೮-೯ ರಿಂದ ೧೧ರ ವರೆಗೆ. ನಾನು ಗೋಣಿತಾಟಿನ ಮೇಲೆ ಕುಳಿತು ರಸ್ತೆಯಲ್ಲಿ ಜನ, ಗಾಡಿ ಹೋಗಿ ಬರುತ್ತಿದ್ದದ್ದನ್ನು ನೋಡುತ್ತ ಕುಳಿತಿರುತ್ತಿದ್ದೆ. ರಾಮನೂ ಇನ್ನಿಬ್ಬರೂ ಕೈಯಲ್ಲಿ ಉದ್ದುದ್ದನೆಯ ಬಿದುರು ಕೋಲುಗಳನ್ನು ಹಿಡಿದು ಮರ ಹತ್ತಿ ಕಾಯಿಗಳನ್ನು ಉದುರಿಸುತ್ತಿದ್ದರು. ಇಬ್ಬರು ಮೂವರು ಹೆಂಗಸರು ನೆಲದಮೇಲೆ ನಿಂತು ಕಾಯಿಗಳನ್ನು ಒಟ್ಟು ಹಾಕುತ್ತಿದ್ದರು. ಹೀಗೆ ಹೊಂಗೆಕಾಯಿ ರಾಶಿಯೋ ಹುಣಿಸೆ ರಾಶಿಯೋ ಒಂದಿಷ್ಟು ಸೇರಿದ ಮೇಲೆ ರಾಮನು "ನೋಡಿ ಸ್ವಾಮಿ" ಎನ್ನುತ್ತಿದ್ದ. ನಾನು "ಸರಿ ಸರಿ" ಎಂದು ತಲೆಯಾಡಿಸುತ್ತಿದ್ದೆ.

ತಮಿಳರಲ್ಲಿ "ಮಣ್ಣು ಮಾಮಿಯಾರ್" ಎಂಬ ಒಂದು ಸಂಪ್ರದಾಯ ಇತ್ತು. 'ಮಾಮಿಯಾರ್' ಎಂದರೆ ಅತ್ತೆ. ಮನೆಗೊಬ್ಬ ಅತ್ತೆ ಇರಬೇಕು. ಮನೆಗೆ ಹೊಸದಾಗಿ ಬಂದವಳು ಮನೆಗೆ ತಾನೊಬ್ಬಳೇ ಹೆಂಗಸಾದರೆ, ಅದು ಅತ್ತೆಯಿಲ್ಲದ ಮನೆಯಾದರೆ, ಆಗ ಸೊಸೆಯಾಗಿ ಬಂದವಳು ಮಣ್ಣಿನಲ್ಲಿ ಒಂದು ಅತ್ತೆಯ ಬೊಂಬೆಯನ್ನು ಮಾಡಿ ಆ ಮಣ್ಣತ್ತೆಗೆ ಎಲ್ಲ ಕೆಲಸಗಳನ್ನೂ ಹೇಳಿ ಅವಳ ಆಜ್ಞೆಯಂತೆ ನಡೆಯುತ್ತಿರುವಂತೆ ನಟಿಸಬೇಕು. ಹೀಗೆ ಅತ್ತೆ ಎಂಬ ಒಂದು ಪದಾರ್ಥ ಮನವಾಳ್ತೆಗೆ ಅವಶ್ಯವಾದ ವಸ್ತು. ಬದುಕಿದ ಮಾಮಿಯಾರ್ ಇಲ್ಲದಿದ್ದರೆ ಮಣ್ಣು ಮಾಮಿಯಾರ್ ಆದರೂ ಇರಬೇಕು. ಹಾಗೆ ನನ್ನ 'ಮಹಸೂಲಿ' ಕೆಲಸ.

ಆಮೇಲೆ ನಾನು ಮನೆಗೆ ಬರಬೇಕಲ್ಲ? ಆಗ ದಾರಿಯಲ್ಲಿ ಹೋಗುತ್ತಿದ್ದ ಯಾರೋ ಒಬ್ಬನು–ಒಕ್ಕಲಿಗನೋ ಬಣಜಿಗನೋ–ನನ್ನನ್ನು ಎತ್ತಿಕೊಂಡು ಹೋಗತಕ್ಕದ್ದೆಂದು ರಾಮನು ಹೇಳುವನು. ಜನ ಅದನ್ನು ನಡಸಿ ನನ್ನನ್ನು ಮನೆಗೆ ತಂದು ಬಿಡುವರು.

ರಾಮ

ಕೊಂಬಿನ ರಾಮನು ಊರಿನಲ್ಲಿ ಜನಕ್ಕೆ ಗಣ್ಯನಾಗಿದ್ದ. ಎಲ್ಲರೂ ಅವನನ್ನು ಪ್ರೀತಿಯಿಂದಲೂ ಮರ್ಯಾದೆಯಿಂದಲೂ ಕಾಣುತ್ತಿದ್ದರು.

ರಾಮನು ಯಾರೊ ಕೊಟ್ಟಿದ್ದ ಒಂದು ಒಳ್ಳೆಯ ಷರಾಯನ್ನೂ ಕೋಟನ್ನೂ ಧರಿಸಿರುತ್ತಿದ್ದ. ತಲೆಗೆ ರುಮಾಲು ಸುತ್ತಿರುತ್ತಿತ್ತು. ಆ ಕಾಲದಲ್ಲಿ ತಲೆಗೆ ಬಟ್ಟೆ ಇಲ್ಲದವನಿಗೆ ಮನ್ನಣೆಯಿಲ್ಲ. ರಾಮನ ತಂದೆ ಮಾದನೂ ತಲೆಗೆ ರುಮಾಲು ಬಿಗಿಯುತ್ತಿದ್ದ.

ರಾಮನು ನೋಟಕ್ಕೆ ಒಳ್ಳೆಯ ಆಳು. ವಿನಯ ತುಂಬಿದ ನಗುಮುಖ. ಅಮಲ್‌ದಾರರು ಮೊದಲಾದ ದೊಡ್ಡ ಅಧಿಕಾರಸ್ಥರು ಎಲ್ಲಿಗಾದರೂ ಹೋದಾಗ ಅಥವಾ ಬಂದಾಗ ಕೊಂಬು ಊದುವುದು ಅವನಿಗಿದ್ದ ಕರ್ತವ್ಯ. ರಾಮನು ತನ್ನ ಕೊಂಬನ್ನು ಯಾವಾಗಲೂ ಬಗಲಿಗೆ ತಗಲಿಹಾಕಿಕೊಂಡಿರುತ್ತಿದ್ದ. ಅವನು ಕೊಂಬು ಊದಿದ್ದನ್ನು ನಾನು ಎಷ್ಟೋ ಸಲ ಕೇಳಿದ್ದೇನೆ, ನೋಡಿದ್ದೇನೆ. ನನ್ನ ಹುಡುಗತನದಲ್ಲಿ ಒಂದು ಸಾರಿ ಅದನ್ನು ಊದಬೇಕೆಂದು ನನಗೆ ಆಸೆಯಾಯಿತು. ರಾಮನನ್ನು ಕೇಳಿದೆ. ಆತ,

“ಅಯ್ಯಯ್ಯೋ! ಸ್ವಾಮಿ, ಅದು ನನ್ನ ಎಂಜಲಾಗೈತೆ. ನೀವು ಮುಟ್ಟಬಾರದು” ಎಂದ. ನಮ್ಮ ತಾತನಿಗೂ ಆ ಮಾತು ಹೇಳಿದ. ನಮ್ಮ ತಾತ ನನ್ನನ್ನು ಹಾಸ್ಯಮಾಡಿ ನಕ್ಕರು.

***

ನಾವು ಹುಣಿಸೆ, ಹೊಂಗೆಗಳ ಫಸಲು ಬಿಡಿಸುತ್ತಿದ್ದ ಜಾಗಕ್ಕೂ ಹೊಲೆಗೇರಿಗೂ ಸಮೀಪ. ನಾನಿದ್ದ ಕಡೆಗೆ ಅದು ಕಾಣಿಸುತ್ತಿತ್ತು. ನಾನು ರಾಮನನ್ನು ಕೇಳಿದೆ ಅದೇನೆಂದು. ಆತನು ಅದು ತನ್ನ ಮನೆ ಎಂದು ಹೇಳಿದ. “ನನ್ನನ್ನು ಅಲ್ಲಿಗೆ ಕರೆದುಕೊಂಡು ಹೋಗು” ಎಂದು ನಾನು ಕೇಳಿ ಕೊಂಚ ಹಟ ಮಾಡಿದೆ. ಮಾದನು ಇದನ್ನು ನೋಡುತ್ತಿದ್ದ. ಅವನು ಹೇಳಿದ:

“ಸ್ವಾಮಿ, ನೀವು ಅಲ್ಲಿಗೆ ಬರಬಾರದ್ರ. ನೀವು ಬಂದರೆ ನಮ್ಮ ಮನೆಯೆಲ್ಲ ಉರಿದು ಬೂದಿಯಾದೀತು. ಬ್ರಾಂಬರು ನಮ್ಮ ಕೇರಿಗೆ ಬರಬಾರದು ಸ್ವಾಮಿ.”

ಎಂದು ನನ್ನ ಹಟವನ್ನು ಮುಗಿಸಿದ.

ಈಗ ಎಪ್ಪತ್ತೈದು ವರ್ಷಗಳ ಅನಂತರ ನಾನು ಅದನ್ನು ನೆನಸಿಕೊಳ್ಳುತ್ತಿದ್ದೇನೆ. ಮಾನುಷದ ಯೋಗ್ಯತೆಯಲ್ಲಿ, ಸೌಜನ್ಯದಲ್ಲಿ, ಸತ್ಯವಾಕ್ಕಿನಲ್ಲಿ, ಪ್ರಾಮಾಣಿಕವಾದ ನಡತೆಯಲ್ಲಿ ಮಾದ ರಾಮರಿಗಿಂತ ಮೇಲಕ್ಕೆ ಹತ್ತುವ ಜನವನ್ನು ಇದುವರೆಗೆ ನಾನು ಯಾವ ಜಾತಿಯಲ್ಲಿಯೂ ಕಂಡಿಲ್ಲ.

ಗುಣಾಃ ಪೂಜಾಸ್ಥಾನಮ್ ॥

ಪಚ್ಚಪ್ಪ ಮೊದಲಿ

ನಾನು ಚಿಕ್ಕಂದಿನಲ್ಲಿ, ನಮ್ಮ ಮನೆಯಲ್ಲಿ ಇದ್ದ ಒಂದು ದೊಡ್ಡ ತಾಂಬಾಳೆಯನ್ನೂ ಒಂದು ದೊಡ್ಡ ಆಳಿಗೆ (ಬುದ್ಧಿವಂತ)ಯನ್ನೂ ನೋಡಿದ್ದೆ. ಆ ಸಾಮಾನಿನ ಉಪಯೋಗ ನನಗೆ ತಿಳಿದಿರಲಿಲ್ಲ. ಆ ಎರಡು ಸಾಮಾನನ್ನೂ, ಇನ್ನು ಯಾವಯಾವುದೋ ಹಳೆಯ ಸಾಮಾನುಗಳನ್ನೂ ಉಗ್ರಾಣದ ಮನೆಯ ಮೂಲೆಯಲ್ಲಿ ಹಾಕಿದ್ದರು. ಅದೇನೆಂದು ನನ್ನ ಅಜ್ಜಿಯನ್ನು ಕೇಳಿದೆ. ಆಕೆ ಕೊಂಚ ಅಪಹಾಸ್ಯದಿಂದ ಹೇಳಿದರು:

“ಇದು ನಿನ್ನ ಚಿಕ್ಕ ತಾತನ ಸಂಪಾದ್ಯ.”

ಚಿಕ್ಕ ತಾತ ಎಂದರೆ ನನ್ನ ತಾತನ ಎರಡನೆಯ ತಮ್ಮ. ಆತನ ಹೆಸರು ಶೀನಪ್ಪ (ಅಥವಾ ಶೀನಣ್ಣ). ಈತನದು ಒಂದು ಚರಿತ್ರೆ ಉಂಟು. ಸದ್ಯಕ್ಕೆ ಹೇಳಬೇಕಾದದ್ದು ಆತನು ಪಚ್ಚಪ್ಪ ಮೊದಲಿಯಾರರ ಗುಮಾಸ್ತೆಯಾಗಿದ್ದನೆಂಬುದು.

ಪಚ್ಚಪ್ಪ ಮೊದಲಿ ಶೇಂದಿ ಕಂಟ್ರಾಕ್ಟರು. ಕೆಲವು ಕಾಲ ತುಂಬ ಐಶ್ವರ್ಯವಂತನಾಗಿದ್ದ. ಆತನ ಗಡಂಗಿಗೆ ದಿನ ಬಿಟ್ಟು ದಿನ ಅಥವಾ ಪ್ರತಿ ದಿನವೂ ಸಾರಾಯಿ ಪೀಪಾಯಿಗಳು ಬರುವುದು. ಆ ಪೀಪಾಯಿಗಳಿಂದ ಜಾಡಿಗಳೊಳಕ್ಕೆ ಆ ದ್ರಾವಕವನ್ನು ಸುರಿಯಿಸಿ ಶೇಖರ ಮಾಡಿಟ್ಟುಕೊಳ್ಳಬೇಕು. ಪೀಪಾಯಿಂದ ಜಾಡಿಗೆ ಸುರಿಯುವಾಗ ಕೊಂಚ ಚೆಲ್ಲುತ್ತದೆ. ಆ ಚೆಲ್ಲಿದ್ದನ್ನು ಕೂಡ ಉಳಿಸಿಕೊಳ್ಳುವುದಕ್ಕಾಗಿ ಆಳಿಗೆ ತಾಂಬಾಳೆಗಳ ಏರ್ಪಾಟು. ತಂಬಾಳೆ ಚಚ್ಚೌಕವಾದದ್ದು, ತಾಮ್ರದ್ದು, ಕಲಾಯಿ ಮಾಡಿದ್ದೆಂದು ನನ್ನ ಜ್ಞಾಪಕ. ಹಿತ್ತಾಳೆಯದಾಗಿದ್ದರೂ ಇದ್ದೀತು. ಆಳಿಗೆಯಂತೂ ತಾಮ್ರದ್ದು. ತಾಂಬಾಳೆಯ ಉದ್ದ ಸುಮಾರು ಮೂರು ಮೂರವರಡಿ, ಅಗಲ ಎರಡು ಎರಡೂವರೆ ಅಡಿ. ನಾಲ್ಕು ಪಕ್ಕಗಳಲ್ಲೂ ತಗಡನ್ನು ಗೋಡೆಗಳಂತೆ ಎಬ್ಬಿಸಿತ್ತು. ಸುಮಾರು ಮೂರು ಅಂಗುಲದಷ್ಟು ಎತ್ತರ. ಈ ಚೌಕ ತಾಂಬಾಳೆಯಲ್ಲಿ ಜಾಡಿಗಳನ್ನಿಟ್ಟು ಅದರೊಳಕ್ಕೆ ಮದ್ಯ ಸುರಿಸುವುದು.

ಪಚ್ಚಪ್ಪ ಮೊದಲಿ ವ್ಯಾಪಾರ ನಿಲ್ಲಿಸಿದಾಗ ಈ ಎರಡು ಸಾಮಾನುಗಳನ್ನು ನಮ್ಮ ಶೀನಣ್ಣತಾತನಿಗೆ ಮುಫತ್ತಾಗಿ ಕೊಟ್ಟರಂತೆ. ಇದರಿಂದ ಶೀನಣ್ಣನ ವಿಷಯದಲ್ಲಿ ತಾತ್ಸಾರ, “ಏನು ತಂದೆ ಮನೆಗೆ!” ಎಂದು.

ಬ್ರಾಹ್ಮಣ ಭಕ್ತಿ

ಪಚ್ಚಪ್ಪ ಮೊದಲಿ ಐಶ್ವರ್ಯವಂತನಾಗಿದ್ದನೆಂದು ಹೇಳಿದೆ. ನಾನು ಆತನನ್ನು ನೋಡಿಲ್ಲ. ಆತನ ಮನೆಯನ್ನು ನೋಡಿದ್ದೇನೆ. ಅದು ಭಾರಿ ಮನೆ, ಸುಮಾರು ನೂರು ನೂರಿಪ್ಪತ್ತು ಅಂಕಣದ ಮನೆ ಎಂದು ಹೇಳುತ್ತಿದ್ದರು. ಆದರೆ ನಾನು ನೋಡುವ ವೇಳೆಗೆ ಅದರಲ್ಲಿ ಉಳಿದಿದ್ದದ್ದು ಎಂಟು ಹತ್ತು ಅಂಕಣಗಳಷ್ಟರ ಎರಡು ಕೋಣೆ ಮಾತ್ರ. ಉಳಿದದ್ದರಲ್ಲಿ ಬಹು ಭಾಗ ಬ್ರಾಹ್ಮಣರಿಗೆ ದಾನವಾಗಿಹೋಗಿತ್ತು.

ಇದು ಪಾಯಿಂಟು. ಪಚ್ಚಪ್ಪ ಮೊದಲಿಯಾರಿನ ಬ್ರಾಹ್ಮಣರಲ್ಲಿ ತುಂಬ ಭಕ್ತಿ. ಆದರೆ ನನ್ನ ತಾತನನ್ನು ಕುರಿತು ದಿನಕ್ಕೆ ಒಂದು ಸಾರಿಯಾದರೂ ತನ್ನ ಅಭಿಪ್ರಾಯವನ್ನು ಹೇಳುತ್ತಿದ್ದನಂತೆ, ಹೀಗೆ:

"ಅಯ್ಯಾ ಶೀನಪ್ಪ, ನೀ ಬಾಪಿನ ಜಾತಿ ಉಂದೇ, ದಾನ್ನಿ ಚಪ್ಪು ತೀಸು ಕೊನಿ ಕೊಟ್ಟಾಲನಯ್ಯ."

ಶೀನಪ್ಪ ಇದನ್ನು ಕೇಳಿ ನಗುತ್ತಿದ್ದರು. ಒಂದೆರಡು ನಿಮಿಷ ಬಿಟ್ಟು:

ಶೀ: "ಬಾಪಿನೋಳ್ಳನೇ ಪಿಲಚಿ ಇಸ್ತೂ ಉಂಡಾವೆ?"

ಪ: "ಪೋನಿ ಪೋ, ಪುಣ್ಯಮೊಸ್ತುಂದಿ."

ಹೀಗೆ ಹೇಳಿ ಇಬ್ಬರೂ ನಗುತ್ತಿದ್ದರು.

ಪಚ್ಚಪ್ಪ ಮೊದಲಿ ವ್ಯಾಪಾರ ಭರಾಟೆಯಿಂದ ನಡೆಯುತ್ತಿದ್ದಾಗ ಬಳಿಗೆ ಬಂದ ಯಾಚಕರಿಗೆ ಹಿಂದು ಮುಂದು ನೋಡದೆ ಹಣ ಕೊಟ್ಟಿದ್ದ. ಮದುವೆ ಎಂದು ಬಂದವರು, ಮುಂಜಿ ಎಂದು ಬಂದವರು, ಮನೆ ಕಟ್ಟಿಕೊಳ್ಳಬೇಕೆಂದು ಬಂದವರು, ಗುಡಿ ಎಂದು ಬಂದವರು, ರಾಮೋತ್ಸವ ಎಂದು ಬಂದವರು, ಎಲ್ಲರಿಗೂ ಬಿಡುಗೈಯಿಂದ ಅವರವರಿಗೆ ಸಂತೋಷವಾಗುವಂತೆ ಹಣ ಕೊಟ್ಟ. ಕಡೆಗೆ ಆತನ ವ್ಯಾಪಾರ ಕಡಮೆಯಾಗಿ ನಷ್ಟ ಮೊದಲಾದ ಮೇಲೆ ಬ್ರಾಹ್ಮಣರು ಬಂದು ಕೇಳಿದರೆ,

“ಅಯ್ಯ, ನಾನು ಏನು ಕೊಟ್ಟೇನು? ನನ್ನಲ್ಲಿ ಏನು ಉಳಿದಿದೆ? ಇರುವುದು ಈ ಮನೆಯೊಂದೇ ಇದರಲ್ಲಿ ನಾಲ್ಕು ಅಂಕಣ ಕಿತ್ತುಕೊಂಡು ಹೋಗು.” –ಎನ್ನುತ್ತಿದ್ದ. ಅವರು ಸಂಕೋಚವಿಲ್ಲದೆ ನಾಲ್ಕಂಕಣ ಆರಂಕಣ ಕಿತ್ತು ಅದರ ಮರ ಮಟ್ಟುಗಳನ್ನೂ ಪಾತ್ರೆ ಸಾಮಾನುಗಳನ್ನೂ ತೆಗೆದುಕೊಂಡು ಹೋದರು.

ಪೂರ್ವದಲ್ಲಿ ಪರಶುರಾಮನು ಸಮಸ್ತ ಭೂಮಂಡಲವನ್ನೂ ಬ್ರಾಹ್ಮಣರಿಗೆ ದಾನ ಕೊಟ್ಟಾಗ ಅವರು:

“ಈಗ ಭೂಮಿಯೆಲ್ಲ ನಮ್ಮದಾಯಿತು. ನಿನಗೆ ಇರಲು ಸ್ಥಳವೆಲ್ಲಿ?” ಎಂದರಂತೆ. ಬಹುಶಃ ಇಂಥ ನಡವಳಿಕೆಯನ್ನು ನೋಡಿಯೇ ಪಚ್ಚಪ್ಪ ಮೊದಲಿಗೆ ಬೇಸರ ಬಂದಿರಬೇಕು. ಅವರ ವ್ಯಾಪಾರ ಸಂಬಂಧದಲ್ಲಿಯೂ ಗುಮಾಸ್ತ ವಗೈರೆಗಳು ಬ್ರಾಹ್ಮಣರಾಗಿದ್ದವರು ಕೈವಾಡ ತೋರಿಸಿರಬೇಕು. ಹೀಗೆ ರೋಸಿಹೋದ ಮನುಷ್ಯನ ಮಾತು ನಮ್ಮ ಶೀನಣ್ಣತಾತನಿಗೆ ಪಚ್ಚಪ್ಪ ಮೊದಲಿ ಹೇಳುತ್ತಿದ್ದದ್ದು.

ಈ ಹೊತ್ತು ನೆನಯಬೇಕಾದದ್ದು ಪಚ್ಚಪ್ಪ ಮೊದಲಿಯ ಬೇಸರದ ಮಾತನ್ನಲ್ಲ. ಆತ ಬೇಸರವನ್ನು ಬದಿಗಿರಿಸಿ ಅಭ್ಯಾಸ ಮಾಡಿಕೊಂಡಿದ್ದ ಉದಾರತೆಯನ್ನು. ಅಂಥ ಜನ ಪೂರ್ವಕಾಲದಲ್ಲಿ ಇದ್ದರು.

೧೬

ಬಂಡಿ ರಸೂಲ್‌ಖಾನ್

ನಾನು ಪ್ಯಾಸ್ ಮಾಡಿರುವ ಪರೀಕ್ಷೆಗಳು ಎರಡು. ಮೊದಲನೆಯದು ಕನ್ನಡ ಲೋವರ್ ಸೆಕಂಡರಿ. ಅದು ಬಹುಶಃ ೧೮೯೮-೯೯ರಲ್ಲಿ. ಆ ಕಾಲಕ್ಕೆ ನಮ್ಮ ಊರಿಗೆ ಇಂಗ್ಲಿಷ್ ಸ್ಕೂಲ್ ಬಂದಿರಲಿಲ್ಲ. ಎರಡನೆಯ ಪರೀಕ್ಷೆ ಇಂಗ್ಲಿಷ್ ಲೋವರ್ ಸೆಕೆಂಡರಿ. ಇದನ್ನು ಪ್ಯಾಸ್ ಮಾಡಿದ್ದು ಬಹುಶಃ ೧೯೦೦ರಲ್ಲಿ. ಇದರ ಕಥೆ ಬೇರೆ.

ಇಂಗ್ಲಿಷ್ ಲೋವರ್ ಸೆಕಂಡರಿ ಆದ ಮೇಲೆ ಮುಂದಿನ ಓದಿನ ಯೋಚನೆ. ನಮ್ಮ ಮನೆಯಲ್ಲಿ ಯಾರೂ ಅದಕ್ಕೆ ಹೆಚ್ಚು ಉತ್ಸಾಹಿಗಳಾಗಿರಲಿಲ್ಲ. ನನ್ನನ್ನು ಪರಸ್ಥಳಕ್ಕೆ ಕಳುಹಿಸುವುದು ನನ್ನ ಅಜ್ಜಿಗೆ ಸುತಾರಂ ಇಷ್ಟವಿರಲಿಲ್ಲ. “ಕಣ್ಣು ಮುಂದಿನ ಮಗು ಕಣ್ಣು ಮುಂದೆ ಇರಬೇಕು, ನಾನು ಬದುಕಿರುವಷ್ಟು ದಿವಸ” –ಎಂದು ಆಕೆಯ ಹಟ. ಆಗ್ಗೆ ನನ್ನ ಅಜ್ಜಂದಿರು ತೀರಿಹೋಗಿದ್ದರು. ಆದದ್ದರಿಂದ ಸಂಸಾರದ ಹಣಕಾಸಿನ ಮುಗ್ಗಟ್ಟು ಅನುಭವಕ್ಕೆ ಬರುತ್ತಿತ್ತು. ಆ ಕಾಲದಲ್ಲಿ ಪರಸ್ಥಳಕ್ಕೆ ಹಣ ಕಳುಹಿಸುವುದೆಂದರೆ ಕಷ್ಟದ ಮಾತು. ಮನೆಗೆ ದವಸ ಧಾನ್ಯ ಬರುತ್ತಿತ್ತು. ಹತ್ತು ಮಂದಿ ಭೋಜನಕ್ಕೆ ಬಂದರೆ ಚಿಂತೆಯಿಲ್ಲದೆ ಅವರಿಗೆ ಉಪಚಾರ ಮಾಡಬಹುದಾಗಿತ್ತು. ಹಣದ ಮಾತು ಬೇರೆ. ಆದದ್ದರಿಂದ ನನ್ನ ಚಿಕ್ಕಜ್ಜಂದಿರು ಹಿಂದೇಟು ಹಾಕುತ್ತಿದ್ದರು.

ನನ್ನ ತಂದೆಗಾದರೋ ಮನಸ್ಸು ಡೋಲಾಯಮಾನವಾಗಿತ್ತು. ಮನೆಯೊಳಗಿನ ಸಂದರ್ಭ ನೋಡಿದರೆ “ಓದು ಇಷ್ಟೇ ಸಾಕು, ಹೆಚ್ಚು ಓದಿ ಏನಾಗಬೇಕಾಗಿದೆ? ಅಧ್ಯಯನ ಮಾಡಲಿ. ಸಂಸ್ಕೃತ ಕಲಿಯಲಿ” –ಇದು ಒಂದು ಪಕ್ಷ. ಇನ್ನೊಂದು ಪಕ್ಷ ಸ್ನೇಹಿತರದು: “ಈ ಹುಡುಗನನ್ನು ಹೇಗಾದರೂ ಓದಿಸಲೇಬೇಕು. ಅವನು ಇಂಗ್ಲಿಷ್ ಕಲಿಯಲೇಬೇಕು.” ಇದು ಮಿತ್ರಪಕ್ಷ.

ಈ ಮಿತ್ರವರ್ಗದಲ್ಲಿ ಮುಖ್ಯರಾದವರು ರಸೂಲ್‌ಖಾನ್ ಸಾಹೇಬರು.

ರಸೂಲ್‌ಖಾನರನ್ನು “ಬಂಡಿ ರಸೂಲ್‌ಗಾಡು” ಎಂದು ಕರೆಯುತ್ತಿದ್ದರು. ಆತನಿಗೆ ಯಾವ ಓದೂ ಬಾರದು. ತನ್ನ ಹಿಂದೂಸ್ಥಾನಿಯ ಜೊತೆಗೆ ತೆಲುಗನ್ನು ಚೆನ್ನಾಗಿ ಮಾತನಾಡುತ್ತಿದ್ದ.

ಕನ್ನಡವನ್ನೂ ಬಲ್ಲ. ನನ್ನ ವಿಷಯದಲ್ಲಿ ಉತ್ಸಾಹ–ಒಂದು ಪ್ರಮಾದದ ಕಾರಣದಿಂದ ನಾನು ಮಹಾ ಬುದ್ಧಿವಂತ, ಇಂಗ್ಲಿಷ್ ಕಲಿತುಬಿಟ್ಟರೆ ಮೇಲಮೇಲಕ್ಕೆ ಬರುತ್ತೇನೆ–ಎಂದು ಆತನ ಭ್ರಾಂತಿ. "ಇಂಗ್ಲಿಷ್ ಅಕ್ಷರ ಕೂಡ ಬರದೆ ಇದ್ದವನು ಎರಡೇ ವರ್ಷದಲ್ಲಿ ಲೋವರ್ ಸೆಕಂಡರಿ ಪ್ಯಾಸ್ ಮಾಡಿಬಿಟ್ಟನಲ್ಲ!" -ಇದು ಆ ಜನದ ಆಶ್ಚರ್ಯ.

ರಸೂಲ್‌ಖಾನರಿಗೆ ತಂದೆ ತಮ್ಮಂದಿರಿದ್ದರು. ಕೊಂಚ ಜಮೀನಿತ್ತು. ಆ ಆರಂಬವೇ ಆ ಮನೆಗೆ ಮುಖ್ಯ ಅನ್ನಾಧಾರ. ಅದರ ಜೊತೆಗೆ ಬಾಡಿಗೆಗೆ ಬಂಡಿ ಹೊಡೆಯುವುದು.

ಬೆಂಗಳೂರಿನಿಂದ ಮದರಾಸಿಗೆ ಹೋಗುವ ರಸ್ತೆಯಲ್ಲಿ ಅರವತ್ತನೆಯ ಮೈಲಿಯಲ್ಲಿ ಮುಳಬಾಗಲು. ಆ ಊರು ಮೊದಲಾಗುವ ಕಡೆ ರಸ್ತೆಯ ದಕ್ಷಿಣಕ್ಕೆ ತಿರುಗಿ ಎರಡು ಫರ್ಲಾಂಗು ಹೋದರೆ ಸೋಮೇಶ್ವರಪಾಳ್ಯ. ಆ ಪಾಳ್ಯಕ್ಕೆ ಮುಖ್ಯ ರಸ್ತೆಯಿಂದ ತಿರುಗುವ ಕಡೆ ಪೂರ್ವದಿಕ್ಕಿನಲ್ಲಿ ಒಂದಿಷ್ಟು ಬಯಲು. ಅದರಲ್ಲಿ ಮೂರು ನಾಲ್ಕು ಭಾರಿ ಹುಣಿಸೆಮರಗಳು. ಆ ಮರಗಳ ನಡುವಣ ಒಂದು ಹಳೆಯ ಮಣ್ಣುಮಾಳಿಗೆ ರಸೂಲ್‌ಖಾನರ ಮನೆ.

ರಸೂಲ್‌ಖಾನರು ಮುಖ್ಯವಾಗಿ ಇಟ್ಟುಕೊಂಡಿದ್ದ ಉದ್ಯೋಗ ನಮಾಜು. ದಿನಕ್ಕೆ ಐದು ಸಾರಿಯೋ ಏಳು ಸಾರಿಯೋ ನಮಾಜು ಮಾಡುವರು. ಸಾರಿ ಸಾರಿಯೂ ಸ್ನಾನ ಮಾಡುವರು. ಅವರ ಉಡುಪು: ತಲೆಯ ಮೇಲೆ ಒಂದು ಸಣ್ಣ ಮಾಸಲು ಟೋಪಿ, ನಡುವಿನ ಮೇಲೆ ಒಂದು ಚೌಕಳಿ ವಸ್ತ್ರ. ಇಷ್ಟೇ ಅವರ ದಿರಸು. ತುಂಬ ಚಳಿಯಾದಾಗ ಒಂದು ಬೊಂತೆಯನ್ನೋ ಜಮಖಾನವನ್ನೋ ಹೊದೆದುಕೊಳ್ಳುವರು.

ಮನುಷ್ಯ ಹೀಗೆ ಬಡವನಾಗಿದ್ದರೂ ಸಾಧು. ಒಳ್ಳೆಯತನದ ಜೊತೆಗೆ ಅವರಲ್ಲಿ ಸ್ವಲ್ಪ ಹಾಸ್ಯದ ಪ್ರವೃತ್ತಿ ಸೇರಿತ್ತು. ಕಳೆಕಳೆಯಾಗಿ ನಗುನಗುತ್ತ ಮಾತನಾಡುವರು. ಆದದ್ದರಿಂದ ಎಲ್ಲರಿಗೂ ಪ್ರಿಯರಾಗಿದ್ದರು.

ಮೇಲೆ ಹೇಳಿದ ಸೋಮೇಶ್ವರಪಾಳ್ಯದಲ್ಲಿ ಗಣ್ಯನಾದ ಒಬ್ಬ ಗೃಹಸ್ಥ ಮಾರಶೆಟ್ಟಿ ಎಂಬಾತ ಈಗ ಜಾತಿಯಲ್ಲಿ ಬಣಜಿಗ. ಈತನ ಉದ್ಯೋಗ ತೆಲುಗು ಸ್ಕೂಲಿನಲ್ಲಿ ಉಪಾಧ್ಯಾಯತನ. ನೋಟಕ್ಕೆ ವರ್ಚಸ್ವಿಯಾಗಿದ್ದ. ಆತ ಮೈಸೂರಿನಲ್ಲಿ ಕೆಲವು ಕಾಲ ಅವರ ಕುಲಗುರುಗಳಾದ ವೆಂಕಟಾಚಾರ್ಯರ ಮನೆಯಲ್ಲಿದ್ದುಕೊಂಡು ಮೆಟ್ರಿಕ್ಯುಲೇಷನ್‌ವರೆಗೂ ಇಂಗ್ಲಿಷ್ ವಿದ್ಯೆ ಓದಿದ್ದ. ನಡೆನುಡಿಗಳಲ್ಲಿ ತುಂಬ ಸಂಭಾವಿತನಾಗಿದ್ದ. ಊರಿನ ಜನರೆಲ್ಲ ಆತನನ್ನು

ಮೆಚ್ಚಿಕೊಂಡಿದ್ದರು. ಯಾವ ತಂಟೆ ಯಾವ ತಕರಾರು ಬಂದರೂ ಎಲ್ಲರೂ ಮಾರಶೆಟ್ಟಿಯ ಬಳಿಗೆ ಹಿತೋಪದೇಶಕ್ಕಾಗಿ ಬರುವರು. ಆತ ತಾಳ್ಮೆವಂತ, ಸಭ್ಯ.

ಆತನಿಗೂ ನನ್ನ ತಂದೆಗೂ ಗಾಢವಾದ ಸ್ನೇಹ. ಈ ಸ್ನೇಹಗೋಷ್ಠಿಗೆ ಸೇರಿದ್ದವರು ಸುಬ್ಬಾಭಟ್ಟರು, ರಾಮಚಂದ್ರಾಚಾರ್ರು, ವಗೈರೆ. ಈ ಮಿತ್ರಗೋಷ್ಠಿಗೆ ರಸೂಲ್ ಖಾನರು ಸೇರಿದ್ದರು.

ನನ್ನ ಭವಿಷ್ಯ

ಈ ಗೋಷ್ಠಿ ಸೇರಿದಾಗ ನನ್ನ ಭವಿಷ್ಯ ಚರ್ಚೆಗೆ ಬರುತ್ತಿತ್ತು. ನನ್ನ ತಂದೆ ಪರಸ್ಥಳದ ಓದು ಸಾಧ್ಯವೇ ಇಲ್ಲವೆಂದು ಹೇಳುತ್ತಿದ್ದರು. ಮಿಕ್ಕವರು ಒಂದು ಕ್ಷಣ ಹೀಗೆ, ಒಂದು ಕ್ಷಣ ಹಾಗೆ ತೂಗಾಡುತ್ತಿದ್ದರು. ರಸೂಲ್ ಮಾತ್ರ ಮಿಕ್ಕವರ ಮಾತು ಮುಗಿದ ಮೇಲೆ ತೀರ್ಮಾನ ಹೇಳಿದರು:

“ನೀವೆಲ್ಲ ಏದಾದರೂ ಹೇಳಿ. ಆ ಹುಡುಗನನ್ನು ಓದಿಸಲೇಬೇಕು. ನನ್ನ ಕೈಯಲ್ಲಾಗುವಷ್ಟು ನಾನು ಮಾಡಿಬಿಡುತ್ತೇನೆ. ಅದೇನು ಅಂತೀರೋ–ಶನಿ ಶನಿವಾರ ನಾನು ಹೇಗಿದ್ದರೂ ಬಂಡಿ ಹೊಡೆದುಕೊಂಡು ಹೋಗುತ್ತೇನೆ, ರಾಬರ್ಟ್‌ಸನ್ ಪೇಟೆಗೆ. ಅಲ್ಲಿಂದ ಬೌರಿಂಗ್‌ಪೇಟೆ ಮೂರು ನಾಲ್ಕು ಮೈಲಿ. ಈ ಹುಡುಗನನ್ನು ನಾನು ನನ್ನ ಗಾಡಿಯಲ್ಲಿ ಹಾಕಿಕೊಂಡು ಬೌರಿಂಗ್‌ಪೇಟೆ ರೈಲ್ವೆ ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಬೆಂಗಳೂರಿಗೆ ಟಿಕೆಟ್ ತೆಗೆದುಕೊಟ್ಟು ಒಂದು ರೂಪಾಯಿ ಕೈಖರ್ಚಿಗೆ ಕೊಡುತ್ತೇನೆ. ಅವನು ತಿರುಪೆ ಮಾಡಿಕೊಂಡಾದರೂ ಅಲ್ಲಿಯೇ ಓದಲಿ. ಅವನ ಓದಂತೂ ನಡೆಯಲೇಬೇಕು.”

ರಸೂಲ್‌ಖಾನರ ಈ ಮಾತನ್ನು ಕೇಳಿ ಎಲ್ಲರೂ ಬೆರಗಾದರು. “ಇವನಿಗೇನು ಇಷ್ಟು ಹಟ! ಒಂದು ಅಕ್ಷರ ಕಂಡವನಲ್ಲ. ಮನೆಯಲ್ಲಿ ಊಟಕ್ಕೆ ಪರದಾಟ. ಇದು ಯಾತರ ಧೈರ್ಯ?” –ಎಂದರು ಕೆಲವರು. ರಸೂಲ್‌ಖಾನ್ ಸಾಹೇಬರು ತಮ್ಮ ಎದೆಯ ಮೇಲೆ ಕೈಯಿಟ್ಟುಕೊಂಡು,

“ನನಗೆ ಏನೋ ಅಲ್ಲಿ ಹೇಳ್ತದೆ–ಹೀಗೆ ಮಾಡಬೇಕಂತೆ” –ಎಂದರು.

ಅಲ್ಲಿಂದ ಮುಂದಿನ ಶನಿವಾರ ನನ್ನ ಪ್ರಯಾಣ.

ಆ ಕಾಲದಲ್ಲಿ ಚಿನ್ನದ ಗಣಿ ಗೊಡ್ಡ ವ್ಯಾಪಾರ ಸ್ಥಳ. ರಾಬರ್ಟ್‌ಸನ್ ಪೇಟೆಯ ಬಳಿ ಭಾನು ಭಾನುವಾರ ಸಂತೆ. ಭಾರಿ ಸಂತೆ. ಹತ್ತಾರು ಸಾವಿರ ಜನ ಅಲ್ಲಿ ಬಂದು ತಮ್ಮ ತಮ್ಮ ಕುಟುಂಬಕ್ಕೆ ಬೇಕಾದ ಒಂದು ವಾರದ ಮಟ್ಟಿನ ಅಕ್ಕಿ ಬೇಳೆ ರಾಗಿ ಮೊದಲಾದ ಸಾಮಾಗ್ರಿಗಳನ್ನು ವ್ಯಾಪಾರ ಮಾಡಿಕೊಂಡು ಹೋಗುವರು. ಆ ಸಂತೆಯ ವ್ಯಾಪಾರಕ್ಕಾಗಿ ಮುಳಬಾಗಲಿನಿಂದ ದವಸ ಧಾನ್ಯಗಳನ್ನು ವರ್ತಕರು ಸಾಗಿಸಿಕೊಂಡು ಹೋಗುತ್ತಿದ್ದರು.

ಈ ಭರ್ತಿ ಗಾಡಿಗಳು ಸಾಮಾನ್ಯವಾಗಿ ಎಂಟು ಹತ್ತು ಜೊತೆಯಾಗಿ ರಾತ್ರಿ ಪ್ರಯಾಣ ಮಾಡುತ್ತಿದ್ದವು. ಶನಿವಾರ ರಾತ್ರಿ ಸುಮಾರು ಹತ್ತು ಘಂಟೆಗೆ ಹೊರಡುವವು. ಭಾನುವಾರ ಬೆಳಗ್ಗೆ ಐದು ಘಂಟೆಗೆ ರಾಬರ್ಟ್‌ಸನ್ ಪೇಟೆಯನ್ನು ತಲಪುವುವು.

ಆ ಪ್ರಯಾಣ ನನ್ನ ಪಾಲಿಗೆ ದೊಡ್ಡ ವಿನೋದವಾಯಿತು. ಗಾಡಿಯಲ್ಲಿ ಹಾಸಿಗೆದಿಂಬು ಮೊದಲಾದದ್ದೇನೂ ಇಲ್ಲ. ಅಕ್ಕಿ ಬೇಳೆ ಮೂಟೆಗಳು ಎಗ್ಗಡ ದಿಗ್ಗಡಾಗಿದ್ದವು. ಅದರ ಜೊತೆಗೆ ಇಕ್ಕಟ್ಟು; ಕೈಕಾಲು ತಿರುಗಿಸುವುದಕ್ಕೆ ಜಾಗವಿರಲಿಲ್ಲ. ಇಷ್ಟೆಲ್ಲ ಆದರೂ ಗಾಡಿ ಹೋಡೆಯುವವರ ಹಾಡಿಕೆ, ಅವರ ಮಾತು ಕಥೆ–ಇವು ಬೇಸರವನ್ನು ಕಳೆದವು.

ಚಂಗಪ್ಪ

ಆ ಏಳೆಂಟು ಬಂಡಿ ಹೊಡೆಯುವವರ ಪೈಕಿ ಚಂಗಪ್ಪ ಎಂಬಾತ ಒಬ್ಬ. ಈತನು ಸೋಮೇಶ್ವರಪಾಳ್ಯದವನು. ಬಹುಶಃ ಮಾರಶೆಟ್ಟಿಗೆ ನಂಟ. ಈಗ ಗಾಡಿಯ ಮುಂಕಣಿಯ ಮೇಲೆ ಕುಳಿತು ಎತ್ತುಗಳನ್ನು ನಡಸುವನು. ಊರು ಬಿಟ್ಟು ಒಂದೆರಡು ಮೈಲಿ ಹೋದ ಮೇಲೆ ಸುಮಾರು ಹನ್ನೊಂದು ಹನ್ನೆರಡು ಘಂಟೆಯಲ್ಲಿ ಹಾಡಲಾರಂಭಿಸುವನು, ತನ್ನ ವಿನೋದಕ್ಕಾಗಿ. ತಂಪಿನ ವೇಳೆ ದಾರಿಯ ಧೂಳು ವಾಯುಮಂಡಲವನ್ನು ಬಿಟ್ಟು ನೆಲಕ್ಕಿಳಿದಿತ್ತು. ಅಂಥ ಪ್ರಶಾಂತ ವಾತಾವರಣದಲ್ಲಿ ಹೊರಟ ಕಂಠಸ್ವರದ ಇಂಪು ಬಹು ದೂರ ವ್ಯಾಪಿಸುವುದು. ನಮ್ಮ ಚಂಗಪ್ಪನ ಹಾಡಿಕೆ ಇದು.

ಬಂಡಿಯ ಚಂಗಪ್ಪನ ಹೆಸರು ಬಂದಾಗ ನನಗೆ ಆತನ ತಂಗಿಯೋ ಅಕ್ಕನೋ ಆದ ಚಂಗಮ್ಮನ ಹೆಸರು ಜ್ಞಾಪಕಕ್ಕೆ ಬರುವುದು ಸ್ವಾಭಾವಿಕ. ಆಕೆ ಬಹು ಕಳೆಕಳೆಯಾದ ಮುತ್ತೈದೆ. ಆ ಸಂಸಾರಕ್ಕೆ ಒದಗಿಸಲು ಒಂದೆರಡು ಮನೆಗೆ ಹಾಲುಕೊಡುವ ಕೆಲಸವನ್ನೂ ಮಾಡಬೇಕಾಯಿತು. ಹಾಗೆ ಚಂಗಮ್ಮ ದಿನ ದಿನವೂ ಬೆಳಿಗ್ಗೆ ನಮ್ಮ ಮನೆಗೆ ಬರುತ್ತಿದ್ದಳು-ನಮ್ಮ ಮನೆಯ ಆಕಳು ಎಮ್ಮೆ ಹಾಲು ಕೊಡದಿದ್ದಾಗ ಅಥವಾ ಆ ಹಾಲು ಸಾಲದೆ ಇರುವಾಗ. ಆಕೆ ಚಿಕ್ಕ ಹುಡುಗಿಯಾಗಿದ್ದಾಗ ಆಕೆಯನ್ನು ನೋಡುವುದೇ ನನಗೊಂದು ಸಂತೋಷವಾಗಿತ್ತು. ಹಣೆಯ ತುಂಬ ಕುಂಕುಮ. ಮೈತುಂಬ ಹೊದೆದ ಸೀರೆ. ಎಲ್ಲ ಚೊಕ್ಕಟ. ಮಾತು ಬಹು ನಯ. ಬಹು ಗಂಭೀರವಾದ ಹೆಂಗಸು. ಈ ಮಾತನ್ನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ಘನತೆ ಗಂಭೀರಗಳುಳ್ಳ ನಡವಳಿಕೆ ಹೆಚ್ಚಿನ ಐಶ್ವರ್ಯದಿಂದ ಬರತಕ್ಕದ್ದಲ್ಲ; ಅದು ಮನಸ್ಸಿನ ಒಳಗೆ ಆಗಿರುವ ಒಂದು ಸಂಸ್ಕಾರದಿಂದ ಬರತಕ್ಕದ್ದು-ಎಂಬುದನ್ನು ತೋರಿಸುವುದಕ್ಕೆ. ನಾನು ಕೆಲ ಮಂದಿ ಐಶ್ವರ್ಯವಂತರ ಮನೆಗಳನ್ನು ನೋಡಿದ್ದೇನೆ. ಆ ಮನೆಯ ಜನಕ್ಕೆ ಬಡ ಚಂಗಮ್ಮನ ಶುಚಿತ್ವ ಸೌಜನ್ಯಗಳಲ್ಲಿ ಹತ್ತರಲ್ಲೊಂದು ಪಾಲನ್ನಾದರೂ ದೇವರು ಕೊಡಲಿಲ್ಲವಲ್ಲ!-ಎಂದು ಕೊಂಡಿದ್ದೇನೆ.

ಉಷಾಗಾನ

ಚಂಗಪ್ಪ ಬಂಡಿ ಹೊಡೆಯುವಾಗ ಬೆಳಗಿನ ಜಾವದಲ್ಲಿ ಹಾಡುತ್ತಿದ್ದದ್ದು ಬಹು ಇಂಪಾಗಿತ್ತು. ಬಹುದೂರ ತೆಳುಗಾಳಿಯ ಮೇಲೆ ತೇಲಿ ಹರಿಯುತ್ತಿತ್ತು-ಎಂದು ಹೇಳಿದೆ. ಆತನ ಎರಡು ಮೂರು ಸಾರಿಯ ಹಾಡಿಕೆಯನ್ನು ನಾನು ಕೇಳಿದ್ದೇನೆ. ಆ ಹಾಡಿಕೆಯಲ್ಲಿ ರಾಗವಿರುತ್ತಿತ್ತು. ರಾಗವೆಂದರೆ ರಂಜನೆ. ಮನೋರಂಜನೆ ಮಾಡಲಾರದ ಸದ್ದನ್ನು ಯಾರಾದರೂ ಹಾಡಿಕೆ ಎಂದಾರೆ?

ಚಂಗಪ್ಪನದು ನಿಜವಾದ ಹಾಡಿಕೆ. ಅದು ಆತನ ಅಂತರಂಗದಿಂದ ಹೊರಹೊಮ್ಮಿ ಬಂದ ನೈಜವಾದ ಆನಂದಪ್ರವಾಹ. ಆದರೆ ಅದಕ್ಕೆ ಸ್ವರಮೇಳ ಕಳಾನಿಧಿಯ ಲಕ್ಷಣಗಳನ್ನು ಅನ್ವಯಿಸಿ ರಾಗನಿರ್ಣಯ ಮಾಡಬೇಕೆಂದರೆ ಅದು ಅಸಾಧ್ಯದ ಕೆಲಸ. ನಾನು ಚಂಗಪ್ಪನ ಹಾಡು ಕೇಳಿದಾಗ ನನಗೆ ರಾಗಗಳ ಹೆಸರುಗಳು ಗೊತ್ತಿರಲಿಲ್ಲ. ಗುರುತು ಮಾಡುವ ಶಕ್ತಿ ಇರಲಿಲ್ಲ.

ನನ್ನೊಡನೆ ಇದ್ದ ದೊಡ್ಡವರನ್ನು ಕೇಳಿದಾಗ ಅವರು “ರಾಗದ ಹೆಸರಿನಿಂದ ನಿನಗೇನು? ಕಿವಿಗೆ ಇಂಪಾಗಿದೆಯೋ ಇಲ್ಲವೋ? ಇನ್ನೂ ಕೇಳಬೇಕೆನಿಸುತ್ತದೋ ಇಲ್ಲವೊ?” ಎಂದು ನನಗೆ ಪ್ರತಿಪ್ರಶ್ನೆ ಹಾಕಿ ಬಾಯಿ ಮುಚ್ಚಿಸಿದರು. ನನಗೆ ಈಗ ಅನ್ನಿಸುತ್ತದೆ; ಆತ ಭೂಪಾಳಿ, ರೇಗುಪ್ತಿ, ಸಾವೇರಿ ಈ ಮೂರು ನಾಲ್ಕು ಪ್ರಾತಃಕಾಲದ ರಾಗಗಳನ್ನು ಬೆರಕೆಮಾಡಿಕೊಂಡು ಹಾಡುತ್ತಿದ್ದನೆಂದು.

“ಏರು ಕಾಡ ತೋಪುಲೋನ” ಇಷ್ಟು ಮಾತು ನನ್ನ ಜ್ಞಾಪಕದಲ್ಲಿದೆ. ಯಾವುದೋ ನದಿಯ ಪಕ್ಕದ ತೋಪಿನಲ್ಲಿ ಏನೋ ಪ್ರಸಂಗ ನಡೆಯಿತಂತೆ. ಇದನ್ನು ಒಂದೆರಡು ನಿಮಿಷ ರಾಗ ಸೆಳೆಯುವನು. ಸಂದರ್ಭವನ್ನರಿತು ಆ ಸಮೀಪದಲ್ಲಿದ್ದ ಜನ ನಗುವರು. ಮತ್ತೆ ಹಾಡು. ಪ್ರಯಾಣದ ಬೇಸರ ತೋರದೆಯೇ ದಾರಿ ಕಳೆದುಹೋಗುವುದು.

ಈಗ ರಸೂಲ್‌ಖಾನನ ಮಾತಿಗೆ ಹಿಂತಿರುಗೋಣ.

ಸ್ವಾರ್ಥತ್ಯಾಗ

ರಸೂಲ್‌ಖಾನರು ಪ್ರತಿಜ್ಞೆ ಮಾಡಿದ್ದಂತೆ ನನ್ನನ್ನೂ ನನ್ನ ಮೂಟೆಯನ್ನೂ ತನ್ನ ಬಂಡಿಯಲ್ಲಿ ಹಾಕಿಕೊಂಡು ಗಾಡಿಯನ್ನೋಡಿಸಿದರು. ಈ ವೇಳೆಗೆ ನನ್ನ ತಂದೆಗೆ ಮನಸ್ಸು ಒಂದು ನಿಶ್ಚಯಕ್ಕೆ ಬಂದಿತ್ತು. ಆತ ಇನ್ನೊಂದು ಗಾಡಿಯಲ್ಲಿ ಕುಳಿತು ಪ್ರಯಾಣ ಮಾಡಿದರು.

ರಾಬರ್ಟ್‌ಸನ್ ಪೇಟೆಗೆ ಬಂದದ್ದಾಯಿತು. ಅಲ್ಲಿಂದ ರೈಲು ಹತ್ತಿ ಬೌರಿಂಗ್‌ಪೇಟೆಗೆ ಬಂದದ್ದಾಯಿತು. ಅಲ್ಲಿಂದ ಮುಂದಕ್ಕೆ ಬೆಂಗಳೂರನ್ನು ತಲಪಿದ್ದೂ ಆಯಿತು. ಅಲ್ಲಿಂದ ಮುಂದಿನ ಕಥೆ ಈಗ ಉದ್ದೇಶದಲ್ಲಿಲ್ಲ.

ರಸೂಲ್‌ಖಾನರ ಮನಸ್ಸು ಎಂಥಾದ್ದು, ಪ್ರತಿಜ್ಞೆ ಎಂಥಾದ್ದು ಎಂಬುದನ್ನು ತೋರಿಸುವುದೇ ಸದ್ಯಕ್ಕೆ ನನ್ನ ಉದ್ದೇಶ.

ರಸೂಲ್‌ಖಾನರಂಥ ವ್ಯಕ್ತಿ ಈ ಕಾಲದಲ್ಲಿ, ಎಂದರೆ ೧೯೭೦ರಲ್ಲಿ ಅಪರೂಪ. ಎಪ್ಪತ್ತು ವರ್ಷ ಹಿಂದೆ ಅದು ಅಪರೂಪವಾಗಿರಲಿಲ್ಲ. ಸಾಮಾನ್ಯವಾಗಿ ನಮ್ಮ ಎಲ್ಲ ಊರುಗಳಲ್ಲಿಯೂ ಅಂಥ ಜನ ಇಬ್ಬರು ಮೂವರಾದರೂ ಇರುತ್ತಿದ್ದರು. ಅವರನ್ನು ಹೊಂದಿಕೊಂಡು ಅವರಿಗೆ ಸಹಾಯವಾಗಿ ಒಳ್ಳೆಯ ಕೆಲಸಕ್ಕೆ ಮನಸಾರ ನುಗ್ಗಿ ಬರುತ್ತಿದ್ದ ಹತ್ತಿಪ್ಪತ್ತು ಮಂದಿ ಇರುತ್ತಿದ್ದರು. ಅವರಿಗೆ ಹಣವೆಂದರೆ ಕಷ್ಟ. ಒಂದು ದೊಡ್ಡ ಉದ್ದೇಶ, ಒಂದು ಉಪಕಾರಬುದ್ಧಿ ಮತ್ತು ಅದಕ್ಕೆ ಬೇಕಾದ ಸ್ವಾರ್ಥತ್ಯಾಗಸಿದ್ಧತೆ ಅಕೃತ್ರಿಮವಾಗಿ, ನೈಜವಾಗಿ ಅವರಿಗೆ ಬರುತ್ತಿತ್ತು.

೧೭

ಪಾಶಂಪಲ್ಲಿ ಆದೆಪ್ಪನವರು

ನಾನು ಚಿಕ್ಕಂದಿನಲ್ಲಿ ಪಟೇಲನಾಗಬೇಕೆಂದು ಆಸೆಪಟ್ಟಿದ್ದೆ. ಆ ಹುದ್ದೆಯ ಸಂಬಳ ಭಾರಿಯಾದದ್ದೆಂದಲ್ಲ. ಪಟೇಲನು ಸ್ವತಂತ್ರಪುರುಷ; ಇತರರ ಆಜ್ಞೆಗಾಗಿ ಕಾದಿರಬೇಕಾದವನಲ್ಲ. ಪಟೇಲನಲ್ಲಿ ಜನರಿಗೆ ಗೌರವ ಹೆಚ್ಚು; ಅವನ ಮಾತಿನಂತೆ ಜನ ನಡೆಯುತ್ತಾರೆ.

ಈ ಎರಡು ಆಕರ್ಷಣೆಗಳ ಜೊತೆಗೆ ಇನ್ನೂ ಒಂದಿತ್ತು. ಪಟೇಲನಿಗೆ ಓದು ಬರಹದ ಪ್ರಸಕ್ತಿ ಹೆಚ್ಚಾಗಿರಲಿಲ್ಲ; ಪರೀಕ್ಷೆ ಪ್ಯಾಸುಗಳ ಅವಾಂತರವಿರಲಿಲ್ಲ.

ನನ್ನ ತಂದೆ ಅಜ್ಜಂದಿರ ಸ್ನೇಹಿತರಲ್ಲಿ ಪಟೇಲರು ನಾಲ್ವರೈವರಿದ್ದರು. ಅವರ ಧೋರಣೆಯನ್ನೂ ಜನ ಅವರಲ್ಲಿಟ್ಟಿದ್ದ ಗೌರವವನ್ನೂ ನಾನು ಕಂಡಿದ್ದೆ. ಅವರ ಜವಾಬ್ದಾರಿ ಎಂಥಾದ್ದು, ಕಷ್ಟವೆಂಥಾದ್ದು ಇದನ್ನು–ನಾನು ಕಂಡಿರಲಿಲ್ಲ.

ಪಟೇಲ ಹೇಗಿರಬೇಕು?

ನನ್ನ ಹುಚ್ಚನ್ನು ಬಿಡಿಸಿದವರು ನನ್ನ ಅಜ್ಜಂದಿರು. ಅವರು ಎರಡು ಮಾತು ಹೇಳಿದರು:

1. ಪಟೇಲರಿಗೆ ಲೋಕಾನುಭವವೂ ಮನುಷ್ಯಸ್ವಭಾವದ ತಿಳಿವಳಿಕೆಯೂ ಇರಬೇಕು.
2. ಹಾಗೆಯೇ ಅವನು ತನ್ನ ನಡತೆ ನುಡಿತಗಳಿಂದ ಜನರ ವಿಶ್ವಾಸವನ್ನು ಸಂಪಾದಿಸಿಕೊಂಡವನಾಗಿರಬೇಕು.

ಈ ಎರಡಕ್ಕೂ ಕಾಲ ಹಿಡಿಯುತ್ತದೆ. ೧೪-೧೫ ವರ್ಷದ ಹುಡುಗನನ್ನು ಪಟೇಲನೆಂದು ಯಾರೂ ಒಪ್ಪಿಕೊಳ್ಳುವುದಿಲ್ಲ.

ಈ ಮಾತಿನ ಅರ್ಥ ಕೆಲವು ವರ್ಷಗಳಾದ ಮೇಲೆ ನನಗೆ ರುಜುವಾತಿಗೆ ಬಂದಿತು.

ಪಟೇಲನು ಊರಿನ ಯಜಮಾನ. ಅವನಿಗೆ ಊರಿನ ಜನರ ಚಾಲುಚಲನಗಳು ತಿಳಿಯದೆ ಇದ್ದರೆ ಅವನ ಕಾರಕರ್ದುಗಳು ಹುಚ್ಚಾಟವಾಗುತ್ತವೆ. ಅವನ ಯೋಗ್ಯತೆಯನ್ನು ಜನ ಅರಿತು ಅವನಲ್ಲಿ ನಂಬಿಕೆ ಇಟ್ಟಿರಬೇಕು. ಈ ಎರಡು ಸಂಗತಿಗಳೂ ನಡೆದಲ್ಲದೆ ಪಟೇಲಗಿರಿ ಯಶಸ್ಕರವಾಗದು.

ಆದೆಪ್ಪನವರು

ಪಾಶಂಪಲ್ಲಿ ಆದೆಪ್ಪನವರು ಪಟೇಲರು. ಅವರು ತೆಲುಗು ಭಾಷೆ ಮಾತನಾಡುವ ಬ್ರಾಹ್ಮಣರು. ವೆಲನಾಡಿನವರಿರಬಹುದು. ಅವರು ಈಗ್ಗೆ ಸುಮಾರು ಎಂಭತ್ತು ವರ್ಷಗಳ ಹಿಂದೆ ಇದ್ದವರು. ನಾನು ನಾಲ್ಕೈದು ವರ್ಷದವನಾಗಿದ್ದಾಗ ಅವರನ್ನು ಒಂದು ಸಾರಿ ದೂರದಿಂದ ನೋಡಿದ ಜ್ಞಾಪಕವಿದೆ. ಅವರನ್ನು ಕುರಿತು ಹಿರಿಯರಿಂದ ಪದೇ ಪದೇ ಕೇಳಿದ್ದೇನೆ. ಈಗ ನಾನು ಹೇಳಬೇಕೆಂದಿರುವುದು ಆ ಹಿಂದಿನವರ ಮಾತಿನ ತಿರುಳು.

ಪಾಶಂಪಲ್ಲಿ ಕೋಲಾರ ಜಿಲ್ಲೆಯ ತೆಲುಗು ಪ್ರಾಂತದಲ್ಲಿದ್ದ ಒಂದು ಹಳ್ಳಿ. ಅದು ಈಗ ಇದೆಯೋ ಇಲ್ಲವೋ ನಾನು ವಿಚಾರಿಸಿಲ್ಲ. 'ಪಾಶಂಪಲ್ಲಿ' ಎಂಬ ಮಾತು 'ಪಾಯಸಪಲ್ಲಿ' ಅಥವಾ ಪಾಯಸದ ಹಳ್ಳಿ ಎಂದು ಮೊದಲಿದ್ದಿರಬೇಕು. ಬಹು ವರ್ಷಗಳ ಜನದ ಬಾಯಿ ಅದನ್ನು 'ಪಾಶಂಪಲ್ಲಿ' ಎಂದು ಉಚ್ಚರಿಸಿತು.

ಆ ಹಳ್ಳಿಯ ನೆರೆಹೊರೆಯ ನಾಲ್ಕೈದು ಗ್ರಾಮಗಳ ಪಟೇಲರು ಆದೆಪ್ಪನವರು. ಅವರ ವರಮಾನ ಗ್ರಾಮವೊಂದಕ್ಕೆ ೨೦ ರೂಪಾಯಿನಂತೆ ಐದು ಗ್ರಾಮಗಳ ಪೋಟಗಿ, ವರ್ಷಕ್ಕೆ ಒಟ್ಟು ೧೦೦ ರೂಪಾಯಿಗಳಿದ್ದಿರಬಹುದು. ಪೋಟಗಿ ಎಂದರೆ ಸರಕಾರವು ಒಂದು ಹಳ್ಳಿಯ ಶಾನುಭೋಗನಿಗೆ ಅಥವಾ ಪಟೇಲನಿಗೆ ವರ್ಷಕ್ಕೊಮ್ಮೆ ಸಂದಾಯ ಮಾಡುವ 'ಕಮಿಷನ್'. ಸಾಮಾನ್ಯವಾಗಿ ಗ್ರಾಮದ ಹುಟ್ಟುವಳಿ ನೂರಾಗಿದ್ದಲ್ಲಿ ಅದರಲ್ಲಿ ನಾಲ್ಕು ರೂಪಾಯಷ್ಟನ್ನು ಶಾನುಭೋಗನಿಗೂ, ಸ್ವಲ್ಪ ಹೆಚ್ಚು ಕಡಮೆ ಅದೇ ದರದಲ್ಲಿ ಪಟೇಲನಿಗೂ ಕೊಡುತ್ತಿದ್ದರು. ಈ ಪೋಟಗಿಯೇ ಪಟೇಲನಿಗಿದ್ದ ನಗದು ವರಮಾನ.

ಆದರೆ ಈ ನಗದು ವರಮಾನವನ್ನು ನಂಬಿಕೊಂಡು ಯಾವ ಪಟೇಲನೂ ಇದ್ದವನಲ್ಲ. ಆದೆಪ್ಪನವರಿಗೆ ಸ್ವಂತ ಜಮೀನುಗಳಿದ್ದವು. ಅದರಿಂದ ಅವರ ಕುಟುಂಬಕ್ಕೆ ಬೇಕಾದಷ್ಟು ದವಸಧಾನ್ಯ ಬರುತ್ತಿತ್ತು. ಅವರು ಉದಾರಿಗಳು: ಸಾಂಪ್ರದಾಯಿಕವಾಗಿ ಬಂದಿದ್ದ ದಾನ ಧರ್ಮಗಳನ್ನು ನಡಸುತ್ತಿದ್ದರು. ಇದಕ್ಕೆ ಬೇಕಾಗುವಷ್ಟು ದವಸಧಾನ್ಯಗಳು ಅವರಿಗೆ ಸ್ವಂತ ಜಮೀನಿನಿಂದ ಬೆಳೆದು ಬರುತ್ತಿದ್ದವು.

ಆದೆಪ್ಪನವರ ಕುಟುಂಬದಲ್ಲಿ ಹದಿನೈದಿಪ್ಪತ್ತು ಮಂದಿ ಇದ್ದರು. ಅವರ ತಮ್ಮಂದಿರು, ಅವರ ಮಕ್ಕಳುಗಳು, ಸೋದರಳಿಯಂದಿರು, ಮನೆ ತಪ್ಪಿದ ಹಿರಿಯ ಹೆಂಗಸರು–ಇವರೆಲ್ಲ

ಅವರ ಸಂಸಾರ. ಇದರ ಜೊತೆಗೆ ಅವರ ಮನೆಗೆ ಬರುತ್ತಿದ್ದ ಅತಿಥಿ ಅಭ್ಯಾಗತರುಗಳು ದಿನದಿನವೂ ಇಬ್ಬರು ಮೂವರು ಇರುತ್ತಿದ್ದರು. ಇದೇ ಹಿಂದೂಗಳ 'ಸೋಷಲಿಸ್ಮ್' ಅಥವಾ ಸಮಾಜ ಸ್ವಾಮ್ಯವಾದ.

ಅವರ ಜೀವನದ ಮಟ್ಟ ಸಾಮಾನ್ಯ ಮಧ್ಯಮವರ್ಗದ್ದು. ಅವರು ಯಾವ ಆಹಾರ ಸಾಮಾಗ್ರಿಯನ್ನೂ ಅಂಗಡಿಯಿಂದ ಕೊಂಡುತರಬೇಕಾಗಿರಲಿಲ್ಲ. ಸಾಸಿವೆ ಮೊದಲುಗೊಂಡು ಬೆಲ್ಲದವರೆಗೆ ಎಲ್ಲವೂ ಅವರ ಜಮೀನು ತೋಟಗಳಿಂದ ಬೆಳೆದುಬರುತ್ತಿದ್ದವು. ಮನೆಯಲ್ಲಿ ಯಾವಾಗಲೂ ಎರಡು ಎಮ್ಮೆ ಎರಡು ಆಕಳು ಕರೆಯುತ್ತಿದ್ದವು. ಆದದ್ದರಿಂದ ಹಾಲು ಮೊಸರು ತುಪ್ಪಗಳು ಸಮೃದ್ಧವಾಗಿದ್ದವು. ಮನೆಯಲ್ಲಿ ಮೂರು ನಾಲ್ಕು ಮಂದಿ ಹೆಂಗಸರಿದ್ದದ್ದರಿಂದ ಅಡಿಗೆ ಕೆಲಸವನ್ನು ಅವರೇ ಮಾಡಿಕೊಳ್ಳುತ್ತಿದ್ದರು.

ಹೀಗೆ ಸುಖಭೋಜನ, ಮನಸ್ಸಿನ ನೆಮ್ಮದಿ–ಇವು ಆ ವಾತಾವರಣದ ಮುಖ್ಯ ಲಕ್ಷಣಗಳಾಗಿದ್ದವು.

ವ್ಯಕ್ತಿಪ್ರಭಾವ

ಆದೆಪ್ಪನವರಿಗೆ ಪಿತ್ರಾರ್ಜಿತವಾಗಿ ಬಂದ ಭೂಸ್ವತ್ತೂ ಪಟೇಲಿ ಅಧಿಕಾರವೂ ಇದ್ದರೂ, ಅವರ ಸ್ವಂತ ವ್ಯಕ್ತಿ ಪ್ರಭಾವವಿಲ್ಲದೆ ಹೋಗಿದ್ದಿದ್ದರೆ ಅವರ ಜೀವನ ಅಷ್ಟು ತೃಪ್ತಿಕರವಾಗಿ ನಡೆಯುತ್ತಿತ್ತೆಂದು ಹೇಳಲಾಗದು, ಅವರಿಗೆ ಹೆಸರು ಬಂದಿರುವುದೂ ಅವರ ವ್ಯಕ್ತಿಪ್ರಭಾವದಿಂದ. ಅದನ್ನು ಕುರಿತು ಒಂದು ಮಾತು ಹೇಳುವುದಿದೆ.

ಅವರ ದೇಹದ ಲಕ್ಷಣದಲ್ಲಿ ಮುಖ್ಯವಾದ ಅಂಶ ಅವರ ಕುಂಟುತನ. ಅವರ ಚರ್ಯೆಯ ಲಕ್ಷಣದಲ್ಲಿ ಮುಖ್ಯವಾದ ಅಂಶ ಅವರ ಜೋರು ಮತ್ತು ಕಟ್ಟು ನಿಟ್ಟು.

ಅವರು ಹುಟ್ಟಿನಿಂದ ಹೆಳವರೋ ಅಥವಾ ಪೆಟ್ಟು ತಗುಲಿ ಕಾಲು ಊನವಾಯಿತೋ ಅಥವಾ ಯಾವುದಾದರೂ ವ್ಯಾಧಿಯೋ ನನಗೆ ತಿಳಿಯದು. ಆದರೆ ಅವರಿಗೆ ಕಾಲುನಡಿಗೆ ಅಸಾಧ್ಯವಾಗಿತ್ತು.

ಅವರ ದರ್ಬಾರು ವಿಶೇಷವಾಗಿ ಅವರ ಮನೆಯ ಮುಂದಿನ ಮೊಗಸಾಲೆಯಲ್ಲಿ, ಜಗುಲಿಯ ಮೇಲೆ ನಡೆಯುತ್ತಿತ್ತು. ಶಾನುಭೋಗರು, ಹಳ್ಳಿಯ ಜನರು, ಇಷ್ಟಮಿತ್ರರು ಅಲ್ಲಿ ಸೇರುತ್ತಿದ್ದರು. ಈ ದರ್ಬಾರು ಸಾಮಾನ್ಯವಾಗಿ ಸಂಜೆಯೋ ರಾತ್ರಿ ಹೊತ್ತೋ ನಡೆಯುತ್ತಿತ್ತು.

ಬಹುಶಃ ಇದನ್ನು ಕಂಡೇ ಜನ ಒಂದು ಗಾದೆಯನ್ನು ಕಟ್ಟಿದರು: “ಕುಂಟೋಣಿ ಪಾರುಪತ್ಯಂ ಇಂಟ ಮುಂದರ.” ಕುಂಟನ ಯಜಮಾನಿಕೆ ಅವರ ಮನೆಯ ಮುಂದೆ. ಈ ಗಾದೆ ಈಗಲೂ ಬಳಕೆಯಲ್ಲಿದೆ.

ದಿನಚರಿ

ಬೆಳಗಿನ ಜಾವ ಸುಮಾರು ೫ ಘಂಟೆಯ ವೇಳೆಗೆ ಆದೆಪ್ಪನವರ ದಿನಚರಿ ಪ್ರಾರಂಭವಾಗುತ್ತಿತ್ತು. ಅವರು ಮುಖಪ್ರಕ್ಷಾಳನ ಮಾಡಿಕೊಂಡು ವಿಭೂತಿ ಧರಿಸಿ, ಮೈಗೆ ಕವಚ ತೊಟ್ಟು, ತಲೆಗೆ ರುಮಾಲಿಟ್ಟು, ಒಂದು ಅಂಗವಸ್ತ್ರವನ್ನು ಭುಜದ ಮೇಲೆ ನೀಳವಾಗಿ ಬಿಟ್ಟು ಪ್ರಯಾಣಕ್ಕೆ ಸಿದ್ಧರಾಗುತ್ತಿದ್ದರು. ಆಗ ಮನೆಯ ಜನವೋ ಬೇರೆ ಆಳುಗಳೋ ಇಬ್ಬರು ಬಂದು ಅವರನ್ನೆತ್ತಿ ಕುದುರೆಯ ಮೇಲೆ ಕುಳ್ಳಿರಿಸುತ್ತಿದ್ದರು. ಕುದುರೆಯ ಮೇಲೆ ಕುಳಿತು ಲಗಾಮು ಹಿಡಿದೊಡನೆಯೇ ಆದೆಪ್ಪರವರು ಹೆಳವನಾಗಿದ್ದದ್ದು ಹೋಗಿ ಶೂರನಾಗುತ್ತಿದ್ದರು. ನೆಲದ ಮೇಲೆ ಹೆಳವ; ಕುದುರೆಯ ಮೇಲೆ ಶೂರ.

ಹೀಗೆ ಹೊರಟವರು ಮಧ್ಯಾಹ್ನ ಮನೆಗೆ ಹಿಂತಿರುಗುವವರೆಗೂ ಕುದುರೆಯಿಂದ ಇಳಿಯುತ್ತಿರಲಿಲ್ಲ. ಅವರು ಪಾಶಂಪಲ್ಲಿಯಿಂದ ಬೇರೆ ಹಳ್ಳಿಗೆ ಹೋಗುವಾಗ ದಾರಿಯಲ್ಲಿ ಅಲ್ಲಲ್ಲಿ ಆಯಾ ಗ್ರಾಮಗಳ ಮುಖಂಡರೂ ಇತರರೂ ಬಂದು ಸೇರಿ ತಮ್ಮ ತಮ್ಮ ಸುಖ ದುಃಖಗಳನ್ನು ಅವರೊಡನೆ ಹೇಳಿಕೊಳ್ಳುತ್ತಿದ್ದರು.

ಆದೆಪ್ಪನವರಿಗೆ ಯಾರನ್ನಾದರೂ ನೋಡಬೇಕೆಂದು ಮನಸ್ಸಾದಾಗ, ಅವರು ತಮ್ಮ ಜೊತೆಯಲ್ಲಿ ನಡೆದುಕೊಂಡು ಬರುತ್ತಿದ್ದ ತೋಟಿಯನ್ನೋ ತಳಾರಿಯನ್ನೊ ಬೇರೆ ಯಾರನ್ನೋ ಕಳುಹಿಸಿ ಬೇಕಾದವರನ್ನು ಕರೆತರಿಸುತ್ತಿದ್ದರು.

ಹೀಗೆ ಅವರಿಗೆ ತಮ್ಮ ಗ್ರಾಮಗಳ ಜನಜೀವನದ ಸಂಗತಿಗಳು ತಿಳಿಯಬರುತ್ತಿದ್ದವು. ಯಾರ ಸಂಸಾರದಲ್ಲಿ ಜಗಳ, ಯಾರಿಗೆ ಬೆಳೆ ಬಂದದ್ದು ಸಾಲದು, ಯಾರಿಗೆ ಹಣದ ತಾಪತ್ರಯ, ಯಾರಿಗೆ ಸಂಸಾರದಲ್ಲಿ ಇತರ ಬಗೆಯ ತೊಡಕು, ಇದೆಲ್ಲ ಆದೆಪ್ಪನವರ ಕಿವಿಯನ್ನು ಮುಟ್ಟುತ್ತಿತ್ತು. ಕಷ್ಟವನ್ನು ಹೇಳಿಕೊಂಡವರಿಗೆ ಸಾಧ್ಯವಿದ್ದ ಸಹಾಯವನ್ನು ಮಾಡುವುದರಲ್ಲಿ ಆದೆಪ್ಪನವರು ಸಂತೋಷವುಳ್ಳವರಾಗಿದ್ದರು. ಕೆಲವರಿಗೆ ಸಮಾಧಾನ ಹೇಳುವರು; ಕೆಲವರಿಗೆ ಬುದ್ಧಿ ಕಲಿಸುವರು; ಇನ್ನು ಕೆಲವರಿಗೆ ಸಾಲ ಸೋಲಗಳಿಗೆ ಸಹಾಯ ಮಾಡುವರು. ಆ ನಾಲ್ಕೈದು ಗ್ರಾಮಗಳ ಎಲ್ಲ ಕುಟುಂಬಗಳೂ ಆದೆಪ್ಪನವರ ಕುಟುಂಬದ ಶಾಖೋಪಶಾಖೆಗಳೆನಿಸುವಂತಿತ್ತು. ಜನದ ಜೀವನವೇ ಅವರ ಜೀವನ. ಆದೆಪ್ಪನವರ ಜೀವನದಲ್ಲಿ ಮುಖ್ಯಭಾಗ ಅವರ ಸುತ್ತಮುತ್ತಣ ಗ್ರಾಮಗಳ ಜನರ ಜೀವನ.

ಆದೆಪ್ಪನವರು ಕೆಲವರಿಗೆ ಬುದ್ಧಿ ಕಲಿಸುತ್ತಿದ್ದರೆಂದು ಹೇಳಿದೆನಲ್ಲವೆ? ಅದಕ್ಕೆ ಆವಶ್ಯಕತೆ ಎಷ್ಟೋ ಇತ್ತು. ಆ ಕಾಲದಲ್ಲಿಯೂ ಸುಳ್ಳಾಡುವವರೂ ಮೋಸಗಾರರೂ ಪುಂಡಾಟಿಕೆ ಮಾಡುವವರೂ ಇದ್ದರು. ಅವರನ್ನೆಲ್ಲ ಒಂದು ತಹಬಂದಿಗೆ ತಂದಿದ್ದದ್ದು ಆದೆಪ್ಪನವರ ದರ್ಪ. ಅವರು ಎಲ್ಲರಿಗೂ ಹಿತರಾಗಿದ್ದರೂ, ಎಲ್ಲರಿಗೂ ಅವರ ವಿಷಯದಲ್ಲಿ ಭಯ ಭಕ್ತಿಗಳಿದ್ದವು. ಅವರ ಸುಪರ್ದಿನ ಐದು ಗ್ರಾಮಗಳಲ್ಲಿ ಅವರ ಮಾತನ್ನು ಮೀರುವ ಪಿಳ್ಳೆ ಒಂದೂ ಇರಲಿಲ್ಲ.

ಆದದ್ದರಿಂದ ಒಂದು ಗಾದೆ ಆ ಪ್ರಾಂತದಲ್ಲೆಲ್ಲ ಬಳಕೆಯಾಗಿತ್ತು. ಆ ಗಾದೆ ತೆಲುಗಿನದು; ಶೈಲಿ ಕೊಂಚ ಗ್ರಾಮ್ಯ, ವಾಚಕರು ಸಹನೆಯಿಂದ ಕ್ಷಮಿಸಬೇಕು. ಅದು ಹೀಗೆ: “ಪಾಶಂಪಲ್ಲಿ ಆದೆಪ್ಪಗಾರು ಪಿತ್ತಮಂಟೆ ಪಿತ್ತಾಲ” ಪಾಶಂಪಲ್ಲಿ ಆದೆಪ್ಪನವರು ಹೂಸೆಂದರೆ ಹೂಸಬೇಕು. ಅವರ ಮಾತೇ ಕಡೆಯ ಆಜ್ಞೆ.

ಸಾಮಾನ್ಯವಾಗಿ ಈ ಮಾತನ್ನು ಹೇಳುತ್ತಿದ್ದುದು ಅವರ ಕಂದಾಯ ವಸೂಲಿಯ ವಿಷಯದಲ್ಲಿ. ಪಟೇಲರ ಮುಖ್ಯಕರ್ತವ್ಯಗಳಲ್ಲಿ ಮೊದಲನೆಯದು ಕಂದಾಯದ ವಸೂಲಿ. ರೈತರು ಸರಕಾರಕ್ಕೆ ಸಲ್ಲಿಸಬೇಕಾಗಿದ್ದ ಕಂದಾಯದ ಹಣವನ್ನು ಅವರಿಂದ ವಸೂಲು ಮಾಡುವುದು ಪಟೇಲನ ಕೆಲಸ. ಅದಕ್ಕೆ ಸಂಬಂಧಪಟ್ಟ ಲೆಕ್ಕ ಪತ್ರಗಳನ್ನಿಡುವುದು ಶಾನುಭೋಗನ ಕೆಲಸ. ಪಟೇಲನ ಕುಮ್ಮಕ್ಕಿಲ್ಲದೆ ಕಂದಾಯ ವಸೂಲಿ ಸಾಧ್ಯವಾಗದು.

ಆದೆಪ್ಪನವರು ರೈತರಿಂದ ಸರಕಾರಕ್ಕೆ ಸಲ್ಲಬೇಕಾದದ್ದನ್ನು ವಸೂಲು ಮಾಡುವುದರಲ್ಲಿ ಬಹಳ ಕಟ್ಟು ನಿಟ್ಟನಿಂದ ಇದ್ದರು. ಎಷ್ಟೋ ಮಂದಿ ರೈತರಿಗೆ ಸಕಾಲದಲ್ಲಿ ಹಣ ಸಲ್ಲಿಸಲು ಅನುಕೂಲವಿರುತ್ತಿರಲಿಲ್ಲ. ಅಂಥವರು ಆದೆಪ್ಪನವರನ್ನು ಸ್ವಲ್ಪ ಅವಕಾಶಬೇಕೆಂದು ಕೇಳುವರು. ಆದೆಪ್ಪನವರು ಮೊದಲು ನಿಷ್ಠುರ ಮಾಡುತ್ತಿರಲಿಲ್ಲ. ಮೊದಲನೆಯ ಕಿಸ್ತು, ಎರಡನೆಯ ಕಿಸ್ತುಗಳಲ್ಲಿ ರೈತ ಕೇಳಿದಷ್ಟು ಕಾಲಾವಕಾಶ ಕೊಡುತ್ತಿದ್ದರು. ಮೂರನೆಯ ಕಿಸ್ತು, ನಾಲ್ಕನೆಯ ಕಿಸ್ತು ಬರುವ ವೇಳೆಗೆ ಅವರು ನಿರ್ದಾಕ್ಷಿಣ್ಯರಾಗುತ್ತಿದ್ದರು. ಹೀಗೆ ಅವರ ಮನಸ್ಸು ಬಿಗಿಯಾದಾಗ ರೈತನಿಗೆ ಹಣ ತೆರುವುದರ ಹೊರತು ಬೇರೆ ಉಪಾಯವಿರಲಿಲ್ಲ. ಆದದ್ದರಿಂದ ಪಾಶಂಪಲ್ಲಿ ಆದೆಪ್ಪನವರು ಕಕ್ಕು ಎಂದಾಗ ಕಕ್ಕಬೇಕು.

ಜನದ ಇಷ್ಟಸಮ್ಮತಿ

ಆ ಕಾಲದಲ್ಲಿ ಪಟೇಲನಿಗೇ ಆಗಲಿ ಇತರ ಗ್ರಾಮಾಧಿಕಾರಿಗಳಿಗೇ ಆಗಲಿ ಅಧಿಕಾರ ವ್ಯಾಪ್ತಿಗಳನ್ನೂ ಕರ್ತವ್ಯ ನಿರ್ಬಂಧಗಳನ್ನೂ ವಿವರವಾಗಿ ತಿಳಿಸುವ ಬರೆದ ಕಾನೂನು ಇರಲಿಲ್ಲ. ಎಲ್ಲ ಮಾಮೂಲಿನಂತೆ, ಹಿಂದಿನ ಪದ್ಧತಿಯಂತೆ ನಡೆದುಕೊಂಡು ಬರುತ್ತಿದ್ದರು. ಗ್ರಾಮಗಳ 'ಬಾರಾಬಲೂತಿ' ಎಂಬ ದ್ವಾದಶಾಂಗ ವ್ಯವಸ್ಥೆಯು ವಿಜಯ ನಗರದ ಕಾಲದಿಂದ ಬಂದಿದ್ದದ್ದು ಎಂದು ಹೇಳುತ್ತಾರೆ. ಆ ಹಿಂದಿನ ಪದ್ಧತಿಯ ಮೇರೆಗೆ ಪಟೇಲರು ನಡೆಯುತ್ತಿದ್ದರು. ಜನ ನಡಸಿಕೊಡುತ್ತಿದ್ದರು. ಗ್ರಾಮವು ಪಟೇಲನ ಕುಟುಂಬ. ಪಟೇಲನು ಅದರ ಯಜಮಾನ. ಅವನ ಮಾತಿಗೆ ಬೆಲೆಯೂ ಗೌರವವೂ ಇದ್ದದ್ದರಿಂದ ಆತನು ಗ್ರಾಮಗಳನ್ನು ಆಳಿ ಸುಧಾರಿಸುವುದು ಸಾಧ್ಯವಾಯಿತು. ಎಲ್ಲ ಸಾರ್ವಜನಿಕ ಕಾರ್ಯಗಳೂ ಜನದ ಇಷ್ಟಸಮ್ಮತಿಯಿಂದಲೇ ನಡೆಯುತ್ತಿದ್ದ ಕಾರಣ ಹೆಚ್ಚುಗಟ್ಟಲೆ ಕಾನೂನಿನ ಅವಶ್ಯಕತೆ ಇರಲಿಲ್ಲ.

ಅದೇ ನಿಜವಾದ ಸ್ವರಾಜ್ಯ; ಅದೇ ಡೆಮಾಕ್ರಸಿ.

ಎಲ್ಲಿ ಜನ ಕೆಲವು ಸಂಪ್ರದಾಯಗಳನ್ನೂ ಸಂಸ್ಥೆಗಳನ್ನೂ ತಾವಾಗಿ ಅಂಗೀಕರಿಸಿ ಅದಕ್ಕೆ ತಾವಾಗಿ ವಿಧೇಯತೆಯನ್ನು ಸಲ್ಲಿಸುತ್ತಾರೋ ಅಲ್ಲಿ ನಿಜವಾದ ಪ್ರಜಾಪ್ರಭುತ್ವವೂ ನಿಜವಾದ ಪ್ರಜಾಸ್ವಾತಂತ್ರ್ಯವೂ ಉಳಿದುಕೊಂಡಿರುತ್ತವೆ. ಕಾನೂನು ಹೆಚ್ಚಿದಷ್ಟೂ ಪ್ರಜೆಗಳ ಜೀವನದಲ್ಲಿ ಸರಕಾರದ ಪ್ರವೇಶ ಹೆಚ್ಚಾಗುತ್ತದೆ. ಸರಕಾರದ ಕೈವಾಡ ಜನಜೀವನದಲ್ಲಿ ವಿಸ್ತಾರಪಟ್ಟಂತೆಲ್ಲ ಜನದ ಸ್ವಾತಂತ್ರ್ಯ ಸಂಕೋಚವಾಗುತ್ತದೆ. ಈ ತತ್ತ್ವವನ್ನು ನಮ್ಮ ಜನ ಚಿಂತಿಸಬೇಕು.

೧೮

ಅಪ್ರಸಿದ್ಧ ಕವಿತ್ವ–೧

ಈ ಪ್ರಕರಣದಲ್ಲಿ ಕವಿತ್ವವೆಂದರೆ ಕಬ್ಬಿಣದ ಕಡಲೆಯಲ್ಲ. ಇಲ್ಲಿ ಪಂಪ ರನ್ನರನ್ನಾಗಲಿ ಷಡಕ್ಷರಿ ಹರಿಹರರನ್ನಾಗಲಿ ರುದ್ರಭಟ್ಟ ನಾರಣಪ್ಪರನ್ನಾಗಲಿ ನೆನಪಿಗೆ ತಂದುಕೊಂಡು ಹುಬ್ಬು ಬಿಗಿಯಬೇಕಾದದ್ದಿಲ್ಲ. ಇಲ್ಲಿ ನಮ್ಮ ಉದ್ದೇಶದಲ್ಲಿರುವುದು ಒಂದು ಲಘು ಕೃತಿ. ಅದರಲ್ಲಿ ಅಳ್ಳಳ್ಳಕವಾಗಿಯಾದರೂ ಛಂದಸ್ಸು ಕಾಣುತ್ತದೆ; ಅಡ್ಡಾದಿಡ್ಡಿಯಾಗಿ ಪ್ರಾಸವಿರುತ್ತದೆ. ಜನ ತಮ್ಮ ಯಾವುದನ್ನು ತಾವಾಗಿ ಎತ್ತಿ ತೋರಿಸುವುದಿಲ್ಲವೋ ಅದನ್ನು ಎತ್ತಿತೋರಿಸುವುದು ಈ ಲಘು ಕವಿತ್ವದ ಉದ್ದೇಶ. ತೆಂಗಿನಮರದ ಮೇಲಿರುವ ಕಾಯಿಗೆ ನೆಲದ ಮೇಲಿನಿಂದ ಕೈಚಾಚುವ ಕುಳ್ಳನನ್ನೂ, ಹಾಡುವುದಕ್ಕೆಂದು ಬಾಯಿತೆರೆದು ತೇಗಿ ಮುಗಿಸಿದ ಗಾಯಕಿಯನ್ನೂ ಕೀರ್ತಿಸುವುದು ಇದರ ಉದ್ದೇಶ. ಆದದ್ದರಿಂದ ಇದು ಒಂದೊಂದು ವೇಳೆ ಕುಹಕದ ಕಡ್ಡಿಯಾದೀತು, ಜೊಂಡಿನ ಚೆಂಡಾದೀತು, ಕಚಕುಳಿಯ ಕುಚ್ಚಾದೀತು. ಇಲ್ಲಿ ಕೊಡುವ ಕೆಲವು ಉದಾಹರಣೆಗಳಿಂದ ಲಘು ಕಾವ್ಯದ ಕೆಲವು ಲಕ್ಷಣಗಳನ್ನು ಊಹಿಸಿಕೊಳ್ಳಲಾಗಬಹುದು.

(೧) ನನ್ನ ಪೂಜ್ಯ ಸೋದರತ್ತೆ

ಗುಂಡಂ ಭಂಡಂ ।
ತಿಂಡಿಕಿ ಶೂರಂ ।
ಚಂಡಾಲ ಮುಂಡೇಗಂಡಂ ॥

ನಾನು ಕಿವಿಯಿಂದ ಕೇಳಿರುವ ನವ್ಯಕಾವ್ಯಗಳಲ್ಲಿ ಇದು ಮೊದಲನೆಯದು. ಅದು ಸುಮಾರು ಎಪ್ಪತ್ತೈದು ವರ್ಷಗಳ ಹಿಂದೆ.

ಕವಿ ನನ್ನ ಪೂಜ್ಯ ಸೋದರತ್ತೆ–ನನ್ನ ತಂದೆಯ ಚಿಕ್ಕಪ್ಪನ ಮಗಳು. ಪೂರ್ವಕಥೆಯಿಲ್ಲದೆ ಕವನದ ಸ್ವಾರಸ್ಯ ಪೂರ್ತಿ ದೊರೆಯದು.

ಇದನ್ನು ಕೇಳುವುದಕ್ಕೆ ಮುಂಚೆ ಸಂಸ್ಕೃತ ಪದ್ಯಗಳೂ ಕನ್ನಡ ಪದ್ಯಗಳೂ ತೆಲುಗಿನವೂ ಮರಾಠಿಯವೂ ನನ್ನ ಕಿವಿಗೆ ಬಿದ್ದಿದ್ದದ್ದು ಕೊಂಚ ಜ್ಞಾಪಕವಿದೆ. ನನ್ನ ಅಜ್ಜಂದಿರಿಗೆ ಈ ಮೂರುನಾಲ್ಕು ಭಾಷೆಗಳೂ ಪರಿಚಯವಾಗಿದ್ದವು. ಅವರಿಗೆ ಪಾರಸಿ, ಉರ್ದು ಸಹ ಬರುತ್ತಿತ್ತು. ನನ್ನ ಚಿಕ್ಕಜ್ಜಂದಿರು ಒಂದು ಮರಾಠಿ ಪದ್ಯವನ್ನು ನನಗೆ ಕಲಿಸಿದ್ದರು, ಹೀಗೆ:

ಶ್ರೀ ಹಣಮಂತ ।
ಮಹಾ ಬಲವಂತ ।
ಸದಾ ಯಶವಂತ ।
ಉಡೇ ಗಗುನೀ ॥

ಮಿಕ್ಕ ಪದ್ಯಗಳು ಯಾವುವೂ ನನ್ನ ನೆನಪಿನಲ್ಲಿ ಹೆಚ್ಚಾಗಿ ಉಳಿದಿಲ್ಲ. ನನ್ನ ಸೋದರತ್ತೆಯ ಕವಿತ್ವವೇ ನನ್ನ ಪ್ರಸಿದ್ಧಿಗೆ ಮೊದಲು.

ಆಗ ನಮ್ಮ ಮನೆಯಲ್ಲಿ ಹತ್ತು ಹದಿನೈದು ಮಂದಿ ಇದ್ದರು. ಹೊತ್ತಿಗೆ ಇಪ್ಪತ್ತು ಮಂದಿ ಭೋಜನಕ್ಕೆ ಕೂಡುವುದು ಸಾಮಾನ್ಯವಾಗಿತ್ತು. ಕಾರಣವೇನೆಂದರೆ (೧) ಅದು ಪ್ರೀತಿವಾತ್ಸಲ್ಯಗಳ ಕಾಲ; (೨) ಅದು ಸುಭಿಕ್ಷದ ಕಾಲ.

ನಮ್ಮ ಮನೆಗೆ ಅವಶ್ಯವಾದಷ್ಟು ಬತ್ತ, ತೊಗರಿ, ರಾಗಿ, ಹೆಸರು, ಕಡಲೆ–ಇವು ನಮ್ಮ ಜಮೀನುಗಳಿಂದ ಬರುತ್ತಿತ್ತು. ತೊಗರಿಯ ಕಾಳನ್ನು ನಮ್ಮ ಮನೆಯಲ್ಲಿಯೇ ಬೇಳೆ ಮಾಡುತ್ತಿದ್ದರು. ಅದು ಬಹು ದೊಡ್ಡ ವಿಧಾನ. ನಾನು ಅದರಲ್ಲಿ ಭಾಗವಹಿಸಿದ್ದೇನೆ. ಈಗಲೂ ಆ ಕ್ರಮವನ್ನು ಬೇಕಾದವರಿಗೆ ಹೇಳಿಕೊಡಬಲ್ಲೆನೆಂಬ ಭರವಸೆಯಿದೆ. ಬತ್ತವನ್ನು ನಮ್ಮ ಮನೆಯವರು ಕುಟ್ಟಿಸಿ ಅಕ್ಕಿ ಮಾಡಿಸುತ್ತಿದ್ದರು. ಹುಣಿಸೆಹಣ್ಣು ಬೇಕಾದದ್ದಕ್ಕಿಂತ ಹೆಚ್ಚಾಗಿ ನಮ್ಮ ತೋಪುಗಳಿಂದ ಬರುತ್ತಿತ್ತು. ಹೊಂಗೆಯ ಕಾಯಿ ನಮ್ಮ ಮನೆಗೆ ಬಂದದ್ದನ್ನು ಗಾಣಿಗರಿಗೆ ಕೊಟ್ಟು ಅರ್ಧಪಾಲಿಗೆ ಹೊಂಗೆ ಎಣ್ಣೆಯನ್ನು ಮನೆಯ ದೀಪಕ್ಕಾಗಿ ತರಿಸಿಕೊಳ್ಳುತ್ತಿದ್ದರು. ಮಿಕ್ಕ ಅರ್ಧಕ್ಕೆ ಒಳ್ಳೆಣ್ಣೆಯನ್ನು ಬದಲಾ ಬದಲಿ ಮಾಡಿಕೊಳ್ಳುತ್ತಿದ್ದರು. ತೆಂಗಿನ ಕಾಯಿ ಆಣೆಗೆ ಆರು, ಅಥವಾ ನಾಲ್ಕು. ಬೆಲ್ಲವನ್ನು ನಾವು ದುಡ್ಡು ಕೊಟ್ಟು ಕೊಳ್ಳುತ್ತಿರಲಿಲ್ಲ. ನನ್ನ ಚಿಕ್ಕಜ್ಜಂದಿರು ಕೊಂಚ ಲೇವಾದೇವಿ ಇಟ್ಟುಕೊಂಡಿದ್ದರು. ಅವರು, ಕಬ್ಬು ಬೆಳೆಯುವ ರೈತರು ಮೂವರುನಾಲ್ವರಿಗೆ ಕೊಟ್ಟಿದ್ದ ಸಾಲಕ್ಕಾಗಿ ಬರಬೇಕಾಗಿದ್ದ ಬಡ್ಡಿಯ ಹಣದ ಬದಲು ಎರಡುಮೂರು ಅಡಿಗ ಬೆಲ್ಲದ ಮುದ್ದೆಗಳನ್ನು

ತರಿಸಿಕೊಳ್ಳುತ್ತಿದ್ದರು. ನಮ್ಮ ಮನೆಯಲ್ಲಿ ಯಾವಾಗಲೂ ಎರಡು ಕರೆಯುವ ಹಸುಗಳು, ಒಂದು ಕರೆಯುವ ಎಮ್ಮೆ ಇರುತ್ತಿದ್ದವು.

ಖರ್ಚೂ ಹಾಗೆಯೇ ನಡೆಯುತ್ತಿತ್ತು. ನಮ್ಮ ಮನೆಯಲ್ಲಿ ವರ್ಷವೊಂದಕ್ಕೆ ಸರಾಸರಿ ಆರೇಳು ಶ್ರಾದ್ಧಗಳು ನಡೆಯುತ್ತಿದ್ದವು. ಆದದ್ದರಿಂದ ವಡೆ, ಸುಕಿ ಉಂಡೆ, ಗಾರಿಗೆ ಅಥವಾ ಒಬ್ಬಟ್ಟು– ಇವು ಅಪರೂಪವಾಗಲಿಲ್ಲ. ಇದರ ಜೊತೆಗೆ ಆರೇಳು ಮಕ್ಕಳ ಹುಟ್ಟಿದಹಬ್ಬಗಳು ನಡೆಯುತ್ತಿದ್ದವು. ಹೀಗೆ ಚಕ್ಕುಲಿ, ಮುಚ್ಚೋರೆ, ಕೋಡಬಳೆ, ಪುರಳಂಗಾಯುಂಡೆ– ಇವುಗಳಲ್ಲಿ ಯಾವುದಾದರೂ ಒಂದೆರಡು ವಾರಕ್ಕೆ ಎರಡು ಸಲ ತಯಾರಾಗುತ್ತಿದ್ದವು. ಇದೇ ಮೇಲಿನ "ತಿಂಡಿಕಿ" ಎಂಬುದರ ಆಧಾರಸಂದರ್ಭ. "ತಿಂಡಿಕಿ" ಎಂಬುದು "ತಿಂಡಿಗೆ" ಎಂಬ ಕನ್ನಡದ ಮಾತಿನ ತಮಿಳು ರೂಪ.

ಸಂದರ್ಭ ಹೀಗಿದ್ದದ್ದರಿಂದ ನಮಗೆ ಊಟದಲ್ಲಿ ರುಚಿ ಹೆಚ್ಚಾಗಿ ಕಾಣಿಸಲಿಲ್ಲ. ಕೂಡಿದಮಟ್ಟಿಗೂ ನನ್ನ ವ್ಯಾಪಾರ ಉಗ್ರಾಣದಲ್ಲಿ ನಡೆಯುತ್ತಿತ್ತು. ಆಗ ಕರಿಗಡುಬೋ ಆಂಬೊಡೆಯೋ ಚಕ್ಕುಲಿಯೋ ಇದ್ದ ಪಾತ್ರೆಯನ್ನು ಹುಡುಕಾಡುವುದರಲ್ಲಿ ಶಬ್ದವಾಗುತ್ತಿತ್ತು. ಮಡಕೆ ಗಡಿಗೆಗಳು ಉರುಳಿ, ಒಡೆದು ಹೋಗಿ ಅವಲಕ್ಕಿ ಅರಳಿಟ್ಟುಗಳು ಚೆಲ್ಲಿಹೋದದ್ದೂ ಉಂಟು. ಅದು ನಮ್ಮಪ್ಪನಿಗೆ ತಿಳಿದಾಗ ಬೆನ್ನಿನ ಮೇಲೆ ಗುದ್ದಿಸಿಕೊಂಡು ಹಗ್ಗದಿಂದ ತೀಡಿಸಿಕೊಂಡದ್ದೂ ಉಂಟು. ಆದರೆ ಮಡಕೆಹುಲಿ * ಯ ವ್ಯಾಪಾರವೇನೋ ಎಂದಿನಂತೆಯೇ ನಾಚಿಕೆಯಿಲ್ಲದೆ ಸಾಗುತ್ತಿತ್ತು. ಹೀಗೆ "ತಿಂಡಿಗೆ ಶೂರ, ಭಂಡ" ಎಂಬೆರಡು ವಿಶೇಷಣಗಳೂ ಸಾರ್ಥಕವಾದವು. ಮಹಾಕವಿ ಭವಭೂತಿ ಹೇಳಿದ್ದಾನಲ್ಲವೆ:

> ಲೌಕಿಕಾನಾಮ್ ಹಿ ಸಾಧೂನಾಮ್
> ಅರ್ಥಮ್ ವಾಗನುವರ್ತತೇ ।
> ಋಷೀಣಾಮ್ ಪುನರಾದ್ಯಾನಾಮ್
> ವಾಚಮರ್ಥೋಽನುಧಾವತಿ ॥

ಲೋಕದಲ್ಲಿ ಸಾಧು ಸತ್ಪುರುಷರ ಮನಸ್ಸಿನಲ್ಲಿ ಇರುವ ಸಂಗತಿಗಳನ್ನು ಅವರ ಮಾತು ಅನುಸರಿಸುತ್ತದೆ. ಮಹಾತ್ಮರ ವಿಷಯದಲ್ಲಾದರೋ ಅವರು ಆಡಿದ ಮಾತುಗಳನ್ನು ಅನುಸರಿಸಿಕೊಂಡು ಸಂಗತಿಗಳು ನಡೆಯುತ್ತವೆ.

ಈ ಸೂಕ್ತಿಗೆ ನನ್ನ ಸೋದರತ್ತೆಯ ಕವಿತ್ವ ಒಳ್ಳೆಯ ನಿದರ್ಶನವಾಗಿದೆ. ಆಕೆ ನುಡಿದ ತಿಂಡಿಪೋತತನವೂ ಭಂಡಬಾಳೂ ಇಂದಿಗೂ ಹಾಗೆಯೇ ಸಾಗಿ ಬಂದಿವೆ.

ಆಕೆಯ ಕವಿತ್ವ ಶಬ್ದಾಲಂಕಾರಭೂಯಿಷ್ಠವಾಗಿರುವುದು ಎದ್ದು ಕಾಣುತ್ತಿದೆ. ಮೊದಲನೆಯ ಎರಡು ಸಾಲುಗಳನ್ನೂ ಸ್ವಭಾವೋಕ್ತ್ಯಲಂಕಾರವೆಂದು ಹೇಳಬಹುದು. ಮೂರನೆಯ ಪಂಕ್ತಿ ಶುದ್ಧ ಉತ್ಪ್ರೇಕ್ಷೆ. “ಗಂಡ” ಎಂದರೆ ಏನೆಂಬುದು ಆಗ್ಗೆ ಅರ್ಥವಾಗುವ ವಯಸ್ಸಲ್ಲ. ಕವಿತ್ವದ ಒಂದು ಮುಖ್ಯ ಲಕ್ಷಣ ಪ್ರಾಸ. ಪ್ರಾಸ ಬಂದಾಗ ನಾಶವಾದರೂ ಬಿಡತಕ್ಕದ್ದಲ್ಲ. ಹೀಗೆ ಪ್ರಾಸದ ರಭಸದಲ್ಲಿ ಹೊರಟದ್ದು ಮೂರನೆಯ ಪಾದ.

ಕನ್ನಡ ತೆಲುಗುಗಳಲ್ಲಿ ಪ್ರಾಸವೇ ಲೇಸು. ಅದಕ್ಕೆ ಉದಾಹರಣೆ ಕೊಡಲು ಇಲ್ಲಿ ಸ್ಥಳವಿಲ್ಲ.

ನನ್ನ ಸೋದರತ್ತೆ ಇತರ ಬಂಧುಗಳನ್ನೂ ಹೀಗೆ ಲೇವಡಿ ಮಾಡುತ್ತಿದ್ದರು. ಒಂದು ಉದಾಹರಣೆ:

> ಶಿಂಗಾರವಾದಳು ಶಿಂಬ್ರಪುರಕೀ ।
> ಅಂಗಡೀಲಿ ಕುಂತನು ಗಜ್ಜಿಬುರಕ ॥

ಇಂಥ ಅವಹೇಳನಗಳಿಂದ ಮನೆ ಹಿರಿಯರು ಮುನಿಸಿಕೊಂಡದ್ದುಂಟು; ಮೇಲೆ ಮುನಿಸಿಕೊಂಡು ಒಳಗೊಳಗೆ ನಗುತ್ತಿದ್ದದ್ದೂ ಉಂಟು.

***

(೨) ಸಂಗೀತದ ಸುಬ್ಬಣ್ಣ

ಇವರು ಗರ್ಲ್ಸ್ ಸ್ಕೂಲಿನಲ್ಲಿ “ಸಿಂಗಿಂಗ್” ಮೇಷ್ಟರು. ಆ ಕಾಲದಲ್ಲಿ ಉಪಾಧ್ಯಾಯರಾಗಿದ್ದವರಿಗೆ ಕೊಂಚ ಕಾವ್ಯಪರಿಚಯವಿರುತ್ತಿತ್ತು. ಅವರು ಕಾವ್ಯಲಕ್ಷಣಗಳನ್ನು ಕೆಲವನ್ನಾದರೂ ಗುರುತುಮಾಡಿಕೊಂಡಿರುತ್ತಿದ್ದರು. ಸುಬ್ಬಣ್ಣನವರು ಹುರುಪಿನಲ್ಲಿದ್ದ ಕಾಲದಲ್ಲಿ ವಿಕ್ಟೋರಿಯ ಚಕ್ರವರ್ತಿನಿಯ ಸುವರ್ಣೋತ್ಸವ ನಡೆಯಿತು (೧೮೮೭). ಬಹುಶಃ ಆಗಲೋ ಅಲ್ಲಿಂದೀಚೆಗೋ ಯಾವುದೋ ಒಂದು ಸಂದರ್ಭಕ್ಕೆ ಅನುಕೂಲಿಸುವಂತೆ ಸುಬ್ಬಣ್ಣನವರು ತಯಾರಿಸಿದ್ದ ಹಾಡು ಇದು. ಇದನ್ನು ಆಮೇಲೂ ಬಹು ವರ್ಷ ಕಲಿಸುತ್ತಿದ್ದರು.

ಕ್ವೀನ್ ವಿಕ್ಟೋರಿಯಾ
ಎಂಪ್ರೆಸ್ ಆಫ್ ಇಂಡಿಯಾ
ನೀ ಹ್ಯಾಪಿಯಾಗಿ ನಮ್ಮನಾಳು
ಒನ್ ಮಿಲಿಯನ್ ಯಿಯರ್ ॥
ಸುಗುಣಶಾಲಿನೀ–ಸುಜನಪಾಲಿನೀ
ಕಡಲ ರಾಣಿ–ಹಡಗ ದೋಣಿ
ರೂಲ್ ಬ್ರಿಟ್ಯಾನಿಯಾ ॥

ನಾಲ್ಕನೆಯ ಸಾಲಿನ “ಯಿಯರ್” ಎಂಬ ಮಾತಿನ ಕಡೆಯ ರೇಫವನ್ನು ಶಿಥಿಲವೆಂದು ಗ್ರಹಿಸತಕ್ಕದ್ದು. ಆಗ ಪ್ರಾಸ ಸರಿಹೊಂದುತ್ತದೆ.

ಇಂಥ ದ್ವಿಭಾಷಾಕವಿತ್ವಗಳು ಆಗ್ಗೆ ಒಂದು ಚಮತ್ಕಾರ. ನಾಚನ ಸೋಮನಾಥನೆಂಬ ಪುರಾತನನು ತಾನು ಅಷ್ಟಭಾಷಾಕವಿಯಾಗಿದ್ದೆನೆಂದು ಹೇಳಿಕೊಂಡಿದ್ದಾನೆ.

ಮೇಲಿನ ಹಾಡಿನಲ್ಲಿ ಇಂಗ್ಲಿಷ್ ಪದಗಳು ಇವೆಯಷ್ಟೆ? ಇಂಗ್ಲಿಷ್ ಭಾಷೆಯಲ್ಲಿ “ಆಕ್ಸೆಂಟ್” (Accent) ಎಂಬ ಉಚ್ಚಾರಣನಿಯಮವು ನಿರ್ಬಂಧವೆಂದೂ ಆ ಮಾತುಗಳನ್ನು ನಮ್ಮ ರಾಗಗಳಿಗೆ ಜೋಡಿಸುವುದು ಅಸಂಗತವೆಂದೂ ನಮ್ಮ ಸುಬ್ಬಣ್ಣನವರಿಗೆ ಅನ್ನಿಸಲಿಲ್ಲ. ಅವರು ಶಂಕರಾಭರಣರಾಗದ “ನೋಟ್” ಧಾಟಿಯಲ್ಲಿ ನಮಗೆಲ್ಲ ಈ ಹಾಡನ್ನು ಬಾಯಿಪಾಠ ಮಾಡಿಸಿದರು. ನಾವು ಅದನ್ನು ಹಾಡಿದ್ದೂ ಹಾಡಿದ್ದೇ; ನಮ್ಮ ಮೇಷ್ಟರುಗಳು

ಕೇಳಿ ಉಬ್ಬಿದ್ದೂ ಉಬ್ಬಿದ್ದೇ! ಹಾಡಿದವರಿಗೆ ಎರಡೆರಡು ಲಾಡುಗಳು ಬರುತ್ತಿದ್ದವು. ಮಿಕ್ಕವರಿಗೆಲ್ಲ ಒಂದೊಂದೇ.

ಸುಬ್ಬಣ್ಣನವರು ಇಂಥ ಗೇಯಕವನಗಳನ್ನು ಇನ್ನೂ ಎಷ್ಟೋ ಮಾಡಿದ್ದರು. ಒಂದರಲ್ಲಿ ಕನ್ನಡ–ತೆಲುಗುಗಳನ್ನೂ ಶಿವ–ವಿಷ್ಣುಗಳನ್ನೂ ಸಂಗೀತದ ಮಾತು–ಧಾತುಗಳನ್ನೂ ಸೇರಿಸಿದ್ದರು, ಹೀಗೆ:

ಪೂಲ ಚೆಂಡ್ಲಾಡಿರಿ–ಕೈಲಾಸವಾಸುಲು ।
ಪುಷ್ಪ ಚೆಂಡಾಡಿದರ್–ವೈಕುಂಠವಾಸಿಗಳ್ ॥
ನಿನ್ನನು ನಂಬಿದೆ ಸನ್ನುತಾಂಗ ।
ಎನ್ನನು ಕಾಯೊ ಪಾಂಡುರಂಗ ॥
ಬಾರೊ ಬಾರೊ ಶ್ರೀಹರಿ ।
ಭಾರವಿಳಿಸೊ ನರಹರಿ ॥
ಸಗ್ಗರಿಗರಿ ರಿಗರಿಸಾ ।
ನೀಸರೀಸ ಸಾನಿಧಸ್ಸ॥ ॥ ೧ ॥
ಪರಬ್ರಹ್ಮರೂಪಿಣಂ ।
ಬಾಲಚಂದ್ರಭೂಷಣಂ ॥
ಪಶುಪತೀ ವಂದನಂ ।
ಪಾರ್ವತೀ ವಲ್ಲಭಂ ॥
ಸಗ್ಗರಿಗರಿ ರಿಗರಿಸಾ ।
ನೀಸರೀಸ ಸಾನಿಧಸ್ಸ॥ ॥ ೨ ॥

ಇದನ್ನು ಸ್ಕೂಲಿಗೆ ಹೋದ ಹೆಣ್ಣುಮಕ್ಕಳು ಮಾತ್ರವೇ ಅಲ್ಲ, ಇತರರೂ ಒಳ್ಳೆಯ ಗತ್ತಿನಿಂದ ಹಾಡುತ್ತಿದ್ದರು. ಆ ಬಾಲಿಕೆಯರ ತಾಯಿ ಅಜ್ಜಿಯರು ಬೆರಗುಬಡಿದು ಕೇಳುತ್ತಿದ್ದರು. ಸಂಗೀತ ತಿಳಿದವರು ಮುಗುಳ್ನಗೆಯಿಂದ ಸುಮ್ಮನಿರುತ್ತಿದ್ದರು. ಅದು ಸಭಾಮರ್ಯಾದೆ.

***

(೩) ಷೇಕ್ ದಾವೂದ್ ಸಾಹೇಬರು

ಇವರು ವಯಸ್ಸಿನಲ್ಲಿ ನನಗಿಂತ ಐದಾರು ವರ್ಷ ದೊಡ್ಡವರು: ನನ್ನ ತಂದೆಯ ಪ್ರಿಯಶಿಷ್ಯರು. ಅದಕ್ಕಿಂತ ಹೆಚ್ಚಾಗಿ, ನಮ್ಮ ಹೆಡ್‌ಮಾಸ್ಟರ್ ಚಂದ್ರಶೇಖರಶಾಸ್ತ್ರಿಗಳಿಗೆ ಪಟ್ಟ ಶಿಷ್ಯರು. ಸಾಹೇಬರು ಕನ್ನಡ, ತೆಲುಗು, ಉರ್ದು—ಈ ಮೂರು ಭಾಷೆಗಳಲ್ಲೂ ಲೋವರ್ ಸೆಕಂಡರಿ ಪರೀಕ್ಷೆಯನ್ನು ಪ್ಯಾಸ್ ಮಾಡಿದ್ದರು. ಆ ಪರೀಕ್ಷೆಯೇ ನಮ್ಮ ಊರಿನ "ಡಿ.ಲಿಟ್." ಅಥವಾ "ಮಹಾಮಹೋಪಾಧ್ಯಾಯ." ಷೇಕ್ ದಾವೂದ್ ಸಾಹೇಬರು ಮೂರರಲ್ಲಿಯೂ ಫಸ್ಟ್ ಕ್ಲಾಸ್ ತೆಗೆದಿದ್ದವರು. ಅಷ್ಟೇ ಅಲ್ಲದೆ ಹಿಂದೂ ಮುಸಾಲ್ಮಾನ್ ವರ್ಗಗಳೆರಡರಲ್ಲಿಯೂ ಸಭ್ಯರೆನಿಸಿಕೊಂಡು ಗೌರವ ಸಂಪಾದಿಸಿದ್ದವರು.

ಮೈಸೂರು ಸಂಸ್ಥಾನದಲ್ಲಿ ಹರಿಜನೋದ್ಧಾರದ ಆಲೋಚನೆಯೂ ಸಾಮಾನ್ಯ ಪ್ರಜಾ ವಿದ್ಯಾಪ್ರಚಾರದ ಆಲೋಚನೆಯೂ ಗೋಖಲೆ-ಗಾಂಧಿಗಳ ಕಾಲಕ್ಕೆ ಹತ್ತಾರು ವರ್ಷಗಳ ಹಿಂದೆಯೇ ನಡೆದಿತ್ತು. ಸರ್ ಕೆ. ಶೇಷಾದ್ರಯ್ಯರವರ ಕಾಲದಲ್ಲಿ (೧೮೯೭-೯೮) ಒಂದು ರಾತ್ರಿಶಾಲೆ (ನೈಟ್ ಸ್ಕೂಲ್)ಯನ್ನೂ ಒಂದು ಪಂಚಮ ಪಾಠಶಾಲೆಯನ್ನೂ ನಮ್ಮ ಊರಿನಲ್ಲಿ ಆರಂಭಿಸತಕ್ಕದ್ದೆಂದು ಸರಕಾರದ ಅಧಿಕಾರಿಗಳು ನಿಶ್ಚಯಿಸಿ, ಆ ಎರಡು ಶಾಲೆಗಳಿಗೂ ಉಪಾಧ್ಯಾಯರಾಗಲು ತಕ್ಕ ಜನರನ್ನು ಆರಿಸಬೇಕೆಂದು ಚಂದ್ರಶೇಖರಶಾಸ್ತ್ರಿಗಳವರಿಗೆ ಆಜ್ಞೆ ಮಾಡಿದರು. ಶಾಸ್ತ್ರಿಗಳು ನೈಟ್ ಸ್ಕೂಲಿಗೆ ರಂಗಾಚಾರ್ಯರೆಂಬವರನ್ನೂ, ಪಂಚಮರ ಸ್ಕೂಲಿಗೆ ಷೇಕ್ ದಾವೂದ್ ಸಾಹೇಬರನ್ನೂ ಶಿಫಾರಸು ಮಾಡಿದರು. ಅದು ಮಂಜೂರಾಗಿ, ಸಾಹೇಬರು ಉಪಾಧ್ಯಾಯರ ಕೆಲಸವನ್ನು ನಿರ್ವಹಿಸಿ ಕೀರ್ತಿ ಸಂಪಾದಿಸಿದರು.

ಪ್ರಕೃತ-ಒಂದು ದಿನ ಮಧ್ಯಾಹ್ನ ಮೂರು ಘಂಟೆಗಿಂತ ಕೊಂಚ ಮುಂಚೆ ನಾನು ನನ್ನ ಸ್ಕೂಲಿಗೆ ಹೋದೆ. ಅಲ್ಲಿ ಹೆಡ್ ಮಾಸ್ಟರ್‌ರವರ ಕೋಣೆಯಲ್ಲಿ ಒಂದು ಮೂಲೆಯಲ್ಲಿ ಷೇಕ್ ದಾವೂದ್ ಸಾಹೇಬರು ಕುಳಿತು ಏನೋ ಬರೆಯುತ್ತಿದ್ದರು. ನನ್ನನ್ನು ಕಂಡಕೂಡಲೆ "ಆಹಾ, ಬಂದ್ಯಾ! ನಿನಗೋಸ್ಕರ ಕಾದಿದ್ದೆ. ಇದನ್ನು ನೋಡು" ಎಂದು ಹೇಳಿ ಆ ಕಾಗದವನ್ನು ನನ್ನ ಕೈಗೆ ಕೊಟ್ಟರು. ಅದರಲ್ಲಿದ್ದದ್ದು ಹೀಗೆ:

ಟನ್-ಟನ್-ಟನ್-ಟನ್ ಟ-ರ-ರ-ರ-ರಾ ।
ಸಂತೋಷ ಮೊಂದೇ ಲಂಡನ್‌ಬುರಾ ॥

ನನಗೆ ಅರ್ಥವಾಗಲಿಲ್ಲ. “ಇದೇನು?” ಎಂದು ಕೇಳಿದೆ. ಅವರು ವಿವರಿಸಿದರು, ಹೀಗೆ:

“ನಾಳೆ ಬರುತ್ತದಲ್ಲಯ್ಯ ಮೊಹರಂ ಹಬ್ಬ-ಆಗ ನಮ್ಮ ಜನ ಗಿರೋಲ್ ಹೊಡೆಯ ಬೇಕೋ ಇಲ್ಲವೋ? ಅದಕ್ಕೆ ಒಂದು ಪದ ಕಟ್ಟಿಕೊಡು ಎಂದು ಹೇಳಿದ್ದಾರೆ. ಇದು ಹೇಗಿದೆ ನೋಡು.”

“ಗಿರೋಲ್” ಅಥವಾ “ಗಿರಾವ್” ಎಂಬುದು ನಮ್ಮ ಈ ಹೊತ್ತಿನ ರಾಜಕೀಯ ಪರಿಭಾಷೆಯ “ಘೇರಾವ್.” ಈ ಉತ್ಸವದಲ್ಲಿ ಎಂಟು ಒಂಭತ್ತು ಮಂದಿ ಇರುತ್ತಾರೆ. ಎಲ್ಲರೂ ಸಮವಸ್ತ್ರ (ಯೂನಿಫಾರ್ಮ್) ಧಾರಿಗಳು: ಬಿಳಿಯ ಪೈಜಾಮ, ಮೊಣಕಾಲವರೆಗಿನ ಬಿಳಿಯ ಬನಿಯನ್, ತಲೆಯ ಮೇಲೆ ಕುಚ್ಚುಬಿಟ್ಟ ತುರುಕ ಟೋಪಿ. ಅವರಲ್ಲಿ ಒಬ್ಬನು ನಡುವಿಗೆ ಒಂದು ಮದ್ದಲೆಯನ್ನು ಮೇಲ್ಮುಖವಾಗಿ ಕಟ್ಟಿಕೊಂಡು ಅದರ ಮೇಲ್ಮುಖದ ಮೇಲೆ ಎರಡು ಕೈಯಿಂದಲೂ ಛಾಪುತಾಳ ತಟ್ಟುತ್ತಿರುತ್ತಾನೆ. ಉಳಿದವರು ಅವನ ಸುತ್ತ ಕುಣಿದುಕೊಂಡು ತಿರುಗುತ್ತಾರೆ. ಪ್ರತಿಯೊಬ್ಬನ ಬಲಗೈಯಲ್ಲೂ ಒಂದು ಗಿಲಿಕೆ ಇರುತ್ತದೆ. ಇದು ಟಿನ್ ತಗಡಿನ ಡಬ್ಬಿ. ಇದರಲ್ಲಿ ಸಣ್ಣ ಸಣ್ಣ ಕಲ್ಲಿನ ಚೂರುಗಳನ್ನು ಹಾಕಿ ಅಲ್ಲಾಡಿಸಿದರೆ ಘಲ್ ಘಲ್ ಶಬ್ದವಾಗುತ್ತದೆ. “ಘಲಿಕೆ” ಯೇ ಗಿಲಿಕೆ. ಎಡಗೈಯಲ್ಲಿ ಒಂದು ಬಿದಿರಿನ ಭಲ್ಲೆ ಅಥವಾ ಬಿಲ್ಲು ಇರುತ್ತದೆ. ಇದಕ್ಕೆ ಬಣ್ಣದ ಕಾಗದ ಗುನ್ನಾಂಪಟ್ಟಿ ಮೆತ್ತಿ ಮೆತ್ತಿ ಅಲಂಕಾರ ಮಾಡಿರುತ್ತಾರೆ. ಇವರು ಗಿರ್ರನೆ ಸುತ್ತುವಾಗ ಅವರ ನಡಿಗೆಗೂ ತಾಳಕ್ಕೂ ಸರಿಹೊಂದುವಂತೆ ಹಾಡನ್ನು ಹಾಡಬೇಕು. ಇದು ನಮ್ಮ ಷೇಕ್ ದಾವೂದ್ ಸಾಹೇಬರ ಕವಿತ್ವ.

ಅದಕ್ಕೆ ಅರ್ಥವೇನೆಂದು ಕೇಳಿದೆ.

“ಮೊದಲನೆಯ ಪಾದಕ್ಕೆ ಅದರ ಶಬ್ದವೇ ಅರ್ಥ. ನೀನು ಅದನ್ನು ಬೇಗ ಬೇಗ ದ್ರುತಗತಿಯಲ್ಲಿ ಹೇಳು, ನಿನಗೆ ಗೊತ್ತಾಗುತ್ತದೆ ಅದರ ಸ್ವಾರಸ್ಯ. ಇನ್ನು ಎರಡನೆಯ ಪಾದ. ಅದರಲ್ಲಿ ‘ಸಂತೋಷ ಮೊಂದೇ’ ಎಂಬುದು ತೆಲುಗು ಪ್ರಯೋಗ: ‘ಸಂತೋಷ ಹೊಂದಿತು’ ಎಂದರ್ಥ. ಯಾವುದು ಸಂತೋಷ ಹೊಂದಿದ್ದು? ‘ಲಂಡನ್ ಪುರ’. ‘ಪುರ’ ಎಂಬ ಮಾತು ‘ಬುರ’ ಎಂದಾಗುತ್ತದೆ. ಕನ್ನಡದಲ್ಲಿ ಕ, ತ, ಪಗಳು ಸಂಧಿಯಲ್ಲಿ ಗ, ದ, ಬಗಳಾಗುತ್ತವಷ್ಟೆ? ಕೈ + ಕೊಂಡು = ಕೈಗೊಂಡು. ಹಿಂ + ತೆಗೆ = ಹಿಂದೆಗೆ. ಸುಖಂ + ಪಟ್ಟನು = ಸುಖಂಬಟ್ಟನು” ಎಂದು ವಿವರಿಸಿದರು.

ಹೀಗೆ ನಮ್ಮ ಸಾಹೇಬರು ವ್ಯಾಕರಣವನ್ನು ಮನ್ನಿಸಿ “ಪ್ರಪಂಚದಲ್ಲೆಲ್ಲ ಮಹಾ ವಿಖ್ಯಾತ ರಾಜಧಾನಿಯಾದ ಲಂಡನ್ ಪಟ್ಟಣವೇ ನಮ್ಮ ಗಿರೋಲಿನಿಂದ ಸಂತೋಷ ಪಟ್ಟಿತು ಎಂದು ಹಾಡಿನ ಭಾವ” -ಎಂದು ಹೇಳಿ “ಇನ್ನೊಂದು ಸಲ ಹಾಡು ಗತ್ತಿನಿಂದ” ಎಂದರು.

ಟನ್-ಟನ್-ಟನ್-ಟನ್ ಟ-ರ-ರ-ರ-ರಾ ।
ಸಂತೋಷವೊಂದೇ ಲಂಡನ್ ಬುರಾ ।
ಆ ಲಂಡನ್ ಬಡಾ-ಹೋ ಲಂಡನ್ ಬಡಾ ॥

ಆಹಾ! ಏನು ಕಾವು! ಏನು ನಡಿಗೆ! ಏನು ಓಟ! ಕಾವೂ ಓಟವೂ ಧಾಟಿಯೂ ಇಲ್ಲದೆ ಎಂಥ ಕವಿತ್ವವಾದೀತು? -ಎಂದು ವಾದಿಸುವ ಸಾಹಿತಿಗಳು ಕೆಲವರಾದರೂ ಇದ್ದಾರೆ. ಅವರು ಷೇಕ್ ದಾವೂದ್ ಕವಿತ್ವದಿಂದ ಸುಪ್ರೀತರಾದಾರು.

(೪ – ೫) ಪೂಜ್ಯ ಶೇಷಪ್ಪನವರು, ಸುಬ್ಬರಾಯರು

ಶೇಷಪ್ಪನವರೂ ಸುಬ್ಬರಾಯರೂ ನನಗಿಂತ ನಾಲ್ಕಾರು ವರ್ಷ ಹಿರಿಯರು. ಸುಬ್ಬರಾಯರು ನನಗೆ ಮೇಷ್ಟರೇ ಆಗಿದ್ದರು. ಅವರಿಬ್ಬರೂ ಉಪಾಧ್ಯಾಯ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರಾಗಿ ಪಂಡಿತ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿದ್ದರು.

ಒಂದು ಬೇಸಗೆಯ ರಜಾ ದಿವಸ. ನಾನು ಆಗ ಕನ್ನಡ ನಾಲ್ಕನೆಯ ತರಗತಿಯಲ್ಲೋ ಐದನೆಯದರಲ್ಲೋ ಇದ್ದೆ. ಬೇಸಗೆಯ ರಜಾದಿನಗಳಲ್ಲಿ ಶೇಷಪ್ಪನವರೂ ಸುಬ್ಬರಾಯರೂ ಅವರ ಸ್ನೇಹಿತರು ಇನ್ನೂ ಇಬ್ಬರು ಮೂವರೂ ನಮ್ಮ ಮನೆಯ (ವರಾಂಡ) ಕೈಸಾಲೆಯಲ್ಲಿ ಗ್ರಂಥವ್ಯಾಸಂಗ ಮಾಡುತ್ತಿದ್ದದ್ದು ಪದ್ಧತಿ. ಪಶ್ಚಿಮಾಭಿಮುಖವಾದ ಮನೆ. ಮುಂದುಗಡೆಯ ಜಗುಲಿಗಳು ವಿಸ್ತಾರವಾಗಿದ್ದವು. ಉತ್ತರದ ಕಡೆಯಲ್ಲಿ ಶೇಷಪ್ಪನವರೂ ನಾನೂ ಇರುತ್ತಿದ್ದೆವು. ದಕ್ಷಿಣದ ಕಡೆಯ ಕೋಣೆಯಲ್ಲಿ ಸುಬ್ಬರಾಯರೂ ಇತರರೂ ಇರುತ್ತಿದ್ದರು. ಸಂಜೆಯ ಹೊತ್ತು ನನ್ನ ತಂದೆ ಎರಡು ಜಗುಲಿಗಳ ನಡುವೆ ಕುಳಿತು ಪರಂಗಿ ಹಣ್ಣು, ಚಕ್ಕೋತನೆ, ದಾಳಿಂಬೆ–ಮೊದಲಾದವನ್ನು ನಮ್ಮ ಹಿತ್ತಲ ತೋಟದಿಂದ ತಂದು ಬಿಡಿಸಿ ಬಿಡಿಸಿ ಅಲ್ಲಿದ್ದವರಿಗೆಲ್ಲ ಹಂಚುತ್ತಿದ್ದರು. ಎಲ್ಲರೂ ಮಾತುಕಥೆಯಾಡಿಕೊಂಡು ಗ್ರಂಥಗಳನ್ನು ಕುರಿತು ಚರ್ಚಿಸುತ್ತ ಕಾಲ ಕಳೆಯುತ್ತಿದ್ದರು.

ಆ ಕಾಲದಲ್ಲಿ ಬಂಕಿಮಚಂದ್ರ ಚಟರ್ಜಿಯವರ ಬಂಗಾಳಿ ಗ್ರಂಥಗಳು ಬಿ. ವೆಂಕಟಾಚಾರ್ಯರವರಿಂದ ಕನ್ನಡಕ್ಕೆ ತರ್ಜುಮೆಯಾಗಿ ಪ್ರಕಟವಾಗುತ್ತಿದ್ದವು. ಆ ಪುಸ್ತಕಗಳು ನಮ್ಮ ಸ್ಕೂಲಿಗೂ ಬರುತ್ತಿದ್ದವು. ಅವುಗಳಲ್ಲಿ ಒಂದು "ಭ್ರಾಂತಿ ವಿಲಾಸ" ಎಂಬುದು. ಇದು ಷೇಕ್‌ಸ್ಪಿಯರ್ ಮಹಾಕವಿಯ "ಕಾಮೆಡಿ ಆಫ್ ಎರ್ರರ್ಸ್" *(Comedy of Errors)* ಎಂಬ ಇಂಗ್ಲಿಷ್ ನಾಟಕದ ಕಥನ. ಈ ಸಂಗತಿ ನಮಗೆ ಆಗ ತಿಳಿದಿರಲಿಲ್ಲ. ನಾವೆಲ್ಲ ಕನ್ನಡದಲ್ಲಿ "ಭ್ರಾಂತಿವಿಲಾಸ" ವನ್ನು ಓದಿದೆವು. ಅದು ಬಹು ಸೊಗಸಾಗಿದೆಯೆಂದೆನ್ನಿಸಿತು. ಅದನ್ನು ಕನ್ನಡದಲ್ಲಿ ನಾಟಕರೂಪವಾಗಿ ಬರೆದರೆ ಚೆನ್ನಾಗಿರುತ್ತದೆಂದು ಅಂದುಕೊಂಡೆವು. ಕೂಡಲೆ ಕಾರ್ಯೋಪಕ್ರಮವಾಗತಕ್ಕದ್ದೆಂದು ನಿಶ್ಚಯಿಸಿದೆವು.

ನಾಟಕಕ್ಕೆ ಮೊದಲು ಆಗಬೇಕಾದದ್ದು ನಾಂದೀ ಪದ್ಯ ತಾನೆ? ಅದನ್ನು ಶೇಷಪ್ಪನವರೂ ಸುಬ್ಬರಾಯರೂ ರಚಿಸತಕ್ಕದ್ದೆಂದು ತೀರ್ಮಾನವಾಯಿತು. ಅವರಿಬ್ಬರೂ ಉತ್ಸಾಹದಿಂದ

ಅವರವರ ಕೋಣೆಗಳೊಳಕ್ಕೆ ಹೋಗಿ ಬಾಗಿಲು ಹಾಕಿಕೊಂಡರು.

ಹತ್ತು ಹದಿನೈದು ನಿಮಿಷ ಕಳೆದ ಮೇಲೆ ನಮ್ಮ ತಂದೆಯ ಸ್ನೇಹಿತ ವೆಂಕಟನಾರಣಭಟ್ಟರು ಅಲ್ಲಿಗೆ ಬಂದರು. "ಶೇಷಪ್ಪ ಸುಬ್ಬರಾಯರು ಎಲ್ಲಿ?" ಎಂದು ನನ್ನ ತಂದೆಯನ್ನು ಕೇಳಿದರು. ಇದ್ದ ಸಂಗತಿಯನ್ನು ಕೇಳಿದ ಮೇಲೆ ಭಟ್ಟರು ಅಲ್ಲಿಯೇ ಕುಳಿತು "ನಾವೂ ಕೇಳಿ ಸಂತೋಷಪಡೋಣ" ಎಂದರು. ಇನ್ನೈದು ನಿಮಿಷಗಳೊಳಗಾಗಿ ಮತ್ತೂ ಮೂವರು ನಾಲ್ವರು ಸ್ನೇಹಿತರು ಬಂದು ಸೇರಿದರು.

ಇನ್ನೂ ಐದು ನಿಮಿಷವಾಯಿತು. ವೆಂಕಟನಾರಣಭಟ್ಟರು ತೆಲುಗಿನಲ್ಲಿ "ಶೇಷಪ್ಪಾ, ಇನ್ನೂ ಮುಗಿಯಲಿಲ್ಲವೇನಯ್ಯ ಪ್ರಸವವೇದನೆ? ನಿನ್ನದು ಮೊದಲೋ ಸುಬ್ಬರಾಯರದು ಮೊದಲೋ?" ಎಂದು ಗಟ್ಟಿಯಾಗಿ ಕೂಗಿ ಕೇಳಿದರು. ಒಂದೆರಡು ನಿಮಿಷಗಳೊಳಗೆ ಶೇಷಪ್ಪ ಹೊರಕ್ಕೆ ಬಂದು ತಾನು ಬರೆದಿದ್ದ ಕಾಗದವನ್ನು ಭಟ್ಟರ ಕೈಗೆ ಕೊಟ್ಟರು. ಅದರಲ್ಲಿ ಹೀಗಿತ್ತು,

ಶ್ರೀಗೌರೀಕುಚಕುಂಭಕುಂಕುಮಲಸತ್-
ಪಂಕಾಂಕಿತೋರಃಸ್ಥಲಂ ।
ವಾಗೀಶಾದ್ಯಮರೌಘವಂದಿತಪದಂ
ಗಂಗಾಧರಂ ಶಂಕರಂ ॥...

ಇಷ್ಟರೊಳಗೆ ಸುಬ್ಬರಾಯರು ಹೊರಕ್ಕೆ ಬಂದು ತಮ್ಮ ಕೃತಿಯನ್ನು ವೆಂಕಟನಾರಣಭಟ್ಟರ ಕೈಗೆ ಕೊಟ್ಟರು. ಅವರು ಅದನ್ನೂ ಓದಿದರು, ಹೀಗೆ:

ಶ್ರೀಲಕ್ಷ್ಮೀಕುಚಕುಂಭಕುಂಕುಮಲಸತ್
ಪಂಕಾಂಕಿತೋರಃಸ್ಥಲಂ ।
ಫಾಲಾಕ್ಷಾದ್ಯಮರೌಘವಂದಿತಪದಂ
ಗೋವಿಂದನಾನಂದದಂ ॥...

ಭಟ್ಟರು "ಭೇಷ್! ಏನು ಸೊಗಸಾಗಿ ಬರೆದಿದ್ದೀರಯ್ಯ! ಸ್ಮಾರ್ತನು ಶಿವನನ್ನೂ ಮಾಧ್ವನು ಹರಿಯನ್ನೂ ಎತ್ತಿಕೊಂಡದ್ದೂ ಸರಿಹೋಯಿತು. ಆದರೆ ತಾಯಿಗೆ ತಂದಿರಲ್ಲಯ್ಯ ತಗಾದೆ! ಇಬ್ಬರೂ ಒಂದೇ ಅಂಗವನ್ನು ಹಿಡಿದಿದ್ದೀರಲ್ಲಯ್ಯ-ವರ್ಣನೆಗೆ?" ಎಂದರು.

ನನ್ನ ತಂದೆ ನಗುವುದರಲ್ಲಿ ನಿಸ್ಸೀಮರು. ಆಗ ಓದಿದವರೂ ಕೇಳಿದವರೂ ಮಾತ್ರವೇ ಅಲ್ಲ, ಬರೆದವರೂ ಆ ನಗೆಗಡಲಿನಲ್ಲಿ ಮುಳುಗಿ ತೇಲಿಹೋದರು. ಆಮೇಲೆ ಎಂಟು ಹತ್ತು ದಿವಸ ಎಲ್ಲಿ ಹೋದರೂ ಅದೇ ಪ್ರಸ್ತಾವ.

ಅಂದಿಗೆ ಮುಗಿಯಿತು, ಆ ಇಬ್ಬರು ಕವಿಗಳ ಕವನೋತ್ಸಾಹ.

೧೯

ಅಪ್ರಸಿದ್ಧ ಕವಿತ್ವ–೨

ಅರವತ್ತು-ಎಪ್ಪತ್ತು ವರ್ಷದ ಹಿಂದೆ ಪಂಡಿತರೆಂದೆನ್ನಿಸಿಕೊಂಡವರಿಗೆ ಶಬ್ದಸಂಪತ್ತು ಯಥೇಷ್ಟವಾಗಿತ್ತು. ಆ ಸಂಪತ್ತಿನ ವಿನಿಯೋಗಕ್ಕೆ ವಸ್ತುವು ವಿಶೇಷವಾಗಿರಲಿಲ್ಲ. ಮುಳಬಾಗಲಿನ ಶ್ರೀಮಾನ್ ತಿರುವೇಂಗಡಯ್ಯನವರು ಆಂಧ್ರಪಂಡಿತರು. ಪ್ರಾಚೀನ ಕಾವ್ಯಗಳನ್ನು ಪಾಠ ಹೇಳುವುದರಲ್ಲಿ ಅವರು ಉತ್ಸಾಹಿಗಳು ಮತ್ತು ನಿಪುಣರು; ನಡತೆಯಲ್ಲಿ ಪರಿಶುದ್ಧರು; ನಿಜವಾದ ದೈವಭಕ್ತರು. ಅವರು ತೆಲುಗು ಮಿಡ್ಲ್ ಸ್ಕೂಲಿನ ಹೆಡ್ ಮಾಸ್ಟರು. ಇದರ ಜೊತೆಗೆ ಕೆಲಮಂದಿ ವೈಶ್ಯ ಯುವಕರಿಗೆ ಗಮಕ ("ವಾಚಕ") ಹೇಳಿ ಕೊಡುತ್ತಿದ್ದರು. ತೆಲುಗಿನಲ್ಲಿ ಕನ್ನಡದಲ್ಲಿದ್ದಂತೆ ಪ್ರಾಸವು ಕವಿತ್ವದ ದೊಡ್ಡ ಲಕ್ಷಣ. ತಿರುವೇಂಗಡಯ್ಯನವರೂ ಅದಕ್ಕೆ ಮನಸೋತಿದ್ದರು. ಅವರ ಶಿಷ್ಯರಲ್ಲಿ ಒಬ್ಬಾತ ಒಂದು ದಿನ ಅನುಕರಣ ಕವಿತ್ವವನ್ನು ಮಾಡಿದ್ದ, ಹೀಗೆ:

> ಅಂಡಾಂಡ ಪಿಂಡಾಂಡ
> ಬ್ರಹ್ಮಾಂಡ ಭಾಂಡಂಬು ।
> ಧಂಡಿಗಾ ಭಂಡಿಗಾ
> ಮೆಂಡಿವೆಲಸೆ ॥
> ತೆರತೂರ್ಣ ಪರಿಪೂರ್ಣ
> ಪೂರ್ಣ ಘೂರ್ಣಿತಮಯ್ಯೆ ।
> ಚೂರ್ಣಂಬು ನೂರ್ಣಂಬು
> ಪೂರ್ಣಮಯ್ಯೆ ॥

ಇದನ್ನು ನೋಡಿದ ಗುರುಗಳು "ಇದಕ್ಕೆ ಅರ್ಥವೇನಯ್ಯ?" ಎಂದು ಕೇಳಿದರಂತೆ, ಶಿಷ್ಯನು (ತೆಲುಗಿನಲ್ಲಿಯೇ) ಉತ್ತರ ಹೇಳಿದ:

"ಇನ್ನೂ ಅರ್ಥ ಇಟ್ಟಿಲ್ಲ. ಶಬ್ದಗಳನ್ನು ಮಾತ್ರ ಇಟ್ಟಿದ್ದೇನೆ. ಅರ್ಥವನ್ನು ಆಮೇಲೆ ಜೋಡಿಸಬೇಕು."

***

ತಿರುವೇಂಗಡಯ್ಯನವರಿಗೆ ಒಳ್ಳೆಯ ಕಾವ್ಯವಸ್ತು ಹೊಳೆದಿದ್ದಿದ್ದರೆ ಅವರು ಪ್ರೌಢ ಕಾವ್ಯವನ್ನೇ ಬರೆದಿರುತ್ತಿದ್ದರು. ಅವರಿಗೆ ತಕ್ಕಮಟ್ಟಿನ ವಸ್ತು ದೊರಕಿದ್ದು ಅಲ್ಲಿನ ಅಮಲ್ದಾರರಿಗೆ ವರ್ಗವಾದಾಗ.

ಆ ಅಮಲ್ದಾರರು ಸಿ. ಶೇಷಾದ್ರಿ ಅಯ್ಯಂಗಾರ್ಯರೆಂಬವರು: ಕೌನ್ಸಿಲರ್ ಆಗಿ ಪ್ರಸಿದ್ಧರಾದ ಸಿ. ಶ್ರೀನಿವಾಸ ಅಯ್ಯಂಗಾರ್ಯರ ಸಹೋದರರು. ಅವರು ಊರಿನಿಂದ ಹೊರಡುವ ಮುನ್ನ ಗೌರವಾರ್ಥವಾಗಿ ನಡೆದ ಮಹಾಸಭೆಯಲ್ಲಿ ತಿರುವೇಂಗಡಯ್ಯನವರು ತಮ್ಮ ಬೃಹತ್ಪ್ರಬಂಧವನ್ನು ಓದಿದರು.

ಪ್ರಬಂಧದ ವಸ್ತು ಮುಖ್ಯವಾಗಿ ಎರಡು ಭಾಗವಾಗಿತ್ತು:

1. ಆಂಜನೇಯಸ್ವಾಮಿಯ ಗುಡಿಗೆ ಗೋಪುರ ಕಟ್ಟಿಸಿದ್ದು.
2. ನಾಗದಾಳಿ ಕಡಿಸಿದ್ದು.

ಇದರಲ್ಲಿ ಮೊದಲನೆಯದೇನೋ ಕಾವ್ಯವಸ್ತುವೆನ್ನಬಹುದು. ಅದರಲ್ಲಿ ಆಂಜನೇಯ ಸ್ವಾಮಿಯ ಮಹಿಮೆ, ಆತನು ಅರ್ಜುನನ ಧ್ವಜದಲ್ಲಿದ್ದದ್ದು, ಅನಂತರ ಮುಳಬಾಗಲಿನಲ್ಲಿ ಬಂದು ನೆಲಸಿದ್ದು, ಆತನು ಅಲ್ಲಿ ನೆಲಸುವಂತೆ ಕೇಳಿಕೊಂಡ ರಾಜನು ಪ್ರತಿ ದಿವಸವೂ ತಪ್ಪದೆ ಕೇದಗೆ ಹೂವಿನಿಂದ ಅರ್ಚನೆ ಮಾಡಿಸುವುದಾಗಿ ಒಪ್ಪಿಕೊಂಡದ್ದು, ಅಂದಿನಿಂದ ಆಂಜನೇಯಸ್ವಾಮಿಯೂ ಭಕ್ತರಿಗೆ ಕೇದಗೆ ಹೂವಿನ ರೇಕಿನ ಮೂಲಕವೂ ಧೂಪಾರ್ತಿಯ ಅಂಗಾರದ ಮೂಲಕವೂ ಅವರವರ ಮನಸಾಭೀಷ್ಟಗಳನ್ನು ಕೊಡುತ್ತ ಬಂದಿರುವುದು. ಆಮೇಲೆ ಗೋಪುರ ಇಲ್ಲದಿದ್ದರೆ ಗುಡಿ ಶೋಭಾಯಮಾನವಾಗದೆಂಬ ಕೊರತೆ, ಆ ಕೊರತೆಯನ್ನು ನಿವಾರಿಸುವುದಕ್ಕಾಗಿ ಶೇಷದ್ರಿ ಅಯ್ಯಂಗಾರ್ಯರು ಮಾಡಿದ ಮಹಾಪ್ರಯತ್ನ, ಅವರ ದೈವಭಕ್ತಿ, ಮಹಾಜನಗಳ ಔದಾರ್ಯ, ದ್ರವ್ಯದಾನ ಮಾಡಿದವರ ಮಹನೀಯತೆ-ಇದೆಲ್ಲ ವರ್ಣಿತವಾಗಿತ್ತು.

ಪ್ರಬಂಧದ ದ್ವಿತೀಯ ಭಾಗದಲ್ಲಿ, ಆ ತಾಲ್ಲೂಕಿನಲ್ಲೆಲ್ಲ ವಿಶೇಷವಾಗಿ ಹಬ್ಬಿ ಹರಡಿದ್ದ ನಾಗದಾಳಿ ಕಳ್ಳಿಗಳ ಅವಾಂತರ, ಅವುಗಳಿಂದ ಪ್ರಯಾಣಕ್ಕೆ ಆಗಿದ್ದ ಕಷ್ಟ, ಅವುಗಳ ಹಿಂದೆ ಅಡಗಿಕೊಳ್ಳುತ್ತಿದ್ದ ಕಳ್ಳಕಾಕರ ದುಷ್ಟತನ, ಹಾವು ಮಂಡರಗಪ್ಪೆಗಳ ಹರಿದಾಟ ಕಾಟಗಳು, ಇವುಗಳನ್ನೆಲ್ಲ ನಾಶಪಡಿಸಿ ನಾಗದಾಳಿಯನ್ನು ನಿರ್ಮೂಲ

ಮಾಡಬೇಕಾಗಿದ್ದದ್ದರ ಆವಶ್ಯಕತೆ, ಆ ಕಾರ್ಯಕ್ಕಾಗಿ ಸಿದ್ಧವಾದ ಮಚ್ಚುಗತ್ತಿಗಳು, ಕೊಡಲಿಗಳು, ಕುಡುಗೋಲುಗಳು ಮೊದಲಾದ ಆಯುಧಗಳ ವರ್ಣನೆ ಮತ್ತು ಆ ಸಾಹಸಗಳ ಪ್ರಶಂಸೆ: ಶ್ರೀರಾಮಚಂದ್ರನು ರಾವಣಸೈನ್ಯವನ್ನು ಧ್ವಂಸಮಾಡಿದಂತೆಯೂ, ಅರ್ಜುನನು ಕೌರವಪಡೆಗಳನ್ನು ನಾಶಪಡಿಸಿದಂತೆಯೂ, ಮಹೇಂದ್ರನು ಪರ್ವತಗಳ ಪಕ್ಷಗಳನ್ನು ತರಿದಂತೆಯೂ, ಪರಮೇಶ್ವರನು ತ್ರಿಪುರದಹನ ಮಾಡಿದಂತೆಯೂ ಆಯಿತೆಂದು ತಿರುವೇಂಗಡಯ್ಯನವರು ವರ್ಣಿಸಿದರು. ಅದರಲ್ಲಿ "ಅಂದಂಬುನ ಚಂದಂಬುನಡೆಂದೆಂಬುನ", "ಪೇರೊಂಡ್ರು ವೇರೊಂಡ್ರು ಭೇರೊಂಡ್ರು" ಎಂಬೀ ರೀತಿಯ ಪ್ರಾಸಗಳೂ ಯಮಕಗಳೂ ಪರಂಪರೆಯಾಗಿ ಹರಿದುಬಂದಿದ್ದವು.

ಅದನ್ನು ಕೇಳಿ ಜನ ಮೆಚ್ಚಿ ಬೆರಗಾಯಿತು. ಒಟ್ಟಿನಲ್ಲಿ ಆಗ ನಮ್ಮ ದೇಶದಲ್ಲಿ ಪಾಂಡಿತ್ಯ ಉಳಿದಿತ್ತು; ಅದಕ್ಕೆ ಬೆಲೆ ಕೊಡಬಲ್ಲವರೂ ಇದ್ದರು.

ಆ ಊರಿನಲ್ಲಿ ಮಂಗಳವಾರ ಸಂತೆಯ ದಿನವಾದದ್ದರಿಂದ ಸೂಲ್ಕುಗಳಿಗೆ ರಜ. ಆ ಮಧ್ಯಾಹ್ನ ಎಲ್ಲ ಸ್ಕೂಲುಗಳ ಮೇಷ್ಟರುಗಳೂ ಊರಿನ ಮಧ್ಯರಂಗದಲ್ಲಿದ್ದ ತೆಲುಗು ಸ್ಕೂಲ್ ಕಟ್ಟಡದಲ್ಲಿ ಸೌತೆಕಾಯಿ, ನೆಲಗಡಲೆಕಾಯಿಗಳನ್ನು ಮೆಲ್ಲುತ್ತ ಹರಟೆ ಹೊಡೆಯುವುದು ಪದ್ಧತಿ.

ಒಂದು ದಿನ ತಿರುವೇಂಗಡಯ್ಯನವರು ಪ್ರಾಸ್ತಾವಿಕವಾಗಿ, ಯಾರೋ ರಚಿಸಿದ್ದೆಂದು ಹೇಳಲಾದ ಒಂದು ಪದ್ಯಾರ್ಥವನ್ನು ಹೇಳಿದರು, ಹೀಗೆ:

> ಕನ್ನಡ ಕವಿತಲು ವೆಧವಲ ।
> ಚೊನ್ನುಲ ವಲೆ ಜೋಲುಬಡಿನ
> ತಿತ್ತುಲು ಗದರಾ ॥

ಇದನ್ನು ಕೇಳಿದ ಕೂಡಲೆ ಅಲ್ಲಿದ್ದ ವೇಗಮಡಗು ಶೀನಪ್ಪನವರು ಸವಾಲಿಗೆ ಜವಾಬು ಹೇಳಿದರು:

> ತೆಲುಗುನ ಕವಿತಲು ಕಮ್ಮಡಿ ।
> ಪುಲಗುಲ ವಲೆ ಮುಂಡ್ಲನೆತ್ತಿ
> ಜರುಗುನು ಗದರಾ ॥

ಅಲ್ಲಿದ್ದ ಇನ್ನೊಬ್ಬರು "ಆ ವೆಧವಲಕೂ ಈ ಮುಂಡ್ಲಕೂ ಸರಿಪೋಯ" ಎಂದರು.

“ಮುಂಡ್ಲು” ಎಂಬುದಕ್ಕೆ ಮುಳ್ಳುಗಳು ಎಂದಾದರೂ ಅರ್ಥವಾಗಬಹುದು. ಮುಂಡೆಯರು ಎಂದಾದರೂ ಆಗಬಹುದು.

ಕೊಳ್ಳಿ ನರಷಿಇಞ್ಯಾಚಾರ್ಯರು

ನರಷಿಇಞ್ಯಾಚಾರ್ಯರು ಗೋಪೀನಾಥಾಚಾರ್ಯರ ಶಿಷ್ಯರು. ಮಹಾ ಗುರು ಭಕ್ತರು. ಅವರ ಮುಖ್ಯ ಕವಿತೆ ಗುರುಗಳ ವರ್ಣನೆ.

ನರಷಿಇಞ್ಯಾಚಾರ್ಯರ ವಿಷಯದಲ್ಲಿ ಕಥೆಗಳು ಅನೇಕವುಂಟು. ಅವೆಲ್ಲ ಬರೆಯತಕ್ಕುವಲ್ಲ; ಬರೆದರೂ ಪ್ರಕಟಿಸತಕ್ಕುವಲ್ಲ. ಮಾದರಿಗಾಗಿ ಕುಹಕಕ್ಕೆ ಅವಕಾಶವಿಲ್ಲದ ಒಂದು ಕಥೆಯನ್ನು ಹೇಳುತ್ತೇನೆ.

ಗುರುಶಿಷ್ಯರಿಬ್ಬರೂ ನಂಗಲಿ ಪ್ರಾಂತದ ಒಂದು ಗ್ರಾಮಕ್ಕೆ ಭೋಜನಕ್ಕೆ ದಯಮಾಡಿಸಿದ್ದರು. ಅಲ್ಲಿ ಹುಳಿತೊವ್ವೆ, ಹಯಗ್ರೀವ, ಹಾಲುಕೀರು, ಆಂಬೊಡೆ–ಇತ್ಯಾದಿ ಸಮೃದ್ಧವಾದ ಭೋಜನವಾಯಿತು. ಮಧ್ಯಾಹ್ನ ಮೂರುವರೆ ನಾಲ್ಕು ಘಂಟೆಯ ಹೊತ್ತಿಗೆ ಅಲ್ಲಿಂದ ತಮ್ಮ ಊರಿಗೆ ಹಿಂತಿರುಗಿ ಹೊರಟರು. ಹೊಟ್ಟೆಯಲ್ಲಿ ಭುಕ್ತಿಭಾರ ಹಿತ್ತುತ್ತಿತ್ತು. ತಲೆಯ ಮೇಲೆ ಬೇಸಗೆಯ ಬಿಸಿಲು. ಹೇಗೋ ಮೆಲ್ಲಗೆ ಕಾಲುಹಾಕಿಕೊಂಡು ಒಂದೆರಡು ಮೈಲಿ ಬಂದರು. ಆ ವೇಳೆಗೆ ಆಯಾಸವು ಸಹಿಸಲಾರದಷ್ಟಾಯಿತು. ಆ ಸ್ಥಳದಲ್ಲಿ ಮುತ್ತುಗದ ಕಾಡು ಕಾಣಿಸಿತು. ಅಗಲಗಲವಾದ ಎಲೆಗಳ ನೆರಳಿನಲ್ಲಿ ನೆಲದ ಮರುಳು ತಂಪಾಗಿ ಹಿತಕರವೆಂದು ತೋರಿತು. ಆ ಸಂತೋಷದಲ್ಲಿ ಗುರುಶಿಷ್ಯರಿಬ್ಬರಿಗೂ ಮುಂದಾಲೋಚನೆ ಬಾರದೆಹೋಗಿ, ಇಬ್ಬರೂ ಅವಸರವಸರವಾಗಿ ಅಲ್ಲಿ ದೇಹಬಾಧೆ ಕಳೆದುಕೊಂಡರು. ಆಗ ಬಂತು ನೀರಿನ ಯೋಚನೆ. ಅಲ್ಲೆಲ್ಲಿಯೂ ನೀರು ಕಾಣಿಸಲಿಲ್ಲ. ಅಂಥ ಸಂದರ್ಭದಲ್ಲಿ ಯಾರಾದರೂ ಏನು ಮಾಡಿಯಾರೋ ಹಾಗೆಯೇ ಉಟ್ಟ ಬಟ್ಟೆಯನ್ನು ಕೊಳೆ ತಾಗದಂತೆ ಮೇಲಕ್ಕೆತ್ತಿಕೊಂಡು ಗುರು ಶಿಷ್ಯರು ಕೊಂಚ ದೂರ ನಡೆದರು. ಆಗ ಅಲ್ಲಿ ಒಂದು ಚೊಕ್ಕಟವಾದ ಅಗಲವಾದ ಬಂಡೆ ಕಾಣಿಸಿತು. ಆಚಾರ್ಯರು ಹಿಂತಿರುಗಿ ನೋಡಿ “ಎಲಾ!

ಈ ಬಂಡೀ ನಾ ಕಂಡೀ
ಎಮ ಕುಂಡೀ ಶುದ್ಧಿಃ ॥”

–ಎಂದರು. ಶಿಷ್ಯನು– "ಆಚಾರ್ರ್ರೇ,

ನಿಮ ಕುಂಡೀ ನಾ ಕಂಡೀ
ಎಮ ಕುಂಡ್ಯೂ ಶುದ್ಧಿಃ ॥"

–ಎಂದ. ಶುದ್ಧಿಯಾದದ್ದು ಶುದ್ಧಿಕಾರಿ ಎಂದು ತತ್ತ್ವ, ಉರಿಯುವ ದೀಪ ಇನ್ನೊಂದು ದೀಪವನ್ನು ಉರಿಸುತ್ತದಷ್ಟೆ?

ಈ ಕಥೆ ವಾಸ್ತವಿಕವೋ ಕಾಲ್ಪನಿಕವೊ ನಾನು ಹೇಳಲಾರೆ. ಅದು ಕಟ್ಟು ಕಥೆಯೆಂದಿಟ್ಟುಕೊಂಡರೂ ಸ್ವಭಾವದ್ಯೋತಕವಾದದ್ದೆಂದು ಹೇಳಬಹುದು.

***

ನರಷಿಙ್ಯಾಚಾರ್ಯರು ಗುರುಭಕ್ತಿಯಿಂದ ಒಂದು ಸಂದರ್ಭದಲ್ಲಿ ರಚಿಸಿದ ಕವಿತೆ ಇದು:

ಗೋಪೀನಾಥ ಗುರುಂ ವಂದೇ
ಗೋಪೀಚಂದನಧಾರಿಣಮ್ ।
ಅಂಗಾರ ತುಲಸೀಯುಕ್ತಂ
ಆರ್ದ್ರ ಚಿಕ್ಕಪಟಾನ್ವಿತಮ್ ॥

"ಚಿಕ್ಕ" ಎಂದರೆ ಮೊಣಕಾಲಿನಿಂದ ಮೇಲಕ್ಕೆ ಉಡುವ ಸಣ್ಣ ಪಂಚೆ. ಅದು (ಆರ್ದ್ರ) ಒದ್ದೆಯಾಗಿತ್ತಂತೆ.

ಈ ಶ್ಲೋಕದ ಉತ್ತರಾರ್ಧಕ್ಕೆ ಹಲವು ಪಾಠಾಂತರಗಳುಂಟು:

೧. ಸಗಡ್ಡಂ ಚ ಸಬುಡ್ಡಂ ಚ
ವಕ್ರದಂತವಿರಾಜಿತಮ್ ॥
೨. ಶತಚ್ಛಿದ್ರ ಪಟವ್ಯಕ್ತ-
ದಂಡಕಾರಣ್ಯ ಶೋಭನಮ್ ॥
೩. ಶತಚ್ಛಿದ್ರ ಪಟವ್ಯಕ್ತ-
.....ದ್ವಯ ಮಂಡಿತಮ್ ॥

ಹೀಗೆಲ್ಲ ಕುಚೋದ್ಯಗಳು ನಡೆಯುತ್ತಿದ್ದ ಸಂಗತಿ ಗುರುಗಳ ಕಿವಿಗೆ ಬಿದ್ದಾಗ ಅವರು ಹೇಳಿದರು:

"ಎಲಾ ನರಷಿಇಝ್‌ಯಾ, ನಮ್ಮನ್ನು ಬೀದಿಗೆಳೆದು ತಂದುಬಿಟ್ಟೆಲ್ಲೊ!"

ಶಿಷ್ಯನು–

"ನಾನು ಪಟ್ಟಾನ್ವಿತಮ್ ಎಂದು ಹೇಳಿದ್ದೇನೆ, ಬಟ್ಟೆ ಮುಚ್ಚಿದ್ದೇನೆ ಗುರುಗಳೇ, ಕುಹಕದಿಂದ ಕೆಟ್ಟಜನ ಹೀಗೆಲ್ಲ ಮಾಡಿದ್ದಾರೆ."

–ಎಂದನಂತೆ, ಗುರುಗಳು "ನಿನ್ನ.... ಮೋಚಿತು" ಎಂದು ಆಶೀರ್ವದಿಸಿದರಂತೆ.

ಕವಿತ್ವಾವೇಶ

ಕವಿತ್ವಾವೇಶ ಹರಳೆಣ್ಣೆಯ ಹಾಗೆ. ಅದು ಒಳಗೆ ಒಂದು ತೊಟ್ಟಿನಷ್ಟು ಇದ್ದರೂ ಸುಮ್ಮನಿರುವುದಿಲ್ಲ. ಅದು ನಿಶ್ಶೇಷವಾಗಿ ಹೊರಕ್ಕೆ ಬಂದ ಮೇಲೆಯೇ ನೆಮ್ಮದಿ. ಒಳಗೆ ಉಳಿದುಕೊಂಡರೆ ಬಾಧೆ, ಅಪಾಯ. ಒಂದು ಸಾರಿ ನಾನು ಈ ಉಪಮಾನವನ್ನು ಹೇಳಿದಾಗ ನನ್ನ ಸ್ನೇಹಿತರು ದಿ ॥ ಎಸ್.ಜಿ. ಶಾಸ್ತ್ರಿಗಳವರು ತುಂಬ ಆಗ್ರಹಗೊಂಡು ನನಗೆ ಶಾಪವಿಟ್ಟದ್ದು ಜ್ಞಾಪಕವಿದೆ. ಅಂದಿನಿಂದ ಬೇರೊಂದು ಉಪಮಾನ ಹುಡುಕುತ್ತಿದ್ದೇನೆ, ಸಿಕ್ಕಿಲ್ಲ; ಕ್ಷಮಿಸಬೇಕು.

ನಲವತ್ತು ಐವತ್ತು ವರ್ಷಗಳ ಹಿಂದೆ ಈ ವ್ಯಾಧಿಯು ಉಪಾಧ್ಯಾಯ ವರ್ಗದಲ್ಲಿ ಪ್ರಬಲವಾಗಿತ್ತು. ೧೯೧೪-೧೫ರಲ್ಲಿ ರಾವ್ ಬಹಾದ್ದೂರ್ ಎಂ. ಶಾಮರಾಯರವರು ವಿದ್ಯಾ ಇಲಾಖೆಯ ಮುಖ್ಯಸ್ಥರಾಗಿದ್ದಾಗ ಒಂದು ಪ್ರಸಂಗ ನಡೆಯಿತು. ಅವರು ಯಾವುದೋ ಸ್ಕೂಲಿಗೆ ಹೋಗಿದ್ದಾಗ ಅಲ್ಲಿಯ ಉಪಾಧ್ಯಾಯರೊಬ್ಬರು ಐದಾರು ಪದ್ಯಗಳನ್ನು ಹೊಸೆದು ಅಚ್ಚುಮಾಡಿಸಿ ಅವರಿಗೆ ಅರ್ಪಿಸಿದ್ದರು. ಅದರಲ್ಲಿ ಮೊದಲನೆಯದು ಹೀಗಿತ್ತು:

ವರ ಶಾಮರಾಯ ನಿನ್ನಯ ।
ಹಿರಿಮೆಯ ನಾನೇಂ ಪೊಗಳ್ವೆ ವಿದ್ವಜ್ಜನರ– ॥
ಚ್ಚರಿಯದು.... ।
ಕರಿನಾಡಿನ ಬಿಜಗಳ್ಗೆ ನೀಂ ತವರೂರೈ ॥

ಈ ಪದ್ಯಗಳನ್ನು ವಿಮರ್ಶೆಮಾಡಿ ನನ್ನ ಸ್ನೇಹಿತರು ವಾಜಪೇಯಂ ವೆಂಕಟಸುಬ್ಬಯ್ಯ ಒಂದು ಹಾಸ್ಯಲೇಖನವನ್ನು ಬರೆದರು. ನಾನು ಅದನ್ನು “ಕರ್ಣಾಟಕ” ಪತ್ರಿಕೆಯಲ್ಲಿ ಪ್ರಕಟಮಾಡಿದೆ. ಅದಾಗಿ ಎರಡು ಮೂರು ದಿನ ಕಳೆದ ಮೇಲೆ ಶಾಮರಾಯರೂ ನಾನೂ ಒಬ್ಬರನ್ನೊಬ್ಬರು ಕಂಡಾಗ ಅವರು ಹೀಗೆಂದರು:

“ಏನಪ್ಪಾ! ನನಗೆ ಈ ಕಡೆಯೂ ಪೆಟ್ಟು, ಆ ಕಡೆಯೂ ಪೆಟ್ಟು. ಹೇಳಿದ ಮಾತನ್ನು ಮೇಷ್ಟರುಗಳು ಕೇಳುವುದಿಲ್ಲ; ಇಂಥ ಅಭಾಸಗಳನ್ನು ಮಾಡುತ್ತಾರೆ. ಇತ್ತ ಕಡೆ ನೀವೂ ಅದನ್ನು ಏನೋ ಹೋಗಲಿ ಎಂದು ಬಿಡುವುದಿಲ್ಲ. ಯಾರೋ ಗುದ್ದಿ ಬರೆದಿದ್ದಾರೆ. ನನ್ನನ್ನು

ಏನುಮಾಡಬೇಕೆಂದು ಹೇಳುತ್ತೀರಿ? ಇದನ್ನು ಕೇಳಿ, ನಾನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಸರ್ಕೀಟ್ ಮಾಡುತ್ತಿದ್ದಾಗ ಒಂದು ಸ್ಕೂಲಿನಲ್ಲಿ ಸ್ವಾಗತಗೀತೆ ಹಾಡಿದರು:

ಕ್ಷೇಮವೇ ಶ್ರೀರಾವ್ ಬಹಾದ್ದೂರ್
ಶಾಮರಾಯರೇ?
ಈ ಮಹೀಶೂರ ಕಲಾ–
ಧಾಮಕಾಯರೇ ॥

ಹುಡುಗರು ಮೊದಲಿನ ಸಾಲನ್ನು ಹಾಡುವ ರಭಸದಲ್ಲಿ,

ಕ್ಷೇಮವೇ ಶ್ರೀರಾವ್ ಬಹಾದ್ದೂರ್
ಕ್ಷಾಮರಾಯರೇ ॥

ಎಂದುಬಿಡುತ್ತಿದ್ದರು. ನಾನು ಆ ಮೇಷ್ಟರನ್ನು ಕರೆದು, 'ಇದೆಲ್ಲ ಬೇಡಪ್ಪ–ಇದು ಸರಿಯಲ್ಲ. ನನಗೆ ಇದೆಲ್ಲ ಬೇಡ. ಮಹಾರಾಜರು, ವೈಸರಾಯ್ ಅಂಥವರು ಬಂದಾಗ ಇದನ್ನಿಟ್ಟುಕೊಳ್ಳಿ' ಎಂದೆ. ಅದಕ್ಕೆ ಉತ್ತರವಾಗಿ ಮೇಷ್ಟರು 'ಕ್ಷೇಮವೆ ಶ್ರೀ ಮಹಾರಾಜ ಚಾಮರಾಜರೇ' ಎಂದು ಹೇಳಬಹುದೆಂದು ಸೂಚಿಸಿದರು. ನಾನು 'ಅವರ ತಂಟೆಗೆ ಹೋಗಬೇಡಿ, ಅವರು ನೆಮ್ಮದಿಯಾಗಿರಲಿ ಬಿಡಿ' ಎಂದು ಹೇಳಿದೆ."

ನಮ್ಮ ಮೇಷ್ಟರುಗಳು ಒಳ್ಳೆಯವರು. ಅವರ ಉದ್ದೇಶ ಉಚಿತವಾದದ್ದು. ಅವರ ಸಂತೋಷಕ್ಕೆ ಭಂಗ ತರಬಾರದು. ಶಾಮ, ಕ್ಷೇಮ, ಚಾಮ–ಹೀಗೆ ಪ್ರಾಸಗಳು ಒತ್ತೊತ್ತಿಕೊಂಡು ಬಂದರೆ ಅವರ ಕವಿತ್ವದ ಚಟ ಕೆರಳಿ ಪೊಂಗುತ್ತದೆ. ನಾವು ನಕ್ಕು ಅಂಗೀಕರಿಸಬೇಕು.

***

ವಾಜಪೇಯಂ ವೆಂಕಟಸುಬ್ಬಯ್ಯನವರಿಗೆ ಕವಿತ್ವವನ್ನು ವಿಮರ್ಶಿಸುವ ಚಟ ತೀವ್ರವಾಗಿತ್ತು. ಅವರೂ ನಾನೂ ಒಂದು ಸಾರಿ ಮಾತನಾಡುತ್ತಿದ್ದಾಗ ದಿ ॥ ಕೊಮಾಂಡೂರ್ ರಾಮಸ್ವಾಮಯ್ಯಂಗಾರ್ಯರ ಪ್ರಸ್ತಾವ ಬಂತು. ರಾಮಸ್ವಾಮಯ್ಯಂಗಾರ್ಯರು ವಿದ್ವಾಂಸರು, ಕಾವ್ಯೋತ್ಸಾಹಿಗಳು: "ರಾಮಾಭ್ಯುದಯ ಕಥಾ ಕುಸುಮಮಂಜರಿ" ಮೊದಲಾದ ಕೆಲವು ಹಳಗನ್ನಡ ಕಾವ್ಯಗಳನ್ನು ಪರಿಷ್ಕರಿಸಿ ಪ್ರಕಟಿಸಿದ್ದರು. ಸ್ವತಃ ಕೆಲವು ಗ್ರಂಥಗಳನ್ನೂ ರಚಿಸಿದ್ದರು. ಸಾತ್ತ್ವಿಕರು ಮತ್ತು ಸಾಧುಗಳು.

ಅವರನ್ನು ಕುರಿತು ನಾವಿಬ್ಬರೂ ಸೇರಿ-ಅದರಲ್ಲಿ ವೆಂಕಟಸುಬ್ಬಯ್ಯನವರ ಭಾಗವೇ ಹೆಚ್ಚು-ಮಾಡಿದ ಕವಿತೆ:

ಆಗ ಮಾಗಡಿಯಲ್ಲಿ ನಿಂದು ಸ- ।
ರಾಗದಿಂದ ಕವಿತ್ವ ಪಾಡಿದ ।
ನಾಗಶಯನನ ಭಕ್ತ ರಾಮ-
ಸ್ವಾಮಿ ಬುಧವರನು ॥
ಈಗಲೀ ಕಲ್ಯಾಣಪುರಿಯಲಿ ।
ಜಾಗವನು ಮಾಡಿಹನು ರಸಿಕರು ॥
ಪೋಗಿ ನೋಡುವುದಲ್ಲಿ ನಗು-
ಮೊಗವುಳ್ಳ ಮಡಿಕೋಲನ್ ॥

ರಾಮಸ್ವಾಮಯ್ಯಂಗಾರ್ಯರು ತೆಳ್ಳಗೆ ಎತ್ತರವಾಗಿ ಕಡ್ಡಿ ಕಡ್ಡಿಯಾಗಿದ್ದವರು; ಆದರೆ ಸದಾ ಹಸನ್ಮುಖಿ, ಮತ್ತು ಶ್ರೀವೈಷ್ಣವರಲ್ಲಿ ಕೋಲ್ಮಡಿ ಪ್ರಸಿದ್ಧವಾದದ್ದು.

***

ವೆಂಕಟಸುಬ್ಬಯ್ಯನವರಿಗೆ ನೀತಿಶತಕಗಳ ಮೇಲೆ ಅಪಹಾಸ್ಯ ಸುರಿಯುವುದರಲ್ಲಿ ತುಂಬ ಸಂತೋಷ. ಒಂದು ಅಣಕು ಶತಕವನ್ನು ರಚಿಸಬೇಕೆಂದು ಪ್ರಯತ್ನ:

ಇಜ್ಜಲಪುಡಿಯಿಂ ಬೆಳಗಾ- ।
ಗುಜ್ಜುತ ಪಲ್ಗಳನು ಬಾಯ
ಮುಕ್ಕಳಿಸುತ್ತಂ ॥
ಕಜ್ಜಿಗೆ ಸಾಬೂನಿಕ್ಕುತೆ ।
ಮಜ್ಜನವಂ ಗೈದು ಸುಖದಿ
ಬಾಳೆಲೊ ಸುಮತೀ ॥
ಬಜ್ಜಿಯ ಬದನೆಯಕಾಯಿಂ ।
ಸಜ್ಜಿಗೆಯಂ ಸೋಜಿ ತುಪ್ಪ
ಬೆಲ್ಲಗಳಿಂದಂ ॥
ಗೊಜ್ಜುಗಳ ಮಾಳ್ಪ ಪರಿಯಂ ।

ಅಜ್ಜಿಯ ಬಳಿಯಲ್ಲಿ ಕುಳಿತು
ಕಲಿಯೌ ಸುಮತೀ ॥

***

ಈ ಲೇಖನದಲ್ಲಿ "ಕವಿತ್ವ" ಎಂದರೆ "ಪದ್ಯ ಕಟ್ಟುವುದು" ಎಂದರ್ಥ.

ವೆಂಕಣ್ಣಯ್ಯನವರು ಕವಿಯಾಗಿದ್ದರೆಂಬುದು ನನ್ನ ಹೊರತು ಬಹುಶಃ ಯಾರಿಗೂ ತಿಳಿದಿರಲಾರದು. ಅವರೂ ಕವಿ ಎಂಬ ವರ್ಣನೆಯನ್ನು ಒಪ್ಪಿಕೊಳ್ಳುತ್ತಿರಲಿಲ್ಲ.

ಆದರೆ ಕವಿತ್ವದ ವಿಷಯದಲ್ಲಿ ಅವರು ಚೇಷ್ಟೆಮಾಡಿದ್ದುಂಟು–ತಮಾಷೆಗಾಗಿ. ಯಾರ ವಿಷಯದಲ್ಲಿಯೇ ಆಗಲಿ ಅವರಿಗೆ ಈರ್ಷ್ಯೆ ಅಸೂಯೆಗಳು ಇರಲಿಲ್ಲ. ಒಂದೊಂದು ಸಾರಿ ನಗಿಸುವ ಚಟ ಅವರಿಗೂ ಇತ್ತು. ಅವರು ಬಹುಮಂದಿಗೆ ಪ್ರಿಯರಾಗಿದ್ದದ್ದಕ್ಕೆ ಅದೂ ಒಂದೂ ಕಾರಣವೆಂದು ನಾನು ಅಂದುಕೊಂಡಿದ್ದೇನೆ.

ಒಂದು ಸಾರಿ ಕನ್ನಡನಾಡಹಾಡಿನ (ರಾಷ್ಟ್ರಗೀತೆ) ವಿಷಯದಲ್ಲಿ ಕೊಂಚ ಕುಚೋದ್ಯ ಮಾಡಬೇಕೆನಿಸಿತು. ಪ್ರಸಿದ್ಧರಾದ ಶಾಂತಕವಿಗಳ "ರಕ್ಷಿಸು ಕರ್ನಾಟಕದೇವಿ" ಎಂಬ ಹಾಡನ್ನು ಕೇಳಿದ ಮೇಲೆ ಯಾವುದೋ ಪ್ರಸಂಗದಲ್ಲಿ ಹೊರಟದ್ದು ಹೀಗೆ:

ಭಕ್ಷಿಸು ಕರ್ನಾಟಕದೇವೀ–ನೀ ।
ಭಕ್ಷಿಸು ಕರ್ನಾಟಕದೇವಿ ॥
ಅಗ್ಗದ ಜೋಳದ ಭಕ್ಕರಿಗಳನು
ಮುಗ್ಗಿದ ರಾಗೀ ಮುದ್ದೆಗಳನ್ನು
ಗುಗ್ಗುರಿ ಕಡಲೆ ಹುರುಳಿಗಳನ್ನು
ಹಿಗ್ಗಿದ ಜಗ್ಗಿದ ದವಡೆಗಳಿಂದ
ಭಕ್ಷಿಸು ಕರ್ನಾಟಕದೇವೀ ॥

ಇದರ ತಾತ್ಪರ್ಯವೇನೆಂದರೆ ದೇಶದ ಚರಿತ್ರೆ ದೊಡ್ಡದು, ಕೀರ್ತಿ ದೊಡ್ಡದು. ಅದರ ಇಂದಿನ ಜನದ ಬಾಳುವೆ ಆ ಗತವೈಭವಕ್ಕೆ ಹೊಂದಿಕೊಳ್ಳುವಂತಿಲ್ಲ. ಅಷ್ಟು ದೊಡ್ಡ ಕೀರ್ತಿಗೆ ನಾವಿನ್ನೂ ಅರ್ಹರಾಗಬೇಕಾಗಿದೆ.

ಒಂದು ದಿನ ಚಿತ್ರಕವಿತ್ವವನ್ನು ಕುರಿತು ಮಾತನಾಡುತ್ತಿದ್ದೆವು. ತೆಲುಗಿನಲ್ಲಿ ಇಂಥ ಸಾಹಿತ್ಯ ಅಪಾರವಾಗಿದೆ. "ನಿರೋಷ್ಠ್ಯಮುಲು," "ನಿರ್ದಂತ್ಯಮುಲು," ಹೀಗೆ ನಿಯಮ ಮಾಡಿಕೊಂಡು ಪದ್ಯ ಕಟ್ಟುವವರು ಅಲ್ಲಿ ಯಥೇಷ್ಟವಾಗಿ ಇದ್ದರು. ಅದೇ ಪ್ರಸಂಗದಲ್ಲಿದ್ದಾಗ ನಾವು ಒಂದು ಒಗಟು ತಯಾರು ಮಾಡಿದೆವು:

(ಒಗಟು)

ಇಂದ್ರನುಮುರ್ವಶಿಯುಂ ಕರಿ
ಕೆಂದೂಳಿಯ ಕೊಳುತ ಕೊಡುತ ಗೋಂದಾಗಿಸುವರ್ ।
ರಂಧ್ರದಿ ಸೇರುತಲದು ಶೀ–
ನೆಂದು ಹರಿಧ್ಯಾನ ಮಾಡಿಸುವ ಪುಡಿ ಏನೈ? ॥

(ಉತ್ತರ)

ಭಗವಂತಂ ನಾಲ್ಮೊಗದಿಂ
ನೆಗಡಿಯ ತಡೆಯಲ್ಕಸಾಧ್ಯಮಾಗಿರೆ ತಪದಿಂ– ।
ದೊಗೆಯಿಸಿದಂ ಹೊಗೆಸೊಪ್ಪಂ
ಸೊಗಯಿಸಿತಾ ಸಸ್ಯಧೂಳ್ ಪ್ರಶಸ್ಯಂ ನಸ್ಯಂ ॥

ಇಷ್ಟಾದ ಮೇಲೆ ನಾನೊಂದು ಸವಾಲ್ ಹಾಕಿದೆ: ವರ್ಗದ ಪಂಚಮಾಕ್ಷರಗಳನ್ನೂ ಅನುನಾಸಿಕಾಕ್ಷರಗಳನ್ನೂ ಬಿಟ್ಟು ನಸ್ಯದ ಮೇಲೆ ಒಂದು ಪದ್ಯ ಕಟ್ಟತಕ್ಕದು. ಅದೂ ಆಯಿತು, ಹೀಗೆ:

ದಸ್ಯದ ಬೂಗೋ ಸಗ್ಗದ
ದೃಶ್ಯವೊ ಇದು ದೇವತೆಗಳ ಬಚ್ಚಲ ಗೃಹವೋ ।
ಹಾಸ್ಯವ ಬಿಡು ಆ ಬುದಿ ಚತು–
ರಾಸ್ಯದದಾವೇದದಾಕುಚಿಟಿಕೆಯಿದಲ್ತೇ ॥

***

ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ನೆಲ್ಲು ಹುಲ್ಲು ಹಗ್ಗದ ಯುಗ, ಕಚಗುಳಿಯ ಜುಂಜಿನ ಯುಗ ಒಂದಿತ್ತು. ಆ ಯುಗದ ಉದಾಹರಣೆಗಳು ಮೇಲಿನವು. ಈಗ ಆ ಯುಗ

ಮುಗಿದುಹೋಗಿದೆಯೆಂದು ತೋರುತ್ತದೆ. ಆದರೂ ಸಂಪೂರ್ಣವಾಗಿ ಮುಗಿದಿರುವಂತೆ ಕಾಣುವುದಿಲ್ಲ. ಕೆಲವು ವರ್ಷಗಳ ಹಿಂದೆ ಒಬ್ಬಾನೊಬ್ಬ ಮಂತ್ರಿಗಳ ಮನೆಯಲ್ಲಿ ಮದುವೆಯಾದಾಗ ಪ್ರಸಿದ್ಧ ಸಾಹಿತಿಗಳೊಬ್ಬರು ಹರಕೆಯ ಪದ್ಯಗಳನ್ನು ಹವಣಿಸಿ ಶ್ರವಣಮಾಡಿಸಿ ಒಂದೆರಡು ವರ್ಷ ಎಕ್ಸ್ ಟೆನ್‌ಷನ್ ಸಂಪಾದಿಸಿಕೊಂಡರಂತೆ. ಅದು ಸರಿಯಾದದ್ದೇ. ಕಾವ್ಯವನ್ನು ಯಶಸ್ಸಿಗೋಸ್ಕರವೂ, ಹಣಕ್ಕೋಸ್ಕರವೂ, ಲೌಕಿಕ ಅನುಸಂಧಾನಕ್ಕೋಸ್ಕರವೂ ಶಿವನ ಹೊರತು ಮಿಕ್ಕವರ ವಿನಾಶಕ್ಕೋಸ್ಕರವೂ ರಚಿಸತಕ್ಕದ್ದೆಂದು ಪಂಡಿತಪ್ರಕಾಂಡನಾದ ದಂಡಿಮಹಾಶಯನೇ ಪರವಾನಗಿ ಕೊಟ್ಟಿದ್ದಾನೆ.

ಕಳೆದುಹೋದ ಅಥವಾ ಕಳೆದುಹೋಗುತ್ತಿರುವ ಯುಗಗಳನ್ನು ನಾವು ವಿನೋದಕ್ಕಾಗಿ ನೆನೆದುಕೊಂಡು ನಕ್ಕಿದ್ದಾದ ಮೇಲೆ ಮರೆತುಬಿಡೋಣ. ಅದು ಮುಗಿದಿದ್ದರೂ ಕನ್ನಡ ಕಾವ್ಯಧಾರೆಗೇನೂ ಕುಂದು ಬಂದಿಲ್ಲ. ಅದು ಹೊಸ ಹೊಸ ರೂಪಗಳಲ್ಲಿ ಮಹಾ ಪ್ರವಾಹವಾಗಿ ಹರಿಯುತ್ತಿದೆ. ನಾವೆಲ್ಲ ಸಂತೋಷಪಡೋಣ.

೨೦

ಒಬ್ಬ ಶಿವಶರಣರು

ಸುಮಾರು ಹದಿನೈದು ವರ್ಷಗಳ ಹಿಂದೆ ಒಂದು ದಿನ ಸಂಜೆ ಮೋಡವಾಗಿ ಚಳಿಯಾಗಿದ್ದದರಿಂದ ಕೊಂಚ ಕಾಲುನಡಿಗೆ ನಡೆದು ಮೈಬಿಸಿಮಾಡಿಕೊಳ್ಳೋಣವೆನಿಸಿತು. ತಲೆಗೆ ಕೆಂಪು ರೇಷ್ಮೆ ವಸ್ತ್ರವನ್ನು ಬಿಗಿದು, ಮೈಮೇಲೆ ಕೆಂಪು ಶಾಲು ಹೊದೆದು ಮನೆಯಿಂದ ಹೊರಟೆ. ಬಟ್ಟೆಗಳ ಕೆಂಪು ನಾನು ಆರಿಸಿಕೊಂಡದ್ದಲ್ಲ. ನನಗೆ ಆಗ ಕೈಗೆ ಸಿಕ್ಕಿದ್ದು ಯಾವುದೋ ಅದನ್ನು ಧರಿಸಿಕೊಂಡೆ. ಹಣೆಯಲ್ಲಿ ವಿಭೂತಿ ಇತ್ತೆಂದು ತೋರುತ್ತದೆ. ಗಾಂಧಿಬಜಾರಿನಲ್ಲಿ ಈಗ ಕಾರ್ಪೊರೇಷನ್ ಮಾರ್ಕೆಟ್ ಇರುವ ಸ್ಥಳದ ಹತ್ತಿರ ಹತ್ತಿರ ಹೋಗುತ್ತಿದ್ದೆ. ಎದುರುಗಡೆಯಿಂದ ಬರುತ್ತಿದ್ದವರೊಬ್ಬರು ನನ್ನನ್ನು ದಿಟ್ಟಿಸಿ ನೋಡಿ "ಶರಣು" ಎಂದು ಕೈಮುಗಿದರು. ನಾನೂ "ಶರಣು" ಎಂದೆ.

ಆತ ಎತ್ತರವಾದ ಆಳು. ಕೈಯಲ್ಲಿ ಒಂದು ಸಣ್ಣ ಮೂಟೆ ಇತ್ತು. ಕಂಕುಳಲ್ಲಿ ಒಂದು ಕೋಲಿತ್ತು. ತಲೆಗೆ ಕಾವಿಬಟ್ಟೆಯ ರುಮಾಲು ಸುತ್ತಿದ್ದರು. ಕಾವಿ ಬಣ್ಣದ ಬನಿಯನ್ ತೊಟ್ಟಿದ್ದರು. ಮೇಲೆ ಕಾವಿ ಬಟ್ಟೆ ಹೊದೆದಿದ್ದರು. ಉಟ್ಟಿದ್ದದ್ದೂ ಕಾವಿಯೇ. ಹಣೆಯ ಮೇಲೆ, ಕಣ್ಣುರೆಪ್ಪೆಗಳ ಮೇಲೆ ಕಿವಿಯ ಮೇಲೆ ವಿಭೂತಿ ಕಾಣುತ್ತಿತ್ತು.

ನಾನು: "ಶರಣು" ಎಂದು ಕೈಮುಗಿದ ಕೂಡಲೆ ಆ ಶಿವಶರಣರು ಕೇಳಿದರು:

ಶಿ: "ಯಾವ ಮಟವೊ?" (ಮಟ–ಮಠ)

ನಾನು: "ತಿಮ್ಮಲಿಂಗದೇವರ ಮಟ. ನಿಮ್ಮದು ಯಾವ ಮಟವೊ?"

ಶಿ: "ನಮ್ಮದು ನಿಜಗುಣರ ಮಟ."

ಒಂದು ನಿಮಿಷ ಸುಮ್ಮನಿದ್ದು ಅವರು ಹೇಳಿದರು:

ಶಿ: "ಒಂದು ತತ್ತ್ವ ಅಪ್ಪಣೆಯಾಗಬೇಕು ಶಿವನೆ."

ನಾನು: "ಅದಕ್ಕೇನು, ಎಲ್ಲಾದರೂ ಕುಳಿತುಕೊಂಡು ಮಾತನಾಡೋಣ ಬನ್ನಿ ಗುರುವೆ".

ಹೀಗೆ ಹೇಳಿ ಮುಂದಕ್ಕೆ ನಡೆದೆ. ಅವರೂ ನನ್ನ ಸಂಗಡ ಬಂದರು. ಕೃಷ್ಣರಾಜೇಂದ್ರ ರಸ್ತೆಯ ಪಕ್ಕದಲ್ಲಿ ಟ್ಯಾಕ್ಸಿಗಳು ನಿಲ್ಲುವ ಸ್ಥಳದಲ್ಲಿ ಬಸವನಗುಡಿ ಕ್ಲಬ್ಬಿನ ದಕ್ಷಿಣದ ಕಡೆಯ ಟಾಗೋರ್ ಚೌಕಕ್ಕೆ ಬಂದೆವು. ಅಲ್ಲಿ ಒಂದು ಉದ್ಯಾನವನದ ಆಭಾಸ ಇದೆಯಲ್ಲವೆ? ಅಲ್ಲಿ ಕೆಲವು ಕಲ್ಲುಬೆಂಚುಗಳೂ ಇದ್ದವು. ಅಲ್ಲಿ ಕೂಡೋಣವೆಂದು ನನ್ನ ಉದ್ದೇಶ. ಆದರೆ ಸಂಜೆ ಕ್ಲಬ್ಬಿಗೆ ನವರತ್ನ ರಾಮರಾಯರೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರೂ ಇತರ ಮಾನ್ಯ ಸ್ನೇಹಿತರೂ ಬರುವ ಹೊತ್ತು ಅದು. ಅವರು ಯಾರಾದರೂ ಒಂದು ವೇಳೆ ಬಂದು ನನ್ನನ್ನು ಗುರುತುಹಿಡಿದರೆ ನಮ್ಮ ಉದ್ದೇಶಕ್ಕೆ ಭಂಗವಾದೀತೆಂಬ ಭಯ. ಆದದ್ದರಿಂದ ಕ್ಲಬ್ಬಿಗೆ ಬೆನ್ನು ಮಾಡಿಕೊಂಡು ಕೂಡಬೇಕೆಂದು ನಿಶ್ಚಯಿಸಿಕೊಂಡೆ. ಶಾಲುವಿನ ಮುಸುಕನ್ನು ಚೆನ್ನಾಗಿ ಸೆಳೆದು ಬಿಗಿದುಕೊಂಡೆ. ಇಬ್ಬರೂ ಕಲ್ಲುಬೆಂಚಿನ ಮೇಲೆ ಎದುರೆದುರಾಗಿ ಕುಳಿತೆವು. ಶಿವಶರಣರು ಹೇಳಿದರು:

ಶಿ: "ತತ್ತ್ವ ಕೇಳಬೇಕು ಗುರುವೆ."

ನಾನು ಎರಡು ಮೂರು ನಿಮಿಷ ಯೋಚನೆ ಮಾಡಿ, ಇನ್ನು ಒಂದೆರಡು ಘಳಿಗೆ "ಊಂ... ಊಂ...." ಎಂದು ರಾಗ ಸೆಳೆದು ಈ ತತ್ತ್ವ ಹೇಳಿದೆ:

> ನವಕೋಟೀ ಹಣವೇನು
> ಶಿವಭಕ್ತಿಯಿಲ್ಲದೆ–ಜಂಗಮಯ್ಯಾ।
> ಶಿವಭಕ್ತಿ ಯಿರಲಾಗಿ
> ನವಕೋಟಿ ಹಣವೇಕೆ-ಜಂಗಮಯ್ಯಾ॥
> ಭದ್ರಾಕ್ಷಿಯಿಲ್ಲದ ರುದ್ರಾಕ್ಷಿಯಿಂದೇನು
> ಜಂಗಮಯ್ಯಾ।
> ಭದ್ರಾಕ್ಷಿಯಿದ್ದರೆ ರುದ್ರಾಕ್ಷಿ ಏತಕೊ
> ಜಂಗಮಯ್ಯಾ।

ಶಿ: "ಟೀಪು ಗುರುವೆ." (ಟೀಪು–ಟೀಕು, ವ್ಯಾಖ್ಯಾನ.)

ನಾನು: "ಭದ್ರಾಕ್ಷಿ ಎಂದರೆ ಎರಡರ್ಥ. ಮೊದಲನೆಯದು ರುದ್ರಾಕ್ಷಿಯ ಹಾಗೆ ಕಾಣುವ ಆದರೆ ರುದ್ರಾಕ್ಷಿಯಲ್ಲದ ಒಂದು ಕಾಯಿ. ಎರಡನೆಯ ಅರ್ಥ ಒಳ್ಳೆಯ ಕಣ್ಣು, ಶುಭವಾದ

ನೋಟ–ಎಂದು.”

ಈ ವಿವರಣೆಯಾದ ಮೇಲೆ ನಾನು ತತ್ತ್ವವನ್ನು ಮುಂದುವರಿಸಿದೆ, ಹೀಗೆ:

> ಶಿರಜಡೆ ಇದ್ದೇನು ಉರದೃಢವಿಲ್ಲದೆ
> ಜಂಗಮಯ್ಯಾ॥
> ಉರ ದೃಢವಿರಲಾಗಿ ಶಿರದಲ್ಲಿ ಜಡೆ ಏಕೊ
> ಜಂಗಮಯ್ಯಾ॥
> ತಿಮ್ಮಲಿಂಗನು ಪರ-ಬ್ರಹ್ಮರೂಪನು ಕಾಣೊ
> ಜಂಗಮಯ್ಯಾ।
> ಉಮ್ಮಳವಿಲ್ಲದ ನೆಮ್ಮದಿ ಕೈಲಾಸ
> ಜಂಗಮಯ್ಯಾ॥

ಶಿ: “ಟೀಪು ಅಪ್ಪಣೆಯಾಗಬೇಕು ಗುರುವೆ.”

ನಾನು: “ಶಿರ ಎಂದರೆ ತಲೆ. ಉರ ಎಂದರೆ ಎದೆ. ಎದೆಯಲ್ಲಿ ಭಕ್ತಿ ದೃಢವಾಗಿದ್ದರೆ ಜಡೆ ಇಲ್ಲದಿದ್ದರೂ ಪರವಾಗಿಲ್ಲ. ಉಮ್ಮಳ ಎಂದರೆ ಸಂಕಟ. ಸಂಕಟವಿಲ್ಲದಿರುವುದೇ ಕೈಲಾಸ.”

ಶಿ: “ಬಲು ಭೇಷಾಗಿದೆ ಶಿವನೆ. ಇನ್ನೊಂದು ತತ್ತ್ವ ಅಪ್ಪಣೆಯಾಗಬೇಕು.”

ಇಷ್ಟು ಹೊತ್ತಿಗೆ ನನಗೆ ಸ್ವಲ್ಪ ಕಾವು ಬಂದಿತ್ತು. ಇನ್ನೊಂದು ತತ್ತ್ವ ಹಾಡಿದೆ. ಹೀಗೆ:

> ಏನೇನೊ ಗತ್ತು ಮಾಡಿದಾ–ನಮ್ಮ ಶಿವ-
> ನೇನೊ ಗಮ್ಮತ್ತು ಮಾಡಿದಾ
> ಪಟ್ಟೆ ಬೂದಿ ಹಚ್ಚಿಕೊಂಡು
> ಬೆಟ್ಟದೋಳ್ನ ಕಟ್ಟಿಕೊಂಡು
> ಹುಚ್ಚು ಹುಚ್ಚು ಲೀಲೆಯಾಡಿದಾ ॥ ಏನೇನೊ...
>
> ಹಸ್ತಿಗೊಂದು ಸೊಂಡ್ಲ ಮಾಡಿದಾ–ನಮ್ಮ ಶಿವ
> ಹಾವಿಗೆರಡು ಜಿಹ್ವೆ ಮಾಡಿದಾ
> ಹಸ್ತಿಗೊಂದು ಸೊಂಡ್ಲ ಮಾಡಿ

ಹಾವಿಗೆರಡು ಜಿಹ್ವೆ ಮಾಡಿ
ಹೆಚ್ಚು ಕಡಮೆ ಲೋಕ ಮಾಡಿದಾ ॥ ಏನೇನೊ...

ನಾರಿಗೆರಡು ಕಣ್ಣು ಮಾಡಿದಾ–ನಮ್ಮ ಶಿವ
ನಾರಿಕೇಳಕ್ಮೂರು ಮಾಡಿದಾ
ನಾರಿಗೆರಡು ಕಣ್ಣು ಮಾಡಿ
ನಾರಿಕೇಳಕ್ಮೂರು ಮಾಡಿ
ಹೆಚ್ಚು ಕಡಮೆ ಲೋಕ ಮಾಡಿದಾ ॥ ಏನೇನೊ...

ಗಂಡು ಹೆಣ್ಣು ಬೇರೆ ಮಾಡಿದಾ–ನಮ್ಮ ಶಿವ
ಹೆಣ್ಣು ಗಂಡನೊಟ್ಟು ಕೂಡಿದಾ
ಹೆಣ್ಣು ಗಂಡು ಬೇರೆ ಮಾಡಿ
ಬೇರೆ ಮಾಡಿದ್ದೊಟ್ಟು ಕೂಡಿ
ಸೊಟ್ಟಾಪಟ್ಟೆ ಲೋಕ ಮಾಡಿದಾ ॥ ಏನೇನೊ...

ಬೆತ್ತಲೇಲಿ ನೃತ್ಯವಾಡಿದಾ–ನಮ್ಮ ಶಿವ
ಕತ್ತಲೇಲಿ ಸೃಷ್ಟಿ ಮಾಡಿದಾ
ಬೆತ್ತಲೇಲಿ ನೃತ್ಯವಾಡಿ
ಕತ್ತಲೇಲಿ ಸೃಷ್ಟಿ ಮಾಡಿ
ಸೊಟ್ಟಾಪಟ್ಟೆ ಲೋಕ ಮಾಡಿದಾ ॥ ಏನೇನೊ...

ಬ್ರಹ್ಮ ವಿಷ್ಣುಗಳನು ಮಾಡಿದಾ–ನಮ್ಮ ಶಿವ
ತಿಮ್ಮಲಿಂಗಯ್ಯನ ಮಾಡಿದಾ
ಬ್ರಹ್ಮ ವಿಷ್ಣು ತಿಮ್ಮಲಿಂಗ
ಎಲ್ಲ ಮಾಯೆ ನಾಟ್ಯರಂಗ
ಸೊಟ್ಟುಪಟ್ಟು ಲೋಕ ಮಾಡಿದಾ ॥ ಏನೇನೊ...

ಏನೇನೊ ಗತ್ತು ಮಾಡಿದಾ–ನಮ್ಮ ಶಿವ
ನೇನೊ ಗಮ್ಮತ್ತು ಮಾಡಿದಾ

ಪಟ್ಟೆ ಬೂದಿ ಹಚ್ಚಿಕೊಂಡು
ಬೆಟ್ಟದೋಳ್ನ ಕಟ್ಟಿಕೊಂಡು
ಹುಚ್ಚು ಹುಚ್ಚು ಲೀಲೆಯಾಡಿದಾ ॥

ಇದನ್ನು ಹಾಡುವಾಗ ನನ್ನ ಏಕನಾದ, ಕೈಚಿಟಿಕೆ ಹತ್ತಿರವಿರಲಿಲ್ಲ ಎಂದು ಕೊಂಚ ಕೊರತೆ ಆಯಿತು. ಆದರೂ ಧ್ವನಿಯನ್ನೆತ್ತಿ ತಲೆಯಲ್ಲಾಡಿಸುತ್ತ ಮೈ ಕುಲುಕಿಸುತ್ತ ತಾಳ ಕುಟ್ಟಿಕೊಂಡು ಹಾಡಿದೆ. ಶಿವಶರಣರಿಗೆ ಬಹಳ ಸಂತೋಷವಾಗಿರಬೇಕು. ಅವರು ಎದ್ದುನಿಂತು ಕೈ ಮುಗಿದು,

"ಗುರುವೆ, ಏನು ತತ್ತ್ವ! ಎಷ್ಟು ಚೆಂದಾಗಿದೆ!" –ಎಂದು ಮೆಚ್ಚಿಕೆ ತೋರಿಸಿದರು. ಮರಳಿ ಕೇಳಿದರು,

ಶಿ: "ಟೇಪು ಅಪ್ಪಣೆಯಾಗಬೇಕು ಶಿವನೆ."

ನಾನು: "ಈ ಪ್ರಪಂಚ ಪರಮೇಶ್ವರನ ಲೀಲೆ. ಇದೇ ಶಿವಲೀಲೆ. ಆತನಿಗೆ ಏನೂ ಬೇಕಿಲ್ಲ. ಆದರೂ ಏನೋ ಆನಂದದ ಆವೇಶ ಬಂದು ಆತ ಲೋಕವನ್ನು ಸೃಷ್ಟಿ ಮಾಡಿದ್ದಾನೆ. ನಾವು ಅವನಂತೆಯೇ ಆನಂದಪಡಬೇಕು ಜಗತ್ತಿನಲ್ಲಿ. ಜಗತ್ತಿನಲ್ಲಿ ಎಷ್ಟೋ ಹೆಚ್ಚುಕಡಮೆಗಳಿವೆ. ಕುಂದುಕೊರತೆಗಳಿವೆ. ಅದೆಲ್ಲ ಇರುವುದರಿಂದಲೇ ನಮಗೆ ಜಗತ್ತಿನಲ್ಲಿ ಒಂದು ಸ್ವಾರಸ್ಯ ತೋರಿಬರುವುದು. ಬೆಟ್ಟ, ನದಿ, ಕಾಡು, ಬಯಲು, ತಿಟ್ಟೆ, ಹಳ್ಳ–ಎಲ್ಲ ಇವೆ ನಮ್ಮ ಜೀವನದಲ್ಲಿ. ಇದೆಲ್ಲ ಈಶ್ವರನ ಕಾರ್ಯವೇ ಅಲ್ಲವೆ?"

ಶಿ: "ಹೌದು ಶಿವನೆ, ಹೌದು, ತಾವು ಬಲು ಬಲು ದೊಡ್ಡ ತತ್ತ್ವ ಹೇಳುತ್ತೀರಿ. ನಮ್ಮ ಮಟಕ್ಕೆ ದಯಮಾಡಬೇಕು."

ನಾನು: "ಅದು ಎಲ್ಲಿದೆ?"

ಶಿ: "ಮೈಸೂರಾಗೆ-ಬನ್ನಿಮಂಟಪದ ತಾವು."

ಈ ವೇಳೆಗೆ ಮೋಡ ಚೆನ್ನಾಗಿ ಕವಿದು ಮಳೆ ಪ್ರಾರಂಭವಾಗುವ ಚಿಹ್ನೆ ತೋರಿತು. ಕತ್ತಲೆಯೂ ಆಗಿತ್ತು. ನವರತ್ನ ರಾಮರಾಯರೂ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರೂ ಮನೆಗೆ ಹಿಂತಿರುಗುವ ಹೊತ್ತು. ಅವರಿಗೆ ಸಿಕ್ಕಿಬಿಟ್ಟೇನೆಂಬ ಭಯ ನನಗೆ-ಬೇಗ ಬೇಗ ಹಿಂತಿರುಗಲು ಹೆಜ್ಜೆ ಹಾಕಿದೆ. ಶಿವಶರಣರು ಜಯನಗರದ ಕಡೆ ಯಾವುದೋ ಮಠದ

ಹೆಸರು ಹೇಳಿ ಅಲ್ಲಿಗೆ ಹೋದರು. ಮತ್ತೆ ನಾನು ಅವರನ್ನು ನೋಡಿಲ್ಲ. ಅವರ ಹೆಸರೇನೆಂದು ನಾನು ಕೇಳಲಿಲ್ಲ. ನನ್ನ ಹೆಸರನ್ನೂ ಅವರು ವಿಚಾರಿಸಲಿಲ್ಲ.

೨೧

ಹಕ್ಕಿಯ ಪಯಣ

ಹಕ್ಕಿ, ಹಕ್ಕಿ, ಎಲ್ಲಿಗೆ?
ಪಯಣವೆಲ್ಲಿಗೆ?
ಎಲ್ಲಿಂಗೆಂದರಲ್ಲಿಗೆ
ಹಳ್ಳದಿಂದ ತಿಟ್ಟಿಗೆ
ಹಳ್ಳಿಯಿಂದ ದಿಳ್ಳಿಗೆ
ದಿಳ್ಳಿಯಿಂದ ಹಳ್ಳಿಗೆ
ಅಲ್ಲಿಗಿಲ್ಲಿಗೆ

ಗೂಡಿನಿಂದ ಕಾಡಿಗೆ
ಕಾಡಿನಿಂದ ಗೂಡಿಗೆ
ನಾಡಿನಿಂದ ನಾಡಿಗೆ
ಬೀಡಿನಿಂದ ಬೀಡಿಗೆ
ಇಲ್ಲಿಗಲ್ಲಿಗೆ.

ಹಕ್ಕಿ, ಹಕ್ಕಿ, ಕೆಲಸವೇನು?
ರೆಕ್ಕೆ ದುಡಿಸಿ ಫಲಿತವೇನು?

ಆಟಪಾಟ ಊಟವು
ಊಟ ಕಣ್ಣ ನೋಟವು
ಗಾಳಿಯೊಳೀಜಾಟವು
ಬಾನಿನ ತೇಲಾಟವು
ಬಾಯ್ಗೆ ದೊರೆತುದೂಟವು
ಕೊರಲ ಕೂಗು ಪಾಟವು

ಮನವು ಆಡಿದಾಟವು
ಚಣದ ಆಟವು.

ಹಕ್ಕಿ, ಹಕ್ಕಿ ಕಂಡುದೇನು?
ಕಂಡು ನೀನುಂಡುದೇನು?

ಸೊರ್ಗದಿಂದ ಭೂತಲ
ಶಾಂತಿಯಿಂದ ಗದ್ದಲ
ಸುರರು ಬೆಳೆದ ತೋಟವು
ದುರುಳುರ ಮರುಳಾಟವು
ದೇವ ದೇವನುದ್ಯಾನ
ಮನಿಸ ಮಾಡಿದ ಹೈರಾಣ.

ಹಕ್ಕಿ, ಹಾಡದಾವುದು?
ರಾಗವಾವುದು?

ಹಾಡಿದೆನೆ? ಏನದು?
ಹಾಡಲೆನಗೆ ಬಾರದು.
ರಾಗವೆನಗೆ ಕಲಿಪರಾರು?
ಕೇಳ್ವರಾರು? ಪೇಳ್ವರಾರು?
ಕೊರಗನೆದೆಯೊಳಿಡುವರಾರು?
ಸ್ವರವ ಕೊರಲೊಳಿಡುವರಾರು?
ಮಿಡಿವುದೇನೊ ಮನದೊಳು
ನುಡಿವುದೇನೊ ಬಾಯೊಳು.
ಕೂಗು ರಾಗವಪ್ಪುದೇನು?
ಮಾತು ಗೀತೆಯಪ್ಪುದೇನು?
ಇನಿದೊ ಕಟುವೋ ದನಿಯದೆಂತೋ
ಅಣಗಿರುವ ಕಡುಮರ್ಮವೇನೋ

ಬ್ರಹ್ಮನಿರ್ಮಿತಿಯರ್ಥವ
ತಿಮ್ಮಲಿಂಗನು ತಿಳಿಯುವ.

ಯಾವ ಮನುಷ್ಯನಿಗೂ ತನ್ನ ಸ್ವಭಾವದಲ್ಲಿ ಏನೇನು ಸೇರಿದೆ ಎಂಬುದನ್ನು ನಿಷ್ಕರ್ಷೆಯಾಗಿ ತಿಳಿದುಕೊಳ್ಳುವುದು ಅಸಾಧ್ಯವೆಂದು ನಾನು ಭಾವಿಸಿದ್ದೇನೆ. ನನ್ನ ಸ್ವಭಾವವನ್ನು ಕುರಿತು ನಾನು ಅನುಭವಪರೀಕ್ಷೆಯಿಂದ ಮಾತನಾಡಬಹುದಾದರೆ, ಅದರಲ್ಲಿ ಎರಡು ಪ್ರವೃತ್ತಿಗಳು ಅಡಗಿಕೊಂಡಿವೆ. ಒಂದು ತೊಂಡುತನ, ಇನ್ನೊಂದು ಅಂಜುಬುರುಕುತನ. ತೊಂಡುತನವೆಂದರೆ ಯಾವ ಜವಾಬ್ದಾರಿಯನ್ನೂ ತಗಲಿಸಿಕೊಳ್ಳದೆ ಮನಸ್ಸು ಬಂದಂತೆ ತಿರುಗುವುದು. ಅಂಜುಬುರುಕತನವೆಂದರೆ ಯಾವುದೋ ಒಂದು ಕಾರಣಕ್ಕೆ ವಿಧೇಯನಾಗಿರುವುದು. ಇವೆರಡೂ ಪರಸ್ಪರ ಪ್ರತಿಕೂಲಗಳಾದ ಪ್ರವೃತ್ತಿಗಳು.

ಬಾಲ್ಯದಲ್ಲಿ

ನನಗೆ ಬಾಲ್ಯದಿಂದ ಜೋಗಿಗಳು, ದಾಸಯ್ಯಗಳು, ಬೈರಾಗಿಗಳು, ಸಂನ್ಯಾಸಿಗಳು, ಫಕೀರರು–ಇಂಥವರನ್ನು ನೋಡಿದಾಗ, ನಾನು ಅವರಂತೆ ಎಂದಿಗೆ ನಿರುಪಾಧಿಕವಾಗಿ ತಿರುಗಾಡಿಯೇನು? ಎನ್ನಿಸುತ್ತಿತ್ತು-ಬೋನಿನೊಳಗಣ ಕೋತಿಗಳಿಗೆ ಅನ್ನಿಸುವ ಹಾಗೆ. ಆ ಪರಿವ್ರಾಜಕ ಜೀವನದಲ್ಲಿ ನನಗೆ ಆಕರ್ಷಕವಾಗಿದ್ದದ್ದು ಅವರ ನಿಶ್ಚಿಂತತೆ. ಅವರು ರಾತ್ರಿಗೇನು, ನಾಳೆಗೆಲ್ಲಿ ಎಂದು ಕ್ಷಣಮಾತ್ರವೂ ಯೋಚಿಸುತ್ತಿದ್ದವರಲ್ಲ. ಯಾವುದೋ ಒಂದು ತತ್ತ್ವದಲ್ಲಿ ಸಂಪೂರ್ಣವಾದ ನಂಬಿಕೆ. ಆ ನಂಬಿಕೆ ದೃಢವಾಗಿದ್ದದ್ದರಿಂದ ಸಂಪೂರ್ಣವಾದ ಧೈರ್ಯ, ಮತ್ತು ನಿರಂಕುಶವಾದ ಮನೋವೃತ್ತಿ: ನನ್ನ ಅಂತರಂಗದಲ್ಲಿ ಸುಳಿದಾಡುತ್ತಿದ್ದದ್ದು ಆ ನಿಸ್ಸಂಸಾರದ ಮೇಲಣ ಉತ್ಸಾಹ.

ನನಗೆ ಇದು ಅಷ್ಟು ಪ್ರಿಯವಾಗಿದ್ದಲ್ಲಿ ನಾನು ಅದನ್ನು ಏಕೆ ಅವಲಂಬಿಸಲಿಲ್ಲ? ಅದು ಅಂಜುಬುರುಕತನ. ಅದರಲ್ಲಿ ಎರಡು ಅಂಶಗಳಿವೆ. ಮೊದಲನೆಯದು ಸಮಾಜ ಸಂಪ್ರದಾಯಗಳಲ್ಲಿ ಗೌರವ. ಎರಡನೆಯದು ದೇಹಕ್ಕೆ ಉಂಟಾಗಬಹುದಾದ ಕಷ್ಟಗಳ ಭೀತಿ. ನಾನು ಬಾಲ್ಯವನ್ನು ಸುಖದಲ್ಲಿ ಕಳೆದವನು: ಚೆನ್ನಾಗಿ ಊಟಮಾಡಿದವನು, ತಿಂಡಿ ತಿಂದವನು, ಮೆತ್ತನೆಯ ಹಾಸಿಗೆಯ ಮೇಲೆ ಮಲಗಿ ಬೆಚ್ಚಗೆ ಹೊದೆದು ನಿದ್ರಿಸಿದವನು. ನಾನು ಗ್ರಾಮೈಕರಾತ್ರಿಯಾಗಿ ಅಲೆಯುತ್ತ ಹೊರಟರೆ ಊಟ ಉಪಚಾರಗಳು ಹೇಗೆ? ಮಲಗಲು ಹಾಸಿಗೆ ತಲೆದಿಂಬುಗಳು? ಹೀಗೆ ಚಿಂತೆಗಳು ಬಂದು ಗೀತೆಯಲ್ಲಿ ಹೇಳಿರುವಂತೆ “ಕಾಯಕ್ಲೇಶ ಭಯ” ನನಗುಂಟಾಯಿತು. ಸಮಾಜದ ಹೆದರಿಕೆ ಪರಿಸರ

ಪ್ರಭಾವದಿಂದ ಬಂದಿತು. ನಾನು ಪ್ರಬುದ್ಧನೆನಿಸಿಕೊಂಡ ಮೇಲೆ ನನ್ನ ಹಿರಿಯರು ನನಗೆ ತಕ್ಕಷ್ಟು ಸ್ವಾತಂತ್ರ್ಯ ಕೊಟ್ಟಿದ್ದರು. ಆದರೂ ಹೇಗೋ ಸಾಕ್ರಟೀಸನ ಸಂವಾದಗಳು ಮೊದಲಾದ ಗ್ರಂಥಗಳ ಪ್ರಭಾವದಿಂದಲೋ ಏನೋ–ಸಮಾಜ ಸಂಪ್ರದಾಯಗಳು ಗೌರವಾರ್ಹಗಳೆಂದು ನನ್ನ ಮನಸ್ಸಿನಲ್ಲಿ ನಂಬಿಕೆ ದೃಢಪಟ್ಟಿತ್ತು.

ಗೋದಾವರಿ ಬ್ರಾಹ್ಮಣರು

ಸುಮಾರು ಅರವತ್ತು ವರ್ಷಗಳ ಹಿಂದೆ ಗೋದಾವರಿ ಪ್ರಾಂತದಲ್ಲಿ ನದಿ ಕಾಲುವೆ ನೀರಾವರಿಗಳು ಹೆಚ್ಚಾಗಿರಲಿಲ್ಲ; ದೇಶದ ಬಹುಭಾಗ ಬೆಂಗಾಡಾಗಿತ್ತು. ಆ ಪ್ರಾಂತದ ಬ್ರಾಹ್ಮಣ ತಂಡಗಳು ರಾಮೇಶ್ವರಯಾತ್ರೆ, ತಿರುಪತಿ ಯಾತ್ರೆ ಮೊದಲಾದ ವ್ಯಾಜದಿಂದ ದಕ್ಷಿಣದೇಶಕ್ಕೆ ಪದೇ ಪದೇ ಬರುತ್ತಿದ್ದರು. ಆ ಬ್ರಾಹ್ಮಣರೆಲ್ಲ ನಿಯಮನಿಷ್ಠೆಯುಳ್ಳವರು. ಮುಳಬಾಗಿಲಿನ ಶ್ರೀಮದಾಂಜನೇಯ ಸ್ವಾಮಿ ದೇವಾಲಯದ ಮುಂಭಾಗಕ್ಕೆ ಅಂಟಿಕೊಂಡಂತೆ ತವ್ವಾ ಎಂಬ ವೈಶ್ಯಧರ್ಮಿಷ್ಠರು ಕಟ್ಟಿಸಿದ್ದ ಒಂದು ಸತ್ರವಿತ್ತು. ಆ ಊರಿಗೆ ಬಂದ ಗೋದಾವರಿ ಬ್ರಾಹ್ಮಣರು ಸಾಮಾನ್ಯವಾಗಿ ಈ ಸತ್ರದಲ್ಲಿ ಬಿಡಾರ ಮಾಡುತ್ತಿದ್ದರು.

ಗೋದಾವರಿ ಬ್ರಾಹ್ಮಣರು ಬಹುಮಟ್ಟಿಗೆ ಪಾದಚಾರಿಗಳು. ನಮ್ಮ ಕಾಲದಲ್ಲಿ ವಿನೋಬಾ ಭಾವೆಯವರ ಪ್ರಯಾಣ ಪ್ರಸಿದ್ಧವಾಗಿದೆ. ಆದರೆ ಅರವತ್ತು ವರ್ಷಗಳ ಹಿಂದೆ ಪಾದಸಂಚಾರವೇ ಸಾಮಾನ್ಯವಾಗಿದ್ದ ಪ್ರಯಾಣಕ್ರಮ. ಗೋದಾವರಿ ಬ್ರಾಹ್ಮಣರಿಗೆ ದಿನಕ್ಕೆ ಹದಿನೈದಿಪ್ಪತ್ತು ಮೈಲಿ ಸಂಚಾರ ಮಾಡುವುದು ಕಷ್ಟವೆನಿಸುತ್ತಿರಲಿಲ್ಲ. ಅವರಲ್ಲಿ ಚೌಡೇಶ್ವರಿ ಉಪಾಸಕರು, ಭದ್ರಕಾಲಿ ಉಪಾಸಕರು, ಶ್ರೀವಿದ್ಯಾ ಪರಿಣತರು ಎಲ್ಲರೂ ಇರುತ್ತಿದ್ದರು.

ನಮ್ಮ ಮನೆಗಳಿಗೆ ಹೆಚ್ಚಾಗಿ ಬರುತ್ತಿದ್ದವರು ವೇದಾಧ್ಯಯನನಿಷ್ಠರು. ಅವರು ವೇದದ ಮಹಿಮೆಯಲ್ಲಿ ಆಕುಂಠಿತವಾದ ಶ್ರದ್ಧೆಯುಳ್ಳವರು. ಅವರ ದೇಹಾಕೃತಿ ದೃಢವಾದದ್ದು. ಆದದ್ದರಿಂದ ಅವರ ಕಂಠಸ್ವರ ಉಚ್ಚಸ್ಥಾಯಿಯಲ್ಲಿ ಗಂಭೀರವಾಗಿ ಬರುತ್ತಿತ್ತು.

ಆ ಬ್ರಾಹ್ಮಣರು ಮನೆಗೆ ಬಂದು "ಇದು ಬ್ರಾಹ್ಮಣರ ಮನೆ ತಾನೆ? ಇಲ್ಲಿ ನಮಗೆ ಭೋಜನ ಕೊಡಲು ಅನುಕೂಲ ಉಂಟೆ?" ಎಂದು ಕೇಳಲು ಸಂಕೋಚ ಪಡುತ್ತಿರಲಿಲ್ಲ. ಮನೆಯ ಯಜಮಾನನಾದರೋ ಅಂಥ ಪ್ರಶ್ನೆಯನ್ನು ಒಂದು ಪರಮಾನುಗ್ರಹವೆಂದು ಭಾವಿಸಿ, "ಅವಶ್ಯ ದಯಮಾಡಬೇಕು" ಎನ್ನುತ್ತಿದ್ದ. ಬಂದ ಬ್ರಾಹ್ಮಣರು ಒಂದರ್ಧಘಂಟೆ ವೇದ ಹೇಳಿದ ಹೊರತು ಭೋಜನಕ್ಕೇಳುತ್ತಿರಲಿಲ್ಲ.

ಅವರ ಭೋಜನ ಪರಿಶವಣೆ ಹೆಚ್ಚು ಕಷ್ಟ ಕೊಡತಕ್ಕದ್ದೂ ಆಗಿರಲಿಲ್ಲ. ಅವರಿಗೆ ಬೇಕಾಗಿದ್ದದ್ದು ಅನ್ನ, ತೊವ್ವೆ, ಖಾರ ಖಾರವಾಗಿ ಹುಳಿ (ಪಪ್ಪುಧಪ್ಪಳಂ), ಗೊಜ್ಜು ಅಥವಾ ಚಟ್ನಿ, ಕೈತುಂಬ ತುಪ್ಪ, ಒಂದಿಷ್ಟು ಮಜ್ಜಿಗೆ. ನಮ್ಮ ದೇಶದ ಸಾರನ್ನು ಎಲೆಯ ಹತ್ತಿರ

ತಂದರೆ “ಜಬ್ಬು ಲೇದಂಡಿ” (“ರೋಗ ಇಲ್ಲ ಸ್ವಾಮಿ”) ಎನ್ನುತ್ತಿದ್ದರು. ತಿಳಿಸಾರು ಏನಿದ್ದರೂ ಕಾಯಿಲೆಯವರಿಗೆ! ಇದು ಅವರ ಕಲ್ಪನೆ. ತರಕಾರಿ ಭಕ್ಷ್ಯಗಳನ್ನು ಅವರು ಬೇಡವೆನ್ನುತ್ತಿರಲಿಲ್ಲ. ಅವರಿಗೆ ಮುಖ್ಯವಾಗಿ ಬೇಕಾಗಿದ್ದದ್ದು ಅಶನಪಪ್ಪುಧಪ್ಪಳಂ–ಅಭಿಘೃತ.

ರಾತ್ರಿ ಅವರು ಊಟ ಮಾಡುತ್ತಿರಲ್ಲಿಲ್ಲ.

ನಿಶ್ಚಿಂತತೆ

ಸಾಮಾನ್ಯವಾಗಿ ಬೆಳಗ್ಗೆ ಐದು ಘಂಟೆಯಿಂದ ಎಂಟು ಒಂಭತ್ತರವರೆಗೆ ಪ್ರಯಾಣ. ಸಂಜೆ ನಾಲ್ಕರಿಂದ ಏಳರವರೆಗೆ ಪ್ರಯಾಣ. ಹೀಗೆ ದಿನಕ್ಕೆ ಐದಾರು ಘಂಟೆಗಳ ಕಾಲ ಪ್ರಯಾಣದಲ್ಲಿ ಕಳೆಯುತ್ತಿತ್ತು. ಅವರು ಮನಸ್ಸಿಗೆ ಯಾವ ಚಿಂತೆಯನ್ನೂ ಹಚ್ಚಿಕೊಂಡವರಲ್ಲ.

ಒಬ್ಬರು ಒಂದು ಶಿವಲಿಂಗವನ್ನು ಯಾವಾವಾಗಲೂ ಜೊತೆಯಲ್ಲಿ ತೆಗೆದುಕೊಂಡು ಹೋಗುತ್ತಿದ್ದರು. ಸುಮಾರು ಒಂದಡಿಯಷ್ಟು ದೊಡ್ಡದಾಗಿತ್ತು ಆ ಬಾಣಲಿಂಗ. ಅದನ್ನು ತಟ್ಟೆಯಲ್ಲಿರಿಸಿ ರುದ್ರಾಭಿಷೇಕ ಮಾಡುತ್ತಿದ್ದರು. ಇಬ್ಬರದು ಒಂದೇ ಕಂಠವೆಂಬಂತೆ ನಮಕ ಚಮಕಗಳು ಕೇಳಿಬರುತ್ತಿದ್ದವು. ನಮ್ಮಿಂದ ಅವರು ಏನನ್ನೂ ಬೇಡುತ್ತಿರಲಿಲ್ಲ. ಪೂಜೆಗೆ ಬೇಕಾದ ಹೂವನ್ನೂ ಅವರು ದಾರಿಯಲ್ಲಿಯೇ ಸಂಪಾದಿಸಿಕೊಂಡು ಬಂದಿರುತ್ತಿದ್ದರು. ನೈವೇದ್ಯಕ್ಕೆ ಒಂದಷ್ಟು ಹಾಲನ್ನೋ ಬೆಲ್ಲವನ್ನೋ ಕೊಟ್ಟರೆ ಸಾಕಾಗಿತ್ತು.

ಬೈರಾಗಿ ತಂಡ

ಕಾಯಕ್ಲೇಶಕ್ಕೂ ಸಮಾಜಪರಿಸರಕ್ಕೂ ಹೆದರಿ ನನ್ನ ತೊಂಡುತನವನ್ನು ತಡೆದಿಟ್ಟುಕೊಂಡರೂ, ಮಧ್ಯೆ ಮಧ್ಯೆ ಒಂದೊಂದು ವೇಳೆ ಫಕೀರ ಆವೇಶ ಮೇಲ್ಗೈಯಾಗುವುದುಂಟು. ೧೯೦೮-೯ರ ಸುಮಾರಿನಲ್ಲಿ ಒಮ್ಮೆ ಹಾಗಾಗಿತ್ತು.

ಒಂದು ಸಂಜೆ ಬೆಂಗಳೂರು ರೈಲ್ವೆ ಸ್ಟೇಷನ್ನಿನ ಮುಂದುಗಡೆಯಿರುವ ಧರ್ಮಾಂಬುಧಿ ಕೆರೆಯ ಏರಿಯ ಮೇಲೆ ನಡೆದುಹೋಗುತ್ತಿದ್ದೆ. ಕಟ್ಟೆಯ ದಕ್ಷಿಣದ ಕಡೆಯ ಅರಳೀಮರದ ಕೆಳಗೆ ಕೆಲವರು ಬೈರಾಗಿಗಳು ಕುಳಿತಿದ್ದದ್ದನ್ನು ಕಂಡೆ. ಒಂದು ದಿನವನ್ನು ಅವರ ಜೊತೆಯಲ್ಲಿ ಕಳೆಯಬೇಕೆಂದು ನನಗೆ ಮನಸ್ಸಾಯಿತು.

ಮಾರನೆಯ ದಿನ ಬೆಳಗ್ಗೆ ನಾನು ಆ ಸ್ಥಳವನ್ನು ಮುಟ್ಟುವ ವೇಳೆಗೆ ಬಿಸಿಲು ಹರಿದಿತ್ತು; ಸುಮಾರು ಏಳು ಘಂಟೆ.

ಬೈರಾಗಿಗಳು ಐದು ಮಂದಿ ಇದ್ದರು. ಮುಖಕ್ಕೂ ತೋಳುಗಳ ಮೇಲೂ ಗೋಪೀ ಚಂದನ. ಇಬ್ಬರ ಕೈಗಳಲ್ಲಿ ಕಮಂಡಲುಗಳು. ಇಬ್ಬರ ಕೈಗಳಲ್ಲಿ ಮಡಿಸಿ ಬಳೆಹಾಕಿದ್ದ ಎರಡು ಮೂರು ಅಡಿ ಉದ್ದದ್ದ ಕಬ್ಬಿಣದ ಪಟ್ಟಿಗಳು. ಅರಳೀಕಟ್ಟೆಯ ಮೇಲೆ ಅಂಚಿನಲ್ಲಿ ಬೆಂಕಿ ಕೆಂಡ ಬೂದಿಯ ರಾಶಿಯಿತ್ತು. ಅದರ ಮೇಲೆ ಒಂದು ದೊಡ್ಡ ಮರದ ಕೊರಡು, ಬೆಂಕಿ ಹೊತ್ತಿ ಕುಮುಲುತ್ತಿತ್ತು.

ಬೈರಾಗಿಗಳು ಗುಂಪಾಗಿ ನಿಂತು “ಜೈ ಸೀತಾರಾಮ್” ಎಂದು ಘೋಷಿಸಿ ಹೊರಟರು. ಕೆಂಪೇಗೌಡ ರಸ್ತೆಯಲ್ಲಿ ಮೆರವಣಿಗೆ ಹೊರಟು, ಒಂದು ತಂಡವರು “ಭಗವನ್ ಪಾಲಕ ಸೀತಾರಾಮ್” ಎಂದೂ ಇನ್ನೊಂದು ತಂಡವರರು “ಬಾಲಾಜಿ ಬೇಹಾರೀ ರಾಮ್” ಎಂದು ಹೇಳಿಕೊಂಡು ಗ್ರಾಮಪ್ರದಕ್ಷಿಣೆ ಹೊರಟರು. ಕೊಂಚ ದೂರ ಹೋದ ಮೇಲೆ “ಜಗಪತಿ ಜಾನಕೀ ಜೀವನ ರಾಮ್” “ಬಾಲಾಜೀ ಬೇಹಾರೀ ರಾಮ್”. ಅಲ್ಲಲ್ಲಿ ನಿಂತು “ಜಯ ಜಯ ರಾಮ್” “ರಾಮ್ ಕಹೋ ಸೀತಾರಾಮ್” ಎಂಬ ಪಲ್ಲವಿ ನುಡಿಯುತ್ತಿದ್ದರು.

ಬೈರಾಗಿ ತಂಡವು ದೊಡ್ಡಪೇಟೆಯ ಕಡೆ ತಿರುಗಿ ಸಜ್ಜನರಾಯರ ಅಂಗಡಿಯ ಹತ್ತಿರ ಬರುವ ವೇಳೆಗೆ ಸುಮಾರು ಒಂಭತ್ತು ಒಂಭತ್ತೂವರೆ ಘಂಟೆಯಾಗಿತ್ತು. ರಾಯರು ಈ ಬೈರಾಗಿಗಳನ್ನು ಕಂಡೊಡನೆಯೇ ಕೈಯಲ್ಲಿ ಎರಡು ರೂಪಾಯಿ ಹಿಡಿದು ಹೊರಕ್ಕೆ ಬಂದು

"ರಾಂ ರಾಂ" ಹೇಳಿ, ಒಬ್ಬ ಆಳನ್ನು ಬೈರಾಗಿಗಳ ಜೊತೆಗೆ ಹೋಗಿ ಅವರಿಗೆ "ಸದಾವರ್ತ್" ಕೊಡಿಸುವಂತೆ ಹೇಳಿ ಕಳುಹಿಸಿದರು. ಆ ಆಳು ಬೈರಾಗಿಗಳನ್ನು ಹಿಂಬಾಲಿಸಿ ದಿನಸಿ ಅಂಗಡಿಯಿಂದ ಆಟಾ (ಗೋಧಿಯ ಹಿಟ್ಟು), ಅಕ್ಕಿಯ ಹಿಟ್ಟು, ಎರಡು ದೊನ್ನೆ ತುಪ್ಪ-ಇಷ್ಟನ್ನು ಕೊಡಿಸಿದ. ಮಾಂಧಾತನ ಅಂಗಡಿಯ ಬಳಿ ಬಂದಾಗ ಆತ ಸಿಹಿತಿಂಡಿ ಕಟ್ಟಿಸಿಕೊಟ್ಟ. ಮಾರ್ಕೆಟ್ ಬಳಿ ಬೈರಾಗಿಗಳು ಕೊಂಚ ಉಪ್ಪು, ಮೆಣಸಿನ ಕಾಯಿ ಕೊಂಡರು–ಅವರಿವರು ಕೊಟ್ಟಿದ್ದ ಪುಡಿಗಾಸುಗಳಿಂದ.

ಬೈರಾಗಿಗಳು ರಾಣಾಸಿಂಗ್ ಪೇಟೆಯನ್ನು ಹಾದು ಅರಳೇಪೇಟೆ ಸೇರಿ ಅಲ್ಲಿಂದ ರೈಲ್ವೇ ಸ್ಟೇಷನ್ ಕಡೆಗೆ ತಿರುಗಿ ಅರಳೀಕಟ್ಟೆಗೆ ಬಂದರು. ಅಲ್ಲಿ ಮತ್ತೆ "ಜೈ ಸೀತಾ ರಾಮ್."

ಅವರ ಪೈಕಿ ಇಬ್ಬರು ಗೋಧಿಯ ಹಿಟ್ಟನ್ನು ಕಲಸಿ ಅವರ ಮೇಲೆ ಒಂದು ಒದ್ದೆ ಬಟ್ಟೆ ಹಾಕಿ ಬೆಂಕಿಯನ್ನು ಸರಿಮಾಡಹೊರಟರು. ಮೂವರು ಉತ್ತರ ಪಾರ್ಶ್ವದ ಮಂಟಪದ ಮುಂದಿನ ಕೊಳದೊಳಕ್ಕೆ ದುಮುಕಿ ಈಜಿ ಸ್ನಾನಮಾಡಿ ಬಂದರು; ಭಸ್ಮಧಾರಣ ಮಾಡಿದರು. ಇವರು, ಮೊದಲೇ ನೆನೆಸಿಟ್ಟಿದ್ದ ಗೋಧಿ ಹಿಟ್ಟಿಗೆ ಉಪ್ಪು, ಮೆಣಸಿನಕಾಯಿ, ತುಪ್ಪ ಹಾಕಿ ಕಲಸಿ ರೊಟ್ಟಿ ತಟ್ಟಲು ಕುಳಿತರು. ಮೊದಲಿನ ಇಬ್ಬರು ಆ ವೇಳೆಗೆ ಸ್ನಾನಮುಗಿಸಿಕೊಂಡು ಬಂದರು. ರೊಟ್ಟಿ ಸುಟ್ಟಿದ್ದಾಯಿತು, ಐವರು ಕೈತೊಳೆದುಕೊಂಡು ತುಲಸೀ ಮಣಿಯ ಜಪಸರಗಳನ್ನು ಹಿಡಿದು ಕುಳಿತರು. ಆಚಮನ ಮಾಡಿದರು. ಏನೇನೋ ಮಂತ್ರ ಹೇಳಿ ಸೂರ್ಯನಿಗೆ ಕೈಮುಗಿದರು, ಆರ್ಘ್ಯ ಕೊಟ್ಟರು. ಅದಾದ ಬಳಿಕ ರೊಟ್ಟಿಗಳನ್ನೂ ತುಪ್ಪವನ್ನೂ ಮಿಠಾಯಿ ತುಣುಕುಗಳನ್ನೂ ತಮಗೆ ಬೇಕಾದಷ್ಟು ಭುಜಿಸಿದರು. ಮಧ್ಯೆ ಮಧ್ಯೆ "ಹರೇ ರಾಮ್", "ಜಯ ಯಜ ರಾಮ್." ಕೊಂಚ ಕೊಂಚ ಮಾತನಾಡಿಕೊಳ್ಳುತ್ತಿದ್ದರು. ಬಹುಶಃ ಹಿಂದಿ ಭಾಷೆಯಲ್ಲಿ. ಅವರ ಹತ್ತಿರ ಹೋಗುವುದಕ್ಕೆ ನನಗೆ ಭಯ. ಅವರು ಭೋಜನೋಪಕ್ರಮ ಮಾಡುವ ವೇಳೆಗೆ ಘಂಟೆ ಒಂದಾಗಿರಬಹುದು.

ನಾನು ಚಿಕ್ಕಪೇಟೆಗೆ ಬಂದು ನನ್ನ ಮಿತ್ರ ಅಪ್ಪಣ್ಣನವರ ಮನೆಯಲ್ಲಿ ಊಟ ಮಾಡಿ ಅವಸರವಸರವಾಗಿ ಅರಳಿಕಟ್ಟೆಗೆ ಹಿಂದಿರುಗಿ ಬಂದೆ. ಸುಮಾರು ಮೂರು ಘಂಟೆ ಆಗಿತ್ತು. ಬೈರಾಗಿಗಳು ನೆರಳಿನಲ್ಲಿ ಮಲಗಿ ನಿದ್ರಿಸುತ್ತಿದ್ದರು. ನಾಲ್ಕು ಘಂಟೆಯ ವೇಳೆಗೆ ಅವರು ಮೇಲಕ್ಕೆದ್ದು ಮುಖಪ್ರಕ್ಷಾಳನ, ಪಾದಪ್ರಕ್ಷಾಳನ ಮಾಡಿಕೊಂಡು ಬಂದು, ಸುತ್ತಮುತ್ತ ಎಲ್ಲೋ ಬಚ್ಚಿಟ್ಟಿದ್ದ ಮಣ್ಣಿನ ಚಿಲುಮೆಗಳನ್ನು ಹೊರತೆಗೆದರು. ತೆಂಗಿನ

ಜುಂಗನ್ನು ಸಿದ್ಧಪಡಿಸಿಟ್ಟುಕೊಂಡು, ತಮ್ಮ ಅಂಗೈಯಲ್ಲಿ ಏನೋ ಒಂದು ವಸ್ತುವನ್ನಿಟ್ಟುಕೊಂಡು, ನಶ್ಯ ತಿಕ್ಕುವಂತೆ ಅದನ್ನು ತಿಕ್ಕುತ್ತಿದ್ದರು. ಅದು ಬಹುಶಃ ಗಾಂಜಾ.

ಚಿಲುಮೆಗೆ ಬೆಂಕಿ ಸೇರಿಸಿ ಅದು ಹದಕ್ಕೆ ಬಂದ ಬಳಿಕ ಅದರಲ್ಲಿ ಗುಳಿಗೆಯನ್ನು ಹಾಕಿ ಚಿಲುಮೆಯ ಬುಡಕ್ಕೆ ಒದ್ದೆ ಬಟ್ಟೆಯನ್ನು ಸುತ್ತಿ, ಬಟ್ಟೆಯ ಮೂಲಕ ಗಾಂಜಾ ಸೇವನೆಯನ್ನಾರಂಭಿಸಿದರು. ನಾನು ಕೊಂಚ ಹೊತ್ತಾದ ಮೇಲೆ ಅಲ್ಲಿಂದ ಹಿಂದಿರುಗಿದೆ. ಗಾಂಜಾ ಭಂಗಿ ಸೇವನೆ ಮಾಡುವವರ ಸಾಮೀಪ್ಯ ಸಂಜೆಯಾದ ಮೇಲೆ ಅಪಾಯಕರವೆಂದು ಕೇಳಿದ್ದೆ.

ಬೈರಾಗಿಗಳು ಯಾವ ಊರಿನಲ್ಲಿಯೂ ಒಂದೆರಡು ದಿನಕ್ಕೆ ಹೆಚ್ಚಾಗಿ ನಿಲ್ಲುವವರಲ್ಲ. ಬೆಂಗಳೂರಿನಿಂದ ಅವರು ತಿರುಪತಿಯ ಕಡೆಗೋ ರಾಮೇಶ್ವರದ ಕಡೆಗೋ ನಡೆಯುವುದು ವಾಡಿಕೆಯಂತೆ. ಅವರಲ್ಲಿ ಹಳಬರಾದವರಿಗೆ ತಿಳಿದಿರುತ್ತದೆ–ತಮ್ಮ ಹಿರಿಯರಿಂದ ಯಾವ ಊರಿನಲ್ಲಿ ಸದಾವರ್ತ ಸಿಕ್ಕುತ್ತದೆ. ವಸತಿಯ ಅನುಕೂಲವಿದೆ- ಎಂಬುದು. ಅದರಂತೆ ಅವರು ತಮ್ಮ ದಾರಿಯನ್ನು ಗೊತ್ತುಮಾಡಿಕೊಂಡಿರುತ್ತಾರೆ.

ನನ್ನ ಯೋಜನೆಗಳು

ಹೀಗೆ ನನಗೆ ಬಾಲ್ಯದಲ್ಲಿ ದೊರೆತ ಯಾತ್ರಿಕರು, ಬೈರಾಗಿಗಳು, ಗೋಸಾಯಿಗಳು ಇಂಥವರ ಸಹವಾಸವೇ ನನ್ನ ತೊಂಡುತನಕ್ಕೆ ಪ್ರೋತ್ಸಾಹವಾಗಿದ್ದಿರಬೇಕು.

ಆ ತೊಂಡುತನವನ್ನು ನಿಶ್ಶೇಷವಾಗಿ ಮಾಡಿದ್ದು ಮದುವೆ. ನನಗೆ ಮದುವೆಯಾದಾಗ ವಯಸ್ಸು ಹದಿನೈದು ಹದಿನಾರು. ನಾನು ಹೈಸ್ಕೂಲಿನ ಐದನೆಯ ಫಾರ್ಮಿನಲ್ಲಿದ್ದೆ.

ಗೊರೂರು ರಾಮಸ್ವಾಮಿ ಅಯ್ಯಂಗಾರ್ಯರು ತಮ್ಮ ಮದುವೆಯ ಕಥೆಯನ್ನು ನನಗೆ ಒಂದು ಸಾರಿ ಹೇಳಿದರು. ಅವರ ತಂದೆಯೂ ಹೆಣ್ಣಿನ ತಂದೆಯೂ ಸ್ನೇಹಿತರು; ತಮ್ಮ ತಮ್ಮಲ್ಲೇ ಮಾತನಾಡಿಕೊಂಡು ಲಗ್ನ ನಿಷ್ಕರ್ಷೆ ಮಾಡಿ ಅದಕ್ಕೆ ಬೇಕಾದದ್ದನ್ನೆಲ್ಲ ಅಣಿಮಾಡಿಕೊಂಡು ಆಮೇಲೆ ಸಂಗತಿಯನ್ನು ಹೊರಪಡಿಸಿದರಂತೆ. ರಾಮಸ್ವಾಮಿ ಅಯ್ಯಂಗಾರ್ಯರು ಯೋಚನೆಮಾಡಬೇಕೆಂದಾಗ ಅವರ ತಾಯಿ–

“ಮಾಡಿಟ್ಟಿರುವ ಹೋಳಿಗೆ, ಭಕ್ಷ್ಯಗಳೆಲ್ಲ ಮುಗ್ಗಿಹೋಗುತ್ತವೆ; ಆದದ್ದರಿಂದ ಬೇಗ ಮದುವೆಯಾಗಿಬಿಡಬೇಕು”

–ಎಂದು ಒತ್ತಾಯಪಡಿಸಿದರಂತೆ. ನನಗಾದದ್ದೂ ಹಾಗೆಯೇ. ನನ್ನ ನಕ್ಷತ್ರಕ್ಕೆ ಮಾವನಿಲ್ಲದ ಮನೆ ಸರಿಯಂತೆ. ಆ ಕಡೆ ಹುಡುಗಿಯ ತಂದೆ ಹೋದ ವರ್ಷದೊಳಗಾಗಿ ಕನ್ಯಾದಾನ ಮಾಡತಕ್ಕದ್ದೆಂದು ವ್ರತಮಾಡಿಕೊಂಡಿದ್ದರಂತೆ. ಇಂಥ ಸದಾವಕಾಶವನ್ನು ಕಳೆದುಕೊಂಡರೆ ಬೇರೆ ತಂದೆಯಿಲ್ಲದ ಹುಡುಗಿಯನ್ನು ಹುಡುಕುವುದು ಪ್ರಯಾಸವೆಂದು ನನ್ನ ಹಿರಿಯರು ನಿಶ್ಚಯಿಸಿದರು.

ಹೀಗಾಗಿ ನನ್ನ ತೊಂಡುತನದ ಯೋಜನೆಗಳು ಮೂಲೆಗೆ ಬಿದ್ದವು. ಆ ಯೋಜನೆಗಳಲ್ಲಿ ಎರಡನ್ನು ಹೇಳುತ್ತೇನೆ.

ಶರದಾಕಾಶವೀಕ್ಷಣ

ಹೀಗೆಂದರೆ, ಶರದೃತುವಿನಲ್ಲಿ ಆಕಾಶವನ್ನು ನೋಡುವ ಸಂತೋಷದ ಅನುಭವ. ಇದಕ್ಕಾಗಿ ನಾಲ್ವರೈವರು ಸ್ನೇಹಿತರು ಬೆಂಗಳೂರಿನಿಂದ ಎತ್ತಿನಗಾಡಿಗಳಲ್ಲಿಯೂ ಕಾಲು ನಡಿಗೆಯಿಂದಲೂ ಪ್ರಯಾಣಮಾಡತಕ್ಕದ್ದು. ಒಂದು ಗಾಡಿಯಲ್ಲಿ ಅಡಿಗೆಗೆ ಬೇಕಾದ ಸಾಮಾನು: ಸೌದೆ ಸೀಮೆಯೆಣ್ಣೆ ದೇಖೀಲು. ಇನ್ನೊಂದು ಗಾಡಿಯಲ್ಲಿ ಅವಲಕ್ಕಿ, ಹುರಿಟ್ಟು, ಪುಳ್ಳಂಗಾಯುಂಡೆ, ಚಕ್ಕುಲಿ, ಕೋಡುಬಳೆ ಇತ್ಯಾದಿ ಫಲಾಹಾರ ಸಾಮಾಗ್ರಿ ಡಬ್ಬಿಗಳು ಮತ್ತು ಸಣ್ಣ ಸಣ್ಣ ಹಾಸಿಗೆಗಳು. ಮೂರನೆಯ ಗಾಡಿಯಲ್ಲಿ ದಪ್ಪನೆಯ ಜಮಖಾನೆ ಹಾಸಿ, ನಡಿಗೆಗೆ ಸಿದ್ಧವಾಗಿಲ್ಲದವರು ಕೂಡತಕ್ಕದ್ದು.

ಬೆಳಗ್ಗೆ ಐದು ಘಂಟೆಗೆ ಗಾಡಿ ಕಟ್ಟಿ ಹೊರಡತಕ್ಕದ್ದು. ನಾವು ಮುಖವನ್ನು ಆಕಾಶದ ಕಡೆಗೆ ತಿರುಗಿಸಿ ಅದರ ಸ್ವಚ್ಛ ನೀಲಿಮೆಯನ್ನು ನೋಡಿಕೊಂಡು ಆನಂದಿಸುತ್ತ ಹರಟೆ ಹೊಡೆಯುತ್ತ, ಹಾಡು ಪದ್ಯ ಹೇಳಿಕೊಳ್ಳುತ್ತ ಎಂಟು ಘಂಟೆಯವರೆಗೂ ನಡೆಯುವುದು. ಕೊಳವನ್ನೋ ಕೆರೆಯನ್ನೋ ಕಂಡಾಗ ಅಲ್ಲಿ ಗಾಡಿ ನಿಲ್ಲಿಸಿ ಅಡಿಗೆ ಮಾಡಿಕೊಳ್ಳುವುದು. ಹಾಲು ಮೊಸರುಗಳನ್ನು ಸಮೀಪದ ಹಳ್ಳಿಗಳಿಂದ ತರುವುದು. ಭೋಜನಾ ನಂತರ ನಾಲ್ಕು ಘಂಟೆಯವರೆಗೂ ವಿಶ್ರಮಿಸಿಕೊಳ್ಳುವುದು. ಅನಂತರ ಚಕ್ಕುಲಿ ಕೋಡುಬಳೆಗಳನ್ನು ಮೆಲ್ಲುತ್ತ ಸಂಜೆ ತೀರಾ ಕತ್ತಲಾಗುವವರೆಗೂ ನಡೆಯುವುದು. ದಾರಿಯಲ್ಲಿ ಅಲ್ಲಲ್ಲಿ ಗುಡಿಗಳಿಗೆ ಹೋಗುವುದು, ಮಠಗಳಿಗೆ ಹೋಗುವುದು, ಊರಿನ ವಿದ್ಯಮಾನಗಳನ್ನು ತಿಳಿದುಕೊಳ್ಳುವುದು.

ಹೀಗೆ ದಿನಕ್ಕೆ ಐದಾರು ಘಂಟೆಗಳಂತೆ ಪ್ರಯಾಣಮಾಡಿದರೆ ಒಂದು ವಾರದೊಳಗಾಗಿ ಮುಳಬಾಗಲನ್ನು ತಲುಪಬಹುದು. ಬೆಂಗಳೂರಿನಿಂದ ಅರವತ್ತು ಮೈಲಿ. ಅಲ್ಲಿ ಎರಡು ಮೂರು ದಿನವಿದ್ದು, ಬಂದ ಕ್ರಮದಲ್ಲಿಯೇ ಹಿಂತಿರುಗುವುದು. ಒಟ್ಟು ಹದಿನೈದು ದಿನದ ಪ್ರವಾಸ.

ಈ ಯೋಜನೆಯನ್ನು ಸ್ನೇಹಿತರಲ್ಲಿ ಹೇಳಿದೆ. ಅವರು ನಕ್ಕು “ಬಹು ಚೆನ್ನಾಗಿದೆ, ಅದಕ್ಕೇನು ಕಷ್ಟ?” ಎಂದರೇ ಹೊರತು ಒಂದು ಬೆಟ್ಟನ್ನು ಮುಂದಿಟ್ಟವರಲ್ಲ. ಅವರ ಮನಸ್ಸುಗಳಲ್ಲಿ ಇದೊಂದು ಹಾಸ್ಯ ವಿಷಯವೆನಿಸಿರಬೇಕು. ನನ್ನ ಈಗಿನ ಸ್ಥಿತಿಯಲ್ಲಿ ಆ ಯೋಜನೆಯನ್ನು ಪುನರುಜ್ಜೀವನ ಮಾಡುವ ಸಾಹಸ ಮಾಡಿಲ್ಲ.

ಸುಲಭ ತೀರ್ಥಯಾತ್ರೆ

ಈ ಯೋಜನೆಗೆ ನನ್ನ ಭಾವನವರೂ ಒಪ್ಪಿದ್ದರು. ಇದು ನಮಗಿಬ್ಬರಿಗೂ ಕಳತ್ರ ವಿಯೋಗವಾದ ಮೇಲೆ ಬಂದ ಯೋಚನೆ. ನಾವಿಬ್ಬರೂ ಮಾಡಿಕೊಳ್ಳಬೇಕಾದ ಸಿದ್ಧತೆ ಹೀಗೆ: ಒಬ್ಬೊಬ್ಬರು ಒಂದೊಂದು ತೆಳ್ಳನೆಯ ಸಣ್ಣ ಜಮಖಾನೆಯನ್ನು ಮಡಿಸಿ ಎಡ ಹೆಗಲ ಮೇಲೆ ಹಾಕಿಕೊಳ್ಳತಕ್ಕದ್ದು. ಅದರ ಮೇಲೆ ಒಂದು ಹಸಿಬೆತಿತ್ತಿ-ಬಳೆಗಾರರು ತಗಲಿಹಾಕಿಕೊಳ್ಳುತ್ತಿದ್ದ ಹಾಗೆ. ಆ ತಿತ್ತಿಯ ಒಂದು ಭಾಗದಲ್ಲಿ ಒಂದು ಶಾಲು, ಎರಡು ಪಂಚೆಗಳು, ಎರಡು ಸಣ್ಣ ಪಂಚೆಗಳು ಅಥವಾ ಟವಲುಗಳು, ಒಂದು ಪಂಚಪಾತ್ರೆ, ಅದರಲ್ಲಿ ವಿಭೂತಿ ಡಬ್ಬಿ ಮತ್ತು ಜಪಸರ, ಎರಡು ಮೂರು ಪೆನ್ಸಿಲ್ ಕಡ್ಡಿಗಳು, ಒಂದು ಪಂಚಾಂಗ ಅಥವಾ ಡಯರಿ, ಒಂದು ಚಾಕು, ಒಂದು ಸಣ್ಣ ನೋಟ್‌ಬುಕ್ಕು. ತಿತ್ತಿಯ ಇನ್ನೊಂದು ಭಾಗದಲ್ಲಿ ಒಂದು ಅವಲಕ್ಕಿ ಗಂಟು, ಒಂದು ಹುರಿಟ್ಟಿನ ಗಂಟು, ಒಂದು ಬೆಲ್ಲದಚ್ಚು, ಒಂದು ಒಣಕೊಬರಿ ಗಿಟಕು, ಒಂದು ಪಾವಿನಷ್ಟು ಹುರಿದ ನೆಲಗಡಲೆ ಕಾಯಿ ಪೊಟ್ಟಣ, ಇನ್ನೂ ಏನಾದರೂ ಹುರಿಗಾಳು ಕೋಡುಬಳೆ ಮೊದಲಾದ ಕುರುಕುತಿಂಡಿಗಳು. ಒಂದು ಡಬ್ಬ ತ್ರಿಫಲಾಚೂರ್ಣ, ಒಂದು ಡಜನ್ ಕ್ವಿನೈನ್ ಗುಳಿಗೆಗಳು, ಒಂದು ಸಣ್ಣ ವ್ಯಾಸಲೀನ್ ಡಬ್ಬಿ, ಒಂದು ಮೋಂಬತ್ತಿ, ಒಂದು ದೀಪದ ಕಡ್ಡಿ ಪೆಟ್ಟಿಗೆ–ಈ ಸಾಮಾನುಗಳಿರತಕ್ಕದ್ದು. ನನ್ನ ಭಾವನ ತಿತ್ತಿಯಲ್ಲಿ ಒಂದು ಉಪ್ಪು ಪುಡಿಯ ಡಬ್ಬಿ ಹೆಚ್ಚಾಗಿರಬೇಕಾದದ್ದು. ನಾವು ಬನೀನು ಧರಿಸಿ ಅದರ ಒಳಜೇಬಿನಲ್ಲಿ ಇಪ್ಪತ್ತು ಇಪ್ಪತ್ತೈದು ರೂಪಾಯಿ ಇಟ್ಟುಕೊಳ್ಳತಕ್ಕದ್ದು. ತಲೆಗೆ ಒಂದು ಸಣ್ಣ ಪಂಚೆ ಲಪ್ಪಟ್ಟೆ, ಕಾಲಿಗೆ ಚಪ್ಪಲಿ, ಒಂದು ಕೈಯಲ್ಲಿ ಉಗ್ಗ ಕಟ್ಟಿದ ತಂಬಿಗೆ–ಅದು ಮೊಣಕೈಯಿಂದ ನೇತುಹಾಕಿಕೊಳ್ಳಲು ಅನುಕೂಲವಾಗಿರಬೇಕು. ಇನ್ನೊಂದು ಕೈಯಲ್ಲಿ ಕಟ್ಟಿಗೆ ಅದು ಊರುಗೋಲೂ ಆಗಿರಬೇಕು, ಭಯೋತ್ಪಾದಕವೂ ಆಗಿರಬೇಕು. ಇಷ್ಟು ಸಿದ್ಧತೆ ಮಾಡಿಕೊಂಡು,

ಜೈ ಪರಮೇಶ್ವರ।

ಬೆಂಗಳೂರಿನಿಂದ ಮೊದಲು ಹಿಂದೂಪುರಕ್ಕೆ ಹೋಗತಕ್ಕದ್ದು. ಅಲ್ಲಿ ರೈಲಿನಿಂದಿಳಿದು ಮುಂದಿನ ಪ್ರೋಗ್ರಾಂ. ಎಲ್ಲಿ ಪ್ರಸಿದ್ಧ ದೇವಾಲಯ, ಎಲ್ಲಿ ರಥೋತ್ಸವ, ಎಲ್ಲಿ ಸಂತರ್ಪಣೆ–ಇದನ್ನು ವಿಚಾರಿಸಿಕೊಂಡು, ರೈಲಿನಲ್ಲಂದರೆ ರೈಲಿನಲ್ಲಿ, ಬಸ್ಸಿನಲ್ಲಂದರೆ ಬಸ್ಸಿನಲ್ಲಿ, ಕಾಲುನಡಿಗೆಯಿಂದ ಎಂದರೆ ಕಾಲುನಡಿಗೆಯಿಂದ–ಮುಂದಿನ ಮಜಲಿಗೆ ಹೋಗತಕ್ಕದ್ದು.

ಮೊದಲೇ ಗೊತ್ತಾದ ನಿರ್ಬಂಧದ ಕಾರ್ಯಕ್ರಮವೇನಿಲ್ಲ. ನಾವು ಮಾಡಿಕೊಂಡ ನಿಮಯಗಳು ನಾಲ್ಕು:

1. ತಿತ್ತಿಯಲ್ಲಿನ ತಿಂಡಿಗಳನ್ನು ಹೆಚ್ಚಾಗಿ ತಿನ್ನತಕ್ಕದ್ದಲ್ಲ; ಅವಶ್ಯವಾದಾಗ ಮಾತ್ರ ಉಪಯೋಗಿಸತಕ್ಕದ್ದು.
2. ಚೀಲದ ಭಾರವನ್ನು ಹೆಚ್ಚು ಮಾಡತಕ್ಕದ್ದಲ್ಲ.
3. ಎಲ್ಲದರಲ್ಲೂ ಮಿತವಾಗಿರಬೇಕು. ಹಣವನ್ನು ಹಿಡಿತದಿಂದ ಉಪಯೋಗಿಸಬೇಕು.
4. ಬ್ರಾಹ್ಮಣರ ಮನೆಯಲ್ಲಿ ಊಟ ಮಾಡಬೇಕು; ಅವರು ಯಾರಾದರೂ ಸರಿಯೇ.

ನನ್ನ ಭಾವಂದಿರು ಈ ವಿಷಯದಲ್ಲಿ ಒಂದು ಕಟ್ಟಲೆಯ ಕವಿತ್ವ ಮಾಡಿದ್ದರು:

ಎಲ್ಲಿ ಎಲ್ಲಿ ತೋರಣ,
ಅಲ್ಲಿ ಅಲ್ಲಿ ಹೂರಣ ।
ಕರೆದರೂ ಸರಿ ಬಿಟ್ಟರೂ ಸರಿ
ನಡೀ ಅಲ್ಲಿಗೆ ಹೋಗೋಣ ॥

ರಾತ್ರಿ ಹೊತ್ತು ಭೋಜನವಿಲ್ಲ, ಕ್ಷುತ್ತು ಇದ್ದರೆ ಆ ಊರಿನ ಗುಡಿಯ ದೇವರ ಪ್ರಸಾದ. ಬಾಳೆಹಣ್ಣು ಅಥವಾ ರಸಾಯನ ಆಗಬಹುದು. ತೆಂಗಿನ ಹೋಳು ಪ್ರಸಾದ ದೊರೆತರೆ ಕೊಬ್ಬರಿಯನ್ನು ಚಾಕುವಿನಿಂದ ಚೂರು ಚೂರಾಗಿ ಕತ್ತರಿಸಿ ಎರಡು ದಿನಕ್ಕೆ ದಾಸ್ತಾನಿರಿಸಿಕೊಳ್ಳತಕ್ಕದ್ದು.

ಈ ಯೋಜನೆಯಲ್ಲಿ ಅತಿ ಕಷ್ಟದ ಭಾಗವೇನೂ ತೋರಲಿಲ್ಲ. ದಾರಿಯ ಖರ್ಚಿಗೆ ನನ್ನ ಭಾವನವರ ಪಿಂಛನಿ ಸಾಕಾಗುತ್ತಿತ್ತು. ನನ್ನ ಖರ್ಚನ್ನೂ ಅವರೇ ಕೊಡುವುದಾಗಿ ಹೇಳಿದ್ದರು. ನಾವು ಈಹೊತ್ತು, ನಾಳೆ ಎಂದು ಮೀನ-ಮೇಷ ನೋಡುತ್ತಿರುವಷ್ಟರಲ್ಲಿ ದೇವರು ನನ್ನ ಭಾವಂದಿರನ್ನು ತನ್ನ ಹತ್ತಿರಕ್ಕೆ ಕರೆದುಕೊಂಡ.

ನಾನು ಆ ಯೋಚನೆಯನ್ನು ಕೈಬಿಟ್ಟು, ನನಗೆ ದೊರೆತ ಚಿರಂಜೀವಿಗಳಿಗೆ ಕಾಟ ಕೊಡುವುದರಿಂದ ತೃಪ್ತನಾಗಿರಬೇಕಾಗಿದೆ.

ತನಗಳುವರಾರುಮಿಲ್ಲದೆ ।
ಮನುಜಂ ತಾನಾರ್ಗಮಳುವುದಿರದಿರೆ ಧನ್ಯಂ ।

ಅನುಸರಿಸದೆ ತಾನಾರನು- ।
ಮನುಸರಿಪರ್ ತನಗಮಿಲ್ಲದಿರೆ ಕಡುಧನ್ಯಂ ।

1 ಡಿ.ವಿ.ಜಿ. ಕೃತಿಶ್ರೇಣಿ-೬, ಪು. ೨೬-೩೨

2 ಡಿ.ವಿ.ಜಿ. ಕೃತಿಶ್ರೇಣಿ-೬, ಪು. ೩೭೯-೩೮೬

1 ಡಿವಿಜಿ ಕೃತಿಶ್ರೇಣಿ-೬, ಪು. ೪೯-೬೨

2 ಡಿವಿಜಿ ಕೃತಿಶ್ರೇಣಿ-೭, ಪು. ೧೮೩-೧೯೫

1 “ಹಿರಿಯಣ್ಣನವರು ಸಾಂಖ್ಯ ವೈಶೇಷಿಕ ಮೊದಲಾದ ದರ್ಶನಗಳನ್ನು ಕುರಿತು ಬರೆದಿದ್ದಾರಲ್ಲವೆ? ಹಾಗೆಯೇ ದ್ವೈತಮತವನ್ನು ಕುರಿತು ಏಕೆ ಬರೆಯಬಾರದಾಗಿತ್ತು?” ಎಂಬ ಪ್ರಶ್ನೆಯನ್ನು ಒಬ್ಬ ಸ್ನೇಹಿತರು ಎತ್ತಿದ್ದಾರೆ. ಅದಕ್ಕೆ ನನ್ನ ಉತ್ತರ ಇಷ್ಟೆ: ಸಾಂಖ್ಯ ವೈಶೇಷಿಕಾದಿಗಳು ಭೌತವಸ್ತುಗಳ ರಚನೆಯನ್ನು ಅವಲಂಬಿಸಿಕೊಂಡಿರುತ್ತವೆ. ಇವು ಮನುಷ್ಯನ ಹೊರಗಿರತಕ್ಕವು. ವೇದಾಂತಶಾಸ್ತ್ರವಾದರೋ ಅಂತರಾತ್ಮವನ್ನು ಕುರಿತದ್ದು: ಇಲ್ಲಿ ಮನುಷ್ಯನ ಸ್ವಾನುಭವ ಮುಖ್ಯ. ವೇದಾಂತದ ಮೂರು ಮತಗಳೂ ಭಕ್ತಿಪ್ರಧಾನವಾದವು. ಜೀವವು ತನ್ನ ಅಂತರಂಗದಲ್ಲಿ ಭಗವಂತನನ್ನು ಹೇಗೆ ಕಾಣಬೇಕೆಂಬುದು ಇಲ್ಲಿಯ ಮುಖ್ಯಪ್ರಶ್ನೆ. ಆದದ್ದರಿಂದ ಸ್ವಾನುಷ್ಠಾನ ಸ್ವಾನುಭವಗಳು ಇಲ್ಲಿ ಪ್ರಥಮತಃ ಅವಶ್ಯವಾಗುತ್ತವೆ.

1 ಡಿ ವಿ.ಜಿ ಕೃತಿಶ್ರೇಣಿ -೬; ಪು. ೩೩-೪೨

2 ಅಧ್ಯಾಯ ೭ ನೋಡಿ

1 ಅಧ್ಯಾಯ ೧೨ ನೋಡಿ

1 ಡಿ.ವಿ.ಜಿ. ಕೃತಿಶ್ರೇಣಿ: ೬, ಪು. ೨೬೮

* ಡಿ.ವಿ.ಜಿ. ಕೃತಿಶ್ರೇಣಿ: ೬, ಪು. ೨೬೭–೨೬೮

1 ಡಿ ವಿ ಜಿ ಕೃತಿಶ್ರೇ ಈ: ೬, ೧೧೦–೧೨೪

2 ಅದೇ, ಪು. ೨೪೫–೨೪೭

1 ಡಿ. ವಿ. ಜಿ ಕೃತಿಶ್ರೇಣಿ: ೬, ಪು. ೨೪೮–೨೫೧

* ಡಿ ವಿ ಜಿ ಕೃತಿಶ್ರೇಣಿ: ೬, ಪು. ೩೩೧–೩೩೨

* ನನ್ನ ತಿಂಡಿಪೋತತನದ ಕಾರಣದಿಂದ ನನಗೆ ಬಂದಿದ್ದ ಇನ್ನೊಂದು ಹೆಸರು 'ಹಂಡೀಬಾಗ್' (ಮಡಕೆಯ ಹುಲಿ) ಎಂದು.